## ಅಧ್ಯಾಯ–೧

# ಪ್ರಾಸ್ತಾವಿಕ

**ಹೊ**ಳಲ್ಕೆರೆ ತಾಲ್ಲೂಕು, ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಂದಾಗಿದೆ. ಕದಂಬರು, ಸೇವಣರು, ಪಲ್ಲವರು, ಹೊಯ್ಸಳರು, ಆಂಗ್ಲರು, ಗಂಗರು, ವಿಜಯನಗರದ ಅರಸರು, ಪಾಳೆಯಗಾರರು ಆಳಿದ ಹೊಳಲ್ಕೆರೆಗೆ ತನ್ನದೇ ಆದ ಇತಿಹಾಸ ಪರಂಪರೆ ಇದೆ. ಚಿತ್ರದುರ್ಗ–ಶಿವಮೊಗ್ಗ ಪ್ರಾಂತೀಯ ಹೆದ್ದಾರಿಯಲ್ಲಿರುವ ಹೊಳಲ್ಕೆರೆ ತಾಲ್ಲೂಕು ಕೇಂದ್ರದ ಗತ ಇತಿಹಾಸವನ್ನು ಕುರಿತು ಅಲ್ಲಿರುವ ಅನೇಕ ಕೆರೆ ಕಟ್ಟೆಗಳು, ದೇವಾಲಯಗಳು, ಪ್ರೇಕ್ಷಣೀಯ ಸ್ಥಳಗಳು ಹೇಳುತ್ತವೆ. ಇಲ್ಲಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ಪರಂಪರೆಯನ್ನು ಸಾರುವ ದಾಖಲೆಗಳು ಹೆಚ್ಚು ದೊರೆತಿರುವುದಿಲ್ಲ. ಐತಿಹಾಸಿಕ ಸಂಗತಿಗಳನ್ನು ದಾಖಲಿಸುವ ಪ್ರಜ್ಞೆ ಕಡಿಮೆ ಇದ್ದುದರಿಂದ ಇಲ್ಲಿನ ಇತಿಹಾಸದ ದಾಖಲಾತಿಯು ಕಡಿಮೆ ಎನಿಸುತ್ತದೆ. ಹೀಗಾಗಿಯೂ ಈ ಪ್ರಾಂತ್ಯದ ಐತಿಹಾಸಿಕ, ಸಾಂಸ್ಕೃತಿಕ ಹಿರಿಮೆ ಗಣನೀಯವಾಗಿದೆ.

೧೨ನೇ ಶತಮಾನದ ಬಸವಾದಿ ಶಿವಶರಣರ ಸಮಕಾಲೀನನೆನಿಸಿದ ನುಲಿಯಚಂದಯ್ಯ ಕಾಯಕ ತತ್ವದ ಶ್ರೇಷ್ಠತೆಯನ್ನು ಲೋಕಕ್ಕೆ ಸಾರಿದ ಮಹಾಶಿವಶರಣ. ನುಲಿಯ ಚಂದಯ್ಯನ ಸಮಾಧಿಯು ತಾಲ್ಲೂಕಿನಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ. ಹೊಳಲ್ಕೆರೆಯಲ್ಲಿರುವ ಬಯಲು ಗಣಪತಿ ತುಂಬಾ ಪ್ರಸಿದ್ಧವಾಗಿದೆ. ಅಪ್ರಕಟಿತ ಶಾಸನಗಳ ಶೋಧನೆಯಲ್ಲಿ ಈ ಹಿಂದೆ ಶ್ರೀ ಬಿ.ಎಲ್. ರೈಸ್, ಡಾ.ಎಮ್.ಹೆಚ್ ಕೃಷ್ಣ ಮುಂತಾದವರಿಗೆ ಈ ತಾಲ್ಲೂಕಿನಲ್ಲಿ ದೊರೆತಿದ್ದ ಅನೇಕ ಶಾಸನಗಳ ಜೊತೆಗೆ ಇತ್ತೀಚಿಗೆ ಅನೇಕ ಹೊಸ ಶಾಸನಗಳ ಸಂಶೋಧನೆಯಾಗುತ್ತಿದೆ. ಈ ತಾಲ್ಲೂಕಿನಲ್ಲಿ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಇಸ್ಲಾಂ ಮೊದಲಾದ ಧರ್ಮಗಳ ಅನುಯಾಯಿಗಳಿದ್ದಾರೆ. ಪ್ರತಿ ಧರ್ಮದವರು ತಮ್ಮ ತಮ್ಮ ಧಾರ್ಮಿಕ ಆಚರಣೆಗಳನ್ನು ಆಚರಿಸುವಾಗ ಬೇರೆ ಧರ್ಮದವರು ಸಹ ಅವರೊಂದಿಗೆ ಮಿಲನವಾಗಿ ಸಹೋದರತ್ವವನ್ನು ಹೊಂದಿರುತ್ತಾರೆ.

# ಹೊಳಲ್ಕೆರೆ ತಾಲ್ಲೂಕು ಗ್ಯಾಸೆಟಿಯರ್

ಈ ತಾಲ್ಲೂಕನ್ನು ಆಡಳಿತಾನುಕೂಲಕ್ಕಾಗಿ ಹೊಳಲ್ಕೆರೆ, ತಾಳ್ಯ,ರಾಮಗಿರಿ, ಭರಮಣ್ಣ ನಾಯಕನದುರ್ಗ ಎಂಬ ನಾಲ್ಕು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೧೧ ರ ಜನಗಣತಿ ಪ್ರಕಾರ ೨೦೧ ಹಳ್ಳಿಗಳಿವೆ.ಈ ತಾಲ್ಲೂಕಿನಲ್ಲಿ ಹಿಂದೂಗಳು, ಮುಸ್ಲಿಂ, ಜೈನ ಮತ್ತಿತರರು ವಾಸವಾಗಿದ್ದಾರೆ. ಇಲ್ಲಿಯ ಜನರಾಡುವ ಭಾಷೆ ಬಹುತೇಕ ಕನ್ನಡ. ತೆಲುಗು, ಮರಾಠಿ, ಬಂಜಾರಿ, ಗುಜರಾತಿ, ಉರ್ದು, ಮಾರ್ವಾಡಿ, ಕೊಂಕಣಿ, ತುಳು ಮತ್ತು ಹಿಂದಿ ಭಾಷಿಕರನ್ನು ಗುರುತಿಸಬಹುದಾಗಿದೆ. ಇಲ್ಲಿ ಜನರ ಮುಖ್ಯ ವೃತ್ತಿ ಕೃಷಿ ಆಗಿದೆ. ಹೊಳಲ್ಕೆರೆ ಅರೆಮಲೆನಾಡು ಪ್ರದೇಶದ ಅಂಚಿನಲ್ಲಿರುವುದರಿಂದ ತಾಲ್ಲೂಕಿನಲ್ಲಿ ಆಹ್ಲಾದಕರ ವಾತಾವರಣವನ್ನು ಕಾಣಬಹುದು. ಮೈದಾನ ಪ್ರದೇಶದ ಅಂಚಿನಲ್ಲಿರುವುದರಿಂದ ಹೆಚ್ಚು ಬಿಸಿಲಿನ ತಾಪವಿಲ್ಲದೆ ಸಮಶೀತೋಷ್ಣ ಹವಾಮಾನವನ್ನು ಈ ತಾಲ್ಲೂಕು ಒಳಗೊಂಡಿದೆ. ತಾಲ್ಲೂಕಿನಲ್ಲಿ ಮಾರ್ಚಿನಿಂದ ಮೇ ತಿಂಗಳುಗಳಲ್ಲಿ ಮುಂಗಾರು ಪೂರ್ವ, ಜೂನ್‌ನಿಂದ ಸೆಪ್ಟೆಂಬರ್‌ವರೆಗೂ ಮುಂಗಾರು ಮಳೆ, ಅಕ್ಟೋಬರ್–ನವೆಂಬರ್‌ವರೆಗೂ ಹಿಂಗಾರು ಮಳೆ, ನಂತರ ಡಿಸೆಂಬರ್‌ನಿಂದ–ಫೆಬ್ರವರಿವರೆಗೂ ಚಳಿಗಾಲವಿರುತ್ತದೆ. ಈ ತಾಲ್ಲೂಕಿನಲ್ಲಿ ಯಾವ ಪ್ರಮುಖ ನದಿಗಳೂ ಹರಿಯುವುದಿಲ್ಲ.

ಜಿನಗನ(ಜಿನಗಿ)ಹಳ್ಳವು ಮುಖ್ಯ ಜಲ ಹರಿಯುವ ಹಳ್ಳವಾಗಿದೆ. ಇದು ಹೊಳಲ್ಕೆರೆ ತಾಲ್ಲೂಕಿನಲ್ಲಿ ಹುಟ್ಟಿ ಚಿತ್ರದುರ್ಗ ಮತ್ತು ಜಗಳೂರು ಮುಖಾಂತರ ಹರಿಯುತ್ತದೆ. ಇದರ ಜೊತೆಗೆ ಪಶ್ಚಿಮದಿಂದ ಕೆಲವು ನೀರಿನ ಹಳ್ಳಗಳು ಬಂದು ಸೇರಿಕೊಳ್ಳುತ್ತವೆ. ಈ ಹಳ್ಳದ ನೀರು ಶಾಂತಿಸಾಗರವನ್ನು ಸೇರುತ್ತದೆ. ಶ್ಯಾಗಲೆ ಹಳ್ಳವು ಹೊಳಲ್ಕೆರೆಯ ಪಶ್ಚಿಮದ ಬೆಟ್ಟಗಳಲ್ಲಿ ಹುಟ್ಟಿ ಹರಿದು ತುಂಗಭದ್ರಾ ನದಿಯನ್ನು ಸೇರುವುದು. ಭದ್ರಾ ಜಲಾಶಯದ ಮೇಲ್ದಂಡೆಯ ಕಾಲುವೆಯು ಹೊಳಲ್ಕೆರೆಯ ಪೂರ್ವದಲ್ಲಿ ಕಣಿವೆಯ ಮುಖಾಂತರ ಹಾಯ್ದುಹೋಗಿದೆ. ಭದ್ರಾ ಜಲಾಶಯದ ಮೇಲ್ದಂಡೆಯ ಕಾಲುವೆಯಿಂದಾಗಿ ಈ ತಾಲ್ಲೂಕು ಸಮೃದ್ಧ ತಾಲ್ಲೂಕಾಗಿದೆ.

ಹೊಳಲ್ಕೆರೆ ತಾಲ್ಲೂಕಿನಲ್ಲಿ ವೀರಶೈವರ ಸಂಖ್ಯೆ ಹೆಚ್ಚಾಗಿದ್ದು, ಸಾದರು, ಬಣಜಿಗ, ಕುಂಚಿಟಿಗ, ನೊಣಬ ಮುಂತಾದ ಒಳಪಂಗಡಗಳಿವೆ. ವೈಶ್ಯರು, ಒಡ್ಡರು, ಲಂಬಾಣಿಗರು, ದೇವಾಂಗರು, ಕುರುಬರು, ಗೊಲ್ಲರು, ನಾಯಕರು, ಬೌದ್ಧರು, ಜೈನರು, ಕುಂಬಾರ, ಬ್ರಾಹ್ಮಣರು, ಮುಸ್ಲಿಂ ಜನಾಂಗದವರು ತಾಲ್ಲೂಕಿನಲ್ಲಿ ವಾಸಿಸುತ್ತಿದ್ದಾರೆ. ಇದೀಗ ಎಲ್ಲಾ ವರ್ಗದವರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಪ್ರಗತಿಯ ಪಥದಲ್ಲಿದ್ದಾರೆ. ಈ ತಾಲ್ಲೂಕಿನಲ್ಲಿ ಒಟ್ಟು ೫೪ ಕೆರೆಗಳಿವೆ, ಮುತ್ತುಗದೂರು ಕೆರೆ ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಕೆರೆಗಳು ತುಂಬಿಕೊಂಡಿದ್ದಾಗ ಮೀನುಗಾರಿಕೆ ಕೈಗೊಳ್ಳಬಹುದಾಗಿದೆ. ಕೆರೆಗಳ ನೀರನ್ನು ಬಳಸಿ ಬತ್ತ, ತರಕಾರಿ, ಅಡಿಕೆ, ತೆಂಗು, ಹಣ್ಣು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇದು ಕೃಷಿ ಪ್ರಧಾನ ತಾಲ್ಲೂಕಾಗಿದ್ದು ಮಳೆಯನ್ನು ಹೆಚ್ಚಾಗಿ ಅವಲಂಬಿಸಿದೆ. ತಾಲ್ಲೂಕಿನಲ್ಲಿ ಆರು ಮಳೆ ಮಾಪನ ಕೇಂದ್ರಗಳಿವೆ.

## ಪ್ರಾಸ್ತಾವಿಕ

ಹೊಳಲ್ಕೆರೆಯು ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ಹೋಗುವ ಹೆದ್ದಾರಿಯಲ್ಲಿ ಬೆಂಗಳೂರಿನಿಂದ ೨೩೪ ಕಿ.ಮೀ ಮತ್ತು ಚಿತ್ರದುರ್ಗದಿಂದ ೩೨ ಕಿ.ಮೀ ದೂರದಲ್ಲಿದೆ. ೧೦ನೇ ಶತಮಾನದಲ್ಲಿ ಈ ಊರು ಪೊಳಲಕೆರೆ ಎಂಬ ಹೆಸರಿನಲ್ಲಿ ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತೆಂದು ತಿಳಿದುಬರುತ್ತದೆ. ಕ್ರಿ. ಶ. ೧೨೦೫ ರಲ್ಲಿ ಪಲ್ಲವ ರಾಜನಾದ ಮಚ್ಚಿದೇವನು ಹೊಳಲ್ಕೆರೆ ನಾಡನ್ನು ಆಳುತ್ತಿದ್ದನು. ಅದೇ ಸಮಯದಲ್ಲಿ ಪಕ್ಕದ ನಾಡನ್ನು ಹೊಯ್ಸಳ ರಾಜನಾದ ಬಲ್ಲಾಳನು ಆಳುತ್ತಿದ್ದನು. ಕೆಲವು ಶಿಲಾಶಾಸನಗಳ ಪ್ರಕಾರ ಸುಮಾರು ೧೨೨೦ರಲ್ಲಿ ಗಂಗರಾಜ ಎಮ್ಮೆಗನೂರಿನ ಬೊಮ್ಮರಸನು ಆಳುತ್ತಿದ್ದನು. ಈಗಿನ ಪಟ್ಟಣವು ಹದಿನಾಲ್ಕನೆಯ ಶತಮಾನದಲ್ಲಿ ದುಮ್ಮಿಯ ನಾಯಕರಾದ ಶ್ರೀ ದೊಡ್ಡಣ್ಣ ನಾಯಕರ ಆಶ್ರಯದಲ್ಲಿ ಬೋಯನಾಯಕ ಎಂಬುವರಿಂದ ಸ್ಥಾಪಿಸಲ್ಪಟ್ಟಿದ್ದು, ಕಾಲಾನಂತರದಲ್ಲಿ ಇದನ್ನು ಬಸವಾಪಟ್ಟಣದ ಪಾಳೆಯಗಾರರು ವಶಪಡಿಸಿಕೊಂಡರು.

ವಿಜಯನಗರದ ದೊರೆಗಳಿಂದ ೧೪೭೫ ರಲ್ಲಿ ಚಿತ್ರದುರ್ಗ ಪಾಳೆಯಗಾರ ತಿಮ್ಮಣ್ಣ ನಾಯಕ ಪಾಳೆಯಗಾರಿಕೆಯನ್ನು ಪಡೆದಿದ್ದು, ಅದು ಅವರ ಮೊದಲನೆಯ ನೇಮಕವಾಗಿತ್ತು. ಹೈದರಾಲಿ ಇದನ್ನು ಗೆದ್ದುಕೊಳ್ಳುವವರೆಗೆ ಈ ಊರು ಚಿತ್ರದುರ್ಗದ ಪಾಳೆಯಗಾರರ ವಶದಲ್ಲಿಯೇ ಇತ್ತು. ಇತರ ಪ್ರಾಂತ್ಯಗಳಂತೆ ಈ ಪ್ರದೇಶವು ಅನೇಕ ಬಾರಿ ಮರಾಠರ ದಂಡಯಾತ್ರೆಯಿಂದ ಅವರ ಆಕ್ರಮಣಕ್ಕೆ ತುತ್ತಾಗಿ ನಷ್ಟವನ್ನು ಅನುಭವಿಸಬೇಕಾಯಿತು. ಮರಾಠಿಗರ ಮುಖ್ಯಸ್ಥರಾದ ಶ್ರೀ ಶಿವಾಜಿ ಮಹಾರಾಜನ ತಂದೆಯಾದ ಶ್ರೀ ಷಹಜಿಯವರ ಸಮಾಧಿಯು ಹೊಳಲ್ಕೆರೆಯಿಂದ ಸುಮಾರು ೧೬ ಕಿ.ಮೀ ದೂರದಲ್ಲಿರುವ ಹೊದಿಗೆರೆಯಲ್ಲಿರುವುದು ಇದಕ್ಕೆ ನಿದರ್ಶನವಾಗಿದೆ. ತಾಳ್ಯದಲ್ಲಿ ಇತಿಹಾಸ ಪೂರ್ವಕಾಲಕ್ಕೆ ಸೇರಿದ ಶಿಲಾಯುಗದ ಮಾನವರ ಅವಶೇಷಗಳು ಪತ್ತೆಯಾಗಿವೆ. ಈ ತಾಲ್ಲೂಕು ಶಿಲಾಯುಗ ಸಂಸ್ಕೃತಿಯ ಮಹತ್ವದ ನೆಲೆಯಾಗಿದೆ. ಪ್ರಾಚೀನ ದೇವಾಲಯಗಳನ್ನೊಂದಿರುವ, ಚಾರಿತ್ರಿಕ ಹಿರಿಮೆ, ಧಾರ್ಮಿಕ, ಸಾಂಸ್ಕೃತಿಕ ಗರಿಮೆಗಳನ್ನು ಹೊಂದಿರುವ ಈ ತಾಲ್ಲೂಕಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಕೈಗಾರಿಕಾ, ಸಾಹಿತ್ಯಿಕ, ಆಡಳಿತಾತ್ಮಕ ಅಂಶಗಳನ್ನು ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

### ಹೆಸರಿನ ಮೂಲ

ಹೊಳಲ್ಕೆರೆ ತಾಲ್ಲೂಕು, ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪಡೆದಿದೆ. ಹೊಳಲ್ಕೆರೆ ಇತಿಹಾಸವನ್ನು ಸ್ಥಳೀಯರು ಹೇಳುವಂತೆ ಹೊಳಲು ಅಂದರೆ ಪಟ್ಟಣ ಅಥವಾ ಸುಂದರ ಎಂಬ ಅರ್ಥವಿದೆ. ಪಟ್ಟಣದ ಕೆರೆಯಾದ ಹೊಳಲ್ಕೆರೆಯು ಮಧ್ಯೆ ಇದ್ದು, ಹೊಳಲ್ಕೆರೆಯ ನಾಲ್ಕು ದಿಕ್ಕುಗಳು ಕೆರೆಗಳಿಂದ ಕೂಡಿರುವುದು ಈ

ಊರಿನ ವಿಶೇಷವಾಗಿದೆ. ಚಿತ್ರದುರ್ಗದ ಪಾಳೆಯಗಾರರಾದ ತಿಮ್ಮಣ್ಣನಾಯಕನು ಹೊಳಲ್ಕೆರೆಯನ್ನು ಆಳುತ್ತಿದ್ದಾಗ ತನ್ನ ಇಬ್ಬರು ಹೆಣ್ಣುಮಕ್ಕಳಾದ ಹೊನ್ನವ್ವನಾಗತಿ ಮತ್ತು ಹೊಳಲವ್ವ ಇವರ ಹೆಸರಿನಲ್ಲಿ ಎರಡು ಕೆರೆಗಳನ್ನು ಕಟ್ಟಿಸಿದ್ದನೆಂದು, ಆ ಕೆರೆಗಳು ಈಗಲೂ ಸಹ ಹೊನ್ನಕೆರೆ ಮತ್ತು ಹೊಳಲ್ಕೆರೆ ಕೆರೆಗಳೆಂದು ಹೇಳುವ ಪ್ರತೀತಿ ಇದೆ. ಈ ಎರಡು ಹೆಸರುಗಳು ಕೂಡಿ ಹೊಳಲ್ಕೆರೆಯಾಗಿರಬೇಕು ಎಂಬ ಪ್ರತೀತಿಯಿದೆ.

ಕ್ರಿ.ಶ ಐದನೇ ಶತಮಾನದಿಂದ ೧೯ನೇ ಶತಮಾನದವರೆಗೆ ಆಳಿದ ರಾಜವಂಶಗಳಾದ ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು ಮತ್ತು ಚಿತ್ರದುರ್ಗ ಪಾಳೆಯಗಾರ ವಂಶಸ್ಥರ ಆಳ್ವಿಕೆಗೆ ಈ ತಾಲ್ಲೂಕು ಒಳಪಟ್ಟಿತ್ತು. ನಂತರದಲ್ಲಿ ಮೈಸೂರಿನ ಅರಸರು, ಶ್ರೀರಂಗಪಟ್ಟಣದ ಹೈದರಾಲಿ ಮತ್ತು ಟಿಪ್ಪುಸುಲ್ತಾನನ ಆಡಳಿತಕ್ಕೆ ಸೇರಿತ್ತು. ಸ್ವಾತಂತ್ರ್ಯಕ್ಕಾಗಿ ಆಂಗ್ಲರ ವಿರುದ್ಧ ಇಡೀ ದೇಶ ತ್ಯಾಗ, ಬಲಿದಾನದಿಂದ ಹೋರಾಡುತ್ತಿದ್ದಾಗ, ಹೊಳಲ್ಕೆರೆ ತಾಲ್ಲೂಕಿನ ಹಿರಿಯರಾದ ದೊಗ್ಗನಾಳ್ ಗ್ರಾಮದ ಕೊಟ್ರೆನಂಜಪ್ಪನವರು ಮುಂಚೂಣಿಯಲ್ಲಿದ್ದರು. ಈ ತಾಲ್ಲೂಕಿನ ನೂರಾರು ದೇಶಾಭಿಮಾನಿಗಳು ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಭಾಗವಹಿಸಿದ್ದಾರೆ.

## ಸ್ಥಾನ ನಿರ್ದೇಶನ ಮತ್ತು ಮೇರೆಗಳು

ಜಿಲ್ಲೆಯ ಪಶ್ಚಿಮಭಾಗದಲ್ಲಿ ೧೩°೫೧'೩೬''-೧೪°೧೫'೩೬''ಅಕ್ಷಾಂಶ ಮತ್ತು ೭೬°೦೧'೪೮''-೭೬°೨೮'೪೮'' ಪೂರ್ವ ರೇಖಾಂಶಗಳ ನಡುವೆ ಸಮುದ್ರ ಮಟ್ಟದಿಂದ ಸರಾಸರಿ ೯೮೮ಮೀ ಎತ್ತರದಲ್ಲಿ ಈ ತಾಲ್ಲೂಕು ಹರಡಿಕೊಂಡಿದ್ದು ಜಿಲ್ಲಾ ಕೇಂದ್ರ ಚಿತ್ರದುರ್ಗದಿಂದ ೩೨ ಕಿ.ಮೀ ದೂರದಲ್ಲಿದೆ. ಈ ತಾಲ್ಲೂಕಿನ ಪೂರ್ವಕ್ಕೆ ಹಿರಿಯೂರು ತಾಲ್ಲೂಕು, ಪಶ್ಚಿಮಕ್ಕೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು, ದಕ್ಷಿಣಕ್ಕೆ ಹೊಸದುರ್ಗ ತಾಲ್ಲೂಕು ನೈಋತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು, ಉತ್ತರಕ್ಕೆ ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲ್ಲೂಕು ಹಾಗೂ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕುಗಳು ತಾಲ್ಲೂಕಿನ ಗಡಿಗಳಾಗಿವೆ.

## ವಿಸ್ತೀರ್ಣ ಮತ್ತು ಜನಸಂಖ್ಯೆ

೨೦೧೧ ರ ಜನಗಣತಿಯ ಪ್ರಕಾರ ತಾಲ್ಲೂಕಿನ ವಿಸ್ತೀರ್ಣ ೧೦೯೭.೭೬ ಚ.ಕಿ.ಮೀ ಆಗಿದ್ದು, ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬ ರಂತೆ ೧,೦೯೯ ಚ.ಕಿ.ಮೀ ಆಗಿರುತ್ತದೆ. ಜನಸಂಖ್ಯೆ ೨,೦೭,೨೬೦ ಆಗಿದೆ. ಅದರಲ್ಲಿ ಪುರುಷರು ೧,೦೪,೯೯೨; ಹೆಂಗಸರು ೧,೦೨,೨೬೮; ಗ್ರಾಮೀಣ ಪ್ರದೇಶದ ಜನಸಂಖ್ಯೆ ೧,೮೫,೨೪೧; ನಗರ

ಪ್ರದೇಶದ ಜನಸಂಖ್ಯೆ ೨೨,೦೧೯; ಜನಸಾಂದ್ರತೆ ಪ್ರತಿ ಚ.ಕಿ.ಮೀ ಗೆ ೧೮೮.೫; ಲಿಂಗಾನುಪಾತ ೧೦೦೦ ಗಂಡಸರಿಗೆ ೯೭೪ ಹೆಂಗಸರು, ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ೫೨,೬೮೧; ಪರಿಶಿಷ್ಟ ಪಂಗಡದವರು ೨೩,೪೯೮; ಪಟ್ಟಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ೪,೦೫೨ ಮತ್ತು ಪರಿಶಿಷ್ಟ ಪಂಗಡದವರು ೧,೪೯೭ ರಷ್ಟಿದ್ದಾರೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ, ಹೊಳಲ್ಕೆರೆ ತಾಲ್ಲೂಕು**

| | | | ೨೦೧೧ರ ಜನಗಣತಿ ಪ್ರಕಾರ |
|---|---|---|---|
| ೧) | | ಭೌಗೋಳಿಕ ವಿಸ್ತೀರ್ಣ (ಚ.ಕಿಮೀ) | ೧,೦೯೯ |
| ೨) | | ಜನಸಂಖ್ಯೆ (೨೦೧೧ರ ಜನಗಣತಿ) | |
| | ೨.೧) | ಗಂಡಸರು | ೧,೦೪,೯೯೨ |
| | ೨.೨) | ಹೆಂಗಸರು | ೧,೦೨,೨೬೮ |
| | ೨.೩) | ಒಟ್ಟು | ೨,೦೭,೨೬೦ |
| ೩) | | ದಶಕದ ಬೆಳವಣಿಗೆ ಪ್ರಮಾಣ (ಪ್ರತಿಶತ) –೨೦೧೧ | ೪.೮೦ |
| ೪) | | ಲಿಂಗಾನುಪಾತ | |
| | ೪.೧) | ನಗರ | ೯೯೭ |
| | ೪.೨) | ಗ್ರಾಮೀಣ | ೯೭೧ |
| | ೪.೩) | ಒಟ್ಟು | ೯೭೪ |

**ಮಾಹಿತಿ ಮೂಲ:–೨೦೧೧ರ ಜನಗಣತಿ ವರದಿ**

### ಆಡಳಿತಾತ್ಮಕ ಘಟಕವಾಗಿ ತಾಲ್ಲೂಕಿನ ಇತಿಹಾಸ

ಹಿಂದೆ ಕದಂಬರು, ಸೇವುಣರು, ಪಲ್ಲವರು, ಹೊಯ್ಸಳರು, ಗಂಗರು, ಪಾಳೆಯಗಾರರು, ಆಂಗ್ಲರ ಆಳ್ವಿಕೆಗೊಳಪಟ್ಟಿದ್ದ ಈ ತಾಲ್ಲೂಕು ೧೦ನೇ ಶತಮಾನದಲ್ಲಿ ಜೈನರ ನಿವಾಸ ಸ್ಥಾನವಿದ್ದಂತೆ ಕಂಡುಬರುತ್ತದೆ. ಈಗಿನ ಪಟ್ಟಣವನ್ನು ದುಮ್ಮಿಯ ದೊಡ್ಡಣ್ಣನಾಯಕನ ಅಧೀನದಲ್ಲಿದ್ದ ಬೋಯಗೌಡನು ೧೨ನೇ ಶತಮಾನದಲ್ಲಿ

ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಕಾಲಾನುಕ್ರಮದಲ್ಲಿ ಇದು ಬಸವಪಟ್ಟಣದ ಪಾಳೆಯಗಾರರ ಅಧೀನಕ್ಕೆ ಒಳಪಟ್ಟಿತ್ತು.

೧೪೭೫ರಲ್ಲಿ ಚಿತ್ರದುರ್ಗ ಪಾಳೆಯಗಾರರ ವಂಶದ ಮೂಲಪುರುಷನಾದ ತಿಮ್ಮಣ್ಣ ನಾಯಕನು ಹೊಳಲ್ಕೆರೆಯ ನಾಯಕನಾಗಿ ವಿಜಯನಗರದ ಅರಸರಿಂದ ನೇಮಕಗೊಂಡನು. ಹೈದರಾಲಿ ತನ್ನ ವಶಕ್ಕೆ ತೆಗೆದುಕೊಳ್ಳುವವರೆಗೂ, ಹೊಳಲ್ಕೆರೆ ಚಿತ್ರದುರ್ಗ ನಾಯಕರ ಅಧೀನದಲ್ಲಿತ್ತು. ಮರಾಠರು ಈ ಪ್ರದೇಶದ ಮೇಲೆ ಪದೇ ಪದೇ ದಾಳಿ ನಡೆಸಿದಾಗ ಇಲ್ಲಿನ ಜನರು ಕಷ್ಟ ನಷ್ಟಗಳಿಗೆ ಗುರಿಯಾದರು.

ಇದು ಕ್ರಿ.ಶ.೧೮೮೮ ರವರೆಗೂ ಹೊಸದುರ್ಗ ತಾಲ್ಲೂಕಿನಲ್ಲಿದ್ದು, ಹೊಸ ತಾಲ್ಲೂಕಾಗಿ ನಂತರ ಈ ತಾಲ್ಲೂಕು ಪೂರ್ಣ ಪ್ರಮಾಣದ ತಾಲ್ಲೂಕಾಗಿ ಅಸ್ತಿತ್ವ ಪಡೆಯಿತು. ಈ ತಾಲ್ಲೂಕಿನಲ್ಲಿ ಒಟ್ಟು ೨೦೧ ಗ್ರಾಮಗಳಿದ್ದು ನಾಲ್ಕು(೪) ಹೋಬಳಿಗಳಿವೆ. ಅವುಗಳೆಂದರೆ, ಕಸಬಾ, ತಾಳ್ಯ, ರಾಮಗಿರಿ, ಬಿ ದುರ್ಗ. ಅಲ್ಲದೇ ತಾಲ್ಲೂಕಿನಲ್ಲಿ ೨೯ ಗ್ರಾಮ ಪಂಚಾಯಿತಿಗಳು ಮತ್ತು ಒಂದು ಪಟ್ಟಣ ಪಂಚಾಯಿತಿ ಇದೆ. ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಈ ತಾಲ್ಲೂಕು ಸೇರುತ್ತದೆ.

**ಭೂ ಸ್ವರೂಪ**: ಸಮುದ್ರ ಮಟ್ಟದಿಂದ ೬೮೮ ಮೀ. ಗಳಷ್ಟು ಎತ್ತರದಲ್ಲಿ ಈ ತಾಲ್ಲೂಕು ಇದೆ. ಇದು ಮಳೆಯಾಧಾರಿತ ಭೂ ಪ್ರದೇಶವನ್ನು ಹೊಂದಿದೆ.

**ಬೆಟ್ಟ ಗುಡ್ಡಗಳು**: ಸಮುದ್ರ ಮಟ್ಟದಿಂದ ೩,೭೫೧ ಅಡಿ ಎತ್ತರದಲ್ಲಿ ಲೋಕದೊಳಲು ಗ್ರಾಮದ ದೊಡ್ಡ ಹೊಟ್ಟೆ ರಂಗಸ್ವಾಮಿ ಬೆಟ್ಟ, ರಾಮಗಿರಿಯ ಕರಿಸಿದ್ದೇಶ್ವರ ಬೆಟ್ಟ (೩,೧೩೮ ಅಡಿ) ಹೆಚ್ಚು ಎತ್ತರವಾಗಿದ್ದು ಪೌರಾಣಿಕ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿವೆ. ಪ್ರತಿವರ್ಷ ಬೆಟ್ಟಗಳಲ್ಲಿ ಜಾತ್ರೆ ವಿಶೇಷಗಳು ನಡೆಯುತ್ತವೆ.

**ನದಿ ಮತ್ತು ಹಳ್ಳಗಳು**: ತಾಲ್ಲೂಕಿನಲ್ಲಿ ಯಾವುದೇ ಪ್ರಮುಖ ನದಿಗಳಿಲ್ಲದಿದ್ದರೂ ಹಳ್ಳಗಳಿಗೇನು ಕೊರತೆಯಿಲ್ಲ.

**ಅಂತರ್ಜಲ**: ಜಿಲ್ಲೆಯ ಇತರೆಡೆಗಳಂತೆ ಈ ತಾಲ್ಲೂಕಿನಲ್ಲೂ ಅಂತರ್ಜಲ ಸಂಪನ್ಮೂಲ ಲಭ್ಯವಿದ್ದು, ಅಂತರ್ಜಲವನ್ನು ಬಾವಿ ತೋಡುವುದರ ಮೂಲಕ ಸದುಪಯೋಗ ಪಡಿಸಿಕೊಳ್ಳಲಾಗುತ್ತಿತ್ತು, ಆದರೆ ಕೊಳವೆ ಬಾವಿಗಳ ಆವಿಷ್ಕಾರದಿಂದಾಗಿ ಅಂತರ್ಜಲವನ್ನು ವರ್ಷದುದ್ದಕ್ಕೂ ಬಳಸಿಕೊಳ್ಳಲಾಗುತ್ತಿದೆ. ತಾಲ್ಲೂಕಿನಲ್ಲಿ ೧೫,೭೭೮ ಪಂಪ್‌ಸೆಟ್ ಹಾಗೂ ೧೦,೭೪೦ ಕೊಳವೆಬಾವಿಗಳಿರುವುದು ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬ ರಿಂದ ಕಂಡುಬಂದಿರುತ್ತದೆ.

**ಭೂಕಂಪನ ಸಾಧ್ಯತೆಗಳು**: ಈ ತಾಲ್ಲೂಕು ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶವಾಗಿರುವುದರಿಂದ ಈ ಭಾಗಗಳಲ್ಲಿ ಬಹಳ ಹಿಂದೆ ಅಪರೂಪಕ್ಕೆ

ಲಘುಭೂಕಂಪನಗಳು ಸಂಭವಿಸಿರುವುದು ಸ್ಥಳೀಯರಿಂದ ತಿಳಿದುಬರುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಭೂಕಂಪನದ ಯಾವುದೇ ದಾಖಲಾತಿಗಳು ಲಭ್ಯವಿಲ್ಲ.

**ಖನಿಜ ಸಂಪತ್ತು**: ತಾಲ್ಲೂಕಿನ ಪ್ರಮುಖ ಪ್ರಾಕೃತಿಕ ಸಂಪನ್ಮೂಲಗಳು ಈ ತಾಲ್ಲೂಕಿನಲ್ಲಿ ಕಡಿಮೆ ಇವೆ. ತಾಲ್ಲೂಕಿನಲ್ಲಿ ದಕ್ಷಿಣದಿಂದ ಉತ್ತರದ ಅರಸನಘಟ್ಟದವರೆಗೂ ಬೆಟ್ಟ ಶ್ರೇಣಿಯೊಂದು ಹಾದುಹೋಗಿದ್ದು, ಅದರ ಒಂದು ಕವಲು ಪಶ್ಚಿಮದಲ್ಲಿ ರಾಮಗಿರಿಯವರೆಗೂ ಚಾಚಿಕೊಂಡಿದೆ. ರಾಮಗಿರಿ ಮತ್ತು ಗುಂಡೇರಿಗಳಲ್ಲಿ ಸಣ್ಣ ಬೆಟ್ಟಗಳಿವೆ. ಅವುಗಳಲ್ಲಿ ದೇವರ ಗುಡ್ಡ ಅರಣ್ಯದ ದೊಡ್ಡ ಹೊಟ್ಟೆ ರಂಗಪ್ಪನ ಗುಡ್ಡ ಮತ್ತು ಜಾನಕಲ್ಲಿನ ವಡೇರಗುಡ್ಡ ಮುಖ್ಯವಾದವು. ನೀರ್ಥಡಿ ಅರಣ್ಯದಲ್ಲಿ ಕಬ್ಬಿಣ, ಮ್ಯಾಂಗನೀಸ್ ಅದಿರನ್ನು ಮಂಗಳೂರಿನ ಬಂದರು ಮೂಲಕ ಹೊರದೇಶಗಳಿಗೆ ಕಳುಹಿಸಲಾಗುತ್ತಿದೆ. ಆಸ್‌ಬೆಸ್ಟೋನ್ (ಕಲ್ನಾರು) ಇಲ್ಲಿ ಪದರಿನಂತೆ ಸಿಗುತ್ತದೆ. ಅದು ಗಟ್ಟಿಯಾಗಿಯು ಮತ್ತು ಕಂದು ಬಣ್ಣದಾಗಿಯು ಇರುತ್ತದೆ. ಇದು ಹೊಳಲ್ಕೆರೆಯಿಂದ ಪೂರ್ವಕ್ಕೆ ಎರಡು ಕಿ.ಮೀ ದೂರವಿರುವ ಕುಡಿನೀರು ಕಟ್ಟೆ ಮತ್ತು ಲಂಬಾಣಿಹಟ್ಟಿ ಹತ್ತಿರ ಕಂಡುಬರುತ್ತದೆ. ಬಾಕ್ಸೈಟ್ ಲೋಹ ಹೊಳಲ್ಕೆರೆಯ ದಕ್ಷಿಣಕ್ಕಿರುವ ಶಿವಗಂಗದಲ್ಲಿ ಬಾಕ್ಸೈಟ್ ಲಾಟರೈಟಿನ ಜೊತೆಕೂಡಿದೆ. ಲೈಮ್‌ಸ್ಟೋನ್ (ಸುಣ್ಣದ ಕಲ್ಲು) ಪೂರ್ವ ದಿಕ್ಕಿನ ಇಳಿಜಾರಿನ ಬೆಟ್ಟದಲ್ಲಿ ಹೊರಕೆರೆದೇವಪುರದ ಪಶ್ಚಿಮ ದಿಕ್ಕಿನಲ್ಲಿ ದೊರೆಯುತ್ತದೆ.

**ಮ್ಯಾಂಗನೀಸ್**: ತಾಲ್ಲೂಕಿನಲ್ಲಿ ಪುಡಿಯಾದ ಮ್ಯಾಂಗನೀಸ್ ಡೈ ಆಕ್ಸೈಡ್ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ. ಕೇಶವಪುರ, ಹನುಮನಕಟ್ಟೆ, ಮಹದೇವಪುರ, ಶಿವಗಂಗ, ಘಟ್ಟಿಹೊಸಹಳ್ಳಿ ಬಳಿ ದೊರಕುತ್ತದೆ.

**ಬಳಪದ ಕಲ್ಲು**: ಲೋಕದೊಳಲು ಆಡನೂರಿನ ಪೂರ್ವದಲ್ಲಿ ದೊರಕುತ್ತದೆ. ಇದು ಹಸಿರು ಬಣ್ಣ, ಕಂದು ಬಣ್ಣಗಳಲ್ಲಿ ಬೆಟ್ಟದಲ್ಲಿ ಮಿನರಲ್ ಟಾಲ್ಕ್‌ನಂತೆ ಕಂಡುಬರುತ್ತದೆ.

**ಜಲ್ಲಿಕಲ್ಲು**: ಜನರ ಶ್ರಮದ ಜೊತೆ ಯಂತ್ರದ ಸಹಾಯದಿಂದ ಜಲ್ಲಿಕಲ್ಲನ್ನು ಉತ್ಪಾದಿಸಲಾಗುತ್ತದೆ, ಇದೆ ರೀತಿಯ ಬಿಳಿ ಅರೆಕ್ವಾರಿಗಳು (ಗ್ರಾನೈಟ್) ಮತ್ತು ಮುತ್ತಗದೂರು, ಘಟ್ಟಿಹೊಸಹಳ್ಳಿ ಅರಸನಘಟ್ಟ, ಚಿತ್ರಹಳ್ಳಿ, ಹೊರಕೆರದೇವಪುರ, ಮುಂತಾದ ಕಡೆಗಳಲ್ಲೂ ಇವೆ.

## ಪ್ರಾಣಿ ಸಂಪತ್ತು

ಈ ತಾಲ್ಲೂಕು ಹಿಂದೆ ಅಪಾರ ಅರಣ್ಯ ಸಂಪತ್ತು ಹೊಂದಿದ್ದರಿಂದ ಪ್ರಾಣಿ ಸಂಪತ್ತು ಹೇರಳವಾಗಿತ್ತೆಂದು ತಿಳಿದುಬರುತ್ತದೆ. ಹುಲಿ, ಚಿರತೆ, ಆನೆ, ನವಿಲು, ಮೊಲ, ನರಿ,

ಹಂದಿ, ಕರಡಿ, ಕೋತಿ, ಗಿಳಿ, ಮುಂತಾದ ಪ್ರಾಣಿ ಪಕ್ಷಿಗಳು, ನೂರಾರು ತರಹದ ಪತಂಗಗಳು, ವಿವಿಧ ನಮೂನೆಯ ಹಾವುಗಳು ಇದ್ದವು. ಆದರೆ ಅರಣ್ಯ ವಿರಳವಾದಂತೆ ಎಲ್ಲಾ ಪ್ರಾಣಿಗಳ ಸಂತತಿಯೂ ಪ್ರಸ್ತುತ ಕ್ಷೀಣಿಸುತ್ತಿದೆ. ಅರಣ್ಯಾಧಿಕಾರಿಗಳ ಕಚೇರಿ ಹೊಳಲ್ಕೆರೆಯಲ್ಲಿದ್ದು ಅರಣ್ಯ ಸಂಪತ್ತಿನ ರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಚೇರಿಯ ಮುಖೇನ ಅನುಷ್ಠಾನಗೊಳಿಸುತ್ತಿದೆ.

**ಸಸ್ಯ ಸಂಪತ್ತು**

ಈ ತಾಲ್ಲೂಕಿನ ಭೌಗೋಳಿಕ ಪ್ರದೇಶದಲ್ಲಿ ಶೇಕಡ ಎಂಟರಷ್ಟು ಅರಣ್ಯ ಪ್ರದೇಶವಿದೆ. ತಾಲ್ಲೂಕಿನ ಮೀಸಲು ಅರಣ್ಯ ಪ್ರದೇಶಗಳಲ್ಲಿ ಬೆಲೆಬಾಳುವ ಶ್ರೀಗಂಧ, ಹೊನ್ನೆ, ಮತ್ತಿ, ಮಾವು, ಬೇವು, ತೇಗ, ಬಿದಿರು, ಬುರುಗ, ದಿಂಡಿಗ, ಭೂತಾಳೆ ಇತ್ಯಾದಿ ಉತ್ತಮ ಜಾತಿಯ ಮರಗಳಿವೆ. ನೆಲ್ಲಿ, ಹುಣಸೆ ಹಾಗೂ ಉಪಯುಕ್ತ ಗಿಡಮೂಲಿಕೆಗಳು ದೊರೆಯುತ್ತವೆ.

**ಸಾಮಾಜಿಕ ಅರಣ್ಯ**

ತಾಲ್ಲೂಕಿನಲ್ಲಿ ಸುಮಾರು ೪೭ ಹೆಕ್ಟೇರ್ ಭೂಮಿಯಲ್ಲಿ ಸಾಮಾಜಿಕ ಅರಣ್ಯವನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ರೀತಿಯ ನೆಡುತೋಪುಗಳಲ್ಲಿ ಅಕೇಸಿಯಾ, ನೀಲಗಿರಿ, ಹುಣಸೆ, ಬೇವು, ಹೊಂಗೆ ಮುಂತಾದ ಜಾತಿಯ ಮರಗಳನ್ನು ಬೆಳೆಸಲಾಗುತ್ತಿದೆ. ಈ ಬಗೆಯ ಅರಣ್ಯ ಬೆಳವಣಿಗೆಯಿಂದ ಭೂಸಾರ ಸಂರಕ್ಷಣೆಯಾಗುವುದಲ್ಲದೇ ನೂರಾರು ನಿರುದ್ಯೋಗಿಗಳಿಗೆ ಕೂಲಿ ಕಾರ್ಮಿಕರಿಗೆ ತಾತ್ಕಾಲಿಕ ಉದ್ಯೋಗ ದೊರೆಯುತ್ತಿದೆ. ಸಾಮಾಜಿಕ ಅರಣ್ಯ ವಲಯದಲ್ಲಿ ಬೆಳೆಸುವ ಎಲ್ಲಾ ಜಾತಿಯ ಸಸ್ಯಗಳನ್ನು ತಮ್ಮ ಜಮೀನಿನಲ್ಲಿ ಬೆಳೆಸಲು ಕನಿಷ್ಠ ದರದಲ್ಲಿ ಸಸಿಗಳನ್ನು ವಿತರಿಸಲಾಗುತ್ತದೆ.

**ವಾಯುಗುಣ**

ತಾಲ್ಲೂಕಿನ ವಾಯುಗುಣ ತುಂಬಾ ಬಿಸಿಲಿನಿಂದ ಕೂಡಿದ ಒಣ ಹವೆ, ಕಡಿಮೆ ಪ್ರಮಾಣದ ಮಳೆ ಮತ್ತು ಹಿತಕರವಾದ ಮುಂಗಾರು ಹೊಂದಿದೆ. ಡಿಸೆಂಬರ್ ನಿಂದ ಫೆಬ್ರವರಿವರೆಗಿನ ಕಾಲವನ್ನು ಚಳಿಗಾಲ ಎನ್ನಬಹುದು ಮತ್ತು ಈ ಅವಧಿಯಲ್ಲಿ ವಾತಾವರಣ ತುಂಬ ಆರ್ದ್ರತೆ ಹೊಂದಿರುತ್ತದೆ. ಸಾಮಾನ್ಯವಾಗಿ ಬೇಸಿಗೆ ಫೆಬ್ರವರಿ ಕೊನೆ ಭಾಗದಲ್ಲಿ ಪ್ರಾರಂಭವಾಗಿ ಜೂನ್ ಮೊದಲ ವಾರದವರೆಗೂ ಇರುವುದು. ಆಗ ಜಿಲ್ಲೆಯ ನೈಋತ್ಯ ಮುಂಗಾರಿನ ಪ್ರಭಾವಕ್ಕೆ ಒಳಗಾಗುವುದು. ನೈಋತ್ಯ ಮುಂಗಾರು ಜೂನ್ ಮೊದಲ ವಾರದಲ್ಲಿ ಪ್ರಾರಂಭವಾಗಿ ಸೆಪ್ಟೆಂಬರ್‌ವರೆಗೂ ಮುಂದುವರೆಯುವುದು. ಹಿಂಗಾರು ಅಕ್ಟೋಬರ್ ತಿಂಗಳಿನಲ್ಲಿ ಪ್ರಾರಂಭವಾಗಿ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಕೊನೆಯಾಗುವುದು.

## ಪ್ರಾಸ್ತಾವಿಕ

ಚಿತ್ರದುರ್ಗದಲ್ಲಿ ಒಂದೇ ಒಂದು ವೀಕ್ಷಣಾಲಯವಿದೆ. ನವೆಂಬರ್ ಉತ್ತರಾರ್ಧ ದಿಂದ ಫೆಬ್ರವರಿ ಮಾಹೆಯವರೆಗೆ ಸಾಧಾರಣವಾಗಿ ತಂಪು ಹವೆ ಇರುವುದು. ಡಿಸೆಂಬರ್ ತಿಂಗಳು ಅತ್ಯಂತ ಚಳಿಯ ತಿಂಗಳು. ಸರಾಸರಿ ಗರಿಷ್ಠ ಉಷ್ಣಾಂಶ ೨೭.೯ ಡಿಗ್ರಿ ಸೆಲ್ಸಿಯಸ್ ಇದ್ದರೆ, ಸರಾಸರಿ ಕನಿಷ್ಠ ಉಷ್ಣಾಂಶ ೧೬.೬ ಡಿಗ್ರಿ ಇರುವುದು. ಮಾರ್ಚಿನಿಂದ ಮೇ ತಿಂಗಳವರೆಗೆ ಉಷ್ಣಾಂಶ ಏರುತ್ತಾ ಹೋಗುತ್ತದೆ. ಏಪ್ರಿಲ್ ತುಂಬಾ ಉಷ್ಣಾಂಶದಿಂದ ಕೂಡಿದ ಮಾಹೆ. ಈ ತಿಂಗಳಿನಲ್ಲಿ ಸರಾಸರಿ ಉಷ್ಣಾಂಶ ೩೬.೨ ಡಿಗ್ರಿ ಸೆಲ್ಸಿಯಸ್‌ವರೆಗೂ ಏರುತ್ತದೆ. ಈ ಋತುವಿನಲ್ಲಿ ಗರಿಷ್ಠ ಉಷ್ಣಾಂಶ ೪೧ ಡಿಗ್ರಿ ಸೆಲ್ಸಿಯಸ್‌ಯನ್ನೂ ತಲುಪಬಹುದು. ಜೂನ್ ನಿಂದ ನವೆಂಬರ್‌ವರೆಗೆ ಸಾಪೇಕ್ಷ ಆರ್ದ್ರತೆ ಹೆಚ್ಚಾಗಿರುವುದು. ವರ್ಷದ ಉಳಿದ ತಿಂಗಳುಗಳಲ್ಲಿ ಸಾಪೇಕ್ಷ ಆರ್ದ್ರತೆ ಕಡಿಮೆಯಿರುವುದು. ಕೆಲವೊಮ್ಮೆ ಶೇಕಡಾ ೩೦ಕ್ಕೆ ಇಳಿಯುವ ಸಾಧ್ಯತೆಯೂ ಇದೆ. ಸಾಮಾನ್ಯವಾಗಿ ಗಾಳಿ ರಭಸವಾಗಿ ಬೀಸುವುದಿಲ್ಲ. ಜೂನ್‌ನಿಂದ ಅಕ್ಟೋಬರ್ ವರೆಗೆ ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಗುಡುಗಿನಿಂದ ಕೂಡಿದ ಮಳೆಯಾಗುತ್ತದೆ. ನೈಋತ್ಯ ಮುಂಗಾರಿನ ಕಾಲದಲ್ಲಿ ಮಳೆಯ ಪ್ರಮಾಣ ಅಷ್ಟು ಇರುವುದಿಲ್ಲ. ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಲ್ಲಿ ತಾಪಮಾನ ವ್ಯತ್ಯಯವಾಗುವುದು. ಹೊಳಲ್ಕೆರೆ ತಾಲ್ಲೂಕಿನಲ್ಲಿ ಹೆಚ್ಚಿನ ತಾಪಮಾನ ಕಂಡುಬಂದರೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅತಿ ಕಡಿಮೆ ತಾಪಮಾನ ಕಂಡುಬರುವುದು.

| | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ |
|---|---|---|---|---|---|---|---|---|---|---|---|---|
| ಸರಾಸರಿ ತಾಪಮಾನ(ಡಿಗ್ರಿ ಸೆಲ್ಸಿಯಸ್) | ೨೨.೭ | ೨೫ | ೨೭.೮ | ೨೯.೧ | ೨೮.೪ | ೨೫.೭ | ೨೪.೧ | ೨೪.೧ | ೨೪.೫ | ೨೪.೮ | ೨೩.೧ | ೨೨ |
| ಕನಿಷ್ಟ ತಾಪಮಾನ (ಡಿಗ್ರಿ ಸೆಲ್ಸಿಯಸ್) | ೧೬.೧ | ೧೭.೯ | ೨೦.೫ | ೨೨.೩ | ೨೨.೩ | ೨೧.೪ | ೨೦.೮ | ೨೦.೫ | ೨೦.೨ | ೨೦.೨ | ೧೭.೮ | ೧೫.೯ |
| ಗರಿಷ್ಟ ತಾಪಮಾನ (ಡಿಗ್ರಿ ಸೆಲ್ಸಿಯಸ್) | ೨೯.೪ | ೩೨.೨ | ೩೫.೧ | ೩೬ | ೩೪.೫ | ೩೦ | ೨೭.೫ | ೨೭.೭ | ೨೮.೮ | ೨೯.೪ | ೨೮.೫ | ೨೮.೨ |
| ಸರಾಸರಿ ಮಳೆ ಪ್ರಮಾಣ (ಮಿ.ಮೀ) | ೦ | ೧ | ೫ | ೩೫ | ೮೪ | ೫೩ | ೯೧ | ೬೧ | ೯೩ | ೧೪೨ | ೨೪ | ೯ |

ಮೂಲ: *https://en.climate-data.org/location/484599/*

### ಮಳೆ

ತಾಲ್ಲೂಕಿನಲ್ಲಿ ೨೦೧೫–೧೬ರ ಅಂಕಿಅಂಶಗಳ ಪ್ರಕಾರ ವಾಡಿಕೆ ಮಳೆಯ ಪ್ರಮಾಣ ೭೧೮ ಮೀ.ಮೀ. ಆಗಿದೆ. ತಾಲ್ಲೂಕಿನಲ್ಲಿರುವ ಆರು ಮಳೆಮಾಪನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

| **ಮಳೆಮಾಪನ ಕೇಂದ್ರಗಳು** | **೨೦೧೫-೧೬** |
| --- | --- |
| ಕಾರ್ಯನಿರ್ವಹಿಸುತ್ತಿರುವ | ೬ |
| **ವಾರ್ಷಿಕ ವಾಡಿಕೆ ಮಳೆ(೧೯೪೧ – ೧೯೯೦)** | |
| ಮಳೆದಿನಗಳು | ೪೧ |
| ವಾಡಿಕೆಮಳೆ (ಮಿ.ಮಿ.) | ೭೧೮ |
| ೨೦೦೫ ರಿಂದ ೨೦೧೫ ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮಿ) | |
| ೧) ೨೦೦೫ | ೯೧೬ |
| ೨) ೨೦೦೬ | ೯೪೧ |
| ೩) ೨೦೦೭ | ೭೨೯ |
| ೪)೨೦೦೮ | ೬೪೭ |
| ೫)೨೦೦೯ | ೯೩೦ |
| ೬)೨೦೧೦ | ೧೧೧೦ |
| ೭) ೨೦೧೧ | ೫೪೦ |
| ೮) ೨೦೧೨ | ೫೯೮ |
| ೯) ೨೦೧೩ | ೭೧೫ |
| ೧೦) ೨೦೧೪ | ೯೬೨ |
| ೧೧) ೨೦೧೫ | ೮೬೪ |

ಮೂಲ:ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬.

೧೯೦೧ ರಿಂದ ೧೯೯೦ ರ ೯೦ ವರ್ಷಗಳ ಸರಾಸರಿ ಮಳೆ ೫೬೨.೪ ಮಿ.ಮೀ ಆಗಿದೆ. ಮಳೆ ವೈಫಲ್ಯ, ಅಂದರೆ ಸರಿಯಾದ ಸಮಯಕ್ಕೆ ಮಳೆ ಬಾರದಿರುವುದು, ಅಕಾಲದಲ್ಲಿ ಮಳೆ ಬರುವುದು, ವಾಡಿಕೆ ಮಳೆ ದಿನಗಳು ಗಣನೀಯವಾಗಿ ಕಡಿಮೆಯಾಗಿರುವುದು, ನೀರು ಹರಿಯುವ ಮಳೆ ದಿನಗಳ ಸಂಖ್ಯೆ ಕುಂಠಿತವಾಗಿರುವುದು ಕಂಡು ಬರುತ್ತದೆ. ಜಿಲ್ಲೆಯಲ್ಲಿ ೧೯೦೧-೧೯೯೭ ರ ೯೭ ವರ್ಷಗಳ ಅವಧಿಯಲ್ಲಿ ಕನಿಷ್ಠ ೫೯ ವರ್ಷಗಳು ಬರಗಾಲಕ್ಕೆ ತುತ್ತಾಗಿದ್ದು ಅದರಲ್ಲಿ ೨೮ ವರ್ಷಗಳು ತೀವ್ರ ಬರಗಾಲ ವರ್ಷಗಳಾಗಿರುತ್ತವೆ.

**ಪರಿಸರ ಮಾಲಿನ್ಯ**

ಇಲ್ಲಿ ಯಾವುದೇ ಕೈಗಾರಿಕೆಗಳಿಲ್ಲ. ಕೈಗಾರಿಕಾ ದೃಷ್ಟಿಯಿಂದ ಈ ತಾಲ್ಲೂಕನ್ನು ಅಷ್ಟಾಗಿ ಪರಿಗಣಿಸಲಾಗಿಲ್ಲವಾದ್ದರಿಂದ ಕೈಗಾರಿಕೆಗಳಿಂದ ಉಂಟಾಗುವ ಪರಿಸರ ಮಾಲಿನ್ಯ ಹಾಗೂ ಪಟ್ಟಣಗಳಿಂದ ಬರುವ ಕೊಳಚೆ ನೀರುಗಳಿಂದ ಕಲುಷಿತ ವಾಗುವುದು ಗಣನೀಯ ಪ್ರಮಾಣದಲ್ಲಿ ಇಲ್ಲವೆಂದು ಹೇಳಲಾಗುತ್ತದೆ.

## ಅಧ್ಯಾಯ–೨

# ಇತಿಹಾಸ

**ಚಿ**ತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಇಡೀ ದೇಶದ ಜನರು ಹೋರಾಡುತ್ತಿದ್ದಾಗ ಹೊಳಲ್ಕೆರೆ ತಾಲ್ಲೂಕಿನ ದೊಗ್ಗನಾಳ್ ಗ್ರಾಮದ ಕೊಟ್ರೆನಂಜಪ್ಪನವರು ಮುಂಚೂಣಿಯಲ್ಲಿ ಹೋರಾಡಿದರು. ಇದು ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅವಿಸ್ಮರಣೀಯ ಘಟನೆಯಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಾನಪದ ಸಾಹಿತ್ಯ ಬಳಕೆಯಾಗಿದ್ದು ಹೆಸರುವಾಸಿಯಾಗಿದೆ. ೧೯ನೇ ಶತಮಾನದಲ್ಲಿ ಮತ್ತು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಈಗಿನ ಹೊಸದುರ್ಗ ತಾಲ್ಲೂಕಿನ ಬಹುಭಾಗವನ್ನು ಒಳಗೊಂಡು ತುಂಬಾ ವಿಸ್ತೀರ್ಣವಾಗಿದ್ದ ಹೊಳಲ್ಕೆರೆ ತಾಲ್ಲೂಕು ತರುವಾಯದಲ್ಲಿ ಆದ ಮಾರ್ಪಾಡುಗಳಿಂದಾಗಿ ವಿಸ್ತೀರ್ಣದಲ್ಲಿ ಚಿಕ್ಕದಾಗಿ ಪ್ರಸ್ತುತ ಸುಮಾರು ೨೦೧ ಗ್ರಾಮಗಳನ್ನೊಳಗೊಂಡಿದೆ. ಈ ತಾಲ್ಲೂಕಿನ ಇತಿಹಾಸವನ್ನು ಪ್ರಸ್ತುತ ಅಧ್ಯಾಯದಲ್ಲಿ ಸ್ಥೂಲವಾಗಿ ಕಾಣಿಸುವ ಪ್ರಯತ್ನವನ್ನು ಮಾಡಲಾಗಿದೆ.

### ಪ್ರಾಗಿತಿಹಾಸ

ಚಿತ್ರದುರ್ಗದಿಂದ ೩೨ ಕಿ.ಮೀ. ಅಂತರದಲ್ಲಿರುವ ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಮತ್ತಿತರ ಭಾಗಗಳಲ್ಲಿ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಪತ್ತೆ ಮಾಡಲಾಗಿದೆ. ಕಬ್ಬಿಣದ ವಿವಿಧ ಆಯುಧೋಪಕರಣಗಳನ್ನು ತಯಾರಿಸುತ್ತಿದ್ದುದನ್ನು ಬೆಳಕಿಗೆ ತರಲಾಗಿದೆ. ತಾಳ್ಯ ಹೋಬಳಿಯ ಘಟ್ಟಿ ಹೊಸಹಳ್ಳಿಯಲ್ಲಿ ಯುದ್ಧಕ್ಕೆ ಬೇಕಾದ ಕತ್ತಿ, ಗುರಾಣಿ, ಖಡ್ಗ, ಬಾಣದ ಮೊನೆ, ಕೊಡಲಿ, ಮೊಳೆ, ಚಮಟಿಗೆ, ಇತ್ಯಾದಿಗಳನ್ನು ತಯಾರಿಸುತ್ತಿದ್ದುದರ ಬಗ್ಗೆ ಉಲ್ಲೇಖಗಳಿವೆ. ಮದ್ದೇರು ಮದ್ದು ತಯಾರಿಕೆಗೆ ಹೆಸರಾಗಿತ್ತು. ಅರಸನಘಟ್ಟ, ಮುತ್ತಗದೂರು, ಚಿತ್ರಹಳ್ಳಿ, ಹೊರಕೆದೇವರಪುರ ಹೀಗೆ ಒಂದು ವಿಶೇಷ ಸಂಸ್ಕೃತಿಯ ಜನವಾಸ್ತವ್ಯವಿದ್ದ ಸಾಂಸ್ಕೃತಿಕ ಅವಶೇಷಗಳು ಇರುವ ಸಾಧ್ಯತೆ

ಹೆಚ್ಚಾಗಿರುವುದರಿಂದ ಇಲ್ಲಿ ಇನ್ನೂ ವ್ಯಾಪಕ ಶೋಧನಾಕಾರ್ಯ ನಡೆಯಬೇಕಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಬೆಟ್ಟ ಗುಡ್ಡಗಳಲ್ಲೇ ಕಲ್ಲುಚಪ್ಪಡಿ, ಗುಂಡುಕಲ್ಲು, ಮ್ಯಾಂಗನೀಸ್, ಮರಳು ಸುಲಭವಾಗಿ ದೊರೆಯುವಂತಹ ಸನ್ನಿವೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಗಣಿಗಾರಿಕೆಯ ನೆಲೆಗಳಿದ್ದುದು ಸಹಜ. ಕಮ್ಮಾರಿಕೆಯಿಂದ ವಿವಿಧ ಸಲಕರಣೆ ಆಯುಧೋಪಕರಣಗಳನ್ನು ತಯಾರಿಸುತ್ತಿದ್ದು, ಮಣ್ಣಿನ ಬಹು ಬಗೆಯ ಮಡಕೆ, ಕುಡಕೆ, ಹೆಂಚು, ಇತ್ಯಾದಿಗಳನ್ನು ಬಳಸುತ್ತಿದ್ದ ಕಲಾವಂತ ಜೀವನ ವಿಧಾನಕ್ಕೆ ಸಾಕ್ಷಿಯಾಗಿರುವ ಘಟ್ಟಿಹೊಸಹಳ್ಳಿ ಗಮನಾರ್ಹವಾಗಿತ್ತು. ಈ ಸಂಸ್ಕೃತಿಯ ಪ್ರಸರಣ ಪ್ರಕ್ರಿಯೆಯನ್ನು ವಿಶ್ಲೇಷಿಸಬೇಕಾಗಿದೆ.

**ಇತಿಹಾಸ ಕಾಲ**

ಮೌರ್ಯರಿಗೂ ಪೂರ್ವದಲ್ಲಿ ಭಾರತವನ್ನಾಳುತ್ತಿದ್ದ (ಕ್ರಿ.ಪೂ. ನಾಲ್ಕನೇ ಶತಮಾನ) ನಂದರು ಉತ್ತರ ಭಾರತವನ್ನೆಲ್ಲಾ ತಮ್ಮ ಅಧಿಪತ್ಯದಲ್ಲಿಟ್ಟುಕೊಂಡಿದ್ದರು. ಆದರೆ ಅವರು ದಕ್ಷಿಣಭಾರತದ ಭಾಗಗಳ ಮೇಲೆ ಹಿಡಿತಹೊಂದಿದ್ದರೆಂಬ ಬಗ್ಗೆ ವಿಷಯಗಳನ್ನು ಗುರುತಿಸುವುದು ಅಷ್ಟು ಸುಲಭವಲ್ಲ. ಅವರ ಪಂಚ್ ಮಾರ್ಕಿನ ನಾಣ್ಯಗಳು ಉತ್ತರ ಮತ್ತು ದಕ್ಷಿಣ ಭಾರತದಲ್ಲಲ್ಲದೆ ಶ್ರೀಲಂಕಾದಲ್ಲಿಯೂ ದೊರೆತಿವೆ. ಈ ದಾಖಲಾತಿಗಳಿಂದ ಭಾರತದ ಉತ್ತರ ಮತ್ತು ದಕ್ಷಿಣಗಳ ಸಂಪರ್ಕ ತಿಳಿಯಬಹುದೇ ಹೊರತು, ದಕ್ಷಿಣದಲ್ಲಿ ನಂದ ಸಾಮ್ರಾಜ್ಯದ ಎಲ್ಲೆಯನ್ನು ಗುರುತಿಸಲು ಸಾಧ್ಯವಾಗಿಲ್ಲ. (ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್ ಪುಟ ೨೮)

ಮೌರ್ಯರ ಆಳ್ವಿಕೆಯಿಂದ ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ನಿಖರವಾದ ಮಾಹಿತಿಗಳು ದೊರೆಯುತ್ತವೆ. ಆದರೆ ಮೌರ್ಯರು ಕರ್ನಾಟಕವನ್ನು ಯುದ್ಧಮಾಡಿ ಪಡೆದರೇ ಎಂಬುದು ಚರ್ಚಾರ್ಹ ವಿಷಯವಾಗಿದೆ. ಅವರು ಕರ್ನಾಟಕದ ಮೇಲೆ ಯಾವ ಯುದ್ಧವನ್ನೂ ಕೈಗೊಂಡಿಲ್ಲ. ಆದರೆ ನಂದ ರಾಜ್ಯದಲ್ಲಿ ಕರ್ನಾಟಕವೂ ಸೇರಿತ್ತು. ಆ ರಾಜ್ಯವನ್ನು ಮೌರ್ಯರು ಸೋಲಿಸಿದ್ದರಿಂದಲೇ ಕರ್ನಾಟಕವು ಮೌರ್ಯ ಸಾಮ್ರಾಜ್ಯದ ಭಾಗವಾಯಿತು ಎಂಬ ಅಭಿಪ್ರಾಯವೂ (ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಪುಟ ೧೬೪, ಭಾಗ-೧ ಮುಖ್ಯ ಸಂಪಾದಕರು ಸೂರ್ಯನಾಥ ಯು. ಕಾಮತ್) ಇದೆ. ಒಟ್ಟಾರೆ ಉತ್ತರ ಭಾರತವನ್ನು ಆಳುತ್ತಿದ್ದ ಮೌರ್ಯರು ಕರ್ನಾಟಕದ ಕೆಲ ಭಾಗಗಳ ಮೇಲೆ ಅಧಿಕಾರ ಪಡೆದಿದ್ದರೆಂದು ಆಧಾರಗಳಿವೆ. ಚಂದ್ರಗುಪ್ತ ಮೌರ್ಯನು ತನ್ನ ಗುರುವಾದ ಭದ್ರಬಾಹುವಿನೊಡನೆ ತನ್ನ ರಾಜ್ಯದ ಭಾಗವೇ ಆದ ಹಾಸನ ಜಿಲ್ಲೆಯ ಶ್ರವಣಬೆಳಗೊಳಕ್ಕೆ ಹೋದನೆಂಬ ಸಂಗತಿ ಈ ಸಂದರ್ಭದಲ್ಲಿ ಗಮನಾರ್ಹ. ಕರ್ನಾಟಕದ ಈ ಭಾಗ ಮೌರ್ಯ ಸಾಮ್ರಾಜ್ಯದ

ಭಾಗವಾಗಿದ್ದರಿಂದಲೇ ಇಲ್ಲಿಗೆ ಬಂದಿರುವುದು ಸ್ಪಷ್ಟ. ಅಲ್ಲದೆ ೧೮೯೨ರಲ್ಲಿ ಬಿ.ಎಲ್. ರೈಸ್‌ರವರು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅಶೋಕನಿಗೆ ಸಂಬಂಧಿಸಿದ ಮೂರು ಶಾಸನಗಳನ್ನು ಕಂಡುಹಿಡಿದರು. ಇದರಿಂದ ಚಿತ್ರದುರ್ಗ ಜಿಲ್ಲೆಯು ಮೈಸೂರು ಸಂಸ್ಥಾನದ ಭಾಗವಾಗಿದ್ದು, ಮೈಸೂರು ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಸ್ಪಷ್ಟವಾಯಿತು. ಹೊಳಲ್ಕೆರೆ ತಾಲ್ಲೂಕೂ ಸಹ ಅಂದು ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದಾಗಿತ್ತು.

ಅಶೋಕನ ಅಧಿಕಾರಾವಧಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಶಾಸನಗಳು ದೊರಕಿರುವುದು, ಕರ್ನಾಟಕ ಆ ವೇಳೆಗಾಗಲೇ ಗಮನಾರ್ಹವಾದ ರಾಜಕೀಯ ಕೇಂದ್ರವಾಗಿ ಪರಿಣಮಿಸಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮಸ್ಕಿ, ನಿಟ್ಟೂರು ಮುಂತಾದೆಡೆ ದೊರೆತ ಶಾಸನಗಳಲ್ಲಿ ಅಶೋಕನ ಹೆಸರು ಕಾಣಸಿಗುವುದು ಮಹತ್ವದ ಸಂಗತಿ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಮೌರ್ಯರಿಗೆ ಸಂಬಂಧಿಸಿದ ಶಾಸನಗಳು ದೊರೆತಿರುವುದಿಲ್ಲ.

ಮೌರ್ಯರ ಅನಂತರ ಶಾತವಾಹನರು ಚಿತ್ರದುರ್ಗ ಜಿಲ್ಲೆಯನ್ನು ಆಳಿದರು. ಅವರ ಶಾಸನಗಳು ಜಿಲ್ಲೆಯಲ್ಲಿ ದೊರೆಯದಿದ್ದರೂ ಚಂದ್ರವಳ್ಳಿಯಲ್ಲಿ ಅವರ ಅನೇಕ ಸೀಸದ ನಾಣ್ಯಗಳು ದೊರೆತಿವೆ. ಅವುಗಳಲ್ಲಿ ಸಡಕಣಲಾಯ, ಗೌತಮೀಪುತ್ರ ವಿಳಿವಾಯಕುರ, ಮುರಿಡಾನಂದ, ಚುಟುಕುಲಾನಂದ ಯಜ್ಞಶ್ರೀ ಶಾತಕರ್ಣಿ ಮುಂತಾದ ಹೆಸರುಗಳಿವೆ. ಶಾತವಾಹನರ ಮಾಂಡಲಿಕರಾಗಿದ್ದ ಚುಟುಕುಲದ ಅರಸರು ಚಂದ್ರವಳ್ಳಿಯಲ್ಲಿ ಆಳುತ್ತಿದ್ದರು. ೧-೨ನೆಯ ಶತಮಾನಗಳಲ್ಲಿ ಇವರು ರೋಂ ಚಕ್ರಾಧಿಪತ್ಯದೊಡನೆ ವ್ಯಾಪಾರ ಸಂಬಂಧ ಹೊಂದಿದ್ದರು. ಇಲ್ಲಿ ಆಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳ ನಾಣ್ಯಗಳೂ ರೌಲೆಟ್ ಮಣ್ಣಿನ ತಟ್ಟೆಗಳೂ (ಗಟ್ಟಿ ಜೇಡಿ ಮಣ್ಣಿನಿಂದ, ಒಳಭಾಗದ ಮಧ್ಯದಲ್ಲಿ ಉರುಳು ಹಲ್ಲುಚಕ್ರದಿಂದ ಕಿರುಗೆರೆ ಅಥವಾ ಬಿಂದುಗಳ ವೃತ್ತಗಳನ್ನು ಮೂಡಿಸಿ ಅಂಚುಗಳು ಒಳಕ್ಕೆ ಬಾಗಿರುವಂತೆ ತಯಾರಿಸಿದ ತಟ್ಟೆ-ರೌಲೆಟೆಡ್ ವೇರ್) ದೊರೆತಿವೆ. ಮುಂದೆ ಈ ಜಿಲ್ಲೆ ಬನವಾಸಿ ಕದಂಬರಿಗೆ ಸೇರಿತು. ಕರ್ನಾಟಕದ ಆರಂಭಿಕ ರಾಜವಂಶವಾದ ಕದಂಬರ ಶಾಸನಗಳೇ ಮೊದಲು ದೊರೆತಿರುವ ಶಾಸನಗಳು. ಇವರು ಸಿಂಹವನ್ನು ಲಾಂಛನವಾಗಿ ಹೊಂದಿದ್ದರು.

**ಕದಂಬರು**: ಶಾತವಾಹನರ ನಂತರ ಪ್ರಾಬಲ್ಯ ಪಡೆದವರು ಕದಂಬರು. ಬನವಾಸಿ ಇವರ ರಾಜಧಾನಿಯಾಗಿತ್ತು. ಸಿಂಹವು ಇವರ ಲಾಂಛನವಾಗಿತ್ತು. ಆರಂಭದಲ್ಲಿ ಶಾತವಾಹನರ ಸಾಮಂತರಾಗಿದ್ದ ಕದಂಬರು ಆ ವಂಶವು ಕ್ಷೀಣಿಸಿದ ನಂತರ ಮೈಸೂರು ಪ್ರಾಂತ್ಯವನ್ನು ಗೆದ್ದುಕೊಂಡರು. ಆದರೆ ಮೈಸೂರು ಪ್ರಾಂತ್ಯದ ಬೇರೆ ಬೇರೆ ಭಾಗಗಳಲ್ಲಿ ಪಲ್ಲವರು, ಗಂಗರು ಮೊದಲಾದವರು ಆಳ್ವಿಕೆ ನಡೆಸುತ್ತಿದ್ದರು. ಕ್ರಿ.ಶ. ೩೨೫ರಲ್ಲಿ ಮನೆತನ ಸ್ಥಾಪನೆಯಾಗಿ ಸುಮಾರು ಕ್ರಿ.ಶ.೫೪೦ ರವರೆಗೂ ನಡೆಯಿತು.

ಶಿವಮೊಗ್ಗ ಜಿಲ್ಲೆಯ ವರದಾ ನದಿ ತೀರದ ವೈಜಯಂತಿಪುರ ಅಥವಾ ಜಯಂತಿಪುರ ಇವರ ಮೂಲ ರಾಜಧಾನಿಯಾಗಿತ್ತು. ಮಯೂರವರ್ಮ, ಕಾಕುತ್ಸವರ್ಮ, ಶಾಂತಿವರ್ಮ, ರವಿವರ್ಮ ಮುಂತಾದವರು ಈ ಮನೆತನದಲ್ಲಿ ಆಳ್ವಿಕೆ ನಡೆಸಿದ್ದಾರೆ. ಕ್ರಿ.ಶ.೫-೬ ನೇ ಶತಮಾನದಲ್ಲಿ ಹೊಳಲ್ಕೆರೆ ಪ್ರದೇಶವು ಆದಿ ಕದಂಬರ ಆಳ್ವಿಕೆಗೆ ಸೇರಿತ್ತು. ಆ ಕಾಲದಲ್ಲಿ ಈ ಪ್ರದೇಶದ ದುರ್ಮ್ಮಾಯ ದುಮ್ಮಿ ಎಂಬ ಗ್ರಾಮವನ್ನು ದಾನಗ್ರಾಮವನ್ನು ನೀಡಿದ್ದರ ಒಂದು ಪ್ರಸ್ತಾಪವಿದೆ. ಅದು ಈ ತಾಲ್ಲೂಕಿನ ಅತಿ ಪ್ರಾಚೀನ ಐತಿಹಾಸಿಕ ಸ್ಥಳಗಳಲ್ಲಿ ಒಂದಾದ ದುಮ್ಮಿ ಎಂಬ ಗ್ರಾಮವೆಂದು ತಿಳಿಯಲಾಗಿದೆ.

ಈ ಪ್ರದೇಶವನ್ನು ಆಳಿದ ಎಲ್ಲಾ ಪ್ರಮುಖ ಸಾಮ್ರಾಜ್ಯಗಳಲ್ಲಿ ಕದಂಬ, ನೊಳಂಬವಾಡಿ, ಪಾಂಡ್ಯನಾಡು ಚಿಮ್ಮತ್ತನೂರು(ಚಿತ್ರದುರ್ಗ), ಹೀಗೆ ಬೇರೆ ಬೇರೆಯ ರಾಜ್ಯಗಳ ಭಾಗಗಳಾಗಿ ಅವರ ಅಧೀನರ ಆಳ್ವಿಕೆಗೆ ಹೊಳಲ್ಕೆರೆ ತಾಲ್ಲೂಕು ಒಳಪಟ್ಟು ಸಾಗಿಬಂದಿರುವುದನ್ನು ಕಾಣಬಹುದು. ೩-೮ನೇ ಶತಮಾನದಲ್ಲಿ ಕದಂಬರಿಗೂ, ೧೦ನೇ ಶತಮಾನದಲ್ಲಿ ಸೇವುಣರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ ೧೧೦೫ರಿಂದ ೧೧೮೫ ರವರೆಗೆ ಹೊಳಲ್ಕೆರೆಯು ನೊಳಂಬವಾಡಿ ೩೨೦೦೦ ಎಂಬ ಪ್ರದೇಶಕ್ಕೆ ಸೇರಿತ್ತು. ಮಹಾಮಂಡಲೇಶ್ವರನಾದ ತ್ರಿಭುವನಮಲ್ಲ ಪಾಂಡ್ಯನು, ಕ್ರಿ.ಶ ೧೨೦೦ ರವರೆಗೆ ವಿಜಯ ಪಾಂಡ್ಯನು ಆಳಿದರು. ಪಾಂಡ್ಯರ ನಂತರ ಬಂದ ಹೊಯ್ಸಳರು ಈ ಹೊಳಲ್ಕೆರೆ ಪ್ರದೇಶವನ್ನು ಪಾಂಡ್ಯನಾಡೆಂದು ಕರೆದರು.

೧೨ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಹೊಯ್ಸಳರ ಆಳ್ವಿಕೆಗೆ, ನಂತರ ವಿಜಯನಗರದ ಅರಸರ ಆಳ್ವಿಕೆಗೂ, ವಿಜಯನಗರದರಸರಿಂದ ಚಿತ್ರದುರ್ಗ ಪಾಳೆಯಗಾರ ಮತ್ತಿತಿಮ್ಮಣ್ಣ ನಾಯಕನ ಆಳ್ವಿಕೆಗೂ ತಾಲ್ಲೂಕು ಒಳಪಟ್ಟಿತ್ತು. ಪಾಳೆಯಗಾರರ ಅವನತಿಯ ನಂತರ ಹೈದರಾಲಿಯ ಆಳ್ವಿಕೆಗೂ, ನಂತರ ಮೈಸೂರು ಒಡೆಯರ ಆಳ್ವಿಕೆಗೆ, ಮುಂದೆ ಬ್ರಿಟೀಷರ ಆಡಳಿತಕ್ಕೆ ಒಳ್ಳಪಟ್ಟಿತು. ಪ್ರಸ್ತುತ ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದೆ.

**ಹೊಳಲ್ಕೆರೆ ಶಾಸನದ ಮುಖ್ಯಾಂಶಗಳು**

ಚಿತ್ರದುರ್ಗ ತಾಲ್ಲೂಕಿನ ಪಂಡರಹಳ್ಳಿಯ ಜನ್ನೇಶ್ವರ ದೇವಾಲಯದ ಶಾಸನದಿಂದ ಕ್ರಿ.ಶ.೧೨೦೫ ರಲ್ಲಿ ಪಲ್ಲವ ನೊಳಂಬರಾಜ ವಂಶದ ಮಾಚಿದೇವ ಹೊನ್ನಕುಂದ ಮತ್ತು ಹೊಳಲ್ಕೆರೆ ನಾಡುಗಳ ಮೇಲೆ ಅಧಿಕಾರ ಹೊಂದಿದ್ದನೆಂದು ತಿಳಿಯುತ್ತದೆ. ಈ ತಾಲ್ಲೂಕಿನಲ್ಲಿ ಸೇವುಣರ ಕಾಲದ ಶಾಸನಗಳೂ ದೊರೆತಿದೆ. ಹೊಳಲ್ಕೆರೆ ೫೬ನೇ ಶಾಸನದಿಂದ ಈ ಪ್ರದೇಶದಲ್ಲಿ ಚಾಳುಕ್ಯರು ಕಳಚೂರಿಗಳು ಆಳಿದ್ದಾರೆಂದು ತಿಳಿಯುತ್ತದೆ. ಹೊಳಲ್ಕೆರೆ ತಾಲ್ಲೂಕಿನ ೨೮,೧೦೬, ೧೩೬, ೧೩೭, ಇನ್ನೂ ಮುಂತಾದ

ಶಾಸನಗಳಿಂದ ಹೊಯ್ಸಳರ ಇಮ್ಮಡಿ ಬಲ್ಲಾಳ, ಇಮ್ಮಡಿ ನರಸಿಂಹ, ಮುಮ್ಮಡಿ ಬಲ್ಲಾಳರ ಆಳ್ವಿಕೆಯನ್ನು ತಿಳಿಯಬಹುದು. ಕ್ರಿ.ಶ.೧೩೩೬ ರಿಂದ ೧೫೫೫ರವರೆಗೆ ವಿಜಯನಗರದ ಅರಸರ ಆಡಳಿತದಲ್ಲಿ ಈ ತಾಲ್ಲೂಕಿನ ಅಂದಿನ ಸ್ಥಿತಿಗತಿಗಳನ್ನು ತಿಳಿಯಬಹುದು. ಇವರು ತಮ್ಮ ಆಡಳಿತದ ಪದ್ಧತಿಯಲ್ಲಿ ರಾಜ್ಯಾಡಳಿತ ಸುಸೂತ್ರವಾಗಿ ನಡೆಯಲಿ ಎನ್ನುವ ಅಭಿಲಾಷೆಯಿಂದ ತಮ್ಮ ಸಮಸ್ಯೆಗಳನ್ನು ಆಯಾ ಪ್ರದೇಶದವರೆಗೆ ತೀರ್ಮಾನಿಸಲೆಂದು ಅಧಿಕಾರ ವಿಕೇಂದ್ರೀಕರಣದ ದೃಷ್ಟಿಯಿಂದ ರಾಜ್ಯವನ್ನು ಸೀಮೆ, ಚಾವಡಿ, ಸ್ಥಳ, ಅಗ್ರಹಾರ, ಮಹಾನಾಡು ಮುಂತಾಗಿ ವಿಭಾಗಿಸಿಕೊಳ್ಳುತ್ತಿದ್ದರು. ಕ್ರಿ.ಶ.೧೫೨೬ ರಲ್ಲಿ ದುಮ್ಮಿ ಶಾಸನದಿಂದ ಹೊಳಲ್ಕೆರೆ ಮಹಾನಾಡು ಪದ್ಧತಿಗೆ ಒಳಪಟ್ಟಿತೆಂದು ಯಕ್ಕಟ ಸೀಮೆಗೆ ಸೇರಿದ್ದಿತೆಂದು (ಚಿಕ್ಕಮಗಳೂರು ಜಿಲ್ಲೆಯ ಕೆಲ ಪ್ರದೇಶದೊಂದಿಗೆ) ತಿಳಿದುಬರುತ್ತದೆ. ಹೊಳಲ್ಕೆರೆಯ ಒಂದೆರಡು ಶಾಸನಗಳಿಂದ (ಕ್ರಿ.ಶ ೧೭೧೬) ಮೊಗಲ್ ದೊರೆ ಮಹಮದ್ ಷಾನ್ ಆಡಳಿತ ಪದ್ಧತಿಯಲ್ಲಿ ಕಂದಾಯ ಪದ್ಧತಿಯನ್ನು ತಿಳಿಯಬಹುದು. ಮೈಸೂರು ಒಡೆಯರ ಕಾಲದಲ್ಲಿ ಅಂದರೆ ಒಡೆಯರ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ರಾಜ್ಯಾಡಳಿತ ಕ್ರಮದಲ್ಲಿ ಗಡಿಗಳ ಮೇಲೆ ಗಮನವಿಡಲು ಫೌಜುದಾರಿ ಅಥವಾ ತುಕಡಿಗಳನ್ನು ಸ್ಥಾಪಿಸಿದರು. ಈ ತುಕಡಿಗಳಲ್ಲಿ ಚಿತ್ರದುರ್ಗ ತುಕಡಿಯೂ ಒಂದಾಗಿದ್ದು, ಇದರಲ್ಲಿ ೧೩ ತಾಲ್ಲೂಕುಗಳಿದ್ದು ಇದರಲ್ಲಿ ಹೊಳಲ್ಕೆರೆ ಒಂದಾಗಿತ್ತು. ಕ್ರಿ.ಶ ೧೮೮೦ ರಲ್ಲಿ ರೈತರ ದಂಗೆಯಲ್ಲಿ ಹೊಳಲ್ಕೆರೆ ತಾಲ್ಲೂಕಿನ ೫೦೦ ಜನ ರೈತರು ಚಿತ್ರಹಳ್ಳಿಗೆ ಬಂದು ಜಿಲ್ಲೆಯ ರೈತರಿಗೆ ಬೆಂಬಲ ನೀಡಿ ಫೌಜುದಾರನ ವಿರುದ್ಧ ದಂಗೆ ನಡೆಸಿದರು. ಸ್ವಾತಂತ್ರ ಸಂಗ್ರಾಮದಲ್ಲಿ ಹೊಳಲ್ಕೆರೆ ತಾಲ್ಲೂಕಿನ ದೇಶಭಕ್ತರು ಪ್ರಮುಖ ಪಾತ್ರ ವಹಿಸಿ ದೇಶಕ್ಕಾಗಿ ಹೋರಾಡಿದ್ದಾರೆ.

**ಯುದ್ಧಗಳಲ್ಲಿ ಹೊಳಲ್ಕೆರೆ:** ಕ್ರಿ.ಶ.೧೩೦೩ ರಲ್ಲಿ ೧೬ನೇ ಶಾಸನದಿಂದ ಹೊಯ್ಸಳರ ಮುಮ್ಮಡಿ ಬಲ್ಲಾಳರು ಆಳುತ್ತಿರುವ ಸಮಯದಲ್ಲಿ ಸೇವುಣರ ರಾಜ ಶಂಕರದೇವನ ಸೇನೆ ಹೊಯ್ಸಳರ ನಾಡನ್ನು ಮುತ್ತಿಗೆ ಹಾಕಿತ್ತು. ಆಗ ಚಿತ್ರದುರ್ಗದಲ್ಲಿ ಆಳುತ್ತಿದ್ದ ಭಾವ ಸೋಮ ದಣ್ಣಾ ನಾಯಕನು ಹೊಳಲ್ಕೆರೆಯಲ್ಲಿ ಸೇವುಣರನ್ನು ಎದುರಿಸಿದ. ಆದರೆ ಸೇವುಣರ ಕಂಪಿಲನೊಂದಿಗೆ ಹೋರಾಡುತ್ತಾ ವೀರ ಮರಣ ಹೊಂದಿದ ಈ ಸಮಯದಲ್ಲಿಯೇ ಹೊಳಲ್ಕೆರೆ ವೃತ್ತಿಯ (ವಿತ್ತಿಯ) ಮಂಡಲೇಶ್ವರನಾಗಿದ್ದ ಮಹದೇವನ ಆರಾಧಕನಾಗಿದ್ದ ದೇವರಸನ ಮೈದುನ ಬಸವಪ್ಪನು ಈ ಹೋರಾಟದಲ್ಲಿ ವೀರ ಸ್ವರ್ಗ ಸೇರಿದನೆಂದು ಜಾನಕಲ್ಲಿನ ಶಾಸನದಿಂದ ತಿಳಿದುಬರುತ್ತದೆ.

**ಮರಾಠಿಯವರ ಕಾಲದಲ್ಲಿ:** ಕ್ರಿ.ಶ ೧೬೯೩ ರಲ್ಲಿ ಮರಾಠರ ಸಂತೋಷಿ ಘೋರ್ಪಡೆಗೂ ಔರಂಗಜೇಬನ ಕಡೆಯ ಖಾಸಿಂಖಾನನಿಗೂ ಚಳ್ಳಕೆರೆ ತಾಲ್ಲೂಕಿನ 'ದೊಡ್ಡೇರಿ' ಗ್ರಾಮದಲ್ಲಿ ನಡೆದ ಇತಿಹಾಸ ಪ್ರಸಿದ್ಧ ದೊಡ್ಡೇರಿ ಕದನದಲ್ಲಿ ಮೊಗಲರ ವಿರುದ್ಧ ಚಿತ್ರದುರ್ಗದವರ ಪರವಾಗಿ ಸಂತೋಜಿಗೆ ಹೊಳಲ್ಕೆರೆ ಸೇನಾನಿ ಬೊಮ್ಮಣ್ಣನು ಸಹಾಯ ಮಾಡಿದ ಸಂಗತಿ ತಿಳಿದುಬರುತ್ತದೆ.

**ತರೀಕೆರೆ ಕೈಫಿಯತ್ತು ಮತ್ತು ಹೊಳಲ್ಕೆರೆ**: ಇಮ್ಮಡಿ ಹನುಮಪ್ಪ ನಾಯಕರ ಮಗ ನಿಚ್ಚಮದುವಣಿಗೆ ಹನುಮಪ್ಪ ನಾಯಕನು ಕ್ರಿ.ಶ.೧೫೨೦ ರಲ್ಲಿ ಕೆಲವು ದೇಶಗಳನ್ನು ಸಾಧಿಸಿ (ಗೆದ್ದು) ಕೊಂಡಿದ್ದ. ಇವು ಒಟ್ಟು ೧೫ ಗಡಿಸೀಮೆಗಳಾಗಿದ್ದವು. ಇವುಗಳಲ್ಲಿ ಹೊಳಲ್ಕೆರೆ ಸೀಮೆಯು ಒಂದಾಗಿತ್ತೆಂದು ತರಿಕೆರೆ ಕೈಫಿಯತ್ತಿನಿಂದ ತಿಳಿದುಬರುತ್ತದೆ.

**ಸಂತೆಬೆನ್ನೂರು-ಹೊಳಲ್ಕೆರೆ**: ಸಂತೆಬೆನ್ನೂರು ಮತ್ತು ಚನ್ನಗಿರಿಯನ್ನು ತಮ್ಮ ರಾಜಧಾನಿಗಳನ್ನಾಗಿಸಿಕೊಂಡು ಆಳಿದ ಸಂತೆಬೆನ್ನೂರು ಪಾಳೆಯಗಾರರು ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಆಳಿದರೆಂದು ಈ ತಾಲ್ಲೂಕಿನಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ.

**ಮತ್ತೋಡು ಪಾಳೆಯಗಾರರು- ಹೊಳಲ್ಕೆರೆ**: ಈ ಜಿಲ್ಲೆಯಲ್ಲಿ ಆಳಿದ ಮತ್ತೋಡು ಪಾಳೆಯಗಾರರಿಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುವ ಅನೇಕ ಶಾಸನಗಳು ಹೊಳಲ್ಕೆರೆ ತಾಲ್ಲೂಕಿನಲ್ಲಿ ದೊರೆತಿವೆ. (೧೭೩೬ ಹೊಳಲ್ಕೆರೆ ೯೬-೯೮ ನೇ ಶಾಸನಗಳು)

**ಬೇಲೂರು ಪಾಳೆಯಗಾರರು - ಹೊಳಲ್ಕೆರೆ** :ಹೊಳಲ್ಕೆರೆಯ ೨೧ ಮತ್ತು ೧೧೨ನೇ ಶಾಸನಗಳಿಂದ ಬೇಲೂರು (ಬೆಗೂರು) ಸೀಮೆಯ ಪಾಳೆಯಗಾರರು ಈ ಜಿಲ್ಲೆಯಲ್ಲಿ ಆಳಿದ ವಿಚಾರ ತಿಳಿಯಬಹುದು.

**ಬಸವಾಪಟ್ಟಣ ಪಾಳೆಯಗಾರರು - ಹೊಳಲ್ಕೆರೆ**: ಕೆಲವು ಕಾಲ ಹೊಳಲ್ಕೆರೆ ಪ್ರದೇಶದ ಮೇಲೆ ಬಸವಾಪಟ್ಟಣದ ಪಾಳೆಯಗಾರರು ಅಧಿಕಾರ ಸ್ಥಾಪಿಸಿದರು. ಆದರೆ ಓಬಣ್ಣನಾಯಕರ ನಂತರ ಚಿತ್ರದುರ್ಗದ ಪಾಳೆಯಗಾರನಾಗಿ ಕಸ್ತೂರಿ ರಂಗಪ್ಪ ನಾಯಕ ಪಟ್ಟಕ್ಕೆ ಬಂದು ಕ್ರಿ.ಶ.೧೬೫೨ ರವರೆಗೆ ಆಳಿದನು. ಈತನ ಆಳ್ವಿಕೆಯಲ್ಲಿ ಅನೇಕ ಕಾಳಗಗಳು ನಡೆದವು. ಅದರಲ್ಲಿ ಬಸವಾಪಟ್ಟಣದವರೊಂದಿಗೆ ಈತ ಕಾದಾಡಿ ಮಾವಿನಕೊಂಡ, ಸಂತೆಬೆನ್ನೂರು, ಅಣಜಿ, ಜಗಳೂರು ಹಾಗೂ ಹೊಳಲ್ಕೆರೆಯನ್ನು ಮತ್ತೆ ಗೆದ್ದು ಚಿತ್ರದುರ್ಗದ ಪಾಳೆಯಪಟ್ಟಿಗೆ ಸೇರಿಸಿಕೊಂಡ.

**ವಂಶ ಪಾರಂಪರ್ಯವಾಗಿ**: ಹಿಂದೆ ರಾಜ ಮಹಾರಾಜರು ದಾನದತ್ತಿಗಳನ್ನು ದಾನ ಪಡೆದವರಷ್ಟೇ ಅಲ್ಲದೆ ಅವರ ಮಕ್ಕಳು ಮೊಮ್ಮಕ್ಕಳಾದಿಯಾಗಿ, ಸೂರ್ಯ ಚಂದ್ರರಿರುವವರೆಗೂ ಅನುಭವಿಸುವ ಹಕ್ಕು ಇರುತ್ತಿತ್ತು ಎನ್ನುವುದಕ್ಕೆ ಹೊಳಲ್ಕೆರೆ ತಾಲ್ಲೂಕಿನ ೬೬ (ಗಂಜಿಗಟ್ಟೆ) ಶಾಸನವನ್ನು(ಕ್ರಿ.ಶ. ೧೬೩೩) ನೋಡಬಹುದು.

**ದೊಡ್ಡಮದಕರಿನಾಯಕ ಮತ್ತು ಹೊಳಲ್ಕೆರೆ**: ಕಸ್ತೂರಿ ರಂಗಪ್ಪನಾಯಕರ ಅಣ್ಣನ ಮಗ ದೊಡ್ಡ ಮದಕರಿನಾಯಕ ಚಿತ್ರದುರ್ಗ ಪತನವಾದಾಗ, ಹೈದರಾಲಿಯ ವೀರಮದಕರಿನಾಯಕನೊಂದಿಗೆ ಇವನನ್ನು ಸೆರೆಹಿಡಿದೊಯ್ದಿದ್ದನು. ಆದರೆ ದೊಡ್ಡಮದಕರಿಗೂ, ವೀರಮದಕರಿನಾಯಕನಿಗೂ ಸ್ವಲ್ಪ ವಿರಸವಿದ್ದುದನ್ನು ತಿಳಿದು,

ಹೈದರಾಲಿ ದೊಡ್ಡ ಮದಕರಿಯನ್ನು ತನ್ನತ್ತ ಒಲಿಸಿಕೊಂಡು ತಿಂಗಳಿಗೆ ಮುನ್ನೂರು ರೂಪಾಯಿ ಸಂಬಳದ ಮೇಲೆ ಸಾವಿರ ಸೈನ್ಯಕ್ಕೆ ಸರದಾರನನ್ನಾಗಿಸಿಕೊಂಡಿದ್ದನು. ದೊಡ್ಡ ಮದಕರಿ ಅಪ್ರತಿಮ ಶೂರ. ೧-೧೧-೧೭೮೨ರಲ್ಲಿ ಬ್ರಿಟಿಷರಿಗೂ ಟಿಪ್ಪುಸುಲ್ತಾನ್‌ನಿಗೂ ಪಾಲ್ಗಾಟಿನಲ್ಲಿ ನಡೆದ ಯುದ್ಧದಲ್ಲಿ ಟಿಪ್ಪು ಸೋಲುವ ಸ್ಥಿತಿಯಲ್ಲಿದ್ದಾಗ, ಈ ದೊಡ್ಡ ಮದಕರಿಯೂ ತನ್ನ ಅಪ್ರತಿಮ ಸಾಹಸದಿಂದ ಬ್ರಿಟಿಷ್ ಸೇನೆಯನ್ನು ಹಿಮ್ಮೆಟ್ಟಿಸಿದ್ದ. ಇದರಿಂದ ಟಿಪ್ಪು ಮದಕರಿಗೆ ಬಹುಮಾನ ನೀಡಿ ಮರ್ಯಾದೆ ನೀಡಿದನು ಹಾಗೂ ಚಿತ್ರದುರ್ಗ ಪಾಳೆಯ ಪಟ್ಟವನ್ನು ಹಿಂತಿರುಗಿಸಿ ಕೊಡುವುದಾಗಿ ವಾಗ್ದಾನ ಮಾಡಿದನು. ಆದರೆ ಕಾರಣಾಂತರಗಳಿಂದ ಟಿಪ್ಪು ವಾಗ್ದಾನ ಉಳಿಸಿಕೊಳ್ಳಲಿಲ್ಲ. ಕೊನೆಗೆ ಟಿಪ್ಪು ಮತ್ತು ದೊಡ್ಡ ಮದಕರಿಗೂ ಕದನ ನಡೆದು, ಟಿಪ್ಪು ಸೋತು, ಪ್ರಾಣಭಿಕ್ಷೆ ಬೇಡಿದಾಗ, ದೊಡ್ಡಮದಕರಿ ಟಿಪ್ಪುವಿಗೆ ಪ್ರಾಣದಾನ ಮಾಡಿ ಅವನ ಪಲ್ಲಕ್ಕಿಯನ್ನು ಕಿತ್ತುಕೊಂಡು ಕೊಚ್ಚಿಯ ಅನಂತಪದ್ಮನಾಭ ದೇವರಿಗೆ ಅರ್ಪಿಸಿದನೆಂದು ತಿಳಿದುಬರುತ್ತದೆ.

ಮುಂದೆ ಶ್ರೀರಂಗಪಟ್ಟಣ ಬ್ರಿಟಿಷರ ವಶವಾದಾಗ, ದೊಡ್ಡಮದಕರಿ ಬ್ರಿಟಿಷರಿಗೆ ಸಹಾಯ ಮಾಡಿದ್ದರಿಂದ, ಚಿತ್ರದುರ್ಗದ ನಾಯಕತನವನ್ನು ದೊಡ್ಡಮದಕರಿಗೆ ಕೊಡಲಿಚ್ಛಿಸಿದಾಗ, ದಿವಾನ್ ಪೂರ್ಣಯ್ಯನವರ ಅಸಹಕಾರದಿಂದ ದೊಡ್ಡಮದಕರಿಗೆ ಚಿತ್ರದುರ್ಗದ ಅಧಿಕಾರ ಸಿಕ್ಕಲಿಲ್ಲವೆಂದು ತಿಳಿದುಬರುತ್ತದೆ. ಬಹಳ ದಿನ ಕಾದರೂ ಆಸೆ ಕೈಗೂಡದಿದ್ದಾಗ, ತಾತ್ಕಾಲಿಕ ವಾಸಕ್ಕಾಗಿ ದೊಡ್ಡ ಮದಕರಿನಾಯಕ ಮೈಸೂರನ್ನು ಬಿಟ್ಟು ಹೊಳಲ್ಕೆರೆಗೆ ವಾಸಕ್ಕೆ ಬಂದ. ಆಗ ಮೈಸೂರು ಅರಸರಿಂದ ದೊಡ್ಡಮದಕರಿಯ ಸಂಸಾರದ ವಾಸಕ್ಕಾಗಿ ಮನೆ ಕಟ್ಟಿಕೊಳ್ಳಲು ತೇಗದ ಮರ, ವಿಶ್ರಾಂತಿ ವೇತನ ಹಾಗೂ ಹೊಳಲ್ಕೆರೆಯಲ್ಲಿ ೫೦೦ ಚದುರ ಗಜ ಭೂಮಿಯನ್ನು ಕೊಟ್ಟು ಕಳುಹಿಸಿದಾಗ, ದೊಡ್ಡಮದಕರಿ ಹೊಳಲ್ಕೆರೆಯಲ್ಲಿ ಕೆಲವು ದಿನಗಳಿದ್ದು ಮುಂದೆ ಚಳ್ಳಕೆರೆ ತಾಲ್ಲೂಕಿನ ದೊಡ್ಡೇರಿಯಲ್ಲಿ ನೆಲಸಿದನು. ಅಲ್ಲಿಯೇ ವೃದ್ಧಾಪ್ಯದಿಂದ ಮಡಿದನು.

## ರಾಷ್ಟ್ರಕೂಟರ ಕಾಲ

೮ನೆಯ ಶತಮಾನದಲ್ಲಿ ಚಾಳುಕ್ಯರಿಂದ ರಾಜ್ಯವನ್ನು ಕಿತ್ತುಕೊಂಡ ರಾಷ್ಟ್ರಕೂಟರಿಗೆ ಚಿತ್ರದುರ್ಗ ಜಿಲ್ಲೆಯು ಅಧೀನವಾಯಿತು. ಇದೇ ಕಾಲದಲ್ಲಿ ಈ ಜಿಲ್ಲೆಯ ಬಹುಭಾಗವನ್ನು ಆಳಲಾರಂಭಿಸಿದ ಮುಖ್ಯವಾದ ರಾಜಮನೆತನ ನೊಳಂಬ ಪಲ್ಲವರದು. ಮೊದಲು ನೊಳಂಬಳಿಗೆ ಸಾವಿರವಾಗಿದ್ದ ಇವರ ರಾಜ್ಯ ಮುಂದೆ ನೊಳಂಬವಾಡಿ ೩೨೦೦೦ ರಾಜ್ಯವಾಯಿತು. ಸ್ವಲ್ಪ ಕಾಲ ಸ್ವತಂತ್ರವಾಗಿಯೂ ಮತ್ತೆ ಸ್ವಲ್ಪ ಕಾಲ ಗಂಗರ ಅಥವಾ ರಾಷ್ಟ್ರಕೂಟರ ಅಧೀನವಾಗಿಯೂ ನೊಳಂಬರು ಆಳಿದರು. ಈ ಜಿಲ್ಲೆಯ ದಕ್ಷಿಣ ಭಾಗದಲ್ಲಿ ನಿರ್ಗುಂದ ೩೦೦ ಪ್ರಾಂತ್ಯವಿತ್ತು. ಇದೂ ನೊಳಂಬರ ಅಧೀನದಲ್ಲಿತ್ತು. ಚಳ್ಳಕೆರೆ ತಾಲ್ಲೂಕಿನ ಹಿರೆಮಧುರೆಗಳು ಇವರ ಕಾಲದ ಮುಖ್ಯ ಊರುಗಳಾಗಿದ್ದವು.

ಕ್ರಿ.ಶ. ೧೦ನೇಯ ಶತಮಾನದಲ್ಲಿ ಹೊಳಲ್ಕೆರೆ ಪ್ರದೇಶವು ರಾಷ್ಟ್ರಕೂಟ ಸಾಮ್ರಾಜ್ಯದ ಭಾಗವಾದ ಕದಂಬಳಿಗೆ ನಾಡಿಗೆ ಸೇರಿತ್ತು. ಕ್ರಿ.ಶ.೯೩೪ರಲ್ಲಿ ಆಡನೂರು ಗ್ರಾಮದ ಏಳು ಜನ ಗೌಡರು ತಮ್ಮ ತಾಯಿಯ ಸಲುವಾಗಿ ಉಮಾಮಹೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಅದರ ಸೇವೆಗಳಿಗಾಗಿ, ಅನೇಕ ಸಾಕ್ಷಿಗಳ ಸಮ್ಮುಖದಲ್ಲಿ ಅಮೃತ ರಾಶಿ ಎಂಬ ಗುರುವಿಗೆ ತೋಟ ಇತ್ಯಾದಿ ಭೂಮಿಯನ್ನು ದಾನವಾಗಿ ನೀಡಿದ್ದರ ಒಂದು ಉಲ್ಲೇಖವಿದೆ. ಇನ್ನೊಂದು ಪ್ರಮುಖ ಉಲ್ಲೇಖ ರಾಷ್ಟಕೂಟ ಅಕಾಲ ವರ್ಷ ದೊರೆಯ ಕಾಲದ್ದು, ಕ್ರಿ.ಶ.೯೩೮ರಲ್ಲಿ ಶೂದ್ರಕಯ್ಯ ಎಂಬುವನು ಕದಂಬಳಿಗೆಯನ್ನು ಆಳುತ್ತಿದ್ದಾಗ ಸಿಡಿಲಂಕರಾಮ ಅಥವಾ ಸಿಡಿಲಯ್ಯ ಎಂಬುವನು ಸಿಡಿಲೇಶ್ವರ ಎಂಬ ದೇವರ ದೇವಾಲಯವನ್ನು ಮಾಡಿಸಿ ದಿವ್ಯಲಂಗೆ ಎಂಬ ಸ್ವಾಮಿಯೊಬ್ಬರಿಗೆ ಲೋಕಾಯ್ತುವೊಳಲ್(ಈಗಿನ ಲೋಕದೊಳಲು) ಮತ್ತು ಗುಂಡೇರು(ಈಗಿನ ಗುಂಡೇರಿ) ಈ ಊರು ಸೇರಿದ ಕೆಲವು ಭೂಮಿ, ತೋಟ, ಇವನ್ನು ದೇವರ ಸೇವೆಗಾಗಿ ದಾನವಾಗಿ ನೀಡಿದ್ದನ್ನು ತಿಳಿಸುತ್ತದೆ. ಈ ಲೋಕಾಯ್ತುಪೊಳಲ್ ಎಂಬ ಸ್ಥಳನಾಮ ಕುತೂಹಲಕಾರಿಯಾಗಿದೆ. ಪ್ರಾಚೀನ ಕಾಲದಲ್ಲಿ ಎಲ್ಲಾ ಧರ್ಮದವರಿಗೆ ವ್ಯತಿರಿಕ್ತವಾಗಿದ್ದು ದೇವರು, ಆತ್ಮ, ಸ್ವರ್ಗ, ನರಕ ಇತ್ಯಾದಿಗಳ ಅಸ್ತಿತ್ವದ ಪ್ರಶ್ನೆಗೆ 'ನಾಸ್ತಿಕರು' ಎಂದು ತೀವ್ರ ಖಂಡನೆಗೊಳಗಾದವರು ಚಾರ್ವಾಕರು. ಇವರ ಸಿದ್ಧಾಂತ ಅಥವಾ ನಿಲುವನ್ನು 'ಲೋಕಾಯುತ' ಎನ್ನುತ್ತಾರೆ. ಆದ್ದರಿಂದಾಗಿ ಇದರ ಇನ್ನೊಂದು ಹೆಸರೇ (ಲೋಕಾಯತದವರು). ಹೀಗೆ ಲೋಕಾಯ್ತುವೋಳಲ್ ಎಂಬುವುದು ಒಂದು ಕಾಲಕ್ಕೆ ಈ ಚಾರ್ವಾಕರು ಬಹುಸಂಖ್ಯೆಯಲ್ಲಿ ನೆಲೆಸಿದ್ದಂತಹ ಊರಾಗಿದ್ದಿರಬೇಕು ಎಂದು ವಿದ್ವಾಂಸರು ತರ್ಕಿಸಿದ್ದಾರೆ. ರಾಷ್ಟ್ರಕೂಟರ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಕೆಲವು ಕಾಳಗಗಳು ನಡೆದಿರುವುದು ಕೆಲವು ವೀರಗಲ್ಲುಗಳಿಂದ ತಿಳಿದುಬರುತ್ತದೆ.

ಕುಣಗಲಿ ಗ್ರಾಮದ ಕುರುಬರ ಚನ್ನಪ್ಪ ಎಂಬುವರ ಕಣದ ಬೇಲಿಯಲ್ಲಿ ಹುದುಗಿದ್ದ ದೊಡ್ಡಕಲ್ಲು ಚಪ್ಪಡಿಯೊಂದರಲ್ಲಿ ಕೊರೆದಿರುವ ಶಾಸನ ಕ್ರಿ ಶ ಸುಮಾರು ಏಳು ಅಥವಾ ಎಂಟನೆಯ ಶತಮಾನಕ್ಕೆ ಸೇರಿದ್ದು, ಅಂದರೆ ಬಾದಾಮಿ ಚಾಳುಕ್ಯರ ಉತ್ತರಾರ್ಧ ಕಾಲಕ್ಕೆ ಸೇರಿದ್ದು, ಪೂರ್ವದ ಹಳಗನ್ನಡ ಭಾಷೆಯಲ್ಲಿರುವ ಅದು ಕೊಣೇಂಗಿಲನ್ನು ಆಳುವ ಪ್ರಭು ರಣಪುಯ ಕಲ್ಲನು ರಣಜಾಮವೊಳಲಿನವರ ಕಾಳಗದಲ್ಲಿ ಮಡಿದನು. ಶತ್ರುಗಳು ಕಾದಾಡುವಾಗ್ಗೆ, ಅವರ ಕಡೆಯ ಒಂದು ಆನೆ ಮತ್ತು ಮೂವರು ಸೈನಿಕರನ್ನು ಕೊಂದು ಮಡಿದವನು ಎಂದು ತಿಳಿಸುತ್ತದೆ.

ಇದರಲ್ಲಿ ಬರುವ ಕೊಣೇಂಗೀಲ್ ಈಗಿನ ಕುಣಿಗಲಿ ಗ್ರಾಮದ ಪ್ರಾಚೀನ ಹೆಸರೆನ್ನುವುದು ಸ್ಪಷ್ಟ. ಆದರೆ ರಣಜಾವೊಳಲ್ ಯಾವುದೆನ್ನುವುದು ನಿರ್ದಿಷ್ಟವಾಗಿ ತಿಳಿಯದು. ಹಿಂದೆ ಶ್ರೀ ಬಿ.ಎಲ್.ರೈಸ್ ಅವರು ಪ್ರಕಟಿಸಿದ ಕ್ರಿ.ಶ.೧೦ ನೇ ಶತಮಾನದ ಒಂದು ಶಾಸನದಲ್ಲಿ ಬರುವ ರಣಜಾವೊಳಲ್ ಮತ್ತು ಈ ರಣಜಾವೊಳಲ್ ಒಂದೇ

ಹೆಸರುಗಳಿರಬೇಕು. ಹಾಗೆಯೇ ರಣಪ್ರಯ ಎಂಬುದರ ಅರ್ಥ ನಿರ್ದಿಷ್ಟವಿಲ್ಲ. ಇದು ಪ್ರಾಯಶಃ ರಣಪುಯ ಎಂಬ ಪದದ ಅಂದಿನ ಆಡು ಮಾತಿನ ರೂಪವಿರಬಹುದು ಎಂದು ಸಂದೇಹ. ಕುದುರೆಯ ಮೇಲೆ ಕುಳಿತ ಯೋಧರನ್ನು ಕುರಿತು ಈ ಶಾಸನದಲ್ಲಿ ಕಂಡುಬರುವ 'ಘೋಳಯಿಲ' ಎಂಬ ಶಬ್ಧ ರೂಪವು ಕ್ರಿ.ಶ.೧೦ನೇ ಶತಮಾನದಷ್ಟು ಹಳೆಯದಾದದ್ದು ಎಂದು ಇದುವರೆಗೆ ತಿಳಿದುಬಂದಿತ್ತು. ಆದರೆ ಈ ಶಾಸನದಿಂದ ಅದಕ್ಕೂ ಪೂರ್ವದ ಪದ ರೂಪವೊಂದು ದೊರೆತಂತಾಗಿದೆ. ಒಟ್ಟಾರೆ ಬಾದಾಮಿ ಚಾಲುಕ್ಯರ ಕೊನೆಗಾಲದಲ್ಲಿ ಈ ಪ್ರದೇಶದಲ್ಲಿ ಆನೆ, ಕುದುರೆಗಳ ಸೈನ್ಯವನ್ನು ಬಳಸಿದ ಯುದ್ಧವೊಂದು ಜರುಗಿತ್ತು ಎನ್ನುವುದು ಮತ್ತು ಆ ಯುದ್ಧದಲ್ಲಿ ಸ್ಥಳೀಯ ಅರಸನೊಬ್ಬ ಅಸಾಮಾನ್ಯ ಪರಾಕ್ರಮ ತೋರಿ ಮಡಿದನೆನ್ನುವುದು ಮಾತ್ರ ಸ್ಪಷ್ಟವಾಗಿರುತ್ತದೆ. ಇಂತಹ ಪ್ರಾಚೀನ ಕಾಲದ ವೀರಗಲ್ಲು ಚಿತ್ರದುರ್ಗ ಜಿಲ್ಲೆಯಲ್ಲಿ ತುಂಬಾ ಅಪರೂಪ. ಆದರೆ ಬೇಲಿಯಲ್ಲಿರುವ ಈ ವೀರಗಲ್ಲನ್ನು ಸುಸ್ಥಿತಿಯಲ್ಲಿರಿಸಿ ಸಂರಕ್ಷಿಸಬೇಕಾಗಿದೆ.

## ಕಲ್ಯಾಣ ಚಾಲುಕ್ಯರ ಕಾಲ

ಹತ್ತನೆಯ ಶತಮಾನದಲ್ಲಿ ಪುನಃ ಚಿತ್ರದುರ್ಗ ಜಿಲ್ಲೆಯ ಪ್ರಬಲರಾದ ಚಾಲುಕ್ಯರಿಗೆ ಈ ಭಾಗ ಸೇರಿತು. ನೊಳಂಬವಾಡಿ ೩೨೦೦೦ ಪ್ರದೇಶವನ್ನು ಸ್ವಲ್ಪ ಕಾಲ ಚಾಲುಕ್ಯ ಯುವರಾಜ ಜಯಸಿಂಹ ನೊಳಂಬ ಪಲ್ಲವ ಆಳಿದನು. ನಿರ್ಗುಂದ ೩೦೦ನ್ನು ಗೋವಿಂದ, ಚಟ್ಟ, ವಿಷ್ಣು ಮೊದಲಾದ ಸಾಮಂತರಾಜರು ಮೊದಲು ಚಾಲುಕ್ಯರಿಗೂ, ಅನಂತರ ಹೊಯ್ಸಳರಿಗೂ ಅಧೀನರಾಗಿ ಹುಳಿಯಾರಿನಿಂದ ಆಳಿದರು. ಹನ್ನೊಂದನೆ ಶತಮಾನದಿಂದ ನೊಳಂಬವಾಡಿಯನ್ನು ಉಚ್ಚಂಗಿ ಪಾಂಡ್ಯರು ಚಾಲುಕ್ಯರ ಅಧೀನರಾಗಿ ಆಳಲಾರಂಭಿಸಿದರು. ಇವರಲ್ಲಿ ತ್ರಿಭುವನಮಲ್ಲ ಪಾಂಡ್ಯದೇವ, ವಿಜಯ ಪಾಂಡ್ಯದೇವ, ವೀರ ಪಾಂಡ್ಯದೇವ ಇವರು ಮುಖ್ಯರು. ಪಾಂಡ್ಯರು ಆಳುತ್ತಿದ್ದ ಜಿಲ್ಲೆಯ ಈ ಭಾಗಕ್ಕೆ ಪಾಂಡ್ಯರಾಜ್ಯ ಅಥವಾ ಪಾಂಡ್ಯಮಂಡಲವೆಂಬ ಹೆಸರಿತ್ತು. ಸುಮಾರು ೧೨೨೦ರ ವರೆಗೂ ಆಳಿದ ಪಾಂಡ್ಯರನ್ನು ಹೊಯ್ಸಳ ಇಮ್ಮಡಿ ವೀರಬಲ್ಲಾಳ ಸೋಲಿಸಿ ಪಾಂಡ್ಯನಾಡನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡನು. ನೊಳಂಬವಾಡಿ, ನಿರ್ಗುಂದ ೩೦೦ ಇವು ಹೊಯ್ಸಳ ರಾಜ್ಯದ ಪ್ರಾಂತ್ಯಗಳಾದುವು.

ಕ್ರಿ.ಶ ೧೧ನೇ ಶತಮಾನದಿಂದ ೧೩ನೇ ಶತಮಾನದವರೆಗಿನ ಕಾಲಾವಧಿಯಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲದ ಕೆಲವು ಸಂಗತಿಗಳು ತಿಳಿದುಬರುತ್ತವೆ. ಚಾಲುಕ್ಯ ತ್ರೈಲೋಕ್ಯಮಲ್ಲ ದೊರೆಯ ಕಾಲದಲ್ಲಿ ನಾರಸಿಂಹದೇವ ಎಂಬುವನು ಕದಂಬಳಿಗೆಯನ್ನು ಆಳುತ್ತಿರುವಾಗ ಕ್ರಿ.ಶ.೧೦೫೧ರಲ್ಲಿ ಯಾರೋ ವ್ಯಕ್ತಿಗಳು ಬಂದು ಕೆರೆಯನ್ನು ಕಟ್ಟಿಸಿ (ಬಹುಶಃ ಯಾವುದೋ ದೇವರಿಗಾಗಿ) ಗದ್ದೆಯನ್ನು ದತ್ತಿಯಾಗಿ

ಬಿಟ್ಟಿದ್ದುದು ತಿಳಿಯುತ್ತದೆ. ಈ ಅವಧಿಯಲ್ಲಿ ಈ ಪ್ರದೇಶದಲ್ಲಿ ಜೈನಧರ್ಮ ಸಾಕಷ್ಟು ಉತ್ತಮ ಸ್ಥಿತಿಯಲ್ಲಿದ್ದಿತು. ಕ್ರಿ.ಶ.೧೦೮೨ ಡಾಕರಸ ಎಂಬ ದೊರೆ ನೊಳಂಬವಾಡಿಯನ್ನು ಆಳುತ್ತಿದ್ದಾಗ ಪೊಳಲಕೆರೆ (ಈಗಿನ ಹೊಳಲ್ಕೆರೆ) ಅದರ ಒಂದು ಭಾಗವಾಗಿತ್ತು. ಹೊಳಲ್ಕೆರೆಯ ಅತ್ಯಂತ ಹಳೆಯ ಉಲ್ಲೇಖ ಬರುವುದು ಇಲ್ಲಿಯೇ. ಇಲ್ಲಿಯ ಬಸದಿಯ ದೇವರ ಪೂಜೆಗಾಗಿ ಸುಂಕದ ಸಂಗ್ರಹದಿಂದ ಒಂದಷ್ಟು ಹಣ ಸಲ್ಲುವ ಹಾಗೆ ಮಾಡಲಾಗಿತ್ತು.

ಹೀಗೆ ಕ್ರಿ.ಶ. ೧೧೦೦ರಲ್ಲಿ ಚಾಲುಕ್ಯ ತ್ರಿಭುವನಮಲ್ಲ ಆಳುತ್ತಿದ್ದಾಗ, ಕಲಿದೇವರು, ಮಾಚೇಶ್ವರ ದೇವರು ಎಂಬ ದೇವರುಗಳಿಗೆ, ಕೇತಯ್ಯ, ಚಿಂತಯ್ಯ, ಮಾರಯ್ಯ, ಚಟ್ಟಗಾವುಂಡ, ಮಾರನಾಯಕ, ಮುಂತಾದವರು ವಿವಿಧ ದಾನಗಳನ್ನು ನೀಡಿದರು. ಇದೇ ದೊರೆಯ ಅಧೀನನಾದ ಸಾಮಂತ ಗಂಗರಸ ಮತ್ತು ಅವನ ಅಧೀನನಾದ ಗುಂಜಿಗನೂರು ಗ್ರಾಮದ ಪ್ರಭುಗಾವುಂಡ ಇವರು, ಕುಂಬಾರ ಬಮ್ಮಣ್ಣ ಪ್ರತಿಷ್ಠೆ ಮಾಡಿದ ಕುಂಭೇಶ್ವರ ಎಂಬ ದೇವರಿಗಾಗಿ ಕ್ರಿ.ಶ.೧೧೨೬ರಲ್ಲಿ ಪಂಡಿತರಾದ ಆಚಾರ್ಯರಿಗೆ ಎಲೆ ತೋಟವನ್ನು ದಾನ ನೀಡಿದ್ದರು. ಇಲ್ಲಿ ಹೇಳಿದ ಗಂಗರಸನು ನೊಳಂಬವಾಡಿ ರಾಜ್ಯದ ಒಂದು ಭಾಗವಾಗಿದ್ದ ಕುಕ್ಕವಾಡಿಯನ್ನು ಆಳುತ್ತಿದ್ದ ಒಬ್ಬ ಪ್ರಾಂತ್ಯಪಾಲಕನಾಗಿದ್ದವನು.

ಇದೇ ಕಾಲದಲ್ಲೇ ಕ್ರಿ.ಶ.೧೧೫೪ರಲ್ಲಿ ಓದಣ್ಣಗೌಡ ಮತ್ತು ಅವನ ಮಕ್ಕಳಾದ ಸೋಮಣ್ಣಗೌಡ, ಶಾಂತಣ್ಣಗೌಡ, ಆದಣ್ಣಗೌಡ ಮೊದಲಾದವರು ಹೊಳಲ್ಕೆರೆಯ ಶಾಂತಿನಾಥ ದೇವರ ಬಸದಿಯನ್ನು ಜೀರ್ಣೋದ್ಧಾರ ಮಾಡಿದುದಲ್ಲದೆ, ಪ್ರತಾಪ ನಾಯಕ ಎಂಬುವ (ಬಹುಶಃ ಪ್ರಾಂತ್ಯಪಾಲಕ) ನನ್ನು ಪ್ರಾರ್ಥಿಸಿ, ಆ ದೇವರ ಸೇವೆಗೆ ಅಂದರೆ ನಾನಾ ವಿಧವಾದ ಶುದ್ಧಿ, ಆರಾಧನೆ, ಜಿನರಾತೆ, ಮೊದಲಾದ ವ್ರತಾಚರಣೆ ಮತ್ತು ಉತ್ಸವಾದಿಗಳಿಗೆ, ಗುರುಗಳ ಆಹಾರ ದಾನಕ್ಕೆ ಒಂದು ಭೂಮಿಯನ್ನು ತೆರಿಗೆ ರಹಿತ ಮಾಡಿಕೊಂಡು ಪಾರಿಶ್ವಸೇನ ಎಂಬ ಜೈನ ಮುನಿಗಳಿಗೆ ದಾನವಾಗಿ ನೀಡಿದರು.

## ಹೊಯ್ಸಳರ ಕಾಲ

ದಾವಣ ಎಂಬ ದಂಡನಾಯಕನು ಹೊಳಲ್ಕೆರೆಯ ನಾಡಪ್ರಭುವಾಗಿದ್ದಾಗ, ಅವನೂ ಮತ್ತು ಕೆಲವು ಪ್ರಮುಖರೂ ಹೊಳಲ್ಕೆರೆಯ ಪದ್ಮನಾರಾಯಣ ದೇವರ, ಮಾಧವ ದೇವರ ಸೇವಾರ್ಥವಾಗಿ ಕ್ರಿ.ಶ.೧೨೧೦ರಲ್ಲಿ ವಿದ್ಯಾಧರ ಸ್ವಾಮಿಗಳಿಗೆ ಭೂದಾನವನ್ನು ನೀಡಿದರು. ಕ್ರಿ.ಶ.೧೨೧೫ರಲ್ಲಿ ಸೋಮೆಯ ದಂಡನಾಯಕ ಮತ್ತು ಹಿರಿಯ ಬಲ್ಲಾಳ

ದಂಡನಾಯಕರು ಚಿಮ್ಮತ್ತೂರಿನಲ್ಲಿ (ಚಿತ್ರದುರ್ಗ) ಆಳುತ್ತಿದ್ದಾಗ ಅವರ ಸಾಮಂತ ನಾಯಕನೊಬ್ಬನು, ಜೀರ್ಣವಾಗಿದ್ದ ಶಾಂತಿನಾಥ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿ ಭೂದಾನವನ್ನು ನೀಡಿದರು. ಕ್ರಿ.ಶ.೧೨೧೭ರಲ್ಲಿ ವೀರಬಲ್ಲಾಳ ದೊರೆಯ ಕಾಲದಲ್ಲಿ ನಾರಸಿಂಹ ದೇವರ ಅಧೀನನಾದ ಅಣ್ಣಮರಸ ಮತ್ತು ಕೆಲವು ಗೌಡರು ಹೊಳಲ್ಕೆರೆಯ ಸ್ವಯಂಭು ಕಲಿದೇವರಿಗೆ ಕೋಡಿಯಳ್ಳಿಯನ್ನು ದಾನವಾಗಿ ನೀಡಿದರು. ಇದೇ ದೊರೆಯ ಕಾಲದಲ್ಲಿ ಕ್ರಿ.ಶ. ೧೨೨೦ರಲ್ಲಿ ಹಿರೇಎಮ್ಮಿಗನೂರಿನ ಸ್ವಯಂಭು ಕಲಿದೇವರ ಸೇವೆಗಾಗಿ ಹಂದಿಗನಹಳ್ಳಿ ಎಂಬ ಗ್ರಾಮದಲ್ಲಿ ಬ್ರಹ್ಮ ಶಿವ ಮಾಳ ಗುರುಗಳೆಂಬುವರಿಗೆ ವಿವಿಧ ಸೆಟ್ಟಿಯರು, ಪುರಪ್ರಮುಖರು ದಾನ ನೀಡಿದರು. ಇದು ಹಿಂದೆ ಗಂಗ ವಂಶದ ಸಾಮಂತ ಬೊಮ್ಮರಸದೇವ ಎಂಬುವನು ಭೀಮರಾಶಿಯೆಂಬ ಗುರುಗಳಿಗೆ ನೀಡಿದ್ದ ದಾನದ ಪುನರ್ನವೀಕರಣವಾಗಿತ್ತು. ಆ ಕಾಲದಲ್ಲೂ ಈ ಪ್ರಾಂತ್ಯದಲ್ಲಿ ಕೆಲವು ಯುದ್ಧಗಳು ಜರುಗಿದ್ದವೆಂಬುದು ವೀರಗಲ್ಲುಗಳ ಮೂಲಕ ತಿಳಿದು ಬರುವುದಾದರೂ ಅವುಗಳ ವಿವರ ಸ್ಪಷ್ಟವಾಗಿಲ್ಲ.

ಹೊಳಲ್ಕೆರೆ ಭೈರವೇಶ್ವರ ದೇವಸ್ಥಾನದ ಮುಂದೆ ವೀರಗಲ್ಲು, ಕೆಲವು ಬರಹಗಳು ಹೊಸದಾಗಿ ದೊರೆತಿವೆ. ಪ್ರಾಯಶಃ ಹೊಯ್ಸಳರ ಆಳ್ವಿಕೆಯ ಕೊನೆಗಾಲದಲ್ಲಿ ಈ ಪ್ರದೇಶದಲ್ಲಿ ಕೆಲವು ಕದನಗಳು ಜರುಗಿದುದು ಇವುಗಳಿಂದ ಸೂಚಿತವಾಗಿರುತ್ತವೆ. ಈ ದೇವಸ್ಥಾನದ ಸನಿಹದಲ್ಲೇ ಇರುವ ಶಂಕರೇಶ್ವರ ದೇವಾಲಯದ ಬದಿಯಲ್ಲಿ ನೆಲದಲ್ಲಿ ಹೂತುಹೋಗಿದ್ದ ಕಂಬದಲ್ಲಿ, ಹೊಯ್ಸಳರ ಕಾಲದ ಒಂದು ಶಾಸನ ಕಂಡು ಬಂದಿದೆ. ಇದು ಕ್ರಿ.ಶ. ೧೪ ನೇ ಶತಮಾನದ ಆರಂಭದಲ್ಲಿ ಹೊಯ್ಸಳ ಚಕ್ರವರ್ತಿಯಾಗಿದ್ದ ವೀರಬಲ್ಲಾಳನ ಕಾಲದ್ದು.

ಇವನ ಮಹಾ ಪ್ರಧಾನನಾಗಿದ್ದ ಅಳಿಯ ಮಾಚಯ್ಯ ದಣ್ಣಾಯಕನ ಮನೆಯ ಅಧಿಕಾರಿ ಚಟ್ಟಯ್ಯನ ಮಗನಾದ ಹರಿಯಣ್ಣನು ಹೊಳಲ್ಕೆರೆಯ ಪ್ರಾಂತ್ಯವನ್ನು ಆಳುತ್ತಿದ್ದಾಗ ಕ್ರಿ.ಶ. ೧೩೧೦ ರಲ್ಲಿ ಸ್ವಯಂಭೂ ಶಂಕರ ದೇವರ ಸೇವೆಗಾಗಿ ಹೊಳಲ್ಕೆರೆ ನಾಡಿಗೆ ಸೇರಿದ ದುಮ್ಮಿಯ ಬೊಮ್ಮಗೌಡ, ಕೆರಸಿಘಟ್ಟದ ಹೊನ್ನಗೌಡ, ಹೊಳಲ್ಕೆರೆಯ ಬಿಳಿಯಗೌಡ, ನಾಕಿಯಕೆರೆಯ ಹರಿಯಪ್ಪಗೌಡ, ಗುಂಡೇರ ರಾಮಗೌಡ, ಹೆಬ್ಬಳ್ಳಿಯ ಮಾಕಗೌಡ, ಜಾಜೂರ ನಾಗಣ್ಣ, ಆಡನೂರ ನಾಗಗೌಡ, ಗುಂಜಿಗನೂರ ದಾಸಿಗೌಡ, ಹಿರೇಎಮ್ಮಿಗನೂರ ಮಲ್ಲಿಗೌಡ, ನಾರಣಗೌಡನಹಳ್ಳಿಯ ಹರಿಯಪ್ಪಗೌಡ, ಹಾರುವಿರೆ ಹಳ್ಳಿಯ ವಾಮರಸ, ಗಂಗೂರ ರಾಮಗೌಡ, ಅಂದನೂರ ಸಾವಂತಗೌಡ, ಪಟ್ಟಣಸ್ವಾಮಿ ಮೈಲಾರಸೆಟ್ಟಿ ಮುಂತಾದ ಸಮಸ್ತ ಪ್ರಜೆ ಗೌಡರುಗಳು ವಿವಿಧ ಕಾಣಿಕೆ ಸುಂಕ ದತ್ತಿಗಳನ್ನು ನೀಡಿದ್ದನ್ನು ಈ ಶಾಸನ ತಿಳಿಸುತ್ತದೆ. ಈ ತಾಲ್ಲೂಕಿನ ಸ್ಥಳ ನಾಮಗಳ ಅಧ್ಯಯನದ ದೃಷ್ಟಿಯಿಂದ ಈ ಶಾಸನ ತುಂಬ ಮುಖ್ಯವೆನಿಸುತ್ತದೆ.

**ವಿಜಯನಗರದ ಕಾಲ**

ಕ್ರಿ.ಶ. ೧೪ ನೇ ಶತಮಾನದಿಂದ ೧೫ನೇ ಶತಮಾನದವರೆಗೆ ಹೊಳಲ್ಕೆರೆಯು ವಿಜಯನಗರ ಸಾಮ್ರಾಜ್ಯದ ಭಾಗವಾಗಿತ್ತೆಂದು ತಿಳಿದುಬರುತ್ತದೆ. ಉಳಿದ ರಾಜಮನೆತನದ ಆಳ್ವಿಕೆಯ ಕಾಲದಲ್ಲಿದ್ದಂತೆ ಹೊಳಲ್ಕೆರೆ ಪ್ರಾಂತ್ಯದಲ್ಲಿ ಆ ಕಾಲದಲ್ಲೂ ಅನೇಕ ಧಾರ್ಮಿಕ ಚಟುವಟಿಕೆಗಳು ಅಲ್ಲೊಂದು ಇಲ್ಲೊಂದು ಕಾಳಗದ ಮತ್ತು ರಾಜಕೀಯ ಚಟುವಟಿಕೆಗಳು ಜರುಗಿದ್ದುದು ಕಾಣಸಿಗುತ್ತವೆ.

ಕ್ರಿ.ಶ. ೧೩೭೧ರಲ್ಲಿ ಚಟ್ಟಯ್ಯನಾಯಕ ಎಂಬ ಪ್ರಮುಖ ಗೌಡರು ಮತ್ತು ಇತರ ಪ್ರಜೆಗಳು ಕೂಡಿ ವೀರಗಲ್ಲನ್ನು ಸ್ಥಾಪಿಸಿ ಕೊಡುಗೆಯೊಂದನ್ನು ಕೊಟ್ಟಿದ್ದು ತಿಳಿದುಬರುತ್ತದೆ. ವಿಜಯನಗರದ ಲಕ್ಕಣ ಒಡೆಯರ್ (ಲಕ್ಕಣ್ಣ ದಂಡೇಶ) ರ ನಿರೂಪದಂತೆ ದುಮ್ಮಿ ಗ್ರಾಮದ ಸುಂಕದ ಅಧಿಕಾರಿಗಳು ಕ್ರಿ.ಶ. ೧೪೦೫ರಲ್ಲಿ ರಾಮಗಿರಿಯ ರಾಮಯ್ಯ(ರಾಮಲಿಂಗ) ದೇವರಿಗೆ ಮತ್ತು ವೀರಭದ್ರ ದೇವರಿಗೆ ಪ್ರತಿ ತಿಂಗಳು ಸುಂಕದ ಸಂಗ್ರಹದಿಂದ ಐದು ಹಣ ಸಲ್ಲುವಂತೆ ಮಾಡಿದರು. ಕ್ರಿ.ಶ. ೧೪೬೫ರಲ್ಲಿ ಹೊರಕೆರಿಯ (ಈಗಿನ ಹೊರಕೆರೆ ದೇವರಪುರ) ತಿರುವೇಗಳ ನಾಥ ದೇವರ (ರಂಗನಾಥಸ್ವಾಮಿಯ) ರಂಗಮಂಟಪವನ್ನು ದುಮ್ಮಿಯ ವೀರಪ್ಪನಾಯಕನು ಕಟ್ಟಿಸಿದನು. ಕ್ರಿ.ಶ. ೧೪೮೩ರಲ್ಲಿ ಮಂಡಲೇಶ್ವರರಾಗಿದ್ದ ತಿಮ್ಮಯ್ಯ ದೇವ ಚೌಡ ಮಹಾಅರಸುಗಳು ಚಿಮ್ಮಿತನ ಕಲ್ಲು (ಚಿತ್ರದುರ್ಗ) ನಾಡಿನೊಳಗಿದ್ದ ನುಲೇನೂರನ್ನು ಮಾಳೇನಹಳ್ಳಿಯ ತಿರುಮಲ ದೇವರ (ರಂಗನಾಥ ಸ್ವಾಮಿಯ) ಪೂಜೆ ಉತ್ಸವಾದಿಗಳಿಗೆಂದು ನೀಡಿದರು.

**ಹೊಳಲ್ಕೆರೆ**

ಹೊಳಲ್ಕೆರೆಯ ಶ್ರೀ ಈಶ್ವರಪ್ಪ ಎಂಬುವರ ಜಾಗಕ್ಕೆ ಹೊಂದಿಕೊಂಡಿರುವ ಸಣ್ಣ ಮರಡಿಯ ಒಂದು ಕಪ್ಪು ಗುಂಡಿಯಲ್ಲಿ ಕ್ರಿ.ಶ.೧೪ನೇ ಶತಮಾನಕ್ಕೆ ಸೇರಿದ ಜೈನ ಶಾಸನಗಳು ಕಂಡುಬಂದಿವೆ. ಈ ಶಾಸನಗಳೆಲ್ಲವೂ 'ಸಲ್ಲೇಖನವ್ರತ' ವನ್ನು ತೆಗೆದುಕೊಂಡು ಅನ್ನಾಹಾರಗಳನ್ನು ತೊರೆದು ಸಮಾಧಿಮರಣ ಪಡೆದ ಶಾಸನಗಳು ಅಂದರೆ ನಿಸಿದಿ ಶಾಸನಗಳಾಗಿವೆ. ಈ ಶಾಸನಗಳ ಜೊತೆಯಲ್ಲಿ ಪದ್ಮಾಸನಸ್ಥನಾಗಿ ಧ್ಯಾನಭಂಗಿಯಲ್ಲಿ ಕುಳಿತಿರುವ ಇಲ್ಲವೆ ನಿಂತಿರುವ ತೀರ್ಥಂಕರ ಅವನ ತಲೆಯ ಮೇಲೆ ಮುಕ್ಕೊಡೆ, ಎಡಬಲಕ್ಕೆ ಎರಡು ಚವರಿಗಳು ಮತ್ತು ಬದಿಯಲ್ಲೂ ಸಮಾಧಿ ಮರಣ ಪಡೆದ ಶ್ರಾವಕರು ಹಾಗೂ 'ಅಡಕಿಲು' (ಒಂದರ ಮೇಲೊಂದು ನಿಲ್ಲಿಸಿರುವ ಕುಂಭಗಳು) ಪಕ್ಷಿ, (ನವಿಲು) ಗರಿಯ ಕುಂಚ ಅಟ್ಟವಣೆಯ ಮೇಲೆ ಇಟ್ಟಿರುವ ಧರ್ಮಗ್ರಂಥ ಮುಂತಾದವುಗಳ ರೇಖಾಚಿತ್ರಗಳೂ ಇವೆ. ಈ ಆರು ಶಾಸನಗಳಲ್ಲಿ

ಮೂರರಲ್ಲಿ ಕಾಲವನ್ನು ಹೇಳಿದೆ. ಇವುಗಳಲ್ಲಿ ಎರಡೂ ಶಾಸನಗಳ ಪ್ರಕಾರ ಕ್ರಿ.ಶ. ೧೩೬೭ ಬಲಾತ್ಕಾರ ಗಣದ ಕುಮುದ ಚಂದ್ರದೇವ ಎಂಬ ಮುನಿಯ ಶಿಷ್ಯರಾದ ಮಲ್ಲಿದೇವಿ ಅವ್ವಗಳ ಸಮಾಧಿ ಮರಣ ಪಡೆದಿದ್ದಾರೆ. ಕ್ರಿ ಶ. ೧೩೮೧ ಮೂಲ ಸಂಘದ ಸೇನಾಗಣದ ಅನಂತಸೇನ ಮಲಧಾರಿ ದೇವರು ಎಂಬ ಗುರುಗಳ ಶಿಷ್ಯರಾದ ಹೊಳಲ್ಕೆರೆಯ ಮೈಲಶೆಟ್ಟಿ ಎಂಬುವನು ಸಮಾಧಿ ಮರಣವನ್ನು ಪಡೆದನು.

ಇನ್ನೊಂದು ಶಾಸನದ ಪ್ರಕಾರ ಕ್ರಿ.ಶ. ೧೩೬೨ ರಲ್ಲಿ ಹರಿಯಣ್ಣ ದೇವರು ಎಂಬ ಮುನಿಗಳ ಶಿಷ್ಯ ಆದೆಪ್ಪಶೆಟ್ಟಿ ಎಂಬುವನು ಸಮಾಧಿ ಪಡೆದನು. ಕುಮುದ ಚಂದ್ರದೇವರ ಶಿಷ್ಯ ಪಾರಿಶೆಟ್ಟಿ ಅಂತೆಯೇ ಪಾರಿಸೇನ ದೇವರ ಶಿಷ್ಯ ಬಾಚಪ್ಪ ಇವರುಗಳೂ ಮತ್ತು ಮುನಿಗಳಾಗಿದ್ದ ಕುಮುದ ಚಂದ್ರದೇವರೂ ಸಹ ಸಮಾಧಿ ಮರಣವನ್ನು ಹೊಂದಿದಂತೆ ಇತರ ಶಾಸನಗಳಿಂದ ತಿಳಿಯುತ್ತದೆ. ಹಿಂದೆಯೇ ಪ್ರಕಟವಾಗಿರುವ ಈ ಊರಿನ ಇತರ ಶಾಸನಗಳಿಂದ ಕ್ರಿ.ಶ. ೧೨ ನೇ ಶತಮಾನದಲ್ಲಿ ಇಲ್ಲಿ ಉತ್ತಮ ಸ್ಥಿತಿಯಲ್ಲಿ ಇದ್ದುದಾಗಿ ತಿಳಿಯುವ ಜೈನ ಧರ್ಮವು, ೧೪ ನೇ ಶತಮಾನದ ಕೊನೆಯವರೆಗೂ ಇನ್ನು ಸಾಕಷ್ಟು ಉತ್ತಮ ಸ್ಥಿತಿಯಲ್ಲೇ ಉಳಿದಿದ್ದುದು ಈ ಶಾಸನದಿಂದ ತಿಳಿಯುತ್ತದೆ.

ಕೃಷ್ಣದೇವರಾಯ ದೊರೆಯ ಪ್ರಧಾನನಾಗಿ ಸೇವೆ ಸಲ್ಲಿಸಿದ್ದ ಬಾಗೂರಿನ ಮಲ್ಲರಸ (ಯ್ಯ)ನು ಕ್ರಿ.ಶ. ೧೫೧೫ರಲ್ಲಿ ಜಾಜೂರಿನ ಗವಿಯ ತಿರುಮಲ ದೇವರಿಗೆ ಅದೇ ಜಾಜೂರು ಸೀಮೆಯ ತೇಗದ ಹಳ್ಳಿ (ಈಗ ಬೇಚರಾಕ್) ಆಗಿರುವ ತ್ಯಾಗದ ಹಳ್ಳಿಯನ್ನು ದಾನವಾಗಿ ನೀಡಿದನು. ಅದೇ ಮಲ್ಲರಸಯ್ಯನು ಕ್ರಿ.ಶ. ೧೫೧೮ರಲ್ಲಿ ರಾಮಗಿರಿಯ ರಾಮಲಿಂಗ ದೇವರಿಗೆ ಉದಯ ಕಾಲದ ಪೂಜಾ ಸಮಯದಲ್ಲಿ ಮೊಸರನ್ನದ ನೈವೇದ್ಯವನ್ನು ಅರ್ಪಿಸಲು ರಾಮಗಿರಿಯ ಸಂತೆಯ ಸುಂಕ ಸಲ್ಲುವಂತೆ ಮಾಡಿದನು.

ಕೃಷ್ಣದೇವರಾಯ ದೊರೆಯ ಅವಧಿಯಲ್ಲಿ ಚಿಣ್ಣಪ್ಪ ನಾಯಕರ ಕಾರ್ಯಕರ್ತನಾದ ರಾಮಣ್ಣನಾಯಕ ಎಂಬುವನು ದುಮ್ಮಿಯ ಕೆರೆಯ ಭೂಮಿಯ ನಿರ್ವಹಣೆ ಸರಿಯಾಗಿ ಆಗದೆ ರೈತರಿಗೆ ತೀವ್ರ ನಷ್ಟವಾಗಿ, ಊರು ಬಿಟ್ಟು ಹೊರಟಾಗ ಮುಂದೆ ಹಾಗಾಗದಂತೆ ಅವರಿಗೆ ಭರವಸೆಯನ್ನು ಕೊಟ್ಟು ಅವರ ಮನವೊಲಿಸಿ ಕರೆತಂದ ಅಪರೂಪದ ಘಟನೆ ಕ್ರಿ.ಶ.೧೫೨೭ ರಲ್ಲಿ ನಡೆದದ್ದು ತಿಳಿಯುತ್ತದೆ. ಕ್ರಿ.ಶ ೧೫೩೩ರಲ್ಲಿ ಅಚ್ಯುತ (ದೇವ) ರಾಯ ದೊರೆಯ ಕಾಲದಲ್ಲಿ ಚಿತ್ರಹಳ್ಳಿ ಸೀಮೆಯ ಗೌಡರುಗಳು, ಪ್ರಜೆಗಳು ಮತ್ತು ದುಮ್ಮಿಯವರು ಧಾರ್ಮಿಕ ಕಾರ್ಯಕ್ಕಾಗಿ ದತ್ತಿಯನ್ನು ನೀಡಿದ್ದು ತಿಳಿಯುತ್ತದೆ. ಇದೇ ದೊರೆಯ ಕಾಲದಲ್ಲಿ ಕ್ರಿ.ಶ ೧೫೩೪ರಲ್ಲಿ ದೊರೆಯ ಕಾರ್ಯಕ್ಕೆ(ಅಂದರೆ ಒಬ್ಬ ಅಧಿಕಾರಿ) ಆಗಿದ್ದ ಮಾಣಿಕಯ್ಯ ಎಂಬುವನ ನಿರೂಪದಂತೆ, ಸೆಟ್ಟಿಗಳು, ಗೌಡರು, ಪ್ರಜೆಗಳು ಮದುವೆಯ ಸುಂಕವನ್ನು ಬಿಟ್ಟರು. ಹಾಗೆಯೇ (ಉಪ್ಪಾರರ) ಉಪ್ಪು ತಯಾರಿಕೆಯ ಮೇಲೆ ವಿಧಿಸುತ್ತಿದ್ದ ಸುಂಕವನ್ನು ಸಹ ಬಿಡಲಾಯಿತು.

ಕೃಷ್ಣಪ್ಪನಾಯಕನ ಕಾರ್ಯಕ್ಕೆ ಕರ್ತನಾದ ಮಲ್ಲರಸಯ್ಯನು ದುಮ್ಮಿ ಸೀಮೆಯನ್ನು ಆಳುತ್ತಿದ್ದಾಗ ಕ್ರಿ.ಶ.೧೫೩೫ರಲ್ಲಿ ದುಮ್ಮಿಯ ವೀರಭದ್ರ ದೇವರಿಗೆ ಮತ್ತು ನಿರಾಶ್ರಯ ಮಠ ಎಂಬ ಮಠದ ಕೆಂಚವೀರಣ್ಣೊಡೆಯ ಎಂಬುವರಿಗೆ ಮೂಲೆ ವೀಸದಲ್ಲಿ ದತ್ತಿ ಸಲ್ಲಿಸುವಂತೆ ಮಾಡಿದರು. ಕ್ರಿ.ಶ.೧೫೩೬ ರಲ್ಲಿ ಹಡಪದ ವಿಠಲಪ್ಪ ನಾಯಕರ ಕಾರ್ಯಕ್ಕೆ ಕರ್ತರಾದ ತಿಮ್ಮಪ್ಪನಾಯಕರು ಚಿತ್ರಹಳ್ಳಿ ನಾಡೊಳಗಿನ ಕುಲದ ಗೌಡರುಗಳಿಗೆ ಬಹುಶಃ ಕೆಲವು ತೆರಿಗೆಗಳನ್ನು ಸಲ್ಲಿಸಲು ಉದಾರ ರಿಯಾಯಿತಿ ತೋರಿದರು. ಚೌಡಪ್ಪನಾಯಕ ಎಂಬುವನ ನಿರೂಪದಂತೆ, ದೊರೆಗೆ ಒಳ್ಳೆಯದಾಗಬೇಕೆಂದು ಬಯಸಿ ಕಸವರಾವುತ ಎಂಬುವನು ಗುಂಡೇರ (ಈಗಿನ ಗುಂಡೇರಿಯ) ವೀರಭದ್ರ ದೇವರಿಗೆ ಕ್ರಿ.ಶ ೧೫೩೯ರಲ್ಲಿ ತೋಟ, ಹೊಲ ಗದ್ದೆಗಳನ್ನು ಸರ್ವಮಾನ್ಯವಾಗಿ ನೀಡಿದನು.

ಅಚ್ಯುತ (ದೇವ)ರಾಯ ದೊರೆಯ ಕಾರ್ಯಕ್ಕೆ ಕರ್ತನಾದ ಪೆನುಗುಂಡೆಯ ವೀರಪ್ಪ ನಾಯಕರ ನಿರೂಪದಂತೆ ಹಿರಿಯ ಮಲ್ಲಪ್ಪಣ್ಣಯ್ಯನು ಜಾಜೂರ ಸೀಮೆಯಲ್ಲಿ ಮದುವೆಯ ಶುಲ್ಕವನ್ನು ಬಿಟ್ಟರೆ, ಅದೇ ವರ್ಷ (ಬಾಗೂರು ಸೀಮೆಗೆ ಆಗ ಸೇರಿದ್ದು) ಕಡ ಊರು (ಈಗಿನ ಕಡೂರು) ಗ್ರಾಮವನ್ನು ಆ ಊರ ವೀರಭದ್ರ ದೇವರಿಗೆ ಸಮರ್ಪಿಸಲಾಯಿತು. ಹಡಪದ ಎರ್ರ ಕೃಷ್ಣನಾಯಕನ ಮಕ್ಕಳು ತಮ್ಮ ತಂದೆಗೆ ಪುಣ್ಯವಾಗಬೇಕೆಂದು, ಕ್ರಿ.ಶ.೧೫೫೯ರಲ್ಲಿ ಗುಂಡೇರ (ಈಗಿನ ಗುಂಡೇರಿಯ) ಚನ್ನಕೇಶವ ದೇವರ ಅರ್ಚಕರಾಗಿ ಆಗ (ಬಾಗೂರು ಸೀಮೆಗೆ ಸೇರಿದ್ದು) ಗುಂಡೇರ ಉಪಗ್ರಾಮವಾದ ನರಸಾಪುರವನ್ನು ವೆಂಕಟಪುರ ಎಂದು ಮರು ನಾಮಕರಣ ಮಾಡಿ ಅರ್ಪಿಸಿದರು. ಕ್ರಿ.ಶ.೧೫೪೬ರಲ್ಲಿ ರಾಮರಾಜಯ್ಯನವರು ಕೆಲಸಿ ಕಂಡೋಜಿ ಎಂಬುವನ ಕೋರಿಕೆಯಂತೆ ಕ್ಷೌರಿಕ ವೃತ್ತಿಯ ಮೇಲೆ ಇದ್ದ ತೆರಿಗೆಯನ್ನು ರದ್ದು ಪಡಿಸಿದನು. ಎಮ್ಮಿಗನೂರಿನ ಭೈರವ ದೇವರ ಗುಡಿಯು ಹಾಳಾಗಿ ಹೋಗಿ ಬಹಳ ಕಾಲವಾಗಿತ್ತು. ಅದನ್ನು ಕ್ರಿ.ಶ.೧೫೩೭ರಲ್ಲಿ ಹೊನ್ನೂರು ಚಿನ್ನಪ್ಪನಾಯಕನು ಹೊಸದಾಗಿ ಕಟ್ಟಿಸಿ ಅಥವಾ ಜೀರ್ಣೋದ್ಧಾರ ಮಾಡಿ ಕೆರೆಯ ಕೆಳಗಿನ ಹೊಲವನ್ನು ಮಾನ್ಯವಾಗಿ ಕೊಟ್ಟನು.

ದಿಲ್ಲಿಯ ಸುಲ್ತಾನನು ಕುಂಚಟಿಗ ಜನಾಂಗದ ಪ್ರಮುಖನಾಗಿದ್ದ ಹುಂಡಿ ಹೆತ್ತನಾಯಕ ಮತ್ತು ಅವನ ಇಡೀ ಜನಾಂಗ ದೆಹಲಿ(ಡಿಲ್ಲಿ)ಯಲ್ಲಿ ಇರಲಾಗದೆ ಅದನ್ನು ತೊರೆದು ಪರಿವಾರ ಸಮೇತ ದಕ್ಷಿಣಕ್ಕೆ ಬಂದು, ಚಿಮ್ಮತ್ತನೂರನ್ನು(ಚಿತ್ರದುರ್ಗ) ಆಳುತ್ತಿದ್ದ(ವಿಜಯನಗರದ ದೊರೆ ಒಂದನೇ ದೇವರಾಯನ ಮಗ) ವೀರಮಲ್ಲಣ್ಣ ಪ್ರಭುವಿನ ಆಶ್ರಯ ಪಡೆದು ಇಲ್ಲಿಯೇ ನೆಲೆಸಿದರು ಎಂದು ನಂದನ ಹೊಸೂರಿನ ತಾಮ್ರ ಶಾಸನವೊಂದರಲ್ಲಿ ದಾಖಲಾಗಿದೆ.

## ಚಿತ್ರದುರ್ಗದ ನಾಯಕರ ಕಾಲ

ವಿಜಯನಗರದ ನಂತರದಲ್ಲಿ ಸ್ವತಂತ್ರವಾಗಿ ಆಳ್ವಿಕೆ ನಡೆಸಿದವರಲ್ಲಿ ಚಿತ್ರದುರ್ಗದ ನಾಯಕರು ಪ್ರಸಿದ್ಧರಾಗಿದ್ದಾರೆ. ಇವರು ಕಾಮಗೇತಿ ಎಂಬ ಹೆಸರಿನ ವಂಶ(ಗೋತ್ರ)ಕ್ಕೆ ಸೇರಿದವರು. ಹೊಳಲ್ಕೆರೆಯ ಪ್ರದೇಶ ಮೊದಲಿನಿಂದಲೂ ಇವರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದರೂ ನೆರೆಯ ಕೆಳದಿ ಅರಸರು, ತರಿಕೆರೆ ಸಂತೆಬೆನ್ನೂರು ನಾಯಕರು ರಾಮಗಿರಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಆಗಾಗ ದಾಳಿ ಮಾಡುತ್ತಿದ್ದುದರಿಂದ ಅದು ಹೆಚ್ಚು ಕಡಿಮೆ ನಿರಂತರ ಘರ್ಷಣೆಯ ಸ್ಥಳವಾಗಿದ್ದಿತು. ಉಳಿದಂತೆ ಇವರ ಆಳ್ವಿಕೆಯ ಅವಧಿಯಲ್ಲಿ ಅನೇಕ ಧಾರ್ಮಿಕ ಮತ್ತಿತರ ಚಟುವಟಿಕೆಗಳು ಮುಂದುವರೆದುಕೊಂಡು ಬಂದವು.

ವಿಜಯನಗರ ರಾಮರಾಜಯ್ಯನು ತಾಳಿಕೋಟೆಯ ಯುದ್ಧದಲ್ಲಿ ಮಡಿದ ಮೇಲೆ, ತಿರುಮಲ ರಾಜಯ್ಯನಿಂದ ನಾಯಕತನಕ್ಕೆ ನೀಡಲಾಗಿದ್ದ ಚಿತ್ರದುರ್ಗದ ಪ್ರದೇಶವನ್ನು ಮದಕರಿ ನಾಯಕನು ಆಳುತ್ತಿದ್ದಾಗ ಕ್ರಿ.ಶ.೧೫೬೮ ರಲ್ಲಿ ಹೊಳಲ್ಕೆರೆ ಆಡಳಿತವನ್ನು ತನ್ನ ಮೈದುನನಾದ ಗುಲ್ಲಿಯಪ್ಪ(ಗುಲ್ಯಪ್ಪ) ನಾಯಕನಿಗೆ ಬಿಟ್ಟುಕೊಟ್ಟನು. ಈ ಗುಲ್ಯಪ್ಪ ನಾಯಕನು ಮದನಗೋಪಾಲ ಸ್ವಾಮಿಯನ್ನು ಬಹುಹಿಂದೆ ವಿಷ್ಣುವರ್ಧನ ದೊರೆಯಿಂದ ಪ್ರತಿಷ್ಠಾಪನೆಯಾಗಿ, ಮುಂದೆ ಕೃಷ್ಣದೇವರಾಯ ದೊರೆಯಿಂದ ಮತ್ತು ರಾಮರಾಜಯ್ಯನಿಂದ ಜೀರ್ಣೋದ್ಧಾರಗೊಂಡು ಮತ್ತೆ ಹಾಳಾಗಿದ್ದುದನ್ನು ಮದಕರಿ ನಾಯಕನೊಂದಿಗೆ ಸೇರಿ ಪುನಃ ಪ್ರತಿಷ್ಠಾಪನೆ ಮಾಡಿಸಿದನು.

ಹೊಳಲ್ಕೆರೆಯ ಬಯಲು ಗಣಪತಿ ವಿಗ್ರಹ ಕರ್ನಾಟಕದ ಬಹುದೊಡ್ಡ ಗಣಪತಿ ವಿಗ್ರಹಗಳಲ್ಲಿ ಒಂದಾಗಿದೆ. ಈ ಜಿಲ್ಲೆಯಲ್ಲಂತೂ ಇದೇ ಅತ್ಯಂತ ದೊಡ್ಡ ವಿಗ್ರಹವಾಗಿದೆ. ಇದರ ಪೀಠದಲ್ಲಿರುವ ಒಂದೇ ಒಂದು ಸಾಲಿನ ಕನ್ನಡದ ಚಿಕ್ಕಶಾಸನವು ಇದನ್ನು ನಿರ್ಮಿಸಿದವರು ಯಾರು ಎಂಬ ವಿವರವನ್ನು ನೀಡುತ್ತದೆ. ಕಾಮಗೇತಿ ಮದಕೇರಿ ನಾಯಕನ ಮೈದುನ ಗುಲ್ಯಪ್ಪನಾಯಕರ ಸೇವೆಯಾಗಿದೆ. ಈ ವಿಗ್ರಹ ಕ್ರಿ.ಶ. ೧೫೭೦ ರಲ್ಲಿ ನಿರ್ಮಾಣವಾಗಿದೆ.

ಹೊಳಲ್ಕೆರೆಯ ಪ್ರಸಿದ್ಧವಾದ ೯(ಒಂಬತ್ತು) ಅಡಿ ಎತ್ತರದ ಗಣಪತಿ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದವನು ಈ ಗುಲ್ಯಪ್ಪ ನಾಯಕನೇ. (ಆದರೆ ಈಚೆಗೆ ಇತನ ಹೆಸರು ಗುತ್ಯಪ್ಪ ನಾಯಕನೆಂದು ತಪ್ಪಾಗಿ ಪ್ರಚಾರವಾಗಿದೆ)ಚಿತ್ರದುರ್ಗದ ಒಂದನೇ ಕಸ್ತೂರಿ ರಂಗಪ್ಪನಾಯಕನಿಗೆ ಪುಣ್ಯವಾಗಲಿ ಎಂದು ತಾಳೆದ (ಈಗಿನ ತಾಳ್ಯ) ಕರಿಯಪ್ಪ ನಾಯಕನು ಕ್ರಿ.ಶ.೧೬೨೮ ರಲ್ಲಿ ಗಂಜಿಗಟ್ಟೆಯಲ್ಲಿ ಪೂಜೆಗೊಳ್ಳುವ ಗಾದಿರಿ ಪಾಲಿನಾಯಕ ಸ್ವಾಮಿಗೆ ಆ ಗ್ರಾಮದ ಭೂಮಿಯನ್ನು ದಾನವಾಗಿ ನೀಡಿದನು. ಈ ದಾನವನ್ನು ಕ್ರಿ.ಶ.೧೬೩೩ ರಲ್ಲಿ ಮತ್ತೊಮ್ಮೆ ಪುನರ್ದತ್ತಿಯಾಗಿ ಕೊಡಲ್ಪಟ್ಟಂತೆ ತಿಳಿದುಬರುತ್ತದೆ.

ಪೂಜೆಗೊಳ್ಳುವ ದೇವರಾಗಿರುವ ಗಾದಿರಿ ಪಾಲನಾಯಕ ಒಂದು ಕಾಲಕ್ಕೆ ಸಾಮಾನ್ಯ ಮನುಷ್ಯನಾಗಿದ್ದವನು. ಪಶುಪಾಲಕ ಸಂಸ್ಕೃತಿಯ ಹಿನ್ನೆಲೆಯಿಂದ ಬಂದು ಪ್ರಾಂತ್ಯಾಧಿಪತಿಗಳಾಗಿ ಬೆಳೆದ ಹಟ್ಟಿಯ (ಈಗಿನ ನಾಯಕನ ಹಟ್ಟಿ) ಪಾಳೆಯಗಾರರ ವಂಶಕ್ಕೆ ಸೇರಿದವನು. ಆದರೆ ಶರಣನಂತೆ ಬಾಳಿ ಬೇಡ ಜನಾಂಗದ ಸಾಂಸ್ಕೃತಿಕ ವೀರರಲ್ಲೊಬ್ಬನೆನಿಸಿದನು. ಇವನ ಸಮಾಧಿ ಗಂಜಿಗಟ್ಟೆಯ ಸಮೀಪದ ಮಿಂಚೆರಿಯ ಅಡವಿಯಲ್ಲಿದ್ದು, ಇವನ ಶಿಲ್ಪ ಮತ್ತಿತರ ಸ್ಮಾರಕಗಳು ಗಂಜಿಗಟ್ಟೆಯಲ್ಲಿವೆ. ಇವನ ಬಗ್ಗೆ ವಿಶಿಷ್ಟವಾದ ಆಚರಣೆಗಳು ಜನಪದ ಸಾಹಿತ್ಯದಲ್ಲಿ ಕಾಣಸಿಗುತ್ತವೆ.

ಕ್ರಿ.ಶ ೧೬೭೧ (ಇಮ್ಮಡಿ ಮದಕರಿ ನಾಯಕನ ಕಾಲದಲ್ಲಿ) ನಂದನ ಹೊಸೂರಿನ ಹನುಮಂತ ದೇವರಗುಡಿಯನ್ನು ಚನ್ನಪ್ಪ ಎಂಬುವನೊಬ್ಬನು ಕಟ್ಟಿಸಿದಾಗ, ಅದಕ್ಕೆ ಕೆಲವು ಗ್ರಾಮಸ್ಥರು ಒಂದಷ್ಟು ಭೂಮಿಯನ್ನು ದಾನವಾಗಿ ನೀಡಿದರು. ಮುಂದೆ ಈ ದೇವಾಲಯ ಬೇರೆ ಇಬ್ಬರು ವ್ಯಕ್ತಿಗಳಿಂದ ಪುನಃ ಕಟ್ಟಲ್ಪಟ್ಟಂತೆ ಕಾಣುತ್ತದೆ. ಇದೇ ಮದಕರಿ ನಾಯಕ ಬಾನೂರಿನ ಚರಂತಿಯಾಗಿದ್ದ ರಾಮಗಿರಿ ದೇವರಿಗೆ ಕ್ರಿ.ಶ ೧೬೬೦ ರಲ್ಲಿ (ಆತ ಬಾಗೂರು ಸೀಮೆಗೆ ಸೇರಿದ್ದ) ಗುಂಡನ ಸಮುದ್ರ ಎಂಬ ಗ್ರಾಮದ ಪುರವರ್ಗವನ್ನು ನೀಡಿದ್ದನು. ಮುಂದೆ ಅವನು ಇದೇ ಪುರವರ್ಗವನ್ನು ಬಾಗೂರಿನ ಚರಂತಿಯಾಗಿದ್ದ ಚನ್ನಬಸಪ್ಪ ದೇವರಿಗೆ ಕ್ರಿ.ಶ ೧೬೬೯ ರಲ್ಲಿ ನೀಡಿದನು. ಮತ್ತೆ ಕ್ರಿ.ಶ ೧೬೮೩ ರಲ್ಲಿ ಚಿಕ್ಕಪ್ಪ (ಚಿಕ್ಕಣ್ಣ) ನಾಯಕನು ಬಾಗೂರಿನ ಚರಂತಿಯಾಗಿದ್ದ ಚನ್ನಬಸಪ್ಪ ದೇವರ ಕುಮಾರ ರುದ್ರಪ್ಪ ದೇವರೆಂಬುವರಿಗೆ ಅದೇ ಬಾಗೂರು ಸೀಮೆಗೆ ಸೇರಿದ ವೀರಪುರ ಗ್ರಾಮವನ್ನು ನೀಡಲು ಊಳಗದ ಬೊಕ್ಕಸದ ಮುದ್ದಣ್ಣನ ಮಗಳು ಗಂಗಮ್ಮ ಕಾರಣಳಾದಳು. ಇದೇ ಚಿಕ್ಕಣ್ಣ ನಾಯಕನ ಕಾಲದಲ್ಲಿ ತಾಳ್ಯ ಗ್ರಾಮದ ಪ್ರಸಿದ್ಧವಾದ ಆಂಜನೇಯಸ್ವಾಮಿಯ ಗುಡಿಯನ್ನು ಪಾರುಪತ್ಯಗಾರ ಕೆಂಚಪ್ಪ ಎಂಬುವನು ಕಟ್ಟಿಸಿದನು.

**ಕಸವನಹಳ್ಳಿ**

ತಾಳ್ಯ ಹೋಬಳಿಯ ಕಸವನಹಳ್ಳಿ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದ ಚಿಕ್ಕ ಪ್ರಾಕಾರದ ಗೋಡೆಯಲ್ಲಿ ದೊರೆತ ಒಂದು ಶಾಸನ ಚಿತ್ರದುರ್ಗದ ಪಾಳೆಯಗಾರರ ವಂಶಾವಳಿಯ ಮೇಲೆ ಹೊಸಬೆಳಕು ಬೀರುತ್ತದೆ. ಚಿತ್ರದುರ್ಗದ ದೊರೆ ಒಂದನೇ ಓಬಣ್ಣನಾಯಕನಿಗೆ ನಾರಸಿಂಹ ನಾಯಕನೆಂಬ ಮಗನೊಬ್ಬನಿದ್ದನೆಂದೂ, ಅವನಿಗೆ ದೊಡ್ಡಣ್ಣನಾಯಕ ಎಂಬ ಮಗನಿದ್ದು, ಕಾರಣಾಂತರದಿಂದ ಅವರಿಬ್ಬರೂ ಗತಿಸಲಾಗಿ ನಾರಸಿಂಹನಾಯಕನ ಪತ್ನಿ ಚಿಕ್ಕಕೋನಮ್ಮ ಎಂಬುವಳು ತನ್ನ ಗಂಡನ ಹೆಸರಿನಲ್ಲಿ 'ನರಸಪುರ' ಎಂಬ ಗ್ರಾಮವನ್ನು ಮಾಡಿಸಿ ಆಂಜನೇಯ ದೇವರ ಪ್ರತಿಷ್ಠಾಪನೆ

ಮಾಡಿ, ಆ ದೇವರಿಗೆ ಒಂದಷ್ಟು ಭೂಮಿಯನ್ನು ಉಂಬಳಿಯಾಗಿ ನೀಡಿದಳು ಎಂದೂ ಈ ಶಾಸನ ತಿಳಿಸುತ್ತದೆ. ಅನೇಕ ಕಾರಣದಿಂದ ಇದು ಒಂದು ಮುಖ್ಯ ಶಾಸನ. ಚಿತ್ರದುರ್ಗದ ಜೊತೆಗೆ ಇದು (೧ನೇ) ಓಬಣ್ಣನಾಯಕನನ್ನು (೧ನೇ) ಮದಕರಿನಾಯಕ ಎಂದು ಹೆಸರಿಸಿರುವ ಮಹತ್ವವನ್ನೂ ಹೊಂದಿದೆ. ಚಿತ್ರದುರ್ಗ ತಿಮ್ಮಣ್ಣನಾಯಕನನ್ನು 'ರಸಸಿದ್ಧರು' ಎಂಬ ಸಿದ್ಧಪುರುಷರು 'ಮದಕೇರಿ ನಾಯಕ' ಎಂದು ಕರೆದರೆಂದು ಹಾಗಾಗಿ ಈ (೧ನೇ) ಓಬಣ್ಣನಾಯಕನೇ ಮುಂದೇ (೧ನೇ) ಮದಕರಿ ನಾಯಕ ಎಂದು (ಕ್ರಿ.ಶ) ಸುಮಾರು ೧೫೫೭ – ೧೬೦೩) ಇತಿಹಾಸದಲ್ಲಿ ಪ್ರಸಿದ್ಧನಾದನೆಂದು ತಿಳಿದುಬರುತ್ತದೆ.  ಈ ಅಂಶವನ್ನು ಈ ಶಾಸನ ದೃಢೀಕರಿಸುವಂತಿದೆ. ಇದರಲ್ಲಿ ಬರುವ ನಾರಸಿಂಹ ನಾಯಕ, ಚಿಕ್ಕಕೋನಮ್ಮ, ದೊಡ್ಡಣ್ಣ ನಾಯಕ, ಈ ಹೆಸರುಗಳು ಚಿತ್ರದುರ್ಗದ ಪಾಳೆಯಗಾರರ ವಂಶವೃಕ್ಷಕ್ಕೆ ಹೊಸದಾಗಿ ಸೇರುತ್ತವೆ.

೧ನೇ ಕಸ್ತೂರಿ ರಂಗಪ್ಪ ನಾಯಕನು ಗಳಿಸಿದನೆಂದು ಈವರೆಗೂ ಹೇಳಲಾಗುತ್ತಿದ್ದ "ಗಾದುರಿ ಹೆಬ್ಬುಲಿ" ಎಂಬ ಬಿರುದು ಅವನಿಗೂ ಮುಂಚೆ ಅವನ ತಂದೆಯಾಗಿದ್ದ (೧ನೇ) ಓಬಣ್ಣನಾಯಕ ಅರ್ಥಾತ್ (೧ನೇ) ಮದಕೇರಿ ನಾಯಕನಿಗೇ ಇದ್ದಿತೆಂಬ ಸಂಗತಿ ಸಹ ಈ ಶಾಸನದಿಂದ ತಿಳಿಯುತ್ತದೆ. ಶಾಸನದ 'ನರಸಪುರ' ಈಗಿನ ಕಸವನಹಳ್ಳಿಯೇ ಇರಬೇಕೆಂದು ತೋರುತ್ತದೆ. ಹಾಗಾಗಿದ್ದರೆ ನರಸಪುರ ಎಂಬ ಹೆಸರು ನಿಲ್ಲದೆ ಕಸವನಹಳ್ಳಿ ಎಂಬ ಹೆಸರು ರೂಢಿಯಾಗಿದ್ದಕ್ಕೆ ಕಾರಣ ಏನೆಂದು ಪತ್ತೆ ಮಾಡಬೇಕಾಗಿದೆ.

**ರಾಮೇನಹಳ್ಳಿ**

ಈ ತಾಲ್ಲೂಕಿನ ರಾಮೇನಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಪರಿಸರದಲ್ಲಿ ದೊರೆತ ನಾಲ್ಕು ಶಿಲಾಶಾಸನಗಳು ಕ್ರಿ.ಶ.೧೮ನೇ ಶತಮಾನದ ಪೂರ್ವಾರ್ಧದ ಅವಧಿಗೆ ಸೇರಿದವು. ಅವುಗಳಲ್ಲಿ ಮೂರು ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿರುವ ಶಾಸನಗಳಾದರೆ, ಒಂದು ಮಾತ್ರ ಗ್ರಂಥ ಲಿಪಿಯಲ್ಲಿ ಹಾಗೂ ಕನ್ನಡ ಭಾಷೆಯಲ್ಲಿರುವ ಶಾಸನವಾಗಿರುವುದು ಅತ್ಯಂತ ಗಮನಾರ್ಹ. ಒಂದು ಕಲ್ಲು ಚಪ್ಪಡಿಯಲ್ಲೇ ಒಂದು ಬದಿಯಲ್ಲಿ ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿ ಒಂದು ಶಾಸನ ಇದ್ದರೆ ಇನ್ನೊಂದು ಬದಿಯಲ್ಲಿ ಗ್ರಂಥಲಿಪಿ ಹಾಗೂ ಕನ್ನಡ ಭಾಷೆಯಲ್ಲಿ ಇನ್ನೊಂದು ಶಾಸನವಿದೆ. ಈ ರೀತಿ ದ್ವಿಲಿಪಿಯಲ್ಲಿ ಬರೆದ ದ್ವಿಮುಖ ಶಾಸನ ಈ ಜಿಲ್ಲೆಯಲ್ಲಿ ಇದೊಂದೇ ಆಗಿದೆ. ಇದೀಗ ಈ ಶಾಸನಗಳ ಮೂಲಕ ರಾಮೇನಹಳ್ಳಿಯಂಥ ಒಳ ಪ್ರದೇಶದ ಹಳ್ಳಿಯನ್ನು ಶ್ರೀ ವೈಷ್ಣವ ಅಗ್ರಹಾರವಾಗಿ ಮಾಡಿದ್ದರೆಂದು ತಿಳಿದು ಬರುತ್ತದೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಅವಕಾಶವಿದೆ.

**ಮತಿಘಟ್ಟ**

ಇದೇ ಹೊಳಲ್ಕೆರೆ ತಾಲ್ಲೂಕಿನ ಮತಿಘಟ್ಟ ಗ್ರಾಮದಲ್ಲಿ ದೊರೆತ ಎರಡು ತಾಮ್ರದ ಪತ್ರಗಳು ಕ್ರಿ.ಶ.೧೮ನೇ ಶತಮಾನದ ಆದಿಭಾಗಕ್ಕೆ ಸೇರಿದವು. ಒಂದು ಕ್ರಿ.ಶ.೧೭೧೩ರ ಮಾರ್ಚಿ ೧೬ರಲ್ಲಿ ಬರೆಯಿಸಿದ್ದಾರೆ. ಇನ್ನೊಂದು ಕ್ರಿ.ಶ.೧೭೧೪ರ ಡಿಸೆಂಬರ್ ೧ ರಂದು ಬರೆಯಿಸಿದ್ದಾರೆ, ಈ ಎರಡೂ ಶಾಸನಗಳು ಒಂದೇ ವಿಷಯವನ್ನು ಕುರಿತಾದುದಾದರೂ ಕೆಲವು ವಿವರಗಳಿಂದ ಪರಸ್ಪರ ಭಿನ್ನವೂ ಆಗಿದೆ. ಈ ಶಾಸನಗಳ ಸಂಗತಿಯನ್ನು ಒಟ್ಟಾರೆ ಹೇಳುವುದಾದರೆ ದಳವಾಯಿಗಳ ಕಾಲದಲ್ಲಿ ಸಂಗೇನಹಳ್ಳಿಯ ಗೌಡ ಲೆಂಕಪ್ಪ ಎಂಬುವನು ಹೊರಕೆರೆದೇವಪುರದ ಸೀಮೆಯ ಮತಿಘಟ್ಟ ಗ್ರಾಮದ ಸಾದರ ಗೌಡರಿಂದ ಗೌಡಿಕೆಯನ್ನು ಬಲಾತ್ಕಾರವಾಗಿ ಕಸಿದುಕೊಂಡು ತಾನೇ ಗೌಡ ಎಂಬಂತೆ ನಡೆದುಕೊಂಡನು.

ಇದಕ್ಕೆ ಅವನಿಗೆ ಪಾರುಪತ್ಯಗಾರ ಸಿರಿಯಪ್ಪ ಎಂಬುವನೊಬ್ಬನ ಕುಮ್ಮಕ್ಕು ಇತ್ತು. ಕಡೆಗೆ ಲೆಂಕಪ್ಪ ಮತ್ತು ಕೆಲವರು "ಈ ಗೌಡಿಕೆ ತಮ್ಮದಲ್ಲ, ಇದನ್ನು ನಾವು ಕಸಿದುಕೊಂಡಿರುವುದು ತಪ್ಪು" ಎಂದು ಗೌಡಿಕೆಗಾಗಿ ಮುಂದೆ ತಾನಾಗಲಿ, ತಮ್ಮ ವಂಶದವರಾಗಲಿ ತಕರಾರು ಮಾಡಿದರೆ ೧೨೦೦ ವರಹ ಅಪರಾಧ (ಅಂದರೆ ತಪ್ಪು ದಂಡ) ವನ್ನು ದಿವಾಣಕ್ಕೆ ಸಲ್ಲಿಸುವುದಾಗಿಯೂ, ಇದಲ್ಲದೇ ದಿವಾಣದವರು ಮಾಡಿದ ಯಾವುದೇ ಆಜ್ಞೆಗೂ ಬದ್ಧರಿರುವುದಾಗಿಯೂ, ಅನೇಕ ಸಾಕ್ಷಿಗಳ ಸಮ್ಮುಖದಲ್ಲಿ ತಪ್ಪೊಪ್ಪಿಗೆಯ ಈ ತಾಮ್ರಪತ್ರಗಳನ್ನು ಬರೆಸಿಕೊಟ್ಟಿರುವುದಾಗಿಯೂ ಹೇಳಲಾಗಿದೆ. ಇದರಲ್ಲಿ ಆಗ ಇದ್ದ ಅನೇಕ ದಳವಾಯಿಗಳು, ಪಾರುಪತ್ಯಗಾರರು ಬೇರೆ ಬೇರೆಯ ಊರುಗಳ ಗೌಡರು, ತಳವಾರರು, ಮುಂತಾದವರು ಸಾಕ್ಷಿಗಳಾಗಿದ್ದ ಉಲ್ಲೇಖವಿದೆ.

ಚಿತ್ರದುರ್ಗದಲ್ಲಿ ಚಿಕ್ಕಣ್ಣನಾಯಕನ ತರುವಾಯ ಕೆಲವರು ದಳವಾಯಿಗಳ ಉನ್ಮತ್ತ ಆಡಳಿತ ನಡೆದುದಾಗಿಯೂ, ಭರಮಣ್ಣ ನಾಯಕ ದೊರೆಯಾಗಿ ಬಂದ ಮೇಲೆ ಅದು ತಹಬದಿಗೆ ಬಂದುದಾಗಿಯೂ ತಿಳಿಯುತ್ತದೆ. ಇಲ್ಲಿ ದಳವಾಯಿಗಳ ಕಾಲದಲ್ಲಿ ಆದ ದೌರ್ಜನ್ಯವನ್ನು ಭರಮಣ್ಣ ನಾಯಕನ ಕಾಲದಲ್ಲಿ ಸರಿಪಡಿಸಲ್ಪಟ್ಟದ್ದಲ್ಲದೇ ಪ್ರಾಯಶಃ ಮತ್ತು ಮುಂದೆ ಎಂದಾದರೂ ಕಿರಿಕಿರಿ ಮರುಕಳಿಸಬಾರದೆಂದು ಕಟ್ಟುಪಾಡು ಮಾಡಿರುವ ಈ ತಪ್ಪೊಪ್ಪಿಗೆ ಪತ್ರಗಳ ಬರವಣಿಗೆ ಒಂದು ಗಮನಾರ್ಹ ಅಂಶವಾಗಿದೆ. ಇದು ಆಗಿನ ಕಾಲದ ನ್ಯಾಯಪಾಲನೆಯ ಒಂದು ಕ್ರಮವನ್ನು ತೋರಿಸುತ್ತದೆ.

**ತಾಳ್ಯ**

ಚಿತ್ರದುರ್ಗದ ಪಾಳೆಯಗಾರರ ದಾಖಲೆಗಳಲ್ಲಿ ಈಗಿನ ತಾಳ್ಯ ಹೆಸರಿನ ಜೊತೆಗೆ ತಾಳ್ಳೆ, ತಾಳೆ ಎಂಬ ರೂಪಗಳು ಪ್ರಚಲಿತವಿದ್ದುದು ತಿಳಿದು ಬರುತ್ತದೆ. ಚಿತ್ರದುರ್ಗದ

ಪಾಳೆಯಗಾರ ೧ನೇ ಕಸ್ತೂರಿ ರಂಗಪ್ಪನಾಯಕರು (೧೬೨೯-೧೬೫೩) ಆಳಿದ ಚಿತ್ರದುರ್ಗ ಪ್ರಾಂತ್ಯದ ಸೀಮೆಗಳಲ್ಲಿ ತಾಳ್ಯೆ, ಚಿತ್ರಹಳ್ಳಿ, ಹೊಳಲ್ಕೆರೆ ಎಂಬ ಸೀಮೆಗಳ ಜೊತೆಗೆ ಜಾಜೂರು ಹೋಬಳಿಗಳು ಸೇರಿದ್ದವು. ಮುಂದೆ ೨ನೇ (ಇಮ್ಮಡಿ) ಮದಕೇರಿ ನಾಯಕ (೧೬೫೩-೧೬೭೫) ಮತ್ತು ೩ನೇ ಓಬಣ್ಣ ನಾಯಕ (೧೬೭೫) ಇವರ ಕಾಲದಲ್ಲಿ ತಾಳೆ, ಚಿತ್ರಹಳ್ಳಿ, ಹೊಳಲಕೆರೆ ಸೀಮೆಗಳು ಚಿತ್ರದುರ್ಗದ ಆಡಳಿತದಲ್ಲಿ ಹಾಗೇ ಮುಂದುವರಿದಿದ್ದವು.

೨ನೇ ಚಿಕ್ಕಣ್ಣ ನಾಯಕನ ಕಾಲದಲ್ಲಿ (೧೬೭೫-೧೬೮೬) ಖೂಬು(ಬು!) ಖಾನನ ದಂಡು ತಾಳ್ಯದ ಬಳಿ ಬೀಡು ಬಿಟ್ಟಿದ್ದಾಗ, ದಳವಾಯಿಗಳ ನೇತೃತ್ವದಲ್ಲಿ ಅಲ್ಲಿಗೆ ಬಂದ ಚಿತ್ರದುರ್ಗದ ದಂಡು ಆ ದಂಡನ್ನು ಎದುರಿಸಿ ಹೋರಾಡಿದರು. ಅದು ತಾಳ್ಯದಿಂದ ಆಡನೂರು ಪರಿಯಂತರ ಓಡಿ ಹೋದರು. ಹಾಗೇ ಅವರೊಂದಿಗೆ ಕಾದಾಡುತ್ತಾ ಹೋದ ಚಿತ್ರದುರ್ಗದ ದಂಡಿಗೆ ಅಂತಿಮವಾಗಿ ಜಯವಾಯಿತು. ವೈರಿಗಳ ದಂಡು ಪಲಾಯನ ಮಾಡಿತು. ಆಗ ಕೆಲವು ರಾವುತರು ಕೈಸೆರೆ ಸಿಕ್ಕಿದರಲ್ಲದೇ, ಒಂದು ದೊಡ್ಡ ನಗಾರಿ ಜೋಡು, ಎರಡು ಚಿಕ್ಕ ನಗಾರಿ ಜೋಡು, ಮತ್ತೇ ಕೆಲವು ಆಯುಧಗಳು ಸಹ ದೊರೆತವು.

೨ನೇ ಚಿಕ್ಕಣ್ಣ ನಾಯಕನ ಕಾಲದಲ್ಲಿ (೧೬೭೫-೧೬೮೬) ಅವನ ಅಪ್ಪಣೆಯಂತೆ ಕಟ್ಟಿಸಲಾದ, ದೇವಸ್ಥಾನಗಳಲ್ಲಿ ತಾಳ್ಯದ ಹನುಮಂತರಾಯನ ದೇವಸ್ಥಾನವು ಒಂದಾಗಿದೆ.

ಕ್ರಿ.ಶ ೧೭೫೫ ರಲ್ಲಿ ಕೊನೆಯ ಮದಕರಿ ನಾಯಕನು ಹೊರಕೆರೆ ದೇವರ ಪುರದ ಕೆಲವರು ದಂಡಿಗೆ ದಾಸರಿಗೆ ಅದೇ ಗ್ರಾಮದ ಕಸಬೆಯಲ್ಲಿ ಒಂದಷ್ಟು ಭೂಮಿಯನ್ನು ಮಾನ್ಯವಾಗಿ ನೀಡಿದನು. ಚಿತ್ರದುರ್ಗ ಪಾಳೆಯಗಾರ ನಂತರದಲ್ಲಿ ಈ ಪ್ರದೇಶ ಹೈದರ್, ಟಿಪ್ಪು, ಮೈಸೂರು ಒಡೆಯರು, ಇವರ ಆಡಳಿತಕ್ಕೆ ಒಳಪಟ್ಟಿತು. ಹೊಳಲ್ಕೆರೆ ತಾಲ್ಲೂಕಿನ ಇತಿಹಾಸಕ್ಕೆ ಪೂರಕವಾಗಿ ಬಿ.ರಾಜಶೇಖರಪ್ಪನವರು ಈ ಪ್ರದೇಶದ ಸುತ್ತಮುತ್ತಲ ಪ್ರದೇಶಗಳಲ್ಲಿ ದೊರೆತಿದ್ದ ಶಾಸನಗಳ ಆಧಾರದಲ್ಲಿ ಹೊಳಲ್ಕೆರೆ ತಾಲ್ಲೂಕಿನ ಇತಿಹಾಸಕ್ಕೆ ಹೊಸ ಸಂಗತಿಗಳಾಗಿ ಸಾದರಪಡಿಸಿದ್ದಾರೆ.

**ಗುಡ್ಡದ ಸಾಂತೇನಹಳ್ಳಿ**

ಈ ಗ್ರಾಮದಿಂದ ಪೂರ್ವಕ್ಕೆ ದೊಡ್ಡಹೊಟ್ಟೆ ರಂಗನಾಥ ಸ್ವಾಮಿ ಬೆಟ್ಟದ ಕೆಳಗೆ ಕವಿದು ಬೆಳೆದಿರುವ ಅಡವಿ ಗಿಡಗಳ ಪೊದೆಯೊಳಗೆ ಪ್ರಾಚೀನ ಕಾಲದ ಒಂದು ಊರಿನ ನಿವೇಶನ ಹುದುಗಿಹೋಗಿದೆ. ಇಲ್ಲಿ ಎರಡು ಮೂರು ವೀರಗಲ್ಲುಗಳು ಚಿಕ್ಕ ಗುಡಿಗಳು ಕೆಲವು ವಿಗ್ರಹಗಳು, ಕೆರೆ, ಮುಂತಾದವುಗಳು ಕಂಡುಬರುತ್ತವೆ. ಕ್ರಿ.ಶ. ಸುಮಾರು

೧೨-೧೩ ನೇ ಶತಮಾನಕ್ಕೆ ಸೇರಿದ ಕೆಲವು ಅಕ್ಷರಗಳು ನಷ್ಟವಾಗಿರುವ, ಒಂದು ವೀರಗಲ್ಲು ಶಾಸನವು ಆಗ ನಡೆದ ಯುದ್ಧವೊಂದರಲ್ಲಿ ವೀರನೊಬ್ಬ ಮಡಿದದ್ದನ್ನು ತಿಳಿಸುತ್ತದೆ. ಈ ತಾಲ್ಲೂಕಿನ ಕೆಲವು ಪ್ರಾಚೀನ ಶಾಸನಗಳಲ್ಲಿ ಕೋಟೆಕಲ್ಲು ಎಂಬ ರಾಜಧಾನಿಯೊಂದರ ಹೆಸರು ಬರುತ್ತದೆ. ಆ ಸ್ಥಳ ಯಾವುದು ಎಂಬುದು ತಿಳಿದು ಬಂದಿರುವುದಿಲ್ಲ. ಪ್ರಸ್ತುತ ಪ್ರಾಚ್ಯಾವಶೇಷಗಳ ಪರಿಸರವನ್ನು ನೋಡಿದರೆ ಕೋಟೆಕಲ್ಲು ಪಟ್ಟಣ ಬಹುಶಃ ಇದೇ ಆಗಿರಬೇಕೆನಿಸುತ್ತದೆ.

**ಗುಂಡೇರಿ**

ಈ ಗ್ರಾಮಕ್ಕೆ ಅಂಟಿಕೊಂಡಿರುವ ಕೆರೆಗೆ ಹಿಂದೆ ಗುಂಡಿಕೆರೆ ಎಂಬ ಹೆಸರಿತ್ತು. ಇದರಿಂದ ಗ್ರಾಮಕ್ಕೆ ಗುಂಡೇರಿ ಎಂಬ ಹೆಸರು ಬಂದಿದೆ. ಚಾರ್ವಾಕರು ಆಳಿದ್ದರಿಂದ ಚಾರ್ವಾಕ ಪಟ್ಟಣಂ ಎಂಬ ಹೆಸರಿತ್ತು. ಕೆರೆ ಪಕ್ಕದಲ್ಲಿರುವ ಶಿಲಾಶಾಸನಗಳು ಇದಕ್ಕೆ ಪುಷ್ಟಿ ನೀಡುತ್ತವೆ. ಬೊಮ್ಮನಕಟ್ಟೆ, ಇಡೇಹಳ್ಳಿಗೆ ಹತ್ತಿರದ ಶಾಸನಸ್ಥ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಸ್ಥಳ. ಇಲ್ಲಿ ವೀರಭದ್ರ ದೇವರ ದೇವಾಲಯದ ಮುಂದೆ ನೆಟ್ಟಿರುವ ಶಾಸನದಿಂದ ಕ್ರಿ.ಶ ೧೫೫೧ ರಲ್ಲಿ ವಿಜಯನಗರದ ಅಚ್ಯುತರಾಯ ಮಲ್ಲಿಯಣ್ಣ ಅಯ್ಯನವರಿಗೆ ಒಳ್ಳೆಯದಾಗಲೆಂದು ಶ್ರೀ ವೀರಭದ್ರದೇವರಿಗೆ ತೋಟ, ಹೊಲ, ಗದ್ದೆ ಮಾನ್ಯ ಕೊಡಲು ಚೌಡಪ್ಪನಾಯಕರು ನಿರೂಪ ಹೊರಡಿಸಿದ್ದರೆಂದು ತಿಳಿದು ಬರುತ್ತದೆ. ಇದೇ ಗ್ರಾಮದ ಹಳೇವೂರು ನಿವೇಶನದಲ್ಲಿ ದೊರೆತ ಶಾಸನದಿಂದ ಕ್ರಿ.ಶ.೧೫೮೧ರಲ್ಲಿ ಕೃಷ್ಣಪ್ಪನಾಯಕರ ಮಕ್ಕಳಾದ ವೆಂಕಟಪ್ಪನಾಯಕರು ಗುಂಡೇರಿಯ ಚನ್ನಕೇಶವ ದೇವರಿಗೆ ಅರ್ಚಕರಾಗಿ ಸದಾಶಿವರಾಯರು ಬಾಗೂರು ಸೀಮೆಯ ಗುಂಡೇರಿ ಕಾವಲಿನ ನರಸಾಪುರವನ್ನು ವೆಂಕಟಪುರವೆಂದು ನಾಮಕರಣ ಮಾಡಿ ಸ್ವಾಮಿಗೆ ಅರ್ಪಿಸಿದರೆಂದು ತಿಳಿಯುತ್ತದೆ. ಇಲ್ಲಿಯ ಕೆರೆಯ ಅಂಗಳದಲ್ಲಿ ಸಹ ಶಾಸನ ದೊರೆತಿವೆ. ಗುಂಡೇರಿ ಕದನ ಇತಿಹಾಸದಲ್ಲಿ ಪ್ರಖ್ಯಾತವಾಗಿದೆ. ಶಿವರಾತ್ರಿಯಲ್ಲಿ ೧೫ ದಿನಗಳ ಕಾಲ ಹಾಲಸ್ವಾಮಿ ತೇರು ನಡೆಯುತ್ತದೆ ಹಾಗೂ ವೀರಭದ್ರದೇವರ ಕೆಂಡದ ಉತ್ಸವವನ್ನು ಶ್ರಾವಣದಲ್ಲಿ ಆಚರಿಸುತ್ತಾರೆ. ಹತ್ತಿರದಲ್ಲಿ ಗುಂಡೇರಿ ಕಾವಲು ಇದೆ.

ಈ ಗ್ರಾಮದ ಪಶ್ಚಿಮಕ್ಕೆ ಅದೇ ಗ್ರಾಮದ ಶ್ರೀಮತಿ ದೇವಮ್ಮ ಕುಮಾರಪ್ಪ ಎಂಬುವರ ಹೊಲದ ಮೇರೆಯಲ್ಲಿ ಕ್ರಿ. ಶ ೧೫ ನೇ ಶತಮಾನದ ಒಂದು ಶಾಸನ ಕಂಡುಬಂದಿದೆ. ಅದು ಗುಂಡೇರಿನ ಗಂಗಗೌಡ, ಸಿಡಿಲಗೌಡ, ಸಮಸ್ತ ಪ್ರಜೆಗಳು ಮರುಳಸಿದ್ಧ ದೇವರಿಗೆ ಬಿಟ್ಟ ಧರ್ಮ ಎಂದು ಹೇಳುತ್ತದೆ. ಹಿಂದೆ ಇಲ್ಲಿ ಒಂದು ಈಶ್ವರ (ಲಿಂಗದ) ದೇವಾಲಯವಿತ್ತೆಂದು ಹೇಳುತ್ತಾರೆ. ಶಾಸನ ಹೇಳುವ ಮರುಳಸಿದ್ಧದೇವರು ಆ ಲಿಂಗವೇ ಆಗಿರಬೇಕು. ಇಲ್ಲಿ ಇನ್ನೂ ಕೆಲವು ಪ್ರಾಚ್ಯಾವಶೇಷಗಳು ಇವೆ. ಮರುಳಸಿದ್ಧರು ವೀರಶೈವ ಧರ್ಮದ ಪ್ರಸಿದ್ಧ ಗುರುವಾದ ರೇವಣಸಿದ್ಧರ ಶಿಷ್ಯರೆನ್ನುವುದೂ ಈಗಾಗಲೇ

ತಿಳಿದ ಸಂಗತಿ. ಕ್ರಿ.ಶ. ೧೨ ನೇ ಶತಮಾನದಲ್ಲಿ ಮರುಳಸಿದ್ಧರು ಜೀವಿತದ ಅನೇಕ ವರ್ಷಗಳ ಕಾಲ ಚಿತ್ರದುರ್ಗ ದಾವಣಗೆರೆ ಪ್ರದೇಶದ ಅನೇಕ ಊರುಗಳಲ್ಲಿ ಬೇರೆ ಬೇರೆ ಎಡೆಗಳಲ್ಲಿ ತಂಗಿದ್ದರೆಂದು ತಿಳಿದು ಬರುತ್ತದೆ. ಹಾಗಾಗಿ ಮಹಿಮಾ ಪುರುಷರೆನಿಸಿದ್ದ ಅವರ ಪ್ರಭಾವ ಈ ಪ್ರದೇಶದ ಜನರ ಮೇಲೆ ಆಗಿರುವುದು ಸಹಜವೇ. ಅವರನ್ನು ಲಿಂಗರೂಪದಲ್ಲಿ ಜನ ಆರಾಧಿಸುತ್ತಾ ಬಂದಿರುವುದಕ್ಕೆ ಈ ಪ್ರದೇಶದ ಅನೇಕ ಊರುಗಳಲ್ಲಿ ಮರುಳುಸಿದ್ಧನ ಹೆಸರಿನ ದೇವಾಲಯಗಳಿರುವುದು ಸಾಕ್ಷಿಯಾಗಿದೆ. ಈ ಶಾಸನ ಹೇಳುವ ಮರುಳುಸಿದ್ಧ ದೇವರು ಕೂಡಾ ಅಂತಹ ಒಂದು ಲಿಂಗವೇ ಇದ್ದಿರಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠವು ಮರುಸಿದ್ಧರ ಪರಂಪರೆಯ ಮಠ ಎಂದು ಪ್ರಸಿದ್ಧವಾಗಿದೆ. ಮರುಳಸಿದ್ಧರನ್ನು ಹೆಸರಿಸುವ ಕರ್ನಾಟಕದ ಕೆಲವೇ ಶಾಸನಗಳ ಸಾಲಿಗೆ ಇದು ಸಹ ಸೇರುತ್ತದೆ.

**ರಾಮಗಿರಿ:** ಹೊಸದುರ್ಗ ತಾಲ್ಲೂಕಿನ ತಣಿಗೇಕಲ್ಲು ಗ್ರಾಮದ ಪಶ್ಚಿಮಕ್ಕೆ ಹನುಮಂತನ ರೊಪ್ಪಕ್ಕೆ ಹೋಗುವ ದಾರಿಯ ಬದಿಯಲ್ಲಿದ್ದುದು. ಅದು ಈಗ ಹೊಸದುರ್ಗ ತಾಲ್ಲೂಕಿನಲ್ಲಿರುವುದಾದರೂ ಅದು ಮೂಲತಃ ಈ ತಾಲ್ಲೂಕಿನ ರಾಮಗಿರಿ ಪರಿಸರಕ್ಕೆ ಸೇರಿದ್ದಿರಬೇಕು. ಆದರೆ ಜನಸಾಮಾನ್ಯರ ತಪ್ಪು ತಿಳುವಳಿಕೆಯಿಂದ ಇದನ್ನು 'ಬರಗಲ್ಲು' ಅಂದರೆ ಬರತರುವ ಅನಿಷ್ಟದ ಕಲ್ಲು ಎಂದು ತಿಳಿದು ಶಾಸನವನ್ನು ಊರಿಂದೂರಿಗೆ (ಅಥವಾ ಗಡಿಯಿಂದ ಗಡಿಗೆ) ಸಾಗಿಸುತ್ತಾ ಬಂದಿದ್ದರಿಂದ, ಪ್ರಾಯಶಃ ರಾಮಗಿರಿಯ ಪರಿಸರದಲ್ಲೇ ಇದ್ದಿರಬಹುದಾದ ಈ ಕಲ್ಲು ದೂರದ ಹಳ್ಳಿಯೊಂದರ ಗಡಿಗೆ ಬಂದು ಮುಟ್ಟಿರುವಂತೆ ಕಾಣುತ್ತದೆ. 'ಬರಹದ ಕಲ್ಲು' ಎಂಬುದನ್ನೇ ಜನ ತಪ್ಪಾಗಿ 'ಬರಗಲ್ಲು' ಎಂದು ತಿಳಿದಿದ್ದೇ ಇದಕ್ಕೆ ಕಾರಣ. ಈ ಬಗ್ಗೆ ತಣಿಗೇಕಲ್ಲು ಗ್ರಾಮಸ್ಥರಿಗೆ ತಿಳಿಸಿ ಹೇಳಿ ಇದನ್ನು ತಮ್ಮ ಗ್ರಾಮದಲ್ಲೇ ದೇವಸ್ಥಾನವೊಂದರಲ್ಲಿ ರಕ್ಷಿಸಿಡಲು ಸಂಶೋಧಕರು ಪ್ರಯತ್ನಿಸಿದ್ದರೂ ಇಂಥ ಕೆಲವು ಶಾಸನಗಳ ನಾಶಕ್ಕೆ ಮೂಢನಂಬಿಕೆಗಳು ಕಾರಣವಾಗಿರುವುದು ವಿಷಾದನೀಯ ಸಂಗತಿಯಾಗಿದೆ.

ಕ್ರಿ.ಶ. ೧೭-೧೮ನೇ ಶತಮಾನದ ಅವಧಿಗೆ ಸೇರಿದ ಕನ್ನಡದ ಈ ಶಾಸನ ದಳವಾಯಿ ಚಿಕ್ಕಯ್ಯ ಕಲಿವೀರಯ್ಯ ಇವರು ಕರಿಸಿದ್ದೇದೇವರಿಗೆ ಕೊಟ್ಟ ಹೊಲವನ್ನು ತಿಳಿಸುತ್ತದೆ. ದಳವಾಯಿ ಚಿಕ್ಕಯ್ಯ ಚಿತ್ರದುರ್ಗದ ಪಾಳೆಯಗಾರರ ದಳವಾಯಿ ಆಗಿದ್ದವನೊಬ್ಬನಿರಬಹುದೇ ಎಂದು ಸಂದೇಹವಾಗುತ್ತದೆ. ಶಾಸನ ಹೆಸರಿಸುವ ಇನ್ನೊಬ್ಬ ವ್ಯಕ್ತಿ ಕಲಿವೀರಯ್ಯ ಒಬ್ಬ ದಳವಾಯಿ ಆಗಿದ್ದಿರಬಹುದು.

ಶಾಸನ ಹೇಳುವ ಕರಿಸಿದ್ದದೇವರು ರಾಮಗಿರಿಯ ಕರಿಯ ಸಿದ್ದರೇ ಇರಬೇಕು. ಹಾಗಾದರೆ ದಳವಾಯಿ ಚಿಕ್ಕಯ್ಯ ಕಲಿವೀರಯ್ಯ ಹೊಲವೊಂದನ್ನು ಕರಿಸಿದ್ದೇ ದೇವರಿಗೆ ಅಂದರೆ ಆ ಮಠಕ್ಕೆ ಭಕ್ತಿಯಿಂದ ನೀಡಿದ್ದಿರಬೇಕು. ಕ್ರಿ.ಶ. ೧೬ನೇ

ಶತಮಾನದಲ್ಲಿ ಪ್ರಖ್ಯಾತ ಶರಣರಾದ ತೋಂಟದ ಸಿದ್ದಲಿಂಗೇಶ್ವರ (ಬಹುಶಃ ಕಿರಿಯ) ಸಮಕಾಲೀನರಾಗಿದ್ದವರು ಕರಿಯ ಸಿದ್ದೇಶ್ವರರು ಇವರಿಗೆ (ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ) ಹೊನ್ನವಳ್ಳಿಯ ಕರಿಸಿದ್ದೇಶ್ವರ ಎಂದೂ ಹೆಸರಿದೆ. ಈ ಊರಿನಲ್ಲಿ ಈಗಲೂ ಇವರ ಹೆಸರಿನ ಒಂದು ಮಠವಿದೆ. ಇವರು ತಮ್ಮ ಜೀವಿತದ ಹಲವು ವರ್ಷಗಳನ್ನು ಹೊನ್ನವಳ್ಳಿಯಲ್ಲೂ ಕಳೆದು, ಆ ತರುವಾಯ ಸಂಚರಿಸುತ್ತಾ ರಾಮಗಿರಿಗೆ ಬಂದು, ಅಲ್ಲಿಯೇ ಇದ್ದು ಲಿಂಗೈಕ್ಯರಾದುದಾಗಿ ತಿಳಿದುಬರುತ್ತದೆ. ಹಾಗಾಗಿ ಇವರ ಹೆಸರಿನ ಒಂದು ಮಠ ಗದ್ದುಗೆ ರಾಮಗಿರಿಯ ಬೆಟ್ಟದ ಮೇಲೆ ಈಗಲೂ ಇದೆ.

ಕ್ರಿ.ಶ. ೧೭ನೇ ಶತಮಾನದ ಆರಂಭ ಕಾಲದವರೆಗೂ ಕರಿಯಸಿದ್ದೇಶ್ವರರು ಬದುಕಿದ್ದಿರಬಹುದು, ಆದರೆ ಪ್ರಸ್ತುತ ಶಾಸನ ಕ್ರಿ.ಶ. ಸುಮಾರು ೧೭-೧೮ನೇ ಶತಮಾನದ ಲಿಪಿಯಾದ್ದರಿಂದ ವೀರಶೈವ ಧರ್ಮದ ಪ್ರಖ್ಯಾತ ಸಿದ್ಧಪುರಷರಲ್ಲೊಬ್ಬರಾಗಿ ಪೂಜ್ಯರಾಗಿದ್ದ ರಾಮಗಿರಿಯ ಕರಿಸಿದ್ದೇಶ್ವರರ ಗದ್ದುಗೆಗೆ ಅಥವಾ ಮಠಕ್ಕೆ ಕಾಣಿಕೆ ತಮ್ಮಿಂದಲೂ ಸಲ್ಲಲಿ ಎಂದು ಆಶಿಸಿ, ದಳವಾಯಿ ಚಿಕ್ಕಯ್ಯ, ಕಲಿವೀರಯ್ಯರು ಒಂದು ಹೊಲವನ್ನು ಅರ್ಪಿಸಿರುವುದು ಸಹಜವೇ ಆಗಿದೆ. ಕರಿಸಿದ್ದೇಶ್ವರರ ಕುರಿತು ಇದುವರೆಗೂ ಬೇರಾವುದೇ ಶಾಸನವು ದೊರೆತಿಲ್ಲ. ಆದುದರಿಂದಾಗಿ ಈ ಶಾಸನಕ್ಕೆ ವಿಶೇಷವಾದ ಮಹತ್ವವಿದೆ.

## ಸ್ವಾತಂತ್ರ್ಯ ಹೋರಾಟ

ದೇಶದ ಸ್ವಾತಂತ್ರ್ಯ ಚಳುವಳಿಯ ನಕಾಶೆಯಲ್ಲಿ ಹೊಳಲ್ಕೆರೆ ತಾಲ್ಲೂಕು ಸ್ಥಾನ ಪಡೆಯುವಂತೆ ಮಾಡಿದ ಕೆಲವು ಮಹನೀಯರು ಗಮನಾರ್ಹರಾಗಿದ್ದಾರೆ. ಹೊಳಲ್ಕೆರೆ ತಾಲ್ಲೂಕಿನ ಹಿರಿಯರಾದ ದೊಗ್ಗನಾಳ್ ಗ್ರಾಮದ ಕೊಟ್ರೆನಂಜಪ್ಪನವರು ಮುಂಚೂಣಿಯಲ್ಲಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಿ ಸಂಘಟನಾಕಾರರಾಗಿ ಅಪರೂಪದ ವ್ಯಕ್ತಿ ಎನಿಸಿದ್ದರೂ ಶ್ರೀಯುತರು ಅನೇಕರೊಂದಿಗೆ ಸೇರಿ ಚಟುವಟಿಕೆಯನ್ನು ನಡೆಸುತ್ತಿದ್ದರು. ಜಿಲ್ಲೆಯ ಪ್ರಥಮ ಸ್ವಾತಂತ್ರ್ಯ ಯೋಧರಾಗಿದ್ದರು. ರಾಮಗಿರಿ ಹೋಬಳಿಯ ರಂಗಾಪುರವನ್ನು ಕೇಂದ್ರವಾಗಿ ಮಾಡಿಕೊಂಡು ಎಲ್ಲರೂ ಸೇರಿ ಅಲ್ಲಿ ಚರ್ಚಿಸುತ್ತಿದ್ದರು. ಅದರ ನೆನಪಿಗಾಗಿಯೇ ರಂಗಾಪುರದ ಪ್ರೌಢಶಾಲೆಗೆ 'ಸ್ವಾತಂತ್ರ್ಯ ಜ್ಯೋತಿ' ಎಂಬ ಹೆಸರನ್ನು ಇಡಲಾಗಿದೆ.

ಇವರು ೧೯೪೨ರಲ್ಲಿಯೇ ಹರಿಜನರಿಂದ ದೇವರ ಪಲ್ಲಕ್ಕಿ ಹೊರಿಸಿದ ಕ್ರಾಂತಿಕಾರಿಯಾಗಿದ್ದರು. ರಂಗಾಪುರದಲ್ಲಿ ರೈತರ ಪರಿಷತ್‌ನ್ನು ಸಂಘಟಿಸಿ, ಸಹಪಂಕ್ತಿ ಭೋಜನವೇರ್ಪಡಿಸಿ ಜಾತ್ಯಾತೀತರೆನಿಸಿದರೂ ತಮ್ಮೊಡನಿದ್ದ ಯಾರು

ಕುಡಿಯಬಾರದೆಂದು ತಾಕೀತು ಮಾಡಿದ್ದರು. ಸೇಂದಿಯ ವಿರುದ್ಧ ಬಂಡೆದ್ದು ಈಚಲ ಮರ ಕಡಿದು ಸೆರೆವಾಸ ಅನುಭವಿಸಿದರು. ಭೂಗತರಾಗಿ ಆಂಗ್ಲರಿಗೆ ಸಿಂಹಸ್ವಪ್ನವಾಗಿ ರೈಲ್ವೇ ಹಳಿ ಕಿತ್ತು ಶಿಕ್ಷೆಗೆ ಒಳಗಾದರು. ಸರಳವಾಗಿ ಮದುವೆ ಮಾಡುವುದನ್ನು ತಮ್ಮ ಮನೆಯಿಂದಲೇ ಅರಂಭಿಸಿ ಸಮಾಜ ಸುಧಾರಕರೆನಿಸಿದರು. ಅಸಹಕಾರ ಚಳವಳಿಯಲ್ಲಿ ಭಾಗವಹಿಸಿ ಖಾದಿ ಬಟ್ಟೆ ಬಳಕೆಗೆ ಒತ್ತುಕೊಟ್ಟರು.

ಹಬ್ಬದ ಪ್ರಯುಕ್ತ ತಮ್ಮ ಮನೆಯಲ್ಲಿ ಹೆಣ್ಣು ಮಕ್ಕಳ ಬಳಗ ನೆರೆದಿತ್ತು. ಮನೆಯಲ್ಲಿ ಎಲ್ಲರನ್ನು ಕರೆದು ತಮ್ಮಲ್ಲಿದ್ದ ಬೆಲೆಬಾಳುವ ಸೀರೆ, ಬಟ್ಟೆಗಳನ್ನು ತರಿಸಿ ರಾಶಿ ಮಾಡಿ ಅದನ್ನು ಸುಟ್ಟರು, ನಂತರ ಅವರಿಗೆ ಖಾದಿ ಬಟ್ಟೆ ತೊಡುವಂತೆ ಹೇಳಿದರು. ಖಾದಿ ಸೀರೆ, ವಸ್ತ್ರಗಳನ್ನು ತರಿಸಿಕೊಟ್ಟರು. ಈ ಪ್ರಸಂಗವನ್ನು ನಂಜಪ್ಪನವರಿಗಿದ್ದ ಸ್ವದೇಶಿ ಪ್ರೇಮದ ಅರಿವಿನ ಪರಿಚಯ ಮಾಡಿಸುತ್ತದೆ. ಸತ್ಯಾಗ್ರಹ ಕಾಲದಲ್ಲಿ ಶ್ರೀಯುತರಿಗೆ ಪೋಲೀಸ್‌ನವರ ಕಿರುಕುಳ ಎಣಿಸಲಾರದಷ್ಟು ಅವರು ಕಷ್ಟಗಳನ್ನು ಅನುಭವಿಸಿದ ಕಾರ್ಯಶೀಲ ವ್ಯಕ್ತಿಯಾಗಿದ್ದರು.

॥ **ಕೊಟ್ರೆನಂಜಪ್ಪ ದಿಟ್ಟ ಗುಟರೆ ಕೇಳಿ ಸರಕಾರ**
**ಉಟ್ರೆಬೈಟ್ರ ಎಂದು ಸೆರೆಯೊಳಿಟ್ಟಿತ್ತು** ॥
**ಕೆಟ್ಟ ಕೆಟ್ಟ ಮಾತನಾಡಿ ಉಟ್ಟಬಟ್ಟೆ ಎಲ್ಲಾ ಹರಿದು**
**ಅಟ್ಟಹಾಸದಿಂದ ಬೂಟು ಕಾಲಲೊದ್ದರು** ॥ ಎಂದು ಲಾವಣಿಗಾರರು ಹೇಳಿದ್ದುಂಟು.

ಹೀಗಾಗಿ ಕೊಟ್ರೆ ನಂಜಪ್ಪನವರನ್ನು ತಾಲ್ಲೂಕಿನ ಜನ ಎಂದೂ ಮರೆಯಬಾರದೆಂದು ಹಿರಿಯ ತರಳಬಾಳು ಜಗದ್ಗುರುಗಳವರು, ಹೊಳಲ್ಕೆರೆಯಲ್ಲಿ ಪ್ರಾರಂಭಿಸಿದ ಪದವಿ ಪೂರ್ವ ಕಾಲೇಜಿಗೆ ಅವರ ಹೆಸರಿಡುವ ಮೂಲಕ ನಂಜಪ್ಪನವರ ಹೆಸರು ಅಜರಾಮರವಾಗುವಂತೆ ಮಾಡಿದ್ದಾರೆ.

ದೇಶದ ಸ್ವಾತಂತ್ರ್ಯಕ್ಕಾಗಿ ಆಂಗ್ಲರ ದಬ್ಬಾಳಿಕೆ ವಿರುದ್ಧ ಬಂಡಾಯ ಎದ್ದು ಸೆರೆಮನೆ ವಾಸ ಅನುಭವಿಸಿದರು. ಕೊಟ್ರೆನಂಜಪ್ಪನವರ ಜೊತೆಗೆ ದೇಶಾಭಿಮಾನಿಗಳಾದ ಕೊಟ್ರೆ ಬಸಪ್ಪ, ದುಮ್ಮಿ ಅಜ್ಜಪ್ಪ, ಚಿಕ್ಕಜಾಜೂರು ಸಿದ್ದಜ್ಜ, ಹೊಳಲ್ಕೆರೆ ಜಂಬಿಗೆ ಕರಿಬಸಪ್ಪ, ಜಗನ್ನಾಥಗುಪ್ತ, ಹನುಮಂತಶೆಟ್ಟಿ, ಮಾಳೇನಹಳ್ಳಿ ಬಿ. ರಂಗಪ್ಪ, ಕುಡಿನೀರು ಕಟ್ಟೆ ರಂಗಪ್ಪ, ರಂಗಾಪುರದ ತಿಮ್ಮಪ್ಪ, ರಾಮಗಿರಿಯ ತಿಮ್ಮಪ್ಪಯ್ಯ, ತಾಳ್ಯದ ಲಕ್ಷ್ಮಣರಾವ್, ನುಲೇನೂರಿನ ಈಶ್ವರಪ್ಪ ಮೊದಲಾದವರು ಸ್ಥಳೀಯ ಸಂಘಟಕರಾಗಿದ್ದರು. ತಾಲ್ಲೂಕಿನ ಘಟ್ಟಿಹೊಸಹಳ್ಳಿ ಸಿ.ಮಲ್ಲೇಸಿದ್ದಪ್ಪನವರು ಬಿ.ಎಸ್ಸಿ. ಪದವೀಧರರಾಗಿದ್ದರೂ ಉದ್ಯೋಗ ಹುಡುಕಲು ಹೋಗಲಿಲ್ಲ. ಅವರ ಅಭಿರುಚಿ ವ್ಯವಸಾಯವಾಗಿತ್ತು.

ತಾಲ್ಲೂಕು ಬೋರ್ಡು ಮೊದಲಾದ ಸಂಘ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದರು. ನಾಯಕ ಜನಾಂಗದ ಮುಂದಾಳಾಗಿದ್ದವರು: ಘಟ್ಟಿಹೊಸಹಳ್ಳಿ ಪಂಚಾಕ್ಷರಪ್ಪ, ಆರ್ ಚಿಗಟೇರಪ್ಪ ಚಿಕ್ಕಜಾಜೂರು ಮಹದೇವಪ್ಪ, ನುಲೇನೂರು ರುದ್ರಜ್ಜ ಹೀಗೆ ನೂರಾರು ಯೋಧರು ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದ ಹುತಾತ್ಮರು. ದೇಶ ಪ್ರೇಮಿಗಳ ಸ್ಮರಣೆಗಾಗಿ ರಾಜ್ಯ ಸರ್ಕಾರ ಹೊಳಲ್ಕೆರೆ ಪಟ್ಟಣದ ಮಧ್ಯಭಾಗದಲ್ಲಿ ಒಂದು ವೀರಸೌಧ ಹಾಗೂ ಮತ್ತೊಂದು ಸ್ವತಂತ್ರ ಸೇನಾನಿಗಳ ಭೂಗತ ಚಟುವಟಿಕೆ ಮುಖ್ಯ ಕೇಂದ್ರವಾಗಿದ್ದ ತಾಲ್ಲೂಕಿನ ರಂಗಾಪುರದಲ್ಲಿ  ಸುಸಜ್ಜಿತವಾದ ಕಟ್ಟಡಗಳನ್ನು ನಿರ್ಮಿಸಿದೆ.

**ರೈತ ಚಳವಳಿ**

ತಾಲ್ಲೂಕಿನಲ್ಲಿ ರೈತರು ಕರ್ನಾಟಕ ರಾಜ್ಯ ರೈತ ಸಂಘವನ್ನು ೧೯೮೪ ರಲ್ಲಿ ಸ್ಥಾಪಿಸಿದರು. ಬಂಡೆ ಬೊಮ್ಮೆನಹಳ್ಳಿ ಬಿ.ಆರ್.ನಾಗರಾಜ್, ಎ.ಓ.ರಾಜು, ಸಿದ್ಧವೀರಪ್ಪ, ನುಲೇನೂರು ಶಂಕರಪ್ಪ, ದ್ಯಾಮಣ್ಣ ಮೊದಲಾದವರು ಮುಂಚೂಣಿಯಲ್ಲಿ ನಿಂತು ಚಳವಳಿಯನ್ನು ಬಿರುಸುಗೊಳಿಸಿದರು. ಮೊಟ್ಟ ಮೊದಲಿಗೆ ರಾಜ್ಯ ರೈತ ಸಂಘದ ಗ್ರಾಮಘಟಕಗಳನ್ನು ಆರಂಭಿಸಿದರು. ರೈತನ ಅಗತ್ಯ ವಸ್ತುಗಳನ್ನು ಸಹಕಾರ ಅಥವಾ ಸರ್ಕಾರಿ ವಸೂಲಿ ಅಧಿಕಾರಿಗಳು ಜಪ್ತಿ ಅಥವಾ ಹರಾಜು ಮಾಡಬಾರದು. ಈ ಬಗ್ಗೆ ರೈತ ಮುಖಂಡರು ಜನರಿಗೆ ಕೂಲಂಕಷವಾಗಿ ತಿಳಿಯಪಡಿಸಿದರು. ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ನೀರಾವರಿ ಹೋರಾಟ ಮೊದಲಾದ ರೈತ ಪರ ಹೋರಾಟಗಳ ಮೂಲಕ ಜಾಗೃತಿ ಮೂಡಿಸಿದರು. ನೂರಾರು ಹಳ್ಳಿಗಳಲ್ಲಿ ರೈತ ಸಂಘಗಳು ಉದಯಿಸಿ ರೈತ ಸಂಘದ ಬೋರ್ಡ್‌ಗಳು ರಾರಾಜಿಸಿದವು. ಸರ್ಕಾರಿ ನೌಕರರು ಕೆಲಸದ ವೇಳೆಯಲ್ಲಿ ಕುರ್ಚಿಯಲ್ಲಿ ಕಟ್ಟುನಿಟ್ಟಾಗಿ ಕೆಲಸ ಮಾಡುವಂತೆ ಆಗ್ರಹಿಸಿ “ಕಾಲಿಕುರ್ಚಿ”ಚಳವಳಿ ಮಾಡಲಾಯಿತು. ರೈತ ಚಳವಳಿ ರೈತರಿಗೆ ತಂದು ಕೊಟ್ಟ ಪ್ರಜ್ಞೆ ಇತಿಹಾಸದಲ್ಲಿ ಎಂದೆಂದಿಗೂ ಮರೆಯುವಂತದ್ದಲ್ಲ.

**ಸಾರ್ವತ್ರಿಕ ಚುನಾವಣೆಗಳು**

ಸಂಸ್ಥಾನದಲ್ಲಿ ೧೮೮೧ ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಜಾಪ್ರತಿನಿಧಿ ಸಭೆ ದೇಶದ ಚುನಾವಣಾ ಪ್ರಕ್ರಿಯೆಯ ಇತಿಹಾಸದ ಮೈಲಿಗಲ್ಲಾಗಿದೆ. ಇದನ್ನು ಬ್ರಿಟಿಷರು ತಮ್ಮ ಪ್ರಾಂತ್ಯಗಳಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಮೊದಲು ಜಾರಿಗೆ ತಂದಿದ್ದು ಸಂಸ್ಥಾನದ ಹೆಗ್ಗಳಿಕೆಯಾಗಿತ್ತು. ಆರಂಭದಲ್ಲಿ ಸದಸ್ಯರನ್ನು ಒಂದು ವರ್ಷ ಅವಧಿಗೆ ನಾಮಕರಣ ಮಾಡಲಾಗುತ್ತಿದ್ದು, ೧೮೯೧ರಲ್ಲಿ ತೆರಿಗೆ ಪಾವತಿ ಮೊತ್ತವನ್ನು ಆಧರಿಸಿ ೧೮ ವರ್ಷಕ್ಕೆ ಮೇಲ್ಪಟ್ಟ ತೆರಿಗೆದಾರರು ಮತಹಾಕುವ ಚುನಾವಣಾ ಪದ್ಧತಿ ಜಾರಿಗೆ ಬಂದಿತು. ೧೮೯೪ರ ತಿದ್ದುಪಡಿ ಮೂಲಕ

ಸದಸ್ಯತ್ವದ ಅವಧಿಯನ್ನೂ ಮೂರು ವರ್ಷಕ್ಕೆ ಹೆಚ್ಚಿಸಲಾಯಿತು. ವರ್ಷದಲ್ಲೆರಡು ಬಾರಿ ಪ್ರಜಾಪ್ರತಿನಿಧಿ ಸಭೆ ಸಮಾವೇಶಗೊಳ್ಳುವ ವ್ಯವಸ್ಥೆ ೧೯೧೭ರಿಂದ ಜಾರಿಗೆ ಬಂದಿತು. ೧೯೨೨ರಲ್ಲಿ ಮಹಿಳೆಯರಿಗೂ ಮತದಾನದ ಹಕ್ಕು ಲಭಿಸಿತು. ೧೯೨೩ರ ತಿದ್ದುಪಡಿ ಕಾಯ್ದೆಯ ಮೂಲಕ ಮತದಾರರ ತೆರಿಗೆ ಅರ್ಹತಾ ಮೊತ್ತವನ್ನು ೨೫ ರೂ ಭೂಕಂದಾಯ ಇಲ್ಲವೆ ಐದು ರೂ ಮನೆ ಕಂದಾಯವೆಂದು ನಿಗದಿಪಡಿಸಲಾಯಿತು. ಚುನಾವಣೆಯಲ್ಲಿ ಸ್ಪರ್ಧಿಸಲು ಮಹಿಳೆಯರಿಗೆ ೧೯೨೭ರಲ್ಲಿ ಅವಕಾಶ ಕಲ್ಪಿಸಲಾಯಿತು. ೧೯೪೦ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಸದಸ್ಯರ ಕಾಲಾವಧಿಯನ್ನು ಮೂರರಿಂದ ನಾಲ್ಕು ವರ್ಷಗಳಿಗೆ ವಿಸ್ತರಿಸಲಾಯಿತು. ಆ ಪ್ರಕಾರ ತಾಲ್ಲೂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿದ್ದವರನ್ನೂ ಕಾಣಬಹುದಾಗಿದೆ. ಇದು ಈಗಿನ ವಿಧಾನ ಸಭಾ ಸದಸ್ಯ(ಎಂ.ಎಲ್.ಎ)ರಿಗೆ ಸಮಾನವಾಗಿತ್ತು. ತಾಳ್ಯದ ಬ್ರಾಹ್ಮಣರ ಕೇಶವಪ್ಪ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ನಾಮಕರಣಗೊಂಡಿದ್ದರು. ಮೊದಲ ರಾಜ್ಯಸಭಾ ಸದಸ್ಯರಾದ ಚಲವಾದಿ ಮಲ್ಲಯ್ಯ, ದೊಗ್ಗನಾಳ್ ಈಶ್ವರಪ್ಪ ಮೊದಲಾದವರನ್ನು ಗುರುತಿಸಬಹುದಾಗಿದೆ.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರವು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಜೊತೆಗೆ ಮೊಳಕಾಲ್ಮೂರು(ಎಸ್‌ಟಿ), ಚಳ್ಳಕೆರೆ(ಎಸ್‌ಟಿ), ಚಿತ್ರದುರ್ಗ, ಹಿರಿಯೂರು, ಹೊಸದುರ್ಗ ವಿಧಾನಸಭಾ ಕ್ಷೇತ್ರಗಳು ಸಹಾ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರಕ್ಕೆ ಹೊಳಲ್ಕೆರೆ ತಾಲ್ಲೂಕು ಕಸಬಾ, ಬರ್ಮಣ್ಣನಾಯಕನದುರ್ಗ, ರಾಂಗಿರಿ ಮತ್ತು ತಾಳ್ಯ ಸರ್ಕಲ್‌ಗಳು ಹಾಗೂ ಚಿತ್ರದುರ್ಗ ತಾಲ್ಲೂಕು ಬರ್ಮಸಾಗರ ಸರ್ಕಲ್‌ಗಳು ಸೇರುತ್ತವೆ.

## ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ೧೯೫೭-೨೦೧೪

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ | ದ್ವಿತೀಯ ಸ್ಥಾನಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ |
|---|---|---|
| ೧೯೫೭, ಚಿತ್ರದುರ್ಗ | ಎಸ್. ನಿಜಲಿಂಗಪ್ಪ (ಭಾ.ರಾ.ಕಾಂ) ೧,೨೬, ೫೮೪ (೫೮.೦೧) | ಕ.ಮ.ಪ್ರ.ಪಾ. ೪೭, ೪೭೭ (೨೧.೭೩) |
| ೧೯೫೭, ಚಿತ್ರದುರ್ಗ | ಮುಷೀರ್‌ಉಲ್‌ಮಲಿಕ್ (ಜೆ. ಎಂ.ಮಹಮದ್‌ಇಮಾಂಸಾಬ್) ಪ್ರ.ಸೋ.ಪಾ.೧,೨೯,೮೪೮ (೫೨.೨೪) | ಭಾ.ರಾ.ಕಾಂ. ೧,೧೮,೬೫೯ (೪೭.೭೬) |
| ೧೯೬೨, ಚಿತ್ರದುರ್ಗ | ಎಸ್.ವೀರಬಸಪ್ಪ (ಭಾ.ರಾ.ಕಾ) ೧,೭೨,೬೭೩ (೫೪.೪೨) | ಪ್ರ.ಸೋ.ಪಾ. ೧,೨೭,೬೧೬ (೪೦.೬೬) |
| ೧೯೬೭, ಚಿತ್ರದುರ್ಗ | ಜೆ.ಎಂ.ಇಮಾಂ (ಪಕ್ಷೇತರ) ೧,೬೪,೫೪೮ (೫೦.೪೫) | ಭಾ.ರಾ.ಕಾಂ. ೧,೩೨,೬೧೬ (೪೦.೬೬) |
| ೧೯೭೧, ಚಿತ್ರದುರ್ಗ | ಕೊಂಡಜ್ಜಿ ಬಸಪ್ಪ, ಭಾ.ರಾ.ಕಾಂ. (ಜ) ೨,೫೧,೦೦೫ (೭೪.೫೭) | ಪಕ್ಷೇತರ. ೮೧,೩೦೩ (೨೪.೧೮) |
| ೧೯೭೭, ಚಿತ್ರದುರ್ಗ | ಕೆ.ಮಲ್ಲಣ್ಣ (ಭಾ.ರಾ.ಕಾಂ) ೨,೨೭,೯೨೬ (೬೧.೨೯) | ಭಾ.ಲೋ.ದ. ೧,೪೧,೨೭೨ (೩೭.೯೯) |
| ೧೯೮೦, ಚಿತ್ರದುರ್ಗ | ಕೆ. ಮಲ್ಲಣ್ಣ, ಭಾ.ರಾ.ಕಾಂ. (ಐ) ೨,೧೫,೧೮೦ (೫೧.೪೪) | ಜ.ಪಾ. ೧,೦೫,೮೧೯ (೨೫.೩೦) |
| ೧೯೮೪, ಚಿತ್ರದುರ್ಗ | ಕೆ.ಎಚ್.ರಂಗನಾಥ್ (ಭಾ.ರಾ.ಕಾಂ). ೨,೭೯,೧೪೬ (೫೨.೩೦) | ಜ.ಪಾ. ೨,೨೨,೩೫೫ (೪೧.೬೫) |
| ೧೯೮೯, ಚಿತ್ರದುರ್ಗ | ಸಿ.ಪಿ.ಮೂಡಲಗಿರಿಯಪ್ಪ (ಭಾ.ರಾ.ಕಾಂ). ೩,೩೯,೩೦೩ (೫೧.೨೦) | ಜ.ದ. ೧,೯೭,೧೧೦ (೨೯.೮೦) |
| ೧೯೯೧, ಚಿತ್ರದುರ್ಗ | ಸಿ.ಪಿ.ಮೂಡಲಗಿರಿಯಪ್ಪ (ಭಾ.ರಾ.ಕಾಂ). ೩,೦೨,೨೬೭ (೫೨.೪೯) | ಭಾ.ಜ.ಪಾ. ೨,೨೦,೩೩೫ (೩೮.೧೯) |
| ೧೯೯೬, ಚಿತ್ರದುರ್ಗ | ಪಿ.ಕೋದಂಡರಾಮಯ್ಯ, (ಜ.ದ.) ೨,೫೧,೬೧೭, (೩೫.೬೭) | ಭಾ.ರಾ.ಕಾಂ. ೨,೩೨,೨೩೫ (೩೨.೯೨) |

## ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ೧೯೫೨-೨೦೧೪

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ | ದ್ವಿತೀಯ ಸ್ಥಾನಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡಾವಾರು ಪ್ರಮಾಣ |
|---|---|---|
| ೧೯೯೮, ಚಿತ್ರದುರ್ಗ | ಸಿ.ಪಿ.ಮೂಡಲಗಿರಿಯಪ್ಪ (ಭಾ.ರಾ.ಕಾಂ.) ೩,೨೧,೯೩೦ (೪೨.೮೮) | ಲೋಕಶಕ್ತಿ. ೨,೬೩,೬೯೦ (೩೫.೧೧) |
| ೧೯೯೯, ಚಿತ್ರದುರ್ಗ | ಶಶಿಕುಮಾರ್, ಜ.ದ.(ಯು) ೩,೭೦,೭೯೩ (೪೫.೦೦) | ಭಾ.ರಾ.ಕಾಂ. ೩,೫೯,೬೧೫ (೪೩.೦೦) |
| ೨೦೦೪, ಚಿತ್ರದುರ್ಗ | ಎನ್.ವೈ.ಹನುಮಂತಪ್ಪ (ಭಾ.ರಾ.ಕಾಂ) ೩,೨೨,೬೭೯ (೩೫.೧೧) | ಜ.ದ. (ಎಸ್). ೨,೮೫,೧೪೯ (೩೧.೦೩) |
| ೨೦೦೯, ಚಿತ್ರದುರ್ಗ | ಜನಾರ್ಧನಸ್ವಾಮಿ, (ಭಾ.ಜ.ಪಾ) ೩,೭೦,೯೨೦ (೪೪.೩೭) | ಭಾ.ರಾ.ಕಾಂ. ೨,೩೫,೩೪೯ (೨೮.೧೫) |
| ೨೦೧೪ ಚಿತ್ರದುರ್ಗ | ಬಿ.ಎನ್.ಚಂದ್ರಪ್ಪ, (ಭಾ.ರಾ.ಕಾಂ.) ೪,೬೭,೫೭೨ (೪೨.೬೦) | ಜನಾರ್ಧನಸ್ವಾಮಿ, (ಭಾ.ಜ.ಪಾ) ೩,೬೬,೨೨೦ (೩೩.೪೦) |

೧೯೬೭ ರಿಂದ ೨೦೧೮ ರವರೆಗಿನ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶದ ವಿವರಗಳನ್ನು ಮುಂದಿನ ಪುಟಗಳಲ್ಲಿ ನೀಡಿದೆ.

| ವರ್ಷ | ವಿಧಾನಸಭಾ ಕ್ಷೇತ್ರ | ಕ್ಷೇತ್ರದ ಹೆಸರು | ವರ್ಗ | ವಿಜೇತರು | ಲಿಂಗ | ಪಕ್ಷ | ಮತಗಳು | ಎರಡನೇ ಸ್ಥಾನ | ಲಿಂಗ | ಪಕ್ಷ | ಮತಗಳು |
|---|---|---|---|---|---|---|---|---|---|---|---|
| ೧೯೬೨ | ೯೯ | ಹೊಳಲ್ಕೆರೆ | (ಎಸ್.ಸಿ) | ಜಿ. ದುಗ್ಗಪ್ಪ | ಪು | ಐಎನ್‌ಸಿ | ೧೬,೭೫೨ | ಬಿ. ರಂಗಪ್ಪ | ಪು | ಐಎನ್‌ಡಿ | ೮,೯೨೬ |
| ೧೯೬೭ | ೪೬ | ಹೊಳಲ್ಕೆರೆ | (ಸಾಮಾನ್ಯ) | ಬಿ. ಪರಮೇಶ್ವರಪ್ಪ | ಪು | ಎಸ್‌ಡಬ್ಲ್ಯುಎ | ೧೮,೨೬೧ | ಜಿ. ಶಿವಪ್ಪ | ಪು | ಐಎನ್‌ಸಿ | ೧೦,೨೦೧ |
| ೧೯೭೨ | ೪೬ | ಹೊಳಲ್ಕೆರೆ | (ಸಾಮಾನ್ಯ) | ಬಿ. ಪರಮೇಶ್ವರಪ್ಪ | ಪು | ಐಎನ್‌ಸಿ | ೨೯,೫೮೭ | ಎಂ.ಬಿ. ತಿಪ್ಪೆರುದ್ರಪ್ಪ | ಪು | ಎನ್‌ಸಿಒ | ೨೧,೫೬೬ |
| ೧೯೭೮ | ೪೯ | ಹೊಳಲ್ಕೆರೆ | (ಸಾಮಾನ್ಯ) | ಕೆ.ಎಚ್. ಸಿದ್ದರಾಮಣ್ಣ | ಪು | ಐಎನ್‌ಸಿ (ಐ) | ೨೦,೫೭೩ | ಎಂ.ಬಿ. ತಿಪ್ಪೆರುದ್ರಪ್ಪ | ಪು | ಐಎನ್‌ಸಿ | ೧೯,೯೦೪ |
| ೧೯೮೦ | ಉಪ ಚುನಾವಣೆ | ಹೊಳಲ್ಕೆರೆ | (ಸಾಮಾನ್ಯ) | ಎಂ.ಬಿ. ತಿಪ್ಪೆರುದ್ರಪ್ಪ | ಪು | ಐಎನ್‌ಸಿ (ಐ) | ೩೧,೩೨೬ | ಜಿ.ಸಿ. ಮಂಜುನಾಥ | ಪು | ಜೆಎನ್‌ಪಿ | ೧೯,೫೮೮ |
| ೧೯೮೩ | ೪೯ | ಹೊಳಲ್ಕೆರೆ | (ಸಾಮಾನ್ಯ) | ಜಿ. ಶಿವಲಿಂಗಪ್ಪ | ಪು | ಜೆಎನ್‌ಪಿ | ೩೬,೦೫೦ | ಎಂ.ಬಿ. ತಿಪ್ಪೆರುದ್ರಪ್ಪ | ಪು | ಐಎನ್‌ಸಿ | ೨೬,೬೩೨ |
| ೧೯೮೫ | ೪೯ | ಹೊಳಲ್ಕೆರೆ | (ಸಾಮಾನ್ಯ) | ಜಿ.ಸಿ. ಮಂಜುನಾಥ | ಪು | ಜೆಎನ್‌ಪಿ | ೪೦,೧೬೫ | ಎ.ವಿ. ಉಮಾಪತಿ | ಪು | ಐಎನ್‌ಸಿ | ೩೧,೨೩೮ |
| ೧೯೮೯ | ೪೯ | ಹೊಳಲ್ಕೆರೆ | (ಸಾಮಾನ್ಯ) | ಎ.ವಿ. ಉಮಾಪತಿ | ಪು | ಐಎನ್‌ಸಿ | ೪೫,೯೨೮ | ಜಿ. ಶಿವಲಿಂಗಪ್ಪ | ಪು | ಜೆಡಿ | ೩೩,೦೫೬ |
| ೧೯೯೪ | ೪೯ | ಹೊಳಲ್ಕೆರೆ | (ಸಾಮಾನ್ಯ) | ಯು.ಹೆಚ್. ತಿಮ್ಮಣ್ಣ | ಪು | ಜೆಡಿ | ೨೭,೦೭೬ | ಎ.ವಿ. ಉಮಾಪತಿ | ಪು | ಐಎನ್‌ಡಿ | ೨೬,೦೯೦ |
| ೧೯೯೯ | ೪೯ | ಹೊಳಲ್ಕೆರೆ | (ಸಾಮಾನ್ಯ | ಪಿ. ರಮೇಶ್ | ಪು | ಬಿಜೆಪಿ | ೫೦,೧೭೧ | ಎ.ವಿ. ಉಮಾಪತಿ | ಪು | ಐಎನ್‌ಡಿ | ೪೮,೬೬೬ |
| ೨೦೦೪ | ೪೯ | ಹೊಳಲ್ಕೆರೆ | (ಸಾಮಾನ್ಯ) | ಎ.ವಿ. ಉಮಾಪತಿ | ಪು | ಐಎನ್‌ಸಿ | ೪೮,೧೨೯ | ಜಿ.ಎಸ್. ಮಂಜುನಾಥ | ಪು | ಐಎನ್‌ಡಿ | ೩೩,೮೩೬ |
| ೨೦೦೮ | ೧೦೭ | ಹೊಳಲ್ಕೆರೆ | (ಎಸ್‌ಸಿ) | ಎಂ. ಚಂದ್ರಪ್ಪ | ಪು | ಬಿಜೆಪಿ | ೫೪,೭೦೯ | ಹೆಚ್. ಆಂಜನೇಯ | ಪು | ಐಎನ್‌ಸಿ | ೩೮,೮೪೧ |
| ೨೦೧೩ | ೧೦೭ | ಹೊಳಲ್ಕೆರೆ | (ಎಸ್‌ಸಿ) | ಹೆಚ್. ಆಂಜನೇಯ | ಪು | ಐಎನ್‌ಸಿ | ೭೬,೮೫೬ | ಎಂ.ಚಂದ್ರಪ್ಪ | ಪು | ಕೆಜೆಪಿ | ೬೩,೯೯೭ |
| ೨೦೧೮ | | ಹೊಳಲ್ಕೆರೆ | ಬಿಜೆಪಿ | ಎಂ. ಚಂದ್ರಪ್ಪ | ಪು | ಬಿಜೆಪಿ | ೧,೦೭,೯೭೬ | ಹೆಚ್. ಆಂಜನೇಯ | ಪು | ಐಎನ್‌ಸಿ | ೬೯,೦೩೬ |

# ಅಧ್ಯಾಯ–೩

## ಜನತೆ

**ಚಿ**ತ್ರದುರ್ಗ ಜಿಲ್ಲೆಯ ಉತ್ತರ ದಿಕ್ಕಿಗಿರುವ ಈ ತಾಲ್ಲೂಕು ಪ್ರದೇಶ ಪೂರ್ವ ಕಾಲದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಮದ್ರಾಸು ಪ್ರಾಂತದಲ್ಲಿದ್ದು ಬಹುಪಾಲು ಬಯಲು ಸೀಮೆಯಿಂದ ಕೂಡಿದ್ದು, ಕೆಲ ಭಾಗಗಳಲ್ಲಿ ಗುಡ್ಡಗಳಿಂದ ಆವೃತವಾದ ಅರಣ್ಯ ಪ್ರದೇಶವಾಗಿದೆ. ಇದು ಕಪ್ಪು, ಕೆಂಪು, ಕಲ್ಲು, ಮರಳು ಜರುಗು ಭೂಮಿಯಿಂದ ಕೂಡಿದ್ದು ಹೆಚ್ಚಾಗಿ ಕೃಷಿ ಪ್ರಧಾನವಾಗಿದೆ. ಒಣ ಬೇಸಾಯ ಪ್ರಾಧಾನ್ಯತೆ ಪಡೆದಿದ್ದು, ಬಹು ಜನರು ಕೃಷಿ ಮತ್ತು ಕೃಷಿ ಕಾರ್ಮಿಕರಾಗಿ ಪಾರಂಪರಿಕವಾಗಿ ಸಾಂಪ್ರದಾಯಿಕ ವೃತ್ತಿಯನ್ನು ತಮ್ಮ ಜೀವನೋಪಾಯಕ್ಕೆ ಹೊಂದಿಸಿಕೊಂಡಿರುವರು. ಕೆಲವರು ಪಶುಪಾಲನೆ, ಕುರಿ–ಮೇಕೆ, ಎಮ್ಮೆ, ಗೋವು ಪಾಲನೆಯಲ್ಲಿ ತೊಡಗಿರುವರು. ಇತ್ತೀಚೆಗೆ ಸರಕಾರದ ಮೀಸಲಾತಿ ನಿಯಮಗಳಿಂದ ಶಿಕ್ಷಣದಿಂದ ವಂಚಿತರಾಗಿದ್ದ ಗ್ರಾಮೀಣ ಪರಿಸರದ ಬಡ ಜನರಿಗೆ ವಿಶೇಷ ಪ್ರೋತ್ಸಾಹ ದೊರಕಿದ್ದುದರಿಂದ, ಇಂದಿನ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಗಳು ಕಂಡು ಬಂದಿವೆ. ಜಾತಿ ಸಮುದಾಯ ಸಾಮಾಜಿಕ ಜೀವನ ಧಾರ್ಮಿಕ ಆಚರಣೆ ಮತ್ತು ಸಾಂಸ್ಕೃತಿಕ ಪದ್ಧತಿಗಳಲ್ಲಿ ವಿಫುಲ ಬದಲಾವಣೆಗಳು ಕಂಡು ಬರುತ್ತಿದೆ. ಒಂದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿನ ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳಂತಹ ಅಂಶಗಳ ಪರಿಶೀಲನೆಯೂ ಅವಶ್ಯವಾಗಿರುತ್ತವೆ. ಈ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುವುದು ಸಹಜವಾಗಿರುತ್ತದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿಯೂ ವಿವಿಧ ಜಾತಿ ಮತ್ತು ಬುಡಕಟ್ಟು, ಮತ–ಧರ್ಮ, ಆಚಾರ–ವಿಚಾರ, ನಂಬಿಕೆ, ಆಹಾರಾಭ್ಯಾಸ, ವೇಷಭೂಷಣ, ಭಾಷೆಗಳೇ ಮೊದಲಾದ ವೈವಿಧ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡುಬರುತ್ತವೆ.

## ಜನಸಂಖ್ಯಾ ಬೆಳವಣಿಗೆ

ತಾಲ್ಲೂಕಿನಲ್ಲಿ ೨೦೧೧ರ ಜನಗಣತಿಯಂತೆ ೧೬೪ ಜನವಸತಿ ಗ್ರಾಮಗಳು, ೩೮ ಜನವಸತಿ ಇಲ್ಲದ ಗ್ರಾಮಗಳಿದ್ದು, ಒಂದು ಪಟ್ಟಣ (ಹೊಳಲ್ಕೆರೆ) ಮಾತ್ರ ಇತ್ತು. ೨೦೦೧ ರಲ್ಲಿ ಒಟ್ಟು ೧,೯೭,೭೬೬ ಜನಸಂಖ್ಯೆ ಇದ್ದು, ೧,೮೩,೧೯೨ ಮಂದಿ ಗ್ರಾಮಾಂತರ ಪ್ರದೇಶದಲ್ಲೂ  ಹಾಗೂ ೧೪,೫೭೪ ಮಂದಿ ನಗರ ಪ್ರದೇಶದಲ್ಲೂ ವಾಸಿಸುತ್ತಿದ್ದರು.  ೨೦೧೧ ರಲ್ಲಿ ಒಟ್ಟು ೨,೦೭,೨೬೦ (೧,೦೪೯೯೨ ಪುರುಷರು, ೧,೦೨,೨೬೮ ಮಹಿಳೆಯರು) ಜನಸಂಖ್ಯೆಯಿದ್ದು, ಇದರಲ್ಲಿ ೧,೮೫,೨೪೧ ಗ್ರಾಮಾಂತರ ಪ್ರದೇಶದಲ್ಲೂ ಹಾಗೂ ೨೨,೦೧೯  ಮಂದಿ ನಗರ ಪ್ರದೇಶದಲ್ಲೂ ವಾಸಿಸುತ್ತಿದ್ದರು.

## ತಾಲ್ಲೂಕಿನ ಜನಸಾಂದ್ರತೆ

ಒಂದು ಪ್ರದೇಶದ ಪ್ರತಿ ಚ.ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಜನಸಾಂದ್ರತೆಯು ಗ್ರಾಮಾಂತರ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚಾಗಿರುತ್ತದೆ. ೨೦೧೧ರಲ್ಲಿ ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಂದು ಚ.ಕಿ.ಮೀನಲ್ಲಿ ಜನಸಾಂದ್ರತೆ ೧೮೯ ಆಗಿತ್ತು.

## ಮನೆಗಳು ಹಾಗೂ ಕುಟುಂಬಗಳು

ಜನಗಣತಿಯ ವ್ಯಾಖ್ಯಾನದ ಪ್ರಕಾರ, ವಾಸದ ಮನೆಯೆಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕುಟುಂಬಗಳು ವಾಸಿಸುವ ಪೂರ್ತಿ ಅಥವಾ ಭಾಗಶಃ ಕಟ್ಟಡ ಎಂದರ್ಥ. ಕುಟುಂಬವೆಂದರೆ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು, ಒಂದೇ ಅಡುಗೆ ಮನೆಯಲ್ಲಿ ತಯಾರಿಸಿದ ಅಡುಗೆಯನ್ನು (ಅನೇಕ ಸಂದರ್ಭಗಳಲ್ಲಿ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟ ಮಾಡುವ ಜನಸಮೂಹ ಎಂದರ್ಥ. ಕೆಲವು ಕುಟುಂಬಗಳಿಗೆ ವಾಸದ ಮನೆಗಳಿರುವುದಿಲ್ಲ. ಅಂತಹ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳೆಂದು ಕರೆಯುತ್ತಾರೆ. ತಾಲ್ಲೂಕಿನಲ್ಲಿ ೨೦೦೧ರ ಜನಗಣತಿಯಂತೆ ೩೯,೩೫೫ ಒಟ್ಟು ಕುಟುಂಬಗಳಿದ್ದು, ೩೬,೪೭೩ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲೂ ೨,೮೮೨ ಕುಟುಂಬಗಳು ನಗರ ಪ್ರದೇಶದಲ್ಲಿದ್ದವು. ಹಾಗೆಯೇ ೨೦೧೧ರಲ್ಲಿ ೪೫,೭೩೦ ಕುಟುಂಬಗಳಿದ್ದು, ೪೦,೮೫೫ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲೂ, ೪,೮೭೫ ಕುಟುಂಬಗಳು ನಗರ ಪ್ರದೇಶದಲ್ಲಿದ್ದವು.

**ವಯೋಮಾನದಂತೆ ವಿಂಗಡಣೆ**

ವಯೋಮಾನದಂತೆ ಜನತೆಯನ್ನು ವಿಂಗಡಿಸುವುದು ಜನತೆಯ ಲಕ್ಷಣವನ್ನು ಸೂಚಿಸುವ ಒಂದು ಮುಖ್ಯ ಸಾಮಾಜಿಕ ಪ್ರಕ್ರಿಯೆ. ಈ ವಿಂಗಡಣೆಯಿಂದ ದುಡಿಯುವ ಹಾಗೂ ದುಡಿಯಲು ಸಾಧ್ಯವಿಲ್ಲದವರ ಸಂಖ್ಯೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ದೇಶದ ಜನಶಕ್ತಿಯನ್ನು ತಿಳಿಯಲು ಸಹ ಇದು ನೆರವಾಗುತ್ತದೆ. ಸಾಮಾನ್ಯವಾಗಿ ೧೫ ವರ್ಷಗಳಿಗಿಂತ ಕಡಿಮೆ ಹಾಗೂ ೬೦ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರನ್ನು ವೃತ್ತಿ ಯೋಗ್ಯರೆಂದು ಪರಿಗಣಿಸುವುದಿಲ್ಲ.

**ಸಾಂಸ್ಥಿಕ ಜನಸಂಖ್ಯೆ**

ವೈಯಕ್ತಿಕವಾಗಿ ಪರಸ್ಪರ ಸಂಬಂಧಿಕರಲ್ಲದಿದ್ದರೂ ಕಾರಣಾಂತರಗಳಿಂದ ಕೆಲವು ಕಾಲ ಅಥವಾ ಖಾಯಂ ಆಗಿ ಒಂದು ಸಾಂಸ್ಥಿಕ ಕಟ್ಟಡದಲ್ಲಿ ವಾಸಿಸುತ್ತಿದ್ದು, ಒಂದೇ ಅಡುಗೆ ಮನೆಯಲ್ಲಿ ಸಿದ್ಧಪಡಿಸಿದ ಆಹಾರವನ್ನು ಊಟ ಮಾಡುವ ಜನರ ಸಮೂಹವನ್ನು ಸಾಂಸ್ಥಿಕ ಕುಟುಂಬ ಎಂದೂ ಅದರಲ್ಲಿನ ಜನಸಂಖ್ಯೆಯನ್ನು ಸಾಂಸ್ಥಿಕ ಜನಸಂಖ್ಯೆ ಎಂದೂ ಜನಗಣತಿಯಲ್ಲಿ ಪರಿಗಣಿಸಲಾಗುತ್ತದೆ. ಜನಗಣತಿಯ ಪ್ರಕಾರ ವಿದ್ಯಾರ್ಥಿನಿಲಯ, ಭೋಜನ ಗೃಹ, ಸೆರೆಮನೆ, ಆಶ್ರಮ, ಹೋಟೆಲ್, ಮಠ, ವೃದ್ಧಾಶ್ರಮ ಮುಂತಾದವುಗಳಲ್ಲಿ ವಾಸಿಸುವ ಜನಸಂಖ್ಯೆಯನ್ನು ಸಾಂಸ್ಥಿಕ ಜನಸಂಖ್ಯೆ ಎಂದು ಕರೆಯಲಾಗುತ್ತದೆ.

**ನಿರ್ವಸಿತ ಕುಟುಂಬಗಳು**

ಅಲೆಮಾರಿ ಜನಾಂಗಗಳು, ಭಿಕ್ಷುಕರು ಮೊದಲಾದವರು ನಿರ್ದಿಷ್ಟವಾದ ವಾಸದ ಮನೆಗಳನ್ನು ಹೊಂದಿರದೆ ಸಾಮಾನ್ಯವಾಗಿ ಬಸ್‌ನಿಲ್ದಾಣ, ರೈಲ್ವೆನಿಲ್ದಾಣ, ಹಳೇಕಟ್ಟಡ, ಮಂಟಪ, ರಸ್ತೆ ಬದಿಯಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ. ಇಂಥವರನ್ನು ಜನಗಣತಿಯ ಪ್ರಕಾರ ನಿರ್ವಸಿತ ಅಥವಾ ಮನೆಯಿಲ್ಲದ ಕುಟುಂಬಗಳು ಎಂದು ಕರೆಯಲಾಗುತ್ತದೆ.

**ಗ್ರಾಮೀಣ ಜನಸಂಖ್ಯೆ**

ಹಳ್ಳಿಗಳಲ್ಲಿ ವಾಸಮಾಡುವ ಜನರನ್ನು ಗ್ರಾಮೀಣ ಜನತೆ ಎನ್ನಲಾಗುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯು ಪಟ್ಟಣ ಪ್ರದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ೨,೦೭,೨೬೦ ಜನಸಂಖ್ಯೆಯಿದ್ದು, ೧,೮೫,೨೪೧ ಮಂದಿ

ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದರು. ಇದರಲ್ಲಿ ೯೩,೯೬೪ ಮಂದಿ ಪುರುಷರು, ೯೧,೨೭೭ ಮಂದಿ ಮಹಿಳೆಯರಿದ್ದರು.

ತಾಲ್ಲೂಕಿನಲ್ಲಿ ೨೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ೯(ಶೇ.೬) ಗ್ರಾಮಗಳಿದ್ದು, ಒಟ್ಟು ೮೯೨ ಜನಸಂಖ್ಯೆ ಹೊಂದಿದ್ದವು. ೨೦೦ ರಿಂದ ೪೯೯ ಜನಸಂಖ್ಯೆಯುಳ್ಳ ೨೭(ಶೇ.೧೭) ಗ್ರಾಮಗಳಿದ್ದು, ಇವುಗಳಲ್ಲಿ ೯,೫೨೦ ಜನಸಂಖ್ಯೆ ಇದ್ದರೆ, ೫೦೦ ರಿಂದ ೯೯೯ ಜನಸಂಖ್ಯೆಯುಳ್ಳ ೫೦ (ಶೇ.೩೧) ಗ್ರಾಮಗಳಿದ್ದು, ೩೬,೯೪೨ ಜನಸಂಖ್ಯೆ, ೧,೦೦೦ ದಿಂದ ೧,೯೯೯ ರವರೆಗಿನ ಜನಸಂಖ್ಯೆಯುಳ್ಳ ೫೫ (ಶೇ.೩೪) ಗ್ರಾಮಗಳಿದ್ದು, ೭೬,೭೦೧ ಜನಸಂಖ್ಯೆ, ೨,೦೦೦ ದಿಂದ ೪,೯೯೯ ರವರೆಗಿನ ಜನಸಂಖ್ಯೆಯುಳ್ಳ ೨೧(ಶೇ.೧೩) ಗ್ರಾಮವಿದ್ದು, ಇದರಲ್ಲಿ ೫೫,೩೫೭ ಜನಸಂಖ್ಯೆ, ೫,೦೦೦ ದಿಂದ ೯,೯೯೯ ರವರೆಗಿನ ಜನಸಂಖ್ಯೆಯುಳ್ಳ ೧(ಶೇ.೧) ಗ್ರಾಮವಿದ್ದು, ೫,೮೨೯ ಜನಸಂಖ್ಯೆಯನ್ನು ಒಳಗೊಂಡಿದ್ದವು. ತಾಲ್ಲೂಕಿನಲ್ಲಿ ೧೦,೦೦೦ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಯಾವುದೇ ಗ್ರಾಮಗಳು ಇರುವುದಿಲ್ಲ.

## ಪಟ್ಟಣ ಜನಸಂಖ್ಯೆ

ಪಟ್ಟಣ ಮತ್ತು ನಗರಗಳ ಬೆಳವಣಿಗೆಯನ್ನು ನಗರೀಕರಣ ಎಂದು ಕರೆಯುತ್ತಾರೆ. ನಗರೀಕರಣವು ಒಂದು ಪ್ರಮುಖ ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದು ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುವ ಅಂಶವೂ ಆಗಿದೆ. ಪಟ್ಟಣವನ್ನು ಗ್ರಾಮೀಣ ಪ್ರದೇಶದಿಂದ ಪ್ರತ್ಯೇಕಿಸಲು ಜನಗಣತಿಯಲ್ಲಿ ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಅದರಂತೆ ಪಟ್ಟಣಗಳ ಕನಿಷ್ಟ ಜನಸಂಖ್ಯೆ ಐದು ಸಾವಿರ ಇರಬೇಕು. ಶೇ.೭೫ರಷ್ಟು ಜನ ಕೃಷಿಯೇತರ ಉದ್ಯೋಗವನ್ನು ಅವಲಂಬಿಸಿರಬೇಕು ಮತ್ತು ಜನಸಾಂದ್ರತೆಯು ಚ.ಕಿ.ಮೀ.ಗೆ ಕನಿಷ್ಟ ೪೦೦ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡುಪ್ರದೇಶ, ಅಧಿಸೂಚಿತ (ನೋಟಿಫೈಡ್) ಪ್ರದೇಶಗಳು ಪಟ್ಟಣದ ವ್ಯಾಪ್ತಿಗೆ ಬರುತ್ತವೆ. ತಾಲ್ಲೂಕಿನಲ್ಲಿ ೨೦೦೧ ರ ಜನಗಣತಿ ಪ್ರಕಾರ ೧೪,೫೭೪ ಜನಸಂಖ್ಯೆ ಇತ್ತು. ಇದು ೨೦೧೧ರಲ್ಲಿ ೨೨,೦೧೯ ಕ್ಕೆ ಏರಿಕೆಯಾಗಿರುವುದು ಸ್ಪಷ್ಟವಾಗಿದೆ.

## ಸ್ತ್ರೀ ಪುರುಷರ ಪ್ರಮಾಣ

ಸ್ತ್ರೀ–ಪುರುಷರ ಪ್ರಮಾಣವೆಂದರೆ ಪ್ರತಿಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆ. ಸ್ತ್ರೀ–ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿನ ಸಂಪ್ರದಾಯ, ವೈವಾಹಿಕ ಸ್ಥಾನಮಾನ, ಜನರ ವಲಸೆ, ಸ್ತ್ರೀಯರ ಮತ್ತು ಪುರುಷರ ಸಾವಿನ ಪ್ರಮಾಣದ ಅಂತರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ೨೦೦೧ರ ಜನಗಣತಿಯಂತೆ ತಾಲ್ಲೂಕಿನಲ್ಲಿ ೧೦೦೦ ಗಂಡಸರಿಗೆ ೯೬೨ ಮಹಿಳೆಯರಿದ್ದರು. ಹಾಗೆಯೇ ೨೦೧೧ರಲ್ಲಿ ಈ ಸಂಖ್ಯೆ ೯೭೪ಕ್ಕೆ ವೃದ್ಧಿಗೊಂಡಿರುವುದು ಗಮನಾರ್ಹವಾಗಿದೆ.

## ಅಂಗವಿಕಲರು

ಕಿವುಡು, ಕುರುಡು, ಕೈಕಾಲು ಊನ, ಬುದ್ಧಿಮಾಂದ್ಯತೆ, ಮಾನಸಿಕ ಅಸ್ವಸ್ಥತೆ ಮೊದಲಾದವುಗಳನ್ನು ಅಂಗವಿಕಲತೆ ಎಂದು ಪರಿಗಣಿಸಲಾಗುತ್ತದೆ. ಕೆಲವರು ಹುಟ್ಟಿನಿಂದ, ಕೆಲವರು ಆ ಬಳಿಕ ಆಕಸ್ಮಿಕ ಅಥವಾ ವೈದ್ಯಕೀಯ ಕಾರಣದಿಂದ ಅಂಗವೈಕಲ್ಯಕ್ಕೆ ತುತ್ತಾಗುತ್ತಾರೆ. ಇವರು ಮೇಲ್ನೋಟಕ್ಕೆ ಅಂಗವಿಕಲರಂತೆ ಕಂಡರೂ ದೈಹಿಕ ಅಶಕ್ತತೆಯನ್ನು ಮರೆಸಿ, ತಮ್ಮ ಸಾಮರ್ಥ್ಯವನ್ನು ವಿಭಿನ್ನವಾಗಿ ತೋರುವವರಾಗಿರುತ್ತಾರೆ. ಅಂತೆಯೇ ಅವರನ್ನು Physically Challenged Persons, ವಿಕಲಾತೀತರು ಅಥವಾ ವಿಕಲಚೇತನರು, ವಿಶೇಷ ಮಕ್ಕಳು ಮೊದಲಾದ ಹೆಸರುಗಳಿಂದ ಈಚೆಗೆ ಗುರುತಿಸಲಾಗುತ್ತಿದೆ. ಅಂಗವಿಕಲರ ಗಣತಿಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತದೆ. ಆದರೂ ಅನೇಕ ನಿರ್ವಸಿತ ಅಂಗವಿಕಲರು ಭಿಕ್ಷುಕ ಸಮುದಾಯದಲ್ಲಿ ಸೇರಿ, ಸಾಮಾನ್ಯ ಗಣತಿ ಸಮಯದಲ್ಲಿ ಗಣತಿಗೆ ಅಲಭ್ಯವಾಗುವುದರಿಂದ ಅಂಗವಿಕಲರ ವಾಸ್ತವ ಅಂಕಿ-ಅಂಶಗಳನ್ನು ಗುರುತಿಸುವುದು ಕಷ್ಟವಾಗುತ್ತದೆ.

೨೦೧೧ರ ಜನಗಣತಿಯಲ್ಲಿ ತಾಲ್ಲೂಕಿನಲ್ಲಿ ಅಂಗವಿಕಲರ ಸಂಖ್ಯೆ-೩೫೦೮ ಆಗಿತ್ತು. ಇವರಿಗೆ ಸರ್ಕಾರ ದಿ:೧೩.೦೩.೨೦೧೮ ರಿಂದ ಜಾರಿಗೆ ಬರುವಂತೆ ಶೇ.೪೦ ರಿಂದ ೭೫ರಷ್ಟು ಅಂಗವೈಕಲ್ಯವಿರುವ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.೫೦೦ ರಿಂದ ೬೦೦ಕ್ಕೆ ಹೆಚ್ಚಿಸಲಾಗಿದೆ. ಶೇ.೭೫ಕ್ಕಿಂತ ಹೆಚ್ಚು ಅಂಗವೈಕಲ್ಯವಿರುವ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.೧೨೦೦ ರಿಂದ ರೂ.೧೪೦೦ಕ್ಕೆ ಹೆಚ್ಚಿಸಲಾಗಿದೆ. ಅಂಗವಿಕಲತೆಯ ಪ್ರಮಾಣವನ್ನು ಸರ್ಕಾರಿ ವೈದ್ಯರು ಗುರುತಿಸಿ ಸರ್ಟಿಫಿಕೇಟನ್ನು ನೀಡಿದಲ್ಲಿ, ಅವರ ಊನವಾದ ದೇಹದ ಭಾವಚಿತ್ರವನ್ನು ಲಗತ್ತಿಸಿದ ಸರ್ಟಿಫಿಕೇಟನ್ನು ಗಮನಿಸಿ, ಅಂಥವರಿಗೆ (ಬಡವರಿಗೆ) ಮಾಸಿಕ ವೇತನವನ್ನು ಮಂಜೂರು ಮಾಡಲಾಗುತ್ತದೆ.

## ಪರಿಶಿಷ್ಟ ಜಾತಿ

ಭಾರತೀಯ ಸಂವಿಧಾನದ ೩೪೧ನೇ ವಿಧಿಯಲ್ಲಿ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿ, ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯಲಾಗಿದೆ. ಭಾರತ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ೧೯೭೬ರಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ವರ್ಗ (ಬುಡಕಟ್ಟು)ಗಳ ಆಜ್ಞೆಗೆ ತಿದ್ದುಪಡಿಯನ್ನು ಮಾಡಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ೨,೦೭,೨೬೦ ಜನಸಂಖ್ಯೆಯಿದ್ದು, ಇವರಲ್ಲಿ ೧,೦೪,೯೯೨ (೯೩,೯೬೪ ಗ್ರಾಮೀಣ, ೧೧,೦೨೮ ನಗರ) ಮಂದಿ ಪುರುಷರು, ೧,೦೨,೨೬೮ (೯೧,೨೭೭ ಗ್ರಾಮೀಣ, ೧೦,೯೯೧ ನಗರ) ಮಂದಿ

ಮಹಿಳೆಯರಿದ್ದರು. ತಾಲ್ಲೂಕಿನಲ್ಲಿ ಒಟ್ಟು ೫೬,೭೩೩ ಪರಿಶಿಷ್ಟ ಜಾತಿಯವರಿದ್ದು, ೫೨,೬೮೧ಮಂದಿ ಗ್ರಾಮೀಣ ಪ್ರದೇಶದಲ್ಲೂ (೨೬,೭೪೮ ಮಂದಿ ಪುರುಷರು ೨೫,೯೩೩ ಮಂದಿ ಮಹಿಳೆಯರು) ೪,೦೫೨ ಮಂದಿ ನಗರ ಪ್ರದೇಶದಲ್ಲೂ (೧೯೮೨ ಮಂದಿ ಪುರುಷರು ೨೦೭೦ ಮಂದಿ ಮಹಿಳೆಯರು)ವಾಸವಾಗಿದ್ದರು.

**ಪರಿಶಿಷ್ಟ ಪಂಗಡ**

ಭಾರತ ಸಂವಿಧಾನದ ೩೪೨ನೇ ಪರಿಚ್ಛೇದದ ಪ್ರಕಾರ ಇರುಳಿಗ, ಹಕ್ಕಿಪಿಕ್ಕಿ, ಜೇನು ಕುರುಬ, ಕಾಡು ಕುರುಬ, ಕೊಂಡ ಕಾಪು, ಗೌಡಲು, ಡೋಲಿಗ ಕೊರಗ, ಕಣಿಯ, ಕುರುಮ ಮುಂತಾದ ಬುಡಕಟ್ಟಿನ ಜನರನ್ನು ಪರಿಶಿಷ್ಟ ಪಂಗಡದವರೆಂದು ಪರಿಗಣಿಸಿದರು. ಇದರ ಪ್ರಕಾರ ೧೨,೬೯೪ ಮಂದಿ ಪುರುಷರು (೧೧,೭೬೯ ಮಂದಿ ಗ್ರಾಮೀಣ ೯೨೫ ಮಂದಿ ನಗರ) ಈ ತಾಲ್ಲೂಕಿನಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ೨೫,೩೯೫ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ೧೨,೬೯೪(೧೧,೭೬೯ ಗ್ರಾಮೀಣ, ೯೨೫ ನಗರ) ಮಂದಿ ಪುರುಷರು, ೧೨,೭೦೧ ಮಹಿಳೆಯರು (೧೧,೭೨೯ ಗ್ರಾಮೀಣ, ೯೭೨ ನಗರ) ಇದ್ದರು.

**ಸಾಕ್ಷರತೆ**

ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ೧,೧೮,೧೮೩ (೧,೦೭,೬೧೪ ಗ್ರಾಮೀಣ, ೧೦,೫೬೯ ನಗರ) ಮಂದಿ ಅಕ್ಷರಸ್ಥರಿದ್ದು, ಇವರಲ್ಲಿ ೬೯,೨೩೬ ಮಂದಿ ಪುರುಷರು (೬೩೩೨೦ ಗ್ರಾಮೀಣ ಮತ್ತು ೫,೯೧೬ ನಗರ) ಮತ್ತು ೪೮,೯೪೭ (೪೪೨೯೪ ಗ್ರಾಮೀಣ ಮತ್ತು ೪೬೫೩ ನಗರ)  ಮಂದಿ ಮಹಿಳಾ ಸಾಕ್ಷರಸ್ಥರಿದ್ದರು. ಹಾಗೆಯೇ ೨೦೧೧ರಲ್ಲಿ ೧,೪೧,೦೦೪ (೧೨೩೬೦೩ ಗ್ರಾಮೀಣ ಮತ್ತು ೧೭೪೦೧ ನಗರ) ಒಟ್ಟು ಸಾಕ್ಷರಸ್ಥರಿದ್ದು, ಇವರಲ್ಲಿ ೭೮,೩೯೫(೬೯೨೯೯ ಗ್ರಾಮೀಣ ಮತ್ತು ೯೦೯೬ ನಗರ) ಪುರುಷರು ಹಾಗೂ ೬೨,೬೦೯ (೫೪೩೦೪ ಗ್ರಾಮೀಣ ಮತ್ತು ೮೩೦೫ ನಗರ) ಮಹಿಳಾ ಸಾಕ್ಷರಸ್ಥರಿದ್ದರು.

**ಭಾಷೆಗಳು**

ತಾಲ್ಲೂಕಿನಲ್ಲಿ ಬೇರೆ ಬೇರೆ ಭಾಷೆಗಳನ್ನು ಆಡುವ ಜನರಿದ್ದು, ಒಟ್ಟು ಜನಸಂಖ್ಯೆಯಲ್ಲಿ ಮಾತೃ ಭಾಷೆಯಾದ ಕನ್ನಡ ಮಾತನಾಡುವವರ ಸಂಖ್ಯೆ ಹೆಚ್ಚಾಗಿರುತ್ತದೆ. ತಾಲ್ಲೂಕಿನಲ್ಲಿದ್ದ ವಿವಿಧ ಭಾಷೆಗಳನ್ನಾಡುವವರ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

## ಹೊಳಲ್ಕೆರೆ ತಾಲ್ಲೂಕಿನಲ್ಲಿದ್ದ ೨೦೧೧ರ ಜನಗಣತಿಯಂತೆ ವಿವಿಧ ಭಾಷೆಗಳನ್ನಾಡುವವರ ವಿವರ

| ಮಾತೃಭಾಷೆಗಳ ಹೆಸರು | ಒಟ್ಟು | | | ಗ್ರಾಮೀಣ | | | ನಗರ | | |
|---|---|---|---|---|---|---|---|---|---|
| | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ಬೆಂಗಾಲಿ | ೬ | ೬ | ೦ | ೬ | ೬ | ೦ | ೦ | ೦ | ೦ |
| ಗುಜರಾತಿ | ೬೦ | ೩೪ | ೨೬ | ೦ | ೦ | ೦ | ೬೦ | ೩೪ | ೨೬ |
| ಹಿಂದಿ | ೧೦,೦೪೨ | ೫,೧೨೬ | ೪,೯೧೬ | ೯,೬೮೬ | ೪,೯೩೨ | ೪,೭೫೪ | ೩೫೬ | ೧೯೪ | ೧೬೨ |
| ಕನ್ನಡ | ೧,೮೦,೩೪೩ | ೯೧,೩೩೭ | ೮೯,೦೦೬ | ೧,೬೩,೬೬೪ | ೮೩,೦೧೭ | ೮೦,೬೪೭ | ೧೬,೬೭೯ | ೮,೩೨೦ | ೮,೩೫೯ |
| ಕೊಂಕಣಿ | ೩೨ | ೧೪ | ೧೮ | ೭ | ೪ | ೩ | ೨೫ | ೧೦ | ೧೫ |
| ಮಲೆಯಾಳಂ | ೫೦ | ೨೧ | ೨೯ | ೨೦ | ೪ | ೧೬ | ೩೦ | ೧೭ | ೧೩ |
| ಮರಾಠಿ | ೨೭೫ | ೧೪೧ | ೧೩೪ | ೧೦೪ | ೫೦ | ೫೪ | ೧೭೧ | ೯೧ | ೮೦ |
| ಒಡಿಯಾ | ೩ | ೨ | ೧ | ೨ | ೧ | ೧ | ೧ | ೧ | ೦ |
| ತಮಿಳು | ೨೫೫ | ೧೩೯ | ೧೧೬ | ೨೦೨ | ೧೧೧ | ೯೧ | ೫೩ | ೨೮ | ೨೫ |
| ತೆಲುಗು | ೯,೩೧೨ | ೪,೭೧೨ | ೪,೬೦೦ | ೮,೯೮೨ | ೪,೫೫೦ | ೪,೪೩೨ | ೩೩೦ | ೧೬೨ | ೧೬೮ |
| ಉರ್ದು | ೬,೮೫೬ | ೩,೪೪೨ | ೩,೪೧೪ | ೨,೫೪೯ | ೧,೨೭೫ | ೧,೨೭೪ | ೪,೩೦೭ | ೨,೧೬೭ | ೨,೧೪೦ |
| ಭಿಲ್ಲಿ/ಭಿಲ್ಲೋಡಿ | ೩ | ೨ | ೧ | ೩ | ೨ | ೧ | ೦ | ೦ | ೦ |
| ಇಂಗ್ಲೀಷ್ | ೬ | ೩ | ೩ | ೫ | ೨ | ೩ | ೧ | ೧ | ೦ |
| ತುಳು | ೭ | ೩ | ೪ | ೧ | ೦ | ೧ | ೬ | ೩ | ೩ |
| ಇತರೆ | ೧೦ | ೧೦ | ೦ | ೧೦ | ೧೦ | ೦ | ೦ | ೦ | ೦ |

**ಆಧಾರ: ೨೦೧೧ರ ಜನಗಣತಿ**

### ಧರ್ಮಗಳು

೧೯೯೧ರ ಜನಗಣತಿಯಂತೆ ಒಟ್ಟು ೧,೭೯,೨೧೦ ಜನಸಂಖ್ಯೆ ಇದ್ದು, ಇವರಲ್ಲಿ ೧,೭೨,೪೮೮ (ಶೇ.೯೬.೨೫) ಹಿಂದೂಗಳು, ೬,೧೨೫ (ಶೇ.೩.೪೨) ಮುಸ್ಲಿಂರು, ೧೧೨ (ಶೇ.೦.೦೬) ಕ್ರೈಸ್ತರು, ೨೫೪ (ಶೇ.೦.೧೪) ಜೈನರು, ಮೂವರು ಬೌದ್ಧರು ಹಾಗೂ ೨೩೨ (ಶೇ.೦.೧೩) ಧರ್ಮವನ್ನು ತಿಳಿಸದವರಿದ್ದರು.

೨೦೦೧ ರ ಜನಗಣತಿಯಂತೆ ಒಟ್ಟು ೧,೯೭,೭೬೬ ಜನಸಂಖ್ಯೆ ಇದ್ದು, ಇವರಲ್ಲಿ ೧,೮೬,೬೩೮ (ಶೇ.೯೪.೩೭) ಹಿಂದೂಗಳು, ೬,೬೬೦ (ಶೇ.೩.೩೭) ಮುಸ್ಲಿಮರು, ೧೧೧ (ಶೇ.೦.೦೬) ಕ್ರೈಸ್ತರು, ೨೧೧ (ಶೇ.೦.೧೧) ಜೈನರು, ೨೫ (೦.೦೧) ಬೌದ್ಧರು, ೫೩ (ಶೇ.೦.೦೩) ಸಿಖ್ಖರು, ೫೩೧ (ಶೇ.೦.೨೭). ಇತರೆ ಧರ್ಮೀಯರು ಹಾಗೂ ೩,೫೩೭ (ಶೇ.೧.೭೯) ಧರ್ಮವನ್ನು ತಿಳಿಸದವರಿದ್ದರು. ೨೦೧೧ರ ಜನಗಣತಿಯಂತೆ

೨೦೭೨೬೦ ಜನಸಂಖ್ಯೆ ಇದ್ದು, ಇವರಲ್ಲಿ ೧೯೯೪೦೫ (ಶೇ.೯೬.೨೧) ಹಿಂದೂಗಳು, ೭೨೭೮ (ಶೇ.೩.೫೧) ೧೮೩(ಶೇ.೦.೦೮೮) ಕ್ರಿಶ್ಚಿಯನ್ನರು ೩೮ (ಶೇ.೦.೦೧೮) ಸಿಖ್ಖರು, ೧೨ (ಶೇ.೦.೦೦೫೭) ಬೌದ್ಧರು, ೧೯೧ (ಶೇ.೦.೦೯೨) ೦೭ (ಶೇ.೦.೦೦೩೩) ಇತರೆ ಧರ್ಮೀಯರು ಹಾಗೂ ೧೪೬ (ಶೇ.೦.೦೭೦) ಧರ್ಮವನ್ನು ತಿಳಿಸದವರಿದ್ದರು.

೨೦೧೧ರ ಜನಗಣತಿಯಂತೆ ೨೦೭೨೬೦ ಜನಸಂಖ್ಯೆ ಇದ್ದು, ಇವರಲ್ಲಿ ೧೯೯೪೦೫(ಶೇ.೯೬.೦೨) ಹಿಂದುಗಳು, ೭೨೭೮ (ಶೇ.೩.೫೧) ಮುಸ್ಲೀಮರು, ೧೮೩ (ಶೇ.೦.೦೮೮) ಕ್ರೈಸ್ತರು, ೩೮(ಶೇ.೦.೦೧೮) ಸಿಖ್ಖರು, ೧೨(ಶೇ.೦.೦೦೫೭) ಬೌದ್ಧರು, ೧೯೧ (ಶೇ.೦.೦೯೨) ಜೈನರು, ೭ (ಶೇ.೦.೦೦೩೩) ಇತರೆ ಧರ್ಮೀಯರು ಹಾಗೂ ೧೪೬(ಶೇ.೦.೦೭೦) ಧರ್ಮವನ್ನು ತಿಳಿಸದವರಿದ್ದರು.

ತಾಲ್ಲೂಕಿನಲ್ಲಿ ಹಿಂದು, ಜೈನ, ಇಸ್ಲಾಂ, ಕ್ರೈಸ್ತ ಧರ್ಮಗಳು ಆಚರಣೆಯಲ್ಲಿವೆ. ಈ ಧರ್ಮಗಳು ಸಹಬಾಳ್ವೆ, ಸಾಮರಸ್ಯದಿಂದ ಪ್ರಾಚೀನ ಕಾಲದಿಂದಲೂ ಸಹಜೀವನ ನಡೆಸುತ್ತಿದ್ದಾರೆ. ೨೦೧೧ರ ಜನಗಣತಿಯಂತೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ವಿವಿಧ ಧರ್ಮೀಯರ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**೨೦೧೧ ರ ಜನಗಣತಿಯಂತೆ ಹೊಳಲ್ಕೆರೆ ತಾಲ್ಲೂಕಿನಲ್ಲಿದ್ದ**

**ವಿವಿಧ ಧರ್ಮೀಯರ ವಿವರ**

| | ಧರ್ಮ | ಒಟ್ಟು ಜನಸಂಖ್ಯೆ | ಪುರುಷ | ಮಹಿಳೆ |
|---|---|---|---|---|
| ಒಟ್ಟು | ಒಟ್ಟು | ೨,೦೭,೨೬೦ | ೧,೦೪,೯೯೨ | ೧,೦೨,೨೬೮ |
| | ಹಿಂದೂ | ೧,೯೯,೪೦೫ | ೧,೦೧,೦೨೦ | ೯೮,೩೮೫ |
| | ಮುಸ್ಲಿಂ | ೭,೨೭೮ | ೩,೬೫೯ | ೩,೬೧೯ |
| | ಕ್ರೈಸ್ತ | ೧೮೩ | ೯೯ | ೮೪ |
| | ಸಿಖ್ | ೩೮ | ೨೨ | ೧೬ |
| | ಬೌದ್ಧ | ೧೨ | ೮ | ೪ |
| | ಜೈನ್ | ೧೯೧ | ೧೦೧ | ೯೦ |
| | ಇತರೆ ಧರ್ಮಗಳು | ೭ | ೫ | ೨ |
| | ಧರ್ಮವನ್ನು ತಿಳಿಸದವರು | ೧೪೬ | ೭೮ | ೬೮ |
| | ಒಟ್ಟು | ೧,೮೫,೨೪೧ | ೯೩,೯೬೪ | ೯೧,೨೭೭ |

| | | | | |
|---|---|---|---|---|
| ಗ್ರಾಮೀಣ | ಹಿಂದೂ | ೧,೮೨,೦೫೧ | ೯೨,೩೪೨ | ೮೯,೨೦೯ |
| | ಮುಸ್ಲಿಂ | ೨,೮೫೯ | ೧,೪೪೦ | ೧,೪೧೯ |
| | ಕ್ರೈಸ್ತ | ೧೦೭ | ೫೬ | ೫೧ |
| | ಸಿಖ್ | ೨೩ | ೧೫ | ೮ |
| | ಬೌದ್ಧ | ೧೨ | ೮ | ೪ |
| | ಜೈನ್ | ೬೮ | ೩೬ | ೩೨ |
| | ಇತರೆ ಧರ್ಮಗಳು | ೦ | ೦ | ೦ |
| | ಧರ್ಮವನ್ನು ತಿಳಿಸದವರು | ೧೨೧ | ೬೭ | ೫೪ |
| ನಗರ | ಒಟ್ಟು | ೨೨,೦೧೯ | ೧೧,೦೨೮ | ೧೦,೯೯೧ |
| | ಹಿಂದೂ | ೧೭,೩೫೪ | ೮,೬೭೮ | ೮,೬೭೬ |
| | ಮುಸ್ಲಿಂ | ೪,೪೧೯ | ೨,೨೧೯ | ೨,೨೦೦ |
| | ಕ್ರೈಸ್ತ | ೭೬ | ೪೩ | ೩೩ |
| | ಸಿಖ್ | ೧೫ | ೭ | ೮ |
| | ಬೌದ್ಧ | ೦ | ೦ | ೦ |
| | ಜೈನ್ | ೧೨೩ | ೬೫ | ೫೮ |
| | ಇತರೆ ಧರ್ಮಗಳು | ೭ | ೫ | ೨ |
| | ಧರ್ಮವನ್ನು ತಿಳಿಸದವರು | ೨೫ | ೧೧ | ೧೪ |

**ಆಧಾರ: ೨೦೧೧ ರ ಜನಗಣತಿ**

## ಹಿಂದೂಧರ್ಮ

ಹಿಂದೂಗಳು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ನೆಲೆಸಿದ್ದಾರೆ. ಹಿಂದೂ ಎಂಬ ಪದವು ಸಿಂಧೂ ಪದದ ಮೂಲದಿಂದ ಉಗಮವಾಗಿದ್ದು, ಜಗತ್ತಿನ ಧರ್ಮಗಳ ಪೈಕಿ, ಸನಾತನ ಅಥವಾ ಪ್ರಾಚೀನ ಧರ್ಮವೆಂದು ಜನಪ್ರಿಯವಾಗಿದೆ. ಹಿಂದೂ ಧರ್ಮವು ಕೇವಲ ಪ್ರವಾದಿಯಿಂದ ಪ್ರತಿಪಾದಿತವಾಗಿರದೇ ಹಲವಾರು ಋಷಿಮುನಿಗಳ ಆಧ್ಯಾತ್ಮಿಕ ಅನುಭವದ ಫಲವಾಗಿ ಅನಾದಿಕಾಲದಿಂದಲೂ ಆಚರಣೆಗೆ ಬಂದುದರಿಂದ ಈ ಧರ್ಮಕ್ಕೆ ಸನಾತನ ಧರ್ಮವೆಂದೂ ಕರೆಯುತ್ತಾರೆ.

ವೇದಗಳನ್ನು ಅಪೌರುಷೇಯವೆಂದು ಪರಿಗಣಿಸಲಾಗಿದ್ದು, ದೇವಾನುದೇವತೆಗಳಿಂದ ಮೌಖಿಕವಾಗಿ ಬಂದಿತೆಂಬ ಅಭಿಪ್ರಾಯವೂ ಹಿಂದೂಗಳಲ್ಲಿದೆ. ಕೆಲವು ವಿದ್ವಾಂಸರ ಪ್ರಕಾರ ಹಿಂದೂ ಧರ್ಮವು ಕೇವಲ ಆಧ್ಯಾತ್ಮಗಳಿಂದ ಕೂಡಿದ ಧರ್ಮವಾಗಿರದೇ ಹೆಚ್ಚಾಗಿ ಮನುಕುಲದ ಉನ್ನತ ಆದರ್ಶಗಳನ್ನೊಳಗೊಂಡ ಜೀವನ ಮಾರ್ಗವಾಗಿದೆ.

ಹಿಂದೂ ಧರ್ಮದ ಮುಖ್ಯ ಪಂಥಗಳನ್ನು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಎಂದು ಕರೆಯಬಹುದು. ಕ್ರಿ.ಶ.೮ನೇ ಶತಮಾನದಲ್ಲಿ ಕೇರಳದ ಕಾಲಟಿಯಲ್ಲಿ ಜನಿಸಿದ ಆದಿಶಂಕರಚಾರ್ಯರು **"ಅದ್ವೈತ"** ಮತವನ್ನು ಪ್ರತಿಪಾದಿಸಿದರು. ಇವರು ಪ್ರಥಮಬಾರಿಗೆ ಆತ್ಮನಲ್ಲೇ ಪರಮಾತ್ಮನು ಅಸ್ತಿತ್ವದಲ್ಲಿರುವುದರಿಂದ **"ಅಹಂ ಬ್ರಹ್ಮಸ್ಮಿನ್" "ತತ್ವಮಸಿ"** ತತ್ವಗಳನ್ನು ಅದ್ವೈತಗಳನ್ನು ಭೋಧಿಸಿದರು.

ಆಕಾಶದಿಂದ ಭೂಮಿಗೆ ಬಿದ್ದ ಸಹಸ್ರಾರು ಮಳೆಯ ಹನಿಗಳು ಏಕರೂಪವಾಗಿ ಹರಿದು ಸಾಗರಕ್ಕೆ ಸೇರುವಂತೆ ಸರ್ವಶಕ್ತನಾದ ಬ್ರಹ್ಮನೊಬ್ಬನೇ ಸತ್ಯ, ಜಗತ್ತು ಮಿಥ್ಯ ಹಾಗೂ ಪುನರ್‌ಜನ್ಮವೂ ಸಹಜವಾದ ಪ್ರಕ್ರಿಯೆಂದು ಪ್ರತಿಪಾದಿಸಿದ ಕಾರಣ ಈ ಪಂಥಕ್ಕೆ 'ಅದ್ವೈತ' ಎಂಬ ಹೆಸರು ರೂಢಿಗೆ ಬಂದಿದೆ. ಎಲ್ಲಾ ಆತ್ಮರೂ ಏಕ ರೀತಿಯ ಮೋಕ್ಷವನ್ನು ಪಡೆಯುವರು-ಎಂಬುದು ಆದಿಶಂಕರಾಚಾರ್ಯರ ಅಭಿಪ್ರಾಯವಾಗಿತ್ತು.

ಕ್ರಿ.ಶ.೧೧ನೇ ಶತಮಾನದಲ್ಲಿ ತಮಿಳುನಾಡಿನ ಶ್ರೀ ಪೆರಂಬೂರಿನಲ್ಲಿ ಜನಿಸಿದ ರಾಮಾನುಜಾ ಚಾರ್ಯರು ಬ್ರಹ್ಮನು 'ಚಿತ್' ಮತ್ತು 'ಸಚಿತ್' ಎಂಬ ವಿಶೇಷವಾದ ಗುಣಗಳನ್ನು ಹೊಂದಿರುವುದರಿಂದ ಆತನ ಸಾಕ್ಷಾತ್ಕಾರವು ಸಾಧ್ಯವೇ ಹೊರತು ಆತನೊಂದಿಗೆ ಮಿಲನ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದರು. ಈ ಪಂಥಕ್ಕೆ **"ವಿಶಿಷ್ಟಾದ್ವೈತ"** ವೆಂದು ಕರೆದರು. ಅದರ ಹಿಂಬಾಲಕರನ್ನು ಶ್ರೀವೈಷ್ಣವರೆಂದು ಪರಿಗಣಿಸಲಾಯಿತು. ಶ್ರೀವೈಷ್ಣವರಲ್ಲಿ ಆತ್ಮನು ಸ್ವಯಂ ಸಾಧನೆಯಿಂದ ಬ್ರಹ್ಮಜ್ಞಾನವನ್ನು ಪಡೆಯುವುದರ ಮೂಲಕ ಮೋಕ್ಷವನ್ನು ಗಳಿಸಬಹುದೆಂದು ರಾಮಾನುಜಾಚಾರ್ಯರು ಪ್ರತಿಪಾದಿಸಿದ್ದಾರೆ.

ಕರ್ನಾಟಕ ಉಡುಪಿ ಬಳಿಯ ಪಾಜಕ ಅಥವಾ ಬೆಳ್ಳೆಯಲ್ಲಿ ಜನ್ಮತಾಳಿದ ಮದ್ವಚಾರ್ಯರು ಆತ್ಮ ಮತ್ತು ಪರಮಾತ್ಮರ ನಡುವೆ ಇರುವ ಪಂಚಭೇದ ತಾರತಮ್ಯಗಳನ್ನು ಪ್ರತಿಪಾದಿಸಿದರು. ಈ ಕಾರಣದಿಂದಾಗಿ ಈ ಪಂಥಕ್ಕೆ 'ದ್ವೈತಮತ'ವೆಂದು ಕರೆಯಲಾಯಿತು. ಈ ಪಂಥದ ಪ್ರಕಾರ ಆತ್ಮ ಪರಮಾತ್ಮನ ಸಂಬಂಧಗಳು ಸಂಪೂರ್ಣವಾಗಿ ದಾಸತ್ವದ ಸಂಕೇತವಾಗಿದ್ದ ಸರ್ವಶಕ್ತನಾದ ವಿಷ್ಣುವಿನ ಹರಿ ಸರ್ವೋತ್ತಮತ್ವವನ್ನು ಮಧ್ವಾಚಾರ್ಯರು ಭೋಧಿಸಿರುವರು. ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ಅವನ ಮಟ್ಟಿಗೆ ಜ್ಞಾನ ಪರಿಪೂರ್ಣತೆಯನ್ನು ಹೊಂದಿರುತ್ತಾನೆ.

ಯಾವುದೇ ಕಾರಣಕ್ಕೂ ಸರ್ವಗುಣ ಪರಿಪೂರ್ಣನಾದ ಬ್ರಹ್ಮನು ಆತ್ಮನಿಗೆ ಸಮನಾಗುವುದಿಲ್ಲ. ಆತ್ಮನು ಇಹ ಮತ್ತು ಪರಲೋಕಗಳಲ್ಲಿ ಪರಮಾತ್ಮನ ಅಧೀನನಾಗಿರುತ್ತಾನೆಂಬ ದಾಸತ್ವಭಾವವನ್ನು ಪ್ರಥಮವಾಗಿ ಪ್ರತಿಪಾದಿಸಿದರೂ ಆಯಾ ವ್ಯಕ್ತಿಯ ಸಾಧನೆಯ ಮೇರೆಗೆ ಯೋಗ್ಯತಾನುಸಾರ ಮೋಕ್ಷವು ಲಭಿಸುತ್ತದೆಂದೂ ಭೋಧಿಸಿದರು. ದ್ವೈತ ಧರ್ಮವು ದೃಢವಾಗಿ ಹೊಂದಿದ್ದ ದಾಸತ್ವಮನೋಭಾವದ ಫಲವಾಗಿ ಹರಿದಾಸ ಸಾಹಿತ್ಯವು ವಿಫುಲವಾಗಿ ಕರ್ನಾಟಕದಲ್ಲಿ ಬೆಳೆದುಬಂದಿತು. ಈ ಮೂರು ಪಂಥಗಳು ಸಂಪೂರ್ಣವಾಗಿ ಪ್ರಾಚೀನ ಧಾರ್ಮಿಕ ಗ್ರಂಥಗಳಾದ ವೇದ, ಉಪನಿಷತ್ತು, ಅರಣ್ಯಕ, ಬ್ರಾಹ್ಮಣ, ರಾಮಾಯಣ, ಮಹಾಭಾರತ, ಭಗವದ್ಗೀತೆ ಇತ್ಯಾದಿಗಳ ಆಧ್ಯಾತ್ಮಿಕ ಅಧ್ಯಯನದ ಪ್ರತಿರೂಪಗಳಾಗಿದ್ದು ಹಿಂದೂ ಧರ್ಮದ ಆಧ್ಯಾತ್ಮಿಕ ಬೆಳವಣಿಗೆಗೆ ದಾರಿದೀಪಗಳಾಗಿವೆ.

ವೀರಶೈವ ಲಿಂಗಾಯಿತ ಧರ್ಮವು ಹಿಂದೂ ಧರ್ಮದಲ್ಲಿ ಅಡಕವಾಗಿದ್ದ ಸತ್ವಸಾರಗಳನ್ನು ಸ್ಥಳೀಯ ಮತ್ತು ಸರಳವಾದ ಕನ್ನಡ ಭಾಷೆಯಲ್ಲಿ ಬೋಧಿಸಿದ ಕಾರಣ ಜನಪ್ರಿಯವಾಯಿತು. ವೀರಶೈವ ಲಿಂಗಾಯಿತ ಧರ್ಮವು ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ನೀತಿಬೋಧನೆಗಳಿಂದ ಆಧ್ಯಾತ್ಮಿಕ ವಿಚಾರಗಳು ಸಂಸ್ಕೃತ ಭಾಷೆಗೆ ಬದಲಾದ ಸರಳ ಕನ್ನಡ ಭಾಷೆಯಲ್ಲಿದ್ದು, ಕರ್ನಾಟಕದಲ್ಲಿ ಮಾತ್ರವಲ್ಲದೇ ಭಾರತದ ಇತರೆ ಪ್ರದೇಶಗಳಿಗೂ ಪಸರಿಸಿತು. ಈ ಧರ್ಮದಲ್ಲಿ ಬೆಳೆದು ಬಂದ ವಚನ ಸಾಹಿತ್ಯವು ಕನ್ನಡ ಭಾಷೆ ಮತ್ತು ಸಾಹಿತ್ಯದ ಉತ್ತಮ ಅಭಿವೃದ್ಧಿಗೆ ಕಾರಣವಾಯಿತೆಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ.

ಹೊಳಲ್ಕೆರೆ ತಾಲ್ಲೂಕು ಸಹ ಇತರೆಡೆಗಳಂತೆ ಪ್ರಾಗೈತಿಹಾಸ ಕಾಲದಿಂದಲೂ ಜನಪದೀಯ ಧರ್ಮದ ತಳಹದಿಯ ಮೇಲೆ ರೂಪಿತವಾಗಿದ್ದರೂ ಕಾಲಾಂತರದಲ್ಲಿ ಇತರ ಧರ್ಮಗಳ ಪ್ರಭಾವಕ್ಕೂ ಒಳಗಾಗಿದೆ. ಹೊಳಲ್ಕೆರೆ ತಾಲ್ಲೂಕಿನ ವಿಚಾರಗಳನ್ನು ಹೇಳುವಾಗ ಮರೆಯದೆ ದಾಖಲಿಸಬೇಕಾದ ವಿಚಾರವೆಂದರೆ ಆರ್ ನೂಲೇನೂರ್‌ನಲ್ಲಿರುವ ಶರಣ ನುಲಿಯಚಂದಯ್ಯನ ಮಹಾಸಮಾಧಿ. ಅಲ್ಲಿ ಪ್ರತಿ ವರ್ಷವೂ ವಿಶೇಷ ಕಾರ್ಯಗಳು ನಡೆಯುತ್ತಿವೆ. ಈ ತಾಲ್ಲೂಕು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಎಂದೂ ಧಾರ್ಮಿಕ ಘರ್ಷಣೆಗಳನ್ನು ಕಾಣದೆ ಸಹಬಾಳ್ವೆಯ ಧರ್ಮಸಮನ್ವಯದ ಪ್ರದೇಶವಾಗಿದೆ.

**ಇಸ್ಲಾಂ**

ಮಹಮ್ಮದ್ ಪೈಗಂಬರ್‌ನಿಂದ ಸ್ಥಾಪಿಸಲ್ಪಟ್ಟ ಇಸ್ಲಾಂ ಧರ್ಮವು ಕಡಲತೀರದ ಮೂಲಕ ಪ್ರವೇಶಿಸಿ ನಂತರ ರಾಜ್ಯದ ಇತರೆ ಭಾಗಗಳಲ್ಲಿ ವ್ಯಾಪಿಸಿತು. ಮುಸ್ಲಿಮರ ಮನೆಮಾತು ಉರ್ದು ಆಗಿದೆ. ಮಸೀದಿ, ದರ್ಗಾ, ಮದರಸಾಗಳಿದ್ದು, ಭರಮಣ್ಣ ನಾಯಕನ ದುರ್ಗದಲ್ಲಿ ಪ್ರತಿ ವರ್ಷವೂ ಮುಸ್ಲಿಂ ಬಾಂಧವರು ನಡೆಸುವ ಉರುಸ್

ತುಂಬಾ ಪ್ರಸಿದ್ಧವಾಗಿದೆ. ಇದು ಹಿಂದೂ ಮುಸ್ಲಿಮರ ಭಾವೈಕ್ಯತೆಗೆ ನಾಂದಿಯಾಗಿದೆ. ತುಂಬಾ ದೂರದಿಂದಲೂ ಸುತ್ತಮುತ್ತಲಿನ ಮುಸ್ಲಿಮರು ವಿಶೇಷವಾಗಿ ಸೇರಿ ತಮ್ಮ ತಮ್ಮ ಹರಕೆಗಳನ್ನು ಸಲ್ಲಿಸುತ್ತಿದ್ದು, ಧಾರ್ಮಿಕವಾಗಿ ತುಂಬಾ ನಂಬಿಕೆಯುಳ್ಳವರಾಗಿದ್ದರು.

### ಜೈನ ಧರ್ಮ

ಹೊಳಲ್ಕೆರೆಯು ನಾಡಿನ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನ ಧರ್ಮವು ಹತ್ತನೆಯ ಶತಮಾನದಲ್ಲಿ ಪೊಳಲಕೆರೆ ಎಂಬ ಹೆಸರಿನಲ್ಲಿ ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತು. ತಾಲ್ಲೂಕಿನಲ್ಲಿ ಜೈನಧರ್ಮದ ಶಾಂತಿನಾಥ ಬಸದಿ ಇದೆ. ಜೈನ ಧರ್ಮದ ಅವಲಂಬಿಗಳು ತಾಲ್ಲೂಕು ಕೇಂದ್ರ ಹಾಗೂ ತಾಲ್ಲೂಕಿನ ಇತರ ಭಾಗಗಳಲ್ಲಿ ನೆಲೆಸಿರುವರು.

### ಕ್ರೈಸ್ತ ಧರ್ಮ

ಪೋರ್ಚುಗೀಸರ ಆಗಮನದೊಂದಿಗೆ ಕ್ರೈಸ್ತ ಧರ್ಮವು ಕರ್ನಾಟಕವನ್ನು ೧೬ನೇ ಶತಮಾನದಲ್ಲಿ ಪ್ರವೇಶಿಸಿತು. ತಾಲ್ಲೂಕಿನಲ್ಲಿ ಕ್ರೈಸ್ತರು ವಿರಳವಾಗಿ ನೆಲಸಿದ್ದು ತಾಲ್ಲೂಕು ಕೇಂದ್ರ ಹೊಳಲ್ಕೆರೆ ಸೇರಿದಂತೆ ಇತರೆಡೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ.

### ಬೌದ್ಧ ಧರ್ಮ

ಪ್ರಾಚೀನ ಕಾಲಕ್ಕೆ ಸೇರಿದ ಬೌದ್ಧ ಕುರುಹುವಿಗೆ ಲೋಕದೊಳಲು ಬೌದ್ಧರ ಕಾಲದ ಲೋಕನಾಥನ ಅಥವಾ ಅವಲೋಕೇಶನ ಹೆಸರು ಈ ಊರಿಗೆ ಬಂದಿದೆ ಎಂದು ಇತಿಹಾಸಗಾರರ ಅಭಿಪ್ರಾಯವಾಗಿದೆ. ಈ ತಾಲ್ಲೂಕಿನಲ್ಲಿ ೨೦೧೧ರಲ್ಲಿ ಜನಗಣತಿಯಂತೆ ೧೨ ಮಂದಿ ಬೌದ್ಧ ಧರ್ಮೀಯರು ಇದ್ದಾರೆ. ಇವರಲ್ಲಿ ಎಂಟು ಮಂದಿ ಪುರುಷರು ಹಾಗೂ ನಾಲ್ಕು ಮಂದಿ ಮಹಿಳೆಯರಿದ್ದರು.

### ಮಠಗಳು

ತಾಲ್ಲೂಕಿನ ಭಕ್ತ ವರ್ಗದವರು ಸನ್ಮಾರ್ಗದಲ್ಲಿ ಸಾಗಲು ಸ್ಫೂರ್ತಿ, ಪ್ರೇರಣೆ, ಮಾರ್ಗದರ್ಶನ ನೀಡುವುದು ಮಠಗಳ ಮೂಲಭೂತ ಕರ್ತವ್ಯವಾಗಿದೆ. ಆರ್ ನೂಲೇನೂರಿನಲ್ಲಿ ೧೨ನೇ ಶತಮಾನದ ಬಸವಣ್ಣನವರ ಸಮಕಾಲೀನರಾದ ನುಲಿಯ ಚಂದಯ್ಯನವರ ಸಮಾಧಿ ಇದೆ. ಇಲ್ಲಿ ಶಿವಾನುಭವ ಶಿಬಿರ ನಡೆಯುತ್ತದೆ ದಾಸೋಹವಿರುತ್ತದೆ. ನಂದಿ ಜಾತ್ರೆ ವಿಶೇಷವಾಗಿ ನಡೆಯುತ್ತದೆ. ಇಲ್ಲಿ ದತ್ತಾಶ್ರಮ ಕೂಡ ಇದೆ. ಕಾರ್ತಿಕ ಮಾಸದಲ್ಲಿ ಸಪ್ತಾಹ ಕಾರ್ಯಕ್ರಮ ನಡೆಯುತ್ತದೆ. ದತ್ತಾಶ್ರಮ ಗುರುಗಳಾಗಿದ್ದ ಶ್ರೀಮೂರ್ತಿಗಳು ಆಶ್ರಮ ಸ್ಥಾಪಿಸಿ ಆನೇಕ ಧಾರ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ. ನಾಡಿನ ವೀರಶೈವ ಪ್ರಸಿದ್ಧ ಮಹಾಸಂಸ್ಥಾನ ಪೀಠಾಧಿಪತಿಯಾಗಿ ಇಡೀ

ಸಮಾಜವನ್ನು ಉತ್ತುಂಗಕ್ಕೆ ಕೊಂಡೊಯ್ದ ಸಿರಿಗೆರೆ ತರಳಬಾಳು ಬೃಹನ್ಮಠದ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಪೂರ್ವಾಶ್ರಮದ ಜನ್ಮಸ್ಥಳ ಮುತ್ತುಗದೂರು. ವೀರಶೈವ ಮಠಗಳ ಪರಂಪರೆಗಳಲ್ಲಿ ಲಿಂಗೈಕ್ಯ ಶ್ರೀಗಳು ವಿಶಿಷ್ಟ ಸಾಧನೆ ಮಾಡಿದವರು. ಇವರು ದಿ:೨೪-೦೯-೧೯೯೨ರಲ್ಲಿ ದೈವಾಧೀನರಾದರು. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಹೊಳಲ್ಕೆರೆ ತಾಲ್ಲೂಕಿನಾದ್ಯಂತ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದ್ದಾರೆ. ಶರಣ ಸತಿ ಲಿಂಗ ಪತಿ, ವಿಶ್ವಬಂಧು ಮರುಳ ಸಿದ್ಧ, ಮರಣವೇ ಮಹಾ ನವಮಿ, ಮುಂತಾದ ನಾಟಕಗಳನ್ನು ಅಣ್ಣಬಸವಣ್ಣ ಎಂಬ ಸಂಶೋಧನಾ ಗ್ರಂಥವನ್ನು "ದಿಟ್ಟಹೆಜ್ಜೆ ಧೀರಕ್ರಮ" ಎನ್ನುವ ಆತ್ಮಚರಿತ್ರೆಯನ್ನು ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ವರ್ಷಕ್ಕೊಮ್ಮೆ ವಿವಿಧ ಪ್ರದೇಶಗಳಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಆಚರಿಸುವ ಮೂಲಕ ರಾಷ್ಟ್ರೀಯ ಭಾವೈಕ್ಯತೆ ಸಾಧಿಸಿದ್ದಾರೆ. ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಅಮರರೆನಿಸಿದ್ದಾರೆ. ಹೊಳಲ್ಕೆರೆಯಲ್ಲಿ ಪಶುವೈದ್ಯ ಆಸ್ಪತ್ರೆಯನ್ನು ಕಟ್ಟಲು ಆರ್ಥಿಕ ನೆರವು ನೀಡಿ ಜಾನುವಾರುಗಳ ಆರೋಗ್ಯ ಸುಧಾರಣೆಗೆ ಕಾರಣ ಕರ್ತರಾಗಿದ್ದಾರೆ.

ಐತಿಹಾಸಿಕ ಚಿತ್ರದುರ್ಗ ಮುರುಘಾಮಠದ ಹಿರಿಯ ಲಿಂಗೈಕ್ಯ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘಾ ರಾಜೇಂದ್ರ ಸ್ವಾಮಿಗಳವರ ಸಮಾಧಿ ಪಟ್ಟಣದ ಹೊರವಲಯದಲ್ಲಿರುವ ಶ್ರೀ ಒಂಟಿಕಂಬ ಮಠದ ಆವರಣದಲ್ಲಿದೆ. ನಿಸರ್ಗ ಧಾಮದಂತಿರುವ ಈ ಕೇಂದ್ರಕ್ಕೆ ದಿನನಿತ್ಯ ಸಾವಿರಾರು ಭಕ್ತರು, ಪ್ರವಾಸಿಗರು, ಭೇಟಿ ನೀಡುವುದರಿಂದ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿದೆ.

ತಾಲ್ಲೂಕಿನ ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿಗಳು ಯಾವುದೇ ಜಾತಿ ಮತಗಳ ಬೆಂಬಲವಿಲ್ಲದೆ ಜೋಳಿಗೆ ಹಿಡಿದು ಭಿಕ್ಷೆಬೇಡಿ ತಂದ ಹಣದಿಂದ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ಗ್ರಾಮಾಂತರ ಪ್ರದೇಶದ ಬಡಜನರಿಗೆ ಶಿಕ್ಷಣ ನೀಡಿದ್ದಾರೆ. ಲಕ್ಷಾಂತರ ಬಡ ರೋಗಿಗಳಿಗೆ ಔಷಧಿ ನೀಡಿದ್ದಾರೆ. ದೇಶ ವಿದೇಶಗಳ ನಾಗರೀಕರಿಗೆ ಪತಂಜಲಿ ಯೋಗವನ್ನು ಕಲಿಸಿ ಅಂತರಾಷ್ಟ್ರೀಯ ಮಟ್ಟದ ಖ್ಯಾತಿ ಪಡೆದು ಅಮರರಾಗಿದ್ದಾರೆ. ಇವರಿಗೆ ಸೂರದಾಸ್‌ಜೀ ಬೆನ್ನೆಲುಬಾಗಿದ್ದರು. ತಿರುಕರು ಕಾವ್ಯನಾಮದ ಮೂಲಕ ನಾಟಕ, ಕಾದಂಬರಿ, ಕೃತಿಗಳನ್ನು ರಚಿಸಿದ್ದಾರೆ. ಈಗ ಚಿತ್ರದುರ್ಗದ ಮುರುಘಾಮಠದ ಆಶ್ರಯದಲ್ಲಿ ಕಾರ್ಯಚಟುವಟಿಕೆಗಳು ನಡೆಯುತ್ತಿವೆ.

**ಪ್ರಮುಖ ಜಾತಿ ಹಾಗೂ ಬುಡಕಟ್ಟು ಸಮುದಾಯಗಳು**

ಮಧ್ಯಕಾಲೀನ ಇತಿಹಾಸ ಕಾಲದಲ್ಲಿ ವರ್ಣಾಶ್ರಮ ವ್ಯವಸ್ಥೆಗೆ ಆಳುವ ಪ್ರಭುಗಳು ಮತ್ತು ವರ್ತಕರ ಬೆಂಬಲವಿರುತ್ತಿತ್ತು. ಬ್ರಾಹ್ಮಣರು ವಿವಿಧ ರೀತಿಯ ಷಟ್ಕರ್ಮಗಳನ್ನು ಮಾಡುತ್ತಿದ್ದು ಜ್ಯೋತಿಷಿಗಳೂ ಕರಣಿಕರೂ ಆಗಿರುತ್ತಿದ್ದರು.

ಬ್ರಾಹ್ಮಣ ವರ್ಗದ ನಂತರ ಆಳುವ ವರ್ಗದವರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಂಡಿದ್ದರು. ವರ್ಣವ್ಯವಸ್ಥೆಯಲ್ಲಿ ಕ್ಷತ್ರಿಯರೆಂಬ ಪ್ರತ್ಯೇಕವಾದ ಜಾತಿ ಇರಲಿಲ್ಲ. ಬೇರೆ ಬೇರೆ ಜಾತಿಯಿಂದ ಬಂದವರು ಆಳುವ ವರ್ಗದಲ್ಲಿದ್ದರು, ಇವರು ಸ್ವಸಾಮರ್ಥ್ಯದಿಂದ ರಾಜ್ಯವನ್ನು ಕಟ್ಟಿದ ಸಂದರ್ಭದಲ್ಲಿ ಪುರೋಹಿತ ವರ್ಗ ಶಾಸ್ತ್ರೀಯವಾಗಿ ಅಂತಹ ಮನೆತನಗಳಿಗೆ ಮನ್ನಣೆ ಕೊಟ್ಟಾಗ ಅದು ಕ್ಷತ್ರಿಯವರ್ಣದ ಸ್ಥಾನಮಾನ ಪಡೆದುಕೊಳ್ಳುತ್ತಿತ್ತು. ಆಗ ಅವರು ತಮ್ಮ ಹೆಸರಿನ ಮುಂದೆ ಒಡೆಯ, ಅರಸ, ಪ್ರಭು, ನಾಯಕ ಎಂದು ಇತ್ಯಾದಿ ಸ್ಥಾನ ಸೂಚಕ ಪದಗಳನ್ನು ಸೇರಿಸಿಕೊಳ್ಳುತ್ತಿದ್ದರು.

ಸಮಾಜದ ಮೂರನೇಯ ಶ್ರೇಣಿಗೆ ವ್ಯಾಪಾರ ಸೇರಿತ್ತು. ಹೊಳಲ್ಕೆರೆ ತಾಲ್ಲೂಕಿನಲ್ಲಿ ವೈಶ್ಯರು, ಶೆಟ್ಟರು, ಬಣಜಿಗರು, ಶ್ರೇಷ್ಠಿಗಳು ಮುಂತಾದವರಿದ್ದು, ಇವರು ಯಾವ ಯಾವ ವಸ್ತುಗಳನ್ನು ಮಾರುತ್ತಾರೆ ಎಂಬುದರ ಮೇಲೆ ಇವರಿಗೆ ಬೇರೆ ಬೇರೆ ಹೆಸರು ಇರುತ್ತದೆ. ಉಪ್ಪಲಿಂಗಶೆಟ್ಟರು ಉಪ್ಪು ಮಾರುವವರು, ಚಿನ್ನ ಬೆಳ್ಳಿ ಮುತ್ತುರತ್ನ ವಜ್ರವೈಡೂರ್ಯಗಳನ್ನು ಮಾರುವವರು ಶ್ರೇಷ್ಠಿಗಳಾದರು. ದವಸಧಾನ್ಯಗಳನ್ನು, ಬಟ್ಟೆ ಬರೆಗಳನ್ನು ಮಾರುವವರು ವೈಶ್ಯರಾದರು, ಗೃಹೋಪಯೋಗಿ ವಸ್ತುಗಳನ್ನು ಮಾರುವವರು ಶೆಟ್ಟರಾದರೆ, ಅರಿಶಿಣ ಕುಂಕುಮ, ಮಣಿ, ಕಾಚು, ಬಳೆ ಮುಂತಾದವುಗಳನ್ನು ಮಾರುವವರು ಬಣಜಿಗರೆನಿಸಿಕೊಂಡರು.

ಸಮಾಜದ ನಾಲ್ಕನೇಯ ಶ್ರೇಣಿ ಶೂದ್ರರದು. ಈ ವರ್ಗಕ್ಕೆ ವೀರಶೈವ, ಒಕ್ಕಲಿಗ, ಕುರುಬ, ಕುಂಬಾರ, ಉಪ್ಪಾರ, ಅಕ್ಕಸಾಲಿಗ, ತೊರೆಯ ದಲಿತರು ಮುಂತಾದವರು ಸೇರುತ್ತಾರೆ. ಈ ತಾಲ್ಲೂಕಿನಲ್ಲಿ ಗಂಗಡಿಕಾರ ಒಕ್ಕಲಿಗ, ಕುಂಚಿಟಿಗ ಒಕ್ಕಲಿಗ, ನಾಮಧಾರಿಗೌಡ, ದಾಸ ಒಕ್ಕಲಿಗ, ಕುರುಬ, ಉಪ್ಪಾರ, ತೊರೆಯ, ಬೆಸ್ತ, ಮೇದ, ನಾಯಿಂದ, ದೇವಾಂಗ, ಅಗಸ, ಗಾಣಿಗ, ಈಡಿಗ, ಕುಂಬಾರ, ಗೊಲ್ಲ, ಕಂಚುಗಾರ, ಅಕ್ಕಸಾಲಿಗ, ಬಡಗಿ, ಕಲ್ಕುಟಿಗ, ಚಮ್ಮಾರ, ಇತ್ಯಾದಿ ಜಾತಿಗಳ ಜನರಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ಎಡಗೈ ಬಲಗೈ ಎಂಬ ಎರಡು ಪ್ರಭೇಧಗಳವರಿದ್ದಾರೆ.

ಬುಡಕಟ್ಟು ಜನಾಂಗಗಳಲ್ಲಿ ಬೆಟ್ಟ ಕುರುಬ, ಜೇನುಕುರುಬ, ಕಾಡು ಕುರುಬ, ಸೋಲಿಗ, ಊರನಾಯಕ, ಮ್ಯಾಸ ನಾಯಕರಿದ್ದಾರೆ. ರಾಜ್ಯದ ಅಥವಾ ಗ್ರಾಮದ ಯಾವುದೇ ಸಾಮಾಜಿಕ ಅಥವಾ ಯಾವುದೇ ಸಮಸ್ಯೆಗಳನ್ನು ಚರ್ಚಿಸಲು ಈ ಸಮಾಜವು ಎಲ್ಲಾ ಜಾತಿಯ ಮುಖಂಡರು ಚಾವಡಿಗಳಲ್ಲಿ ಸೇರಿ ತೀರ್ಮಾನ ಕೈಗೊಳ್ಳುವ ಪದ್ಧತಿ ರೂಢಿಯಲ್ಲಿತ್ತು.

ಹಿಂದುಳಿದ ವರ್ಗಗಳ ಆಯೋಗಗಳು ಸಮೀಕ್ಷೆ ನಡೆಸಿ ಜಾತಿವಾರು ಜನಸಂಖ್ಯೆ ವಿವರವನ್ನು ಒದಗಿಸಿವೆ. ತಾಲ್ಲೂಕಿನಲ್ಲಿ ವಾಸಿಸುತ್ತಿರುವ ವಿವಿಧ ಜಾತಿ ಮತ್ತು ಬುಡಕಟ್ಟು ಗಳಿಗೆ ಸೇರಿದ ಜನರ ರೀತಿ ನೀತಿ, ಜೀವನಕ್ರಮ, ಸಂಪ್ರದಾಯ ಹಾಗೂ

ಆಯಾ ಜಾತಿಗಳವರು ಅನುಸರಿಸುವ ವಿವಿಧ ಸಂಸ್ಕಾರಗಳು ಮೊದಲಾದ ಮಾಹಿತಿ ನೀಡಲಾಗಿದೆ.

**ಅಗಸ**

ಮಡಿವಾಳ, ಧೋಬಿ, ಎಂದೆಲ್ಲಾ ಕರೆಯಲ್ಪಡುವ ಇವರು ಸಮಾಜದ ವಿವಿಧ ವರ್ಗದವರಿಗೆ ಬಟ್ಟೆ ಒಗೆದು ಮಡಿ ಮಾಡಿಕೊಡುವ ಸಾಂಪ್ರದಾಯ ವೃತ್ತಿಯವರು. ಊರಹಬ್ಬ ಗ್ರಾಮದೇವತೆಯ ಜಾತ್ರೆ ಸಂದರ್ಭಗಳಲ್ಲಿ ನಡೆಯುವ ಮುಡಿಸೇವೆ, ಪಂಜು ಸೇವೆಗಳನ್ನು ಮಾಡುತ್ತಾರೆ. ಇವರಲ್ಲಿ ಬೆಳ್ಳಿಕುಲ, ನಾಗರಕುಲ, ಸಿದ್ದೇಶ್ವರ ಕುಲ, ಹಬ್ಬೆಕುಲ ಮುಂತಾದ ಒಳಪಂಗಡಗಳಿದ್ದು, ಕನ್ನಡ ಮಾತನಾಡುತ್ತಾರೆ. ಆದರೆ ಇಂದು ಇವರು ಸಾಮಾಜಿಕ ಪರಿವರ್ತನೆಯಿಂದಾಗಿ ಕುಲ ಕಸುಬಿನ ಜೊತೆಗೆ ಇತರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ.

**ಈಡಿಗ**

ಹಳೇ ಪೈಕಾ ಎಂದೂ ಕರೆಯಲ್ಪಡುವ ಇವರದ್ದು ಸೇಂದಿ ಇಳಿಸುವ ಕಾಯಕವಾಗಿದ್ದು, ಇವರಲ್ಲಿ ಸಾಚಾ ಈಡಿಗ, ಬೆಲ್ಲದ ಈಡಿಗ, ಏಣಿ ಈಡಿಗ, ಡುಂಡು ಈಡಿಗ ಮೊದಲಾದ ಪಂಗಡಗಳಿದ್ದು, ನಾಲ್ಕು ಗೋತ್ರಗಳಲ್ಲಿ ಕಾರುಣ್ಯ ಮತ್ತು ವಾತ್ಸಲ್ಯ ಗೋತ್ರವನ್ನು ಸಾಸಿವೆಯವರೆಂದೂ, ಕೌಂಡಿನ್ಯ ಹಾಗೂ ಕೆಮಂಡಲ ಗೋತ್ರದವರನ್ನು ಬೊಡ್ಡೆಯವರೆಂದೂ ಕರೆಯುತ್ತಾರೆ. ಸಾಸಿವೆಯವರು ವಿಷ್ಣು ಆರಾಧಕರಾದರೆ, ಬೊಡ್ಡೆಯವರು ಶಿವಾರಾಧಕರು. ಇವರು ಕಾಟಮೇಶ್ವರ, ಯಲ್ಲಮ್ಮ, ಮಾತಂಗಿ, ಕುಕ್ಕಾಡೇಶ್ವರಿ ಮುಂತಾದ ದೇವರುಗಳನ್ನು ವಿಶೇಷವಾಗಿ ಪೂಜಿಸುತ್ತಾರೆ.

**ಉಪ್ಪಾರ**

ಉಪ್ಪಲಿಗ ಎಂದು ಕರೆಯಲ್ಪಡುವ ಉಪ್ಪಾರರು ತಾಲ್ಲೂಕಿನಲ್ಲಿದ್ದಾರೆ. ಇವರನ್ನು ಮೇಲು ಸಕ್ಕರೆಯವರು, ಸಗರ, ಭಗೀರಥ ವಂಶಜ ಎಂದು ಕರೆಯಲಾಗಿದೆ. ಹಿಂದೆ ಉಪ್ಪು ತಯಾರಿಕೆ ಇವರ ಕುಲ ಕಸುಬಾಗಿದ್ದು, ನಂತರದಲ್ಲಿ ಇಟ್ಟಿಗೆ, ಸುಣ್ಣದ ತಯಾರಿಕೆ, ಕೃಷಿ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ, ಇವರಲ್ಲಿ ಗಾರೆ ಉಪ್ಪಾರ, ಸಾದ ಉಪ್ಪಾರ, ಸುಣ್ಣ ಉಪ್ಪಾರ, ಮೊದಲಾದ ಪಂಗಡಗಳಿವೆ, ಅಗಿಲ, ಆಲೆ, ಆನೆ, ಅರಸು, ಕೆಂಡ ಮುಂತಾದ ಬೆಡಗುಗಳಿದ್ದು, ಅನೇಕ ದೇವರುಗಳನ್ನು ಆರಾಧಿಸುತ್ತಾರೆ.

**ಕುರುಬ**

ಈ ತಾಲ್ಲೂಕಿನಲ್ಲಿ ಕುರುಬ (ಹಾಲು ಮತಸ್ಥರು) ಜನಾಂಗದವರಿದ್ದು, ಕುರಿ ಸಾಕಣೆಯನ್ನು ಕುಲ ಕಸುಬಾಗಿಸಿಕೊಂಡಿದ್ದ ಇವರಿಗೆ ಇಂದು ಉಪಕಸುಬಾಗಿದೆ.

ಕುರುಬರೇ ಅಧಿಕ ಸಂಖ್ಯೆಯಲ್ಲಿರುವ ಗ್ರಾಮಗಳು ತಾಲ್ಲೂಕಿನಲ್ಲಿವೆ. ಇವರಲ್ಲಿ ಹಾಲು– ಹಂಡೆ ಕಂಬಳಿ – ಹಳೆ ಸಾದ ಕುಂಚಿ–ಮುಳ್ಳು ಕುರುಬ ಮುಂತಾದ ಒಳಪಂಗಡಗಳಿದ್ದು, ಅವರು ಕುಲದೇವರಿಗೆ ನಡೆದುಕೊಳ್ಳುವರು. ಪೂಜಾದಿನವನ್ನು ಆಧರಿಸಿ ಬೇಸ್ತವಾರ ದವರು ಹಾಗೂ ಸೋಮವಾರದವರೂ ಎಂದೂ, ಕಂಕಣವನ್ನಾಧರಿಸಿ ಹತ್ತಿ ಕಂಕಣ ದವರು ಹಾಗೂ ಉಣ್ಣೆ ಕಂಕಣದವರು ಎಂದೂ ವರ್ಗೀಕರಿಸಲಾಗಿದೆ.

ಧಾರ್ಮಿಕ ಆಚರಣೆಗಳಲ್ಲಿ ಅವರ ಜಾತಿಯವರೇ ಆದ ಒಡೆಯರು ಪೌರೋಹಿತ್ಯ ವಹಿಸುತ್ತಾರೆ. ಎಲ್ಲಾ ಹಿಂದೂ ದೇವತೆಗಳನ್ನು ಪೂಜಿಸುವ ಇವರು ಮೈಲಾರ, ಬ್ಯಾಟರಾಯ, ಬೀರದೇವರು, ಯಲ್ಲಮ್ಮ ಕುಕ್ಕಾಡೇಶ್ವರಿ, ಲಕ್ಷ್ಮೀ ದೇವಿಯನ್ನು ವಿಶೇಷವಾಗಿ ಪೂಜಿಸುತ್ತಾರೆ. ತಮ್ಮ ದೇವರುಗಳೆಂದು ನಿಗದಿತ ಸಮಯದಲ್ಲಿ ಜಾತ್ರೆ, ಪರಿಷೆಗಳನ್ನು ಸಂಘಟಿಸುತ್ತಾರೆ. ಆ ಸಂದರ್ಭದಲ್ಲಿ ಕವಡೆಗಳಿಂದ ಕೂಡಿದ ಕರಿಯ ಕಂಬಳಿ ಹೊದ್ದು, ತಲೆಗೆ ಕರಡಿ ಚರ್ಮದ ಟೊಪ್ಪಿಗೆ ಧರಿಸಿದ ಮೈಲಾರ ಒಕ್ಕಲಿಗರಾದ ಗೊರವರು ಕೈಯಲ್ಲಿರುವ ವಾದ್ಯ ನುಡಿಸುತ್ತಾ, ಕುಣಿದು ಭಕ್ತಾಧಿಗಳಿಂದ ಕಾಣಿಕೆ ಪಡೆಯುತ್ತಾರೆ. ನೆರೆಯ ಮೈಲಾರದಲ್ಲಿ ಜರಗುವ ಬೀರದೇವರ ಜಾತ್ರೆ ಈ ಜನಾಂಗದ ಪ್ರಮುಖ ಜಾತ್ರೆಯಾಗಿದೆ. ಬೀರದೇವರ ಸಮ್ಮುಖದಲ್ಲಿ ಇವರು ಮಾಡುವ ಡೊಳ್ಳಿನ ಕುಣಿತ ನಾಡಿನ ಪ್ರಸಿದ್ಧ ಜಾನಪದ ಕಲೆಗಳಲ್ಲೊಂದಾಗಿದೆ.

**ಕುಂಬಾರ**

ಗ್ರಾಮೀಣ ಸಮುದಾಯದಲ್ಲಿ ಪ್ರಮುಖ ಜನಾಂಗವಾಗಿದ್ದ ಇವರು ಮಡಕೆ, ಕುಡಿಕೆ, ಹೆಂಚು, ಮುಂತಾದ ಮಣ್ಣಿನ ಸಾಮಗ್ರಿಗಳನ್ನು ಮಾಡುವ ಕಾಯಕದವರಾಗಿದ್ದು, ತಾಲ್ಲೂಕಿನಲ್ಲಿದ್ದಾರೆ. ಆದರೆ ಸ್ಟೀಲ್, ಅಲ್ಯೂಮಿನಿಯಂ, ಇಂಡಾಲಿಯಂ ಹಾಗೂ ಪ್ಲಾಸ್ಟಿಕ್ ಪಾತ್ರೆಗಳ ಆಗಮನದಿಂದಾಗಿ ಕುಂಬಾರಿಕೆ ವೃತ್ತಿಯಿಂದು ಕ್ಷೀಣಿಸಿದೆ. ಗುಂಡಯ್ಯ ಅಥವಾ ಗುಂಡಬ್ರಹ್ಮಯ್ಯನನ್ನು ಇವರು ತಮ್ಮ ಮೂಲ ಪುರುಷನೆಂದು ಭಾವಿಸಿದ್ದು, ಅವರಲ್ಲಿ ಗುಂಡ ಬ್ರಹ್ಮ ಹಾಗೂ ಶಾಲಿವಾಹನ ಎಂಬ ಎರಡು ವರ್ಗಗಳಿವೆ. ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಗೌರಿ ಗಣೇಶ ವಿಗ್ರಹಗಳನ್ನು ಸಿದ್ದಪಡಿಸಿ ಮಾರುತ್ತಾರೆ. ಇವರಲ್ಲಿ ಶಿವ ಮತ್ತು ವಿಷ್ಣು ಆರಾಧಕರಿದ್ದು, ಕುಂಭೇಶ್ವರ (ಕುಲಶ) ಕುಲದೈವವಾಗಿದ್ದು, ಹಾಲುಸ್ವಾಮಿ ಜಾತ್ರೆಯಲ್ಲಿ ವಿಶೇಷವಾಗಿ ಪಾಲ್ಗೊಳ್ಳುತ್ತಾರೆ.

**ಕ್ಷೌರಿಕ**

ನಾಪಿತ, ಕೆಲಸಿ, ಹಜಾಮ, ನಾಯಿಂದ, ಕ್ಷತ್ರಿಯ ಎಂದು ಕರೆಯಲ್ಪಡುವ ಇವರು ಕ್ಷೌರಿಕ ಕಾಯಕದವರಾಗಿದ್ದು, ಜೊತೆಗೆ ಡೋಲು, ಭಜಂತ್ರಿ, ನಾಗಸ್ವರ ಮುಂತಾದ ವಾದ್ಯಗಳನ್ನು ಧಾರ್ಮಿಕ ಉತ್ಸವ, ವಿವಾಹ ಸಂದರ್ಭಗಳಲ್ಲಿ ನುಡಿಸುತ್ತಾರೆ. ಇವರಲ್ಲಿ

ಗುರ್‍ರಂ, ಜಾಂಬ, ಕಣಗಿಲ ಮುಂತಾದ ಬೆಡಗುಗಳಿವೆ. ಉಪ್ಪಿನ ಮತ್ತು ಶೀಲವಂತ ಎಂಬ ಉಪಪಂಗಡಗಳಿವೆ. ಇವರೂ ಸಹ ಲಿಂಗಾಯಿತರೆಂದೂ ಗುರುತಿಸಿಕೊಂಡಿದ್ದಾರೆ.

**ಗಾಣಿಗ**

ಗಾಣದಿಂದ ಎಣ್ಣೆಯನ್ನು ಉತ್ಪಾದಿಸುವುದು ಇವರ ಸಾಂಪ್ರದಾಯಕ ವೃತ್ತಿಯಾಗಿದ್ದು, ಬೇಸಾಯವನ್ನೂ ಮಾಡುತ್ತಾರೆ. ಇವರಲ್ಲಿ ಜ್ಯೋತಿನಗರ, ಸಜ್ಜನ ಹಾಗೂ ಜ್ಯೋತಿಪಾದ ಎಂಬ ಪ್ರಕಾರಗಳಿವೆ. ಗಾಣಕ್ಕೆ ಜೋಡೆತ್ತು ಬಳಸುವವರನ್ನು ಹೆಗ್ಗಾಣಿಗರೆಂದು, ಒಂಟಿ ಎತ್ತು ಬಳಸುವವರನ್ನು ಕಿರುಗಾಣಿಗರೆಂದು ಕರೆಯಲಾಗು ತ್ತಿತ್ತು. ಆದರೆ ಎಣ್ಣೆ ಮಿಲ್ಲುಗಳಿಂದಾಗಿ ಇಂದು ಗಾಣಗಳು ಕಣ್ಮರೆಯಾಗಿವೆ. ಗಾಣಿಗಸೆಟ್ಟರೆಂದೂ ಕರೆಯಲ್ಪಡುವ ಇವರಲ್ಲಿ ಲಿಂಗಾಧಾರಿ ಸಜ್ಜನರೂ ಸಸ್ಯಹಾರಿಗಳೂ, ಉಳಿದವರು ವಿಷ್ಣು ಭಕ್ತರೆಂದೂ ವಿಶೇಷ ಸಂದರ್ಭಗಳಲ್ಲಿ ದಾಸಯ್ಯನನ್ನು ಮನೆಗೆ ಆಹ್ವಾನಿಸುವುದುಂಟು.

**ದೇವಾಂಗ (ನೇಕಾರ)**

ನೇಕಾರಿಕೆ ಇವರ ಸಂಪ್ರದಾಯಕ ವೃತ್ತಿಯಾಗಿದ್ದು, ಅನೇಕ ಬೆಡಗು, ಒಳಪಂಗಡಗಳಿವೆ. ಉಪನಯನ, ಜನಿವಾರ ಧಾರಣೆಗಳನ್ನು ಅನುಸರಿಸುವ ಇವರು ಹುಟ್ಟು ಸಾವಿನ ಸಂದರ್ಭಗಳಲ್ಲಿ ಸೂತಕವನ್ನು ಆಚರಿಸುತ್ತಾರೆ. ರಾಮಲಿಂಗ, ಚೌಡೇಶ್ವರಿ, ಬನಶಂಕರಿ, ಇವರ ಕುಲ ದೇವರುಗಳಾಗಿದ್ದು, ಇವರಿಗೆ ಜಾತಿ ಪುರೋಹಿತರಿದ್ದಾರೆ.

**ಬ್ರಾಹ್ಮಣ**

ತಾಲ್ಲೂಕಿನಲ್ಲಿ ಬ್ರಾಹ್ಮಣರು ಅತ್ಯಲ್ಪ ಸಂಖ್ಯೆಯಲ್ಲಿದ್ದು. ಸ್ಮಾರ್ತ, ವೈಷ್ಣವ ಹಾಗೂ ಶ್ರೀವೈಷ್ಣವ ಪಂಥಕ್ಕೆ ಸೇರಿದವರಾಗಿದ್ದಾರೆ. ಎಲ್ಲಾ ಪಂಥದ ಬ್ರಾಹ್ಮಣರೂ ತಮ್ಮ ತಮ್ಮ ಆಚರಣೆಗಳನ್ನು ಅನುಸರಿಸುತ್ತಾರೆ. ವಿಧವೆಯರಿಗೆ ಹಿಂದೆ ಇದ್ದ ನಿಷಿದ್ಧಗಳು ಇಂದು ಕಣ್ಮರೆಯಾಗಿವೆ. ಇವರಲ್ಲಿ ಸತ್ತವರನ್ನು ಚಿತೆಗೇರಿಸಿ ಹತ್ತು ದಿನಗಳ ಸೂತಕವನ್ನು ೧೩ ದಿನಗಳ ಪರ್ಯಂತ ವಿಧಿವತ್ತಾದ ಶ್ರಾದ್ಧವನ್ನು ಆಚರಿಸುತ್ತಾರೆ. ಅಲ್ಲದೆ ಸತ್ತ ವರ್ಷ ಮಾಸಿಕ ತಿಥಿಯನ್ನು, ನಂತರ ವಾರ್ಷಿಕ ತಿಥಿಯನ್ನು ಆಚರಿಸಲಾಗುತ್ತದೆ. ಬಹುತೇಕ ವೇದಾಧ್ಯಯನ, ಬೋಧನಾ, ಯಜ್ಞಯಾಗದಿಗಳನ್ನು ನಡೆಸುವುದನ್ನೇ ಸಾಂಪ್ರದಾಯಕ ವೃತ್ತಿಯನ್ನಾಗಿ ಹಿಂದೆ ಹೊಂದಿದ್ದ ಇವರು, ಪ್ರಸಕ್ತ ಇತರೆ ಜಾತಿಗಳಂತೆ ಸಾಮಾಜಿಕ ಪರಿವರ್ತನೆಗೆ ಒಳಗಾಗಿ ವಿವಿಧ ರಂಗಗಳಲ್ಲಿ ತೊಡಗಿಸಿಕೊಂಡಿದ್ದಾರೆ.

**ವಡ್ಡರು**

ಕೆರೆ, ಬಾವಿ, ರಸ್ತೆ ಮುಂತಾದ ಕಾಮಗಾರಿಗಳಲ್ಲಿ ದುಡಿಯುವ ಇವರು ತೆಲಗು ಭಾಷಿಕರಾಗಿದ್ದು, ಕಲ್ಲು /ಊರವ/ಮಣ್ಣು/ಬೈಲು/ದೇಶ ಹಾಗೂ ಉಪ್ಪುವಡ್ಡರು ಎಂಬ ಪ್ರಭೇದಗಳಿವೆ. ಅಲ್ಲದೆ ಬಂಡಿವಡ್ಡ, ಹಂಪಿ ವಡ್ಡ, ಉಳುವಡ್ಡ, ಪುಟ್ಗೋಸಿವಡ್ಡ, ಕಟ್ಟೆವಡ್ಡ ಎಂಬ ಉಪ ಪಂಗಡಗಳಿವೆ. ಸಿದ್ದರಾಮ ದೇವರು ಹಾಗೂ ಗಂಗಮ್ಮ ದೇವರನ್ನು ಪೂಜಿಸುವ ಇವರಲ್ಲಿ ಒಳವ್ಯಾಜ್ಯಗಳನ್ನು ಬಗೆಹರಿಸಲು ಜಾತಿ ಪಂಚಾಯಿತಿಗಳಿದ್ದು, ಸತ್ತವರನ್ನು ಹೂಳಲಾಗುತ್ತದೆ. ಪ್ರಸ್ತುತ ಇತರೆ ಜಾತಿಗಳಂತೆ ಪರಿವರ್ತನೆಗೊಂಡು ವಿವಿಧ ರಂಗಗಳಲ್ಲಿದ್ದಾರೆ.

**ವಿಶ್ವಕರ್ಮ**

ಪಂಚಾಳರೆಂದೂ ಕರೆಯಲ್ಪಡುವ ಇವರಲ್ಲಿ ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ ಹಾಗೂ ಕಂಚುಗಾರ ಎಂಬ ಪಂಚಕರ್ಮದವರಿದ್ದು, ವಿಶ್ವಕರ್ಮ ಅಥವಾ ವಿಶ್ವಬ್ರಹ್ಮನ ಪಂಚಮುಖಗಳಿಂದ ಮನು, ಮಯ, ತ್ವಷ್ಟ, ಶಿಲ್ಪ ಹಾಗೂ ವಿಶ್ವಜ್ಞ(ದೈವಜ್ಞ) ರು ಜನಿಸಿದ ಅಭಿಪ್ರಾಯವಿದ್ದು ಅವರ ವಂಶಸ್ಥರೆ ಈ ಪಂಚಳಾರೆಂದು ನಂಬಲಾಗಿದೆ. ಕಮ್ಮಟೇಶ್ವರ, ಕಾಳಿಕಾದೇವಿಯರು ಇವರ ಕುಲದೇವರುಗಳಾಗಿದ್ದು, ಬಾಲಕರಿಗೆ ಉಪನಯನ ಮಾಡಿ, ಜನಿವಾರ ಧಾರಣೆ ಮಾಡಲಾಗುತ್ತದೆ. ವೈದಿಕ ಪದ್ಧತಿಯಂತೆ ಇವರಲ್ಲಿ ಸ್ವಜಾತಿ ಪುರೋಹಿತರೇ ನಡೆಸುತ್ತಾರೆ. ಹುಟ್ಟು ಸಾವುಗಳಲ್ಲಿ ಸೂತಕವನ್ನು ಆಚರಿಸಲಾಗುತ್ತಿದ್ದು, ಇವರಲ್ಲಿ ಸತ್ತವರಿಗೆ ಅಗ್ನಿ ಸಂಸ್ಕಾರ ಮಾಡಲಾಗುತ್ತದೆ. ತಮ್ಮ ವೃತ್ತಿಗೆ ಸಂಬಂಧಿಸಿದ ಸಲಕರಣೆಗಳನ್ನು ಅಮಾವಾಸ್ಯೆಯಂದು ಪೂಜಿಸುವ ಇವರಲ್ಲಿ ಹೆಸರಾಂತ ಶಿಲ್ಪಿಗಳು ಕಲಾವಿದರೂ ಆಗಿ ಹೋಗಿದ್ದಾರೆ. ಇವರು ತಾಲ್ಲೂಕಿನಲ್ಲಿ ವಿರಳರಾಗಿದ್ದಾರೆ.

**ಹೆಳವರು**

ಹೊಳಲ್ಕೆರೆ ತಾಲ್ಲೂಕು ಹೊಸಹಳ್ಳಿಯಲ್ಲಿರುವ ಹೆಳವರು ದಾಯಾದಿ ಸಂಬಂಧ ಹೇಳಿಕೊಂಡು ಊರೂರಿಗೆ ಹೋಗಿ ಮನೆಮನೆಯಲ್ಲಿ ವಂಶಾವಳಿಯ ಕಥೆಯ ಸೇತುವೆಯಂತೆ ಇದ್ದಾರೆ. ಇವರು ಹೇಳವರು ಕಾಲಕ್ರಮೇಣ ಹೆಳವರಾಗಿರಬಹುದಾಗಿದೆ. ಇವರು ಕೆಲವು ಮನೆತನಗಳ ತಲೆಮಾರುಗಳ ಕಥೆಗಳನ್ನು ಹೇಳುವುದುಂಟು ಈ ವೃತ್ತಿ ವಂಶ ಪಾರಂಪರ್ಯವಾಗಿ ಬಂದಿದೆ.

**ಮರಾಠರು**

ಮೂಲತಃ ಮಹಾರಾಷ್ಟ್ರ ಕಡೆಯಿಂದ ಷಹಾಜಿ–ಶಿವಾಜಿ ಕಾಲದಲ್ಲಿ ಈ ಭಾಗಕ್ಕೆ ವಲಸೆ ಬಂದವರಾಗಿದ್ದು, ದರ್ಜಿ ಕಾಯಕ, ವ್ಯಾಪಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇವರಲ್ಲಿ ಸೂರ್ಯವಂಶ, ಸೋಮವಂಶ, ಯದುವಂಶ ಹಾಗೂ ಶೇಷವಂಶಗಳೆಂದು ನಾಲ್ಕು ವಂಶಗಳಿದ್ದು, ಪವಾರ್, ಭೋಸ್ಲೆ, ರಾಹುತ್ ಮುಂತಾದ ೯೬ ದೇವರ ಕುಲಗಳಿವೆ. ಇವರ ಮಾತೃಭಾಷೆ ಮರಾಠಿಯಾಗಿದ್ದು ಬಾಲಕರಿಗೆ ಉಪನಯನ ಮಾಡಿ ಜನಿವಾರ ಧರಿಸುವ ಸಂಪ್ರದಾಯದ ಇವರ ಧಾರ್ಮಿಕ ಆಚರಣೆಗಳಲ್ಲಿ ಬ್ರಾಹ್ಮಣರೂ ಪುರೋಹಿತ್ಯ ವಹಿಸುತ್ತಿದ್ದು, ವಿಧವಾ ವಿವಾಹ ಹಾಗೂ ವಿಚ್ಛೇಧನಗಳಿಗೆ ಇವರಲ್ಲಿ ಅವಕಾಶವಿಲ್ಲ. ಶಿವನನ್ನು ಖಂಡೋಬ ಹಾಗೂ ಬೈರೋಬ ರೂಪದಲ್ಲಿ ಆರಾಧಿಸುವ ಇವರು ವಿಠೋಭ, ಅಂಬಾಭವಾನಿ, ತುಳಜಾಭವಾನಿ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಮಹಾಲಯ ಅಮಾವಾಸ್ಯೆಯ ಸಂದರ್ಭದಲ್ಲಿ ಪೂರ್ವಿಕರ ಹೆಸರಲ್ಲಿ ಎಡೆ ಇಟ್ಟು ಪೂಜಿಸಲಾಗುತ್ತದೆ.

### ಮಾದಿಗ

ತಾಲ್ಲೂಕಿನ ಎಲ್ಲಾ ಭಾಗಗಳಲ್ಲಿ ಹರಡಿಕೊಂಡಿರುವ ಇವರನ್ನು ಪದ್ಮಜಾತಿ, ಜಾಂಬವ, ಮಾತಂಗ, ಬೇಗಾರ ಹಾಗೂ ಎಡಗೈನವರೆಂದು ಕರೆಯಲಾಗುತ್ತಿದ್ದು, ಮಾತಂಗಿ, ಮಾರಮ್ಮ, ರೇಣುಕಾ ಯಲ್ಲಮ್ಮ, ಮಾದಿಗ, ಮರುಳಸಿದ್ದಾ, ತಿಮ್ಮಪ್ಪ, ಮೈಲಾರಲಿಂಗ ಇವರ ಕುಲದೇವತೆಗಳು.  ಇವರಲ್ಲಿ ಕೆಲವು ಉಪಪಂಗಡಗಳಿವೆ. ಜಾಂಬವರು ಇವರ ಪುರೋಹಿತ ವರ್ಗದವರಾಗಿದ್ದರು. ಇವರಲ್ಲಿ ಬೆಳ್ಳಿ, ಕಸಬ, ಬೇಲ, ಹನುಮಂತ ಮುಂತಾದ ಅನೇಕ ಬೆಡಗುಗಳಿವೆ.ಶರಣ ಹರಳಯ್ಯನನ್ನು ವಿಶೇಷ ಭಕ್ತಿ ಭಾವದಿಂದ ಕಾಣುವ ಇವರಲ್ಲಿ ಸತ್ತವರನ್ನು ಹೂಳೂವ ಪದ್ಧತಿ ಇದ್ದು, ಮೂರು ಇಲ್ಲವೆ ಹತ್ತು ದಿನಗಳ ಸೂತಕವನ್ನು ಆಚರಿಸುತ್ತಾರೆ. ಏಕಾದಶಿ, ಯುಗಾದಿ, ವಿನಾಯಕ ಚೌತಿ, ಮಹಾಲಯ ಅಮವಾಸ್ಯೆಗಳಂದು ಸ್ಮಶಾನಕ್ಕೆ ಹೋಗಿ ಸಮಾಧಿ ಪೂಜೆ, ಎಡೆ ಸಲ್ಲಿಸಿ, ಮನೆಗೆ ಬಂದು ಕಳಸ ಪೂಜಿಸುವುದು ಕಂಡು ಬರುತ್ತದೆ. ಆಯಾ ಸ್ಥಳೀಯ ಆಚರಣೆಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಚರ್ಮದ ಕಾಯಕ ಇವರ ಕುಲಕಸುಬು ಆಗಿದ್ದು, ಕೃಷಿಕಾರ್ಮಿಕರಾಗಿ ಕೂಡ ಹೊಲದಲ್ಲಿ ದುಡಿಯುತ್ತಾರೆ. ಇವರು ತಮಟೆ ಡೋಲುಗಳನ್ನು ಲಯ ಬದ್ಧವಾಗಿ ಭಾರಿಸುವಲ್ಲಿ ನಿಷ್ಣಾತರು. ಪ್ರಸ್ತುತ ಇತರೆ ಜಾತಿಗಳಂತೆ ಸಾಮಾಜಿಕವಾಗಿ ಪರಿವರ್ತನೆಗೊಂಡು ಬೇರೆ ಬೇರೆ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

### ಯಾದವ

ಗೊಲ್ಲ, ಕೃಷ್ಣಗೊಲ್ಲ ಎಂದೂ ಕರೆಯಲ್ಪಡುವ ಇವರು ಒಂದು ಕಾಲದಲ್ಲಿ ಅಲೆಮಾರಿಗಳಾಗಿದ್ದು ಪಶುಸಂಗೋಪನೆಯಲ್ಲಿ ನಿರತರಾಗಿದ್ದವರು. ಇವರಲ್ಲಿ ಯರ, ಪುನುಗು, ಪೈತಾಳ, ಕರ್ನೆ, ಪೂಜೆ, ಬೀಗಮುದ್ರೆ, ಕಂಚು, ರಾಚ, ಕಂಬಳಿ,

ಕರಡಿ ಮುಂತಾದ ಉಪ ಪಂಗಡಗಳಿದ್ದವು. ಇವರಲ್ಲಿ ಹಲವಾರು ಬೆಡಗುಗಳಿದ್ದು, ಕೃಷ್ಣ, ಮಾರಮ್ಮ, ಯಲ್ಲಮ್ಮ, ಗಂಗಮ್ಮ ಮುಂತಾದ ದೇವಾನುದೇವತೆಗಳನ್ನು ಆರಾಧಿಸುತ್ತಾರೆ. ಸತ್ತ ಬ್ರಹ್ಮಚಾರಿಗಳನ್ನು ಈರಗಾರರೆಂದು ಪರಿಗಣಿಸಿ ಕುದುರೆ ಸವಾರರಂತೆ ಕೆತ್ತಿದ ವೀರಗಲ್ಲು ನಿಲ್ಲಿಸುವುದು ವಿಶೇಷ. ಚಿತ್ರಹಳ್ಳಿ ಕಾಡುಗೊಲ್ಲರ ಪಂಚಲಿಂಗಗಳಲ್ಲೊಂದಾದ ಚಿತ್ತಲಿಂಗನ ಮೂಲನೆಲೆ. ಕಾಡುಗೊಲ್ಲರ ಕತೆ ಹಾಡುವ, ಮೋಹಕವಾಗಿ ಕಣಿ ನುಡಿಯುವ ಕಲಾವಿದರನ್ನು ಅಲ್ಲಲ್ಲಿ ಕಾಣಬಹುದು.

ಕಾಡುಗೊಲ್ಲರ ಹಟ್ಟಿಗಳು, ದೇವಸ್ಥಾನಗಳು ಕಂಟರಾವರಣದಲ್ಲಿದ್ದು, ಹೊರಜನರನ್ನು ಗುಡಿಯ ಪೌಳಿನೊಳಕ್ಕೂ ಬಿಟ್ಟುಕೊಳ್ಳದಿರುವ ಸಂಪ್ರದಾಯ ಕೆಲವೆಡೆ ಇದೆ.

ಸಂಕ್ರಾಂತಿ ಹಬ್ಬದಂದು ಕಾಟಮಾರಾಯರನನ್ನು ಪೂಜಿಸುವ ಇವರಲ್ಲಿ ದೇವರಿಗೆ ದಾಸಯ್ಯಗಳನ್ನು ಬಿಡುವ ಸಂಪ್ರದಾಯವಿದೆ. ಇವರಲ್ಲಿ ಒಳಜಗಳ ತೀರ್ಮಾನಿಸಲು ಕಟ್ಟೇ ಮನೆಗಳಿದ್ದು, ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ.

**ಲಿಂಗಾಯತ**

ವೀರಶೈವರು ಎಂದು ಕರೆಯಲ್ಪಡುವ ಶಿವಲಿಂಗಧಾರಿಗಳು ಇವರಲ್ಲಿ ಜಂಗಮ, ಆರಾಧ್ಯ, ಬಣಜಿಗ, ಶೆಟ್ಟಿ, ಶಿವಾಚಾರಿ, ಗೌಡ, ನೊಣಬ, ಸಾದರು, ಕುಂಬಟಿಗ, ಕುಂಬಾರ, ಗಾಣಿಗ ಮುಂತಾದ ಒಳಪಂಗಡಗಳಿದ್ದು, ತಾಲ್ಲೂಕಿನಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಕನ್ನಡ ಮಾತನಾಡುವ ಇವರು ಕೃಷಿ, ವ್ಯಾಪಾರ, ಸೇರಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿದ್ದಾರೆ. ತಾವು ಪೂಜಿಸುವ ಇಷ್ಟಲಿಂಗವನ್ನು ಕೊರಳಲ್ಲಿ ಧರಿಸುವ ಇವರು ಪಂಚಚಾರ ಅಷ್ಟಾವರಣ ಹಾಗೂ ಷಟ್‌ಸ್ಥಳ ಆಚರಣೆಯಲ್ಲಿ ನಿಷ್ಠೆಯುಳ್ಳವರಾಗಿದ್ದು, ಯಾಗ, ಯಜ್ಞ, ಉಪವಾಸ, ತಪಸ್ಸು, ಇತ್ಯಾದಿಗಳನ್ನು ಸಾಂಪ್ರದಾಯಕವಾಗಿ ಇವರು ನಂಬುವುದಿಲ್ಲ. ಹುಟ್ಟು, ಮುಟ್ಟು, ಮರಣ ಸಂದರ್ಭಗಳಲ್ಲಿ ಸೂತಕ ಆಚರಣೆ ಅಗತ್ಯವಿಲ್ಲವೆಂದು ಹೇಳಲಾಗುತ್ತಾದರೂ ರೂಢಿಯಲ್ಲಿದೆ. ಮರಣಾವಂತರ ಜೀವಾತ್ಮನು ವಿಶ್ವಾತ್ಮನಲ್ಲಿ ಒಂದಾಗುವುದರಿಂದ ಮರಣೋತ್ತರ ಕ್ರಿಯಾವಿಧಿಗಳ ಅಗತ್ಯವಿಲ್ಲವೆಂಬ ನಂಬಿಕೆ ಇದ್ದರೂ, ಸ್ಥಳೀಯಾ ಆಚರಣೆಗಳಂತೆ ಹಿರಿಯರ ಹಬ್ಬವನ್ನು ದೀಪಾವಳಿ, ಶಿವರಾತ್ರಿ ಹಬ್ಬಗಳಲ್ಲಿ ಆಚರಿಸುತ್ತಾರೆ.

ವೈದಿಕ ವಿಧಾನಕ್ಕಿಂತ ಸ್ವಲ್ಪ ಭಿನ್ನವಾದ ವಿವಾಹ ಪದ್ಧತಿಯನ್ನು ಅನುಸರಿಸುವ ಇವರು ಅಗ್ನಿಗೆ ಬದಲು ಪಂಚ ಕಳಸ ಪೂಜಿಸುತ್ತಿದ್ದರು. ವೀರಶೈವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಉತ್ತರ ಮುಖವಾಗಿ ಕೂರಿಸಿ ಸಮಾಧಿ ಮಾಡಲಾಗುತ್ತದೆ. ಹನ್ನೊಂದನೆಯ ಅಥವಾ ಬೆಸದಿನಗಳಲ್ಲಿ ಶಿವಗಣಾರಾಧನೆಯನ್ನು ಆಚರಿಸಲಾಗುತ್ತದೆ. ಇವರಲ್ಲಿ ಆರಾಧ್ಯರು ವೇದ ಹಾಗೂ ಪಂಚಚಾರ್ಯರಲ್ಲಿ ನಿಷ್ಠೆಯುಳ್ಳವರಾಗಿದ್ದು, ಪಂಚಚಾರ್ಯರ ಜಯಂತಿಯನ್ನು, ಉಳಿದವರು ಬಸವ ಜಯಂತಿ, ಶಿವರಾತ್ರಿ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ.

## ವೈಶ್ಯರು

ಕೊಮ್ಮಟಿ, ಶ್ರೇಷ್ಟಿ, ಶೆಟ್ಟರು ಎಂದು ಕರೆಯಲ್ಪಡುವ ಇವರು ಪ್ರಧಾನವಾಗಿ ವರ್ತಕ ಜನಾಂಗದವರಾಗಿದ್ದು, ತಾಲ್ಲೂಕಿನಲ್ಲಿ ವಿರಳವಾಗಿ ನೆಲೆಸಿದ್ದಾರೆ. ತೆಲಗು ಇವರ ಮಾತೃ ಭಾಷೆಯಾದರೂ ಕನ್ನಡದಲ್ಲೇ ಹೆಚ್ಚಾಗಿ ವ್ಯವಹರಿಸುತ್ತಾರೆ. ಇವರಲ್ಲಿ ಗವರೆ, ತುಪ್ಪದ, ತ್ರೈವರ್ಣಿಕ ಎಂಬ ಪಂಗಡಗಳಿದ್ದು, ತಾಲ್ಲೂಕಿನಲ್ಲಿ ಅಲ್ಲಲ್ಲಿ ಮಾತ್ರವಿದ್ದಾರೆ. ವೈದಿಕ ಪದ್ಧತಿಯನ್ನು ಅನುಸರಿಸುವ ಇವರಲ್ಲಿ ೧೦೨ ಗೋತ್ರಗಳಿದ್ದು, ಧರ್ಮಾಚರಣೆಗಳಿಗೆ ಬ್ರಾಹ್ಮಣರನ್ನು ಕರೆಸುತ್ತಾರೆ. ಇವರಲ್ಲಿ ಸತ್ತವರನ್ನು ವೈಧಿಕ ಪದ್ಧತಿಯಂತೆ ಅಗ್ನಿಸಂಸ್ಕಾರ ಮಾಡಲಾಗುತ್ತದೆ. ಕುಲದೇವತೆಯು ಕನ್ನಿಕಾಪರಮೇಶ್ವರಿಯಾಗಿದ್ದು ಜಾತಿ ಪಂಚಾಯಿತಿ ಇವರಲ್ಲೂ ರೂಢಿಯಲ್ಲಿವೆ.

## ಹೊಲೆಯ

ಈಗ ಛಲವಾದಿ, ಆದಿ ದ್ರಾವಿಡ ಎಂದು ಕರೆಯಲ್ಪಡುವ ೧೮ ಪಣಕ್ಕೆ ಸೇರಿದವರನ್ನು ಬಲಗೈನವರೆಂದು ಕರೆಯಲಾಗುತ್ತದೆ. ಮನೆಯಲ್ಲಿ ಕನ್ನಡ ಮಾತನಾಡುವ ಇವರು ಹಿಂದೆ ಗ್ರಾಮದ ಹೊರ ಭಾಗದಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಅತ್ತಿಕುಲ, ಆನೆಕುಲ, ಅಲೆಕುಲ ಮುಂತಾದ ಬೆಡಗುಗಳೂ ಇವೆ. ಇವರಲ್ಲಿ ಶಿವರಾಧಕರೂ, ಚೌಡೇಶ್ವರಿ, ಮಾಸ್ತಮ್ಮ, ಸಿದ್ದಪ್ಪಾಜಿಯನ್ನು ಪೂಜಿಸುತ್ತಿದ್ದು, ತಮ್ಮಡಿಗಳು ಅವರ ಗುರುಗಳಾದರೆ ವೈಷ್ಣವರಾಧಕರಿಗೆ ಸತಾನಿಗಳು ಗುರುಗಳಾಗಿರುತ್ತಾರೆ. ಸತ್ತವರನ್ನು ಹೂಳುವುದು ಮತ್ತು ಸುಡುವುದೂ ಉಂಟು. ಸಾಂಪ್ರದಾಯಿಕವಾಗಿ ಕೃಷಿಕಾರ್ಮಿಕರಾಗಿರುವ ಇವರಲ್ಲಿ ಒಳಜಗಳಗಳನ್ನು ಹಿರಿಯರನ್ನೊಳಗೊಂಡ ಜಾತಿ ಪಂಚಾಯಿತಿಯಲ್ಲಿ ಗೊತ್ತುಗಾರನ ಸಮ್ಮುಖದಲ್ಲಿ ಬಗೆಹರಿಸಲಾಗುತ್ತದೆ.

## ಲಂಬಾಣಿಗಳು

ಈ ತಾಲ್ಲೂಕಿನಲ್ಲಿ ೩೩ ಲಂಬಾಣಿ ತಾಂಡಗಳಿವೆ. ಇವರು ಹಳ್ಳಿಗಳಿಂದ ದೂರದಲ್ಲಿದ್ದು ಇವರ ಕಾಯಕವು ಕೃಷಿಯಾಗಿದೆ. ಇದು ಹಿಂದುಳಿದ ಜನಾಂಗವಾಗಿದ್ದು ತಮ್ಮದೇ ಆದ ಲಂಬಾಣಿ ಭಾಷೆಯನ್ನು ಮಾತನಾಡುವರು. ಕುಡಿನೀರುಕಟ್ಟೆ ಲಂಬಾಣಿ ತಾಂಡದ ಪ್ರತಿ ಮನೆಯಲ್ಲೂ ಉನ್ನತ ಶಿಕ್ಷಣ ಪಡೆದು ಉದ್ಯೋಗದಲ್ಲಿದ್ದಾರೆ. ಮಹಿಳೆಯರೂ ಸಹ ಒಳ್ಳೆಯ ವಿದ್ಯಾವಂತರಾಗಿ ಪ್ರಗತಿ ಸಾಧಿಸಿದ್ದಾರೆ. 'ಸೇವಾಭಾಯ' ಇವರ ತಾಂಡಕ್ಕೆ ರಕ್ಷಾ ದೇವತೆ. ಅವರ ತಾಂಡದಲ್ಲಿ ನಡೆಯುವ ಜಾತ್ರೆ ಇತ್ಯಾದಿ ಹಬ್ಬಗಳಲ್ಲಿ ಸರಸ–ಸಡಗರ, ಸಂಭ್ರಮ ಕಾಣಬಹುದಾಗಿದೆ. ಸಾಂಸ್ಕೃತಿಕ ಪರಂಪರೆಯ ವೇಷಭೂಷಣಗಳಿಂದಲೂ ಆಕರ್ಷಿಸುತ್ತಿದ್ದೂ ಪ್ರಸ್ತುತ ಸಾಮಾಜಿಕ ಪರಿವರ್ತನೆಯಿಂದಾಗಿ ವಿವಿಧ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ನಾಯಕರು**

ತಾಲ್ಲೂಕಿನಲ್ಲಿ ನಾಯಕ ಜನಾಂಗದವರು ಹೆಚ್ಚು ವಿರಳವಾಗಿದ್ದು, ವ್ಯಾಸ ನಾಯಕರು, ಊರನಾಯಕರು ಎಂಬ ಪಂಗಡದವರಿದ್ದಾರೆ. ಸ್ಥಳೀಯ ದೇವತೆಗಳಲ್ಲದೇ ಓಬಳೇದೇವರು, ಗಾದ್ರಿ ಪಾಲನಾಯಕ ಇತ್ಯಾದಿ ದೇವತೆಗಳನ್ನು ಆರಾಧಿಸುತ್ತಾರೆ. ಸ್ಥಳೀಯ ಆಚರಣೆಗಳೊಂದಿಗೆ ವಿಶೇಷವಾದ ಆಚರಣೆಗಳನ್ನು ಆಚರಿಸುತ್ತಾರೆ.

**ಸಂಪ್ರದಾಯಗಳು**

**ಜನನ**: ಮೊದಲ ಹೆರಿಗೆ ತವರು ಮನೆಯಲ್ಲಿ ನಡೆಯುತ್ತದೆ. ಹುಟ್ಟಿದ ಮಗುವನ್ನು ಮೊರದಲ್ಲಿ ಮಲಗಿಸುವುದು ರೂಢಿಯಲ್ಲಿದ್ದರೂ ಇತ್ತೀಚೆಗೆ ಈ ಪದ್ಧತಿ ಬದಲಾಗಿ ತಾಯಿ ಮಗುವಿನ ಆರೈಕೆಯ ಬದಲಾವಣೆಗಳನ್ನು ಕಾಣಬಹುದಾಗಿದೆ. ಮಗುವು ಜನಿಸಿದ ಮೂರು, ಐದು, ಒಂಭತ್ತು, ಹನ್ನೆರಡನೇ ದಿನಕ್ಕೆ ಸೂತಕ ಕಳೆಯುತ್ತಾರೆ. ಆ ಸಮಯದಲ್ಲಿ ಮನೆಯನ್ನು ಶುಚಿಗೊಳಿಸಿ ದೇವರ ಕಾರ್ಯಗಳನ್ನು ಮಾಡುತ್ತಾರೆ.

ಸೂತಕವನ್ನು ಕಳೆಯುವ ದಿನದಂದು ಅಂಗಳಕ್ಕೆ ಸಗಣಿಯಿಂದ ಸಾರಿಸಿ ರಂಗೋಲಿಯಿಂದ ಶೃಂಗರಿಸಿ, ಪೂಜಿಸಿ, ಗುಳಿಮಾಡಿ ಮುಚ್ಚುತ್ತಾರೆ. ಅಲ್ಲಿದ್ದವರಿಗೆ ಸಿಹಿ ಹಂಚುತ್ತಾರೆ.

**ನಾಮಕರಣ**

ಮಗುವು ಹುಟ್ಟಿದ ಸರಿದಿನಗಳಿಗೆ ನಾಮಕರಣ ಮಾಡುವ ಸಂಪ್ರದಾಯ ಇದೆ. ಆದರೆ ಕೆಲವರು ಮಗು-ಬಾಣಂತಿಯನ್ನು ಗಂಡನ ಮನೆಗೆ ಕಳುಹಿಸುವಾಗಲೇ ಎರಡೂ ಆಚರಣೆಗಳನ್ನು ರೂಢಿಸಿಕೊಂಡಿದ್ದಾರೆ. ಇದು ತೊಟ್ಟಿಲ ಶಾಸ್ತ್ರವೆಂದು ಚೊಚ್ಚಲ ಹೆರಿಗೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅವರವರ ಪದ್ಧತಿಗಳಿಗೆ ಅನುಸಾರವಾಗಿದ್ದರೂ ಪುರೋಹಿತರು ಮೊದಲ ಅಕ್ಷರ ಯಾವುದಿರಬೇಕು ಇತ್ಯಾದಿ ವಿಚಾರಗಳನ್ನು ತಿಳಿದುಕೊಂಡು ಬರುವುದು ರೂಢಿಯಲ್ಲಿದೆ.

**ಕಿವಿ ಚುಚ್ಚುವುದು**

ಮಗುವಿಗೆ ಕಿವಿ ಚುಚ್ಚುವುದು ರೂಢಿ, ಹಳ್ಳಿಗಳಲ್ಲಿ ಚಿನ್ನಾಚಾರಿಗಳಲ್ಲಿ ಹೋಗಿ ಅವರಿಂದ ಮಗುವಿಗೆ ಕಿವಿ ಚುಚ್ಚಿಸುತ್ತಾರೆ. ಕಿವಿ ಚುಚ್ಚಿದವರಿಗೆ ಎಲೆ, ಅಡಿಕೆ, ಹಣ್ಣು, ಕಾಣಿಕೆ ಜೊತೆಗೆ ಕೊಬ್ಬರಿ, ಸಿಹಿಯನ್ನು ಕೊಡಲಾಗುತ್ತದೆ.

**ಚೌಲ**

ಮಗುವಿಗೆ ಚೌಲ ಕಾರ್ಯವು ವಿಶೇಷವಾಗಿದೆ. ಅವರವರ ಪದ್ಧತಿಯಂತೆ ಸಾಮಾನ್ಯವಾಗಿ ಅವರ ಕುಲದೇವತೆಯ ಹೆಸರಿನಲ್ಲಿ ಈ ಕಾರ್ಯ ಮಾಡಿಸುತ್ತಾರೆ. ತಾಯಿ ಮಗುವಿಗೆ ಹೊಸಬಟ್ಟೆ, ಕಾಣಿಕೆ, ಇತ್ಯಾದಿಗಳನ್ನು ನೀಡುತ್ತಾರೆ.

**ಮನೆವೈದ್ಯ**

ಮಗುವಿಗೆ ಅಜೀರ್ಣವೇನಾದರೂ ಆದರೆ ವೀಳ್ಯೆದೆಲೆಗೆ ಹರಳೆಣ್ಣೆಯನ್ನು ಹಚ್ಚಿ ಉರಿಯುವ ಹರಳೆಣ್ಣೆ ದೀಪದ ಮೇಲೆ ಉಗುರು ಬೆಚ್ಚಗೆ ಕಾಯಿಸಿ ಅದನ್ನು ಮಗುವಿನ ಹೊಟ್ಟೆಯ ಮೇಲೆ ಹಚ್ಚುತ್ತಾರೆ. ಶೀತವಾದರೆ ತಲೆಗೆ ಹಚ್ಚುತ್ತಾರೆ. ದೃಷ್ಟಿ ತೆಗೆಯುವುದು ಹಣೆಅಸ್ತ್ರ ತೆಗೆಯುವುದು ರೂಢಿ. ಅಂದರೆ ಸ್ವಲ್ಪ ನೀರಿನೊಂದಿಗೆ ಅರಿಶಿಣದ ಪುಡಿ ಮಿಶ್ರಣ ಮಾಡಿ ಸ್ವಲ್ಪ ಉಪ್ಪು, ಒಣಮೆಣಸಿನಕಾಯಿ, ಮೂರು ಹಾದಿಯ ಮೂರು ಕಲ್ಲುಗಳನ್ನು ಕಾಯಿಸಿ ನೀವಳಿಸಿ ಹಾಕಿ ನಂತರ ಎರಡು ಪೊರಕೆ ಕಡ್ಡಿಗಳನ್ನು ತೆಗೆದುಕೊಂಡು ಹಿಡಿದು ಹೊತ್ತಿಸಿ ಅದು ಉರಿಯುತ್ತಿರುವಾಗ ಮಗುವಿಗೆ ಮೂರು ಬಾರಿ ನೀವಳಿಸಿ ಹಾಕುತ್ತಾರೆ. ಕೆಲವರು ಒಣ ತೆಂಗಿನ ಚಿಪ್ಪು ಸುಟ್ಟು ನೀವಳಿಸುತ್ತಾರೆ. ಇದು ಸುಡುವಾಗ ಚಟಪಟ ಶಬ್ದ ಮಾಡಿದರೆ ಮಗುವಿಗೆ ದೃಷ್ಟಿಯಾಗಿದೆ ಎಂಬ ನಂಬಿಕೆ.

**ಕಾಲು ದೂಳುಹಾಕುವುದು**

ಮಗುವು ಒಂದೇ ಸಮನೆ ಅಳುತ್ತಾ ಕಿರಿಕಿರಿ ಮಾಡುತ್ತಿದ್ದರೆ, ಅದಕ್ಕೆ ಹೊಟ್ಟೆ ನೋಯುತ್ತಿರಬಹುದು ಎಂದು ಒಂದು ತಟ್ಟೆಯಲ್ಲಿ ಸ್ವಲ್ಪ ನೀರಿಗೆ ಸಗಣಿಯನ್ನು ಕಲಸುತ್ತಾರೆ. ಒಂದು ಲೋಟಕ್ಕೆ ಮೂರು ಬಟ್ಟೆಯ ಚೂರುಗಳನ್ನು ಬೆಂಕಿಯಲ್ಲಿ ಹೊತ್ತಿಸಿ ಹಾಕಿ, ಅದನ್ನು ಮಗುವಿಗೆ ನೀವಳಿಸಿ ಅನಂತರ ತಟ್ಟೆಗೆ ಬೋರಲಾಗಿ ಹಾಕಲಾಗುತ್ತದೆ. ಬಳಿಕ ತಟ್ಟೆಯನ್ನು ಮಗುವಿಗೆ ಮೂರು ಬಾರಿ ನೀವಳಿಸಿ ಇಡುತ್ತಾರೆ. ಲೋಟವು ತಟ್ಟೆಯ ನೀರನ್ನು ಹೀರಿಕೊಳ್ಳುವಾಗ ಗುಳುಗುಳು ಶಬ್ದಮಾಡಿದರೆ ಮಗುವಿಗೆ ಕಾಲುದೂಳಾಗಿ ಹೊಟ್ಟೆನೋಯುತ್ತಿರುತ್ತದೆ ಎಂಬ ನಂಬಿಕೆ. ಇಂಥ ಹಲವಾರು ಮನೆ ಮದ್ದುಗಳು ಇವೆ.

**ವಿವಾಹ**

ವಿವಾಹ ಎಂಬುದು ವ್ಯಕ್ತಿಯ ಜೀವನದಲ್ಲಿ ಬಹು ಮುಖ್ಯ ಘಟ್ಟ. ವಿವಾಹಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನಲ್ಲಿ ಅನೇಕ ಆಚಾರ ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದಾರೆ. ಹೆಣ್ಣು ನೋಡುವುದು, ಸಾಲಾವಳಿ ಕೇಳಿಸುವುದು, ಲಗ್ನ ಕಟ್ಟಿಸುವುದು. ಒಪ್ಪೀಳ್ಯ, ಲಗ್ನಕಟ್ಟಿಸುವುದು, ಮೂಹೂರ್ತದ ಕಂಬ ನೆಟ್ಟು, ಚಪ್ಪರ ಹಾಕುವುದು ದೇವರಕಾರ್ಯ ಮೊದಲಾದ ಅವರವರ ಶಾಸ್ತ್ರಗಳು ಇನ್ನೂ ಸಾಂಪ್ರದಾಯಿಕವಾಗಿ ನಡೆಯುತ್ತಿವೆ.

**ಶವ ಸಂಸ್ಕಾರ**

ನಿಧನರಾದ ತಕ್ಷಣ ಕಾಲುಗಳನ್ನು ಮಡಿಸಿ ಎದೆಯ ಮೇಲೆ ಕೈಗಳನ್ನು ಇಡುತ್ತಾರೆ. ತಲೆಯ ಹಿಂಬದಿಯಲ್ಲಿ(ಪಕ್ಕದಲ್ಲಿ) ದೀಪವನ್ನು ಹಚ್ಚಿ ಇಡುತ್ತಾರೆ. ಮನೆಯ ಮುಂದೆ ಕೊಳ್ಳಿ(ಬೆಂಕಿ) ಹಾಕುತ್ತಾರೆ.

ಎಲ್ಲರೂ ಬಂದ ಮೇಲೆ ಶವಕ್ಕೆ ಸ್ನಾನ ಮಾಡಿಸುತ್ತಾರೆ. ನಂತರ ಸತ್ತ ವ್ಯಕ್ತಿ ಗಂಡಸಾಗಿದ್ದರೆ ಹೆಂಡತಿ ಬದುಕಿದ್ದರೆ ತವರಿನವರು ಹೊಸ ಸೀರೆ, ಹೂ, ಬಳೆ ಇತ್ಯಾದಿ ತಂದು ಆಕೆಗೆ ತೊಡಿಸುತ್ತಾರೆ. ಶವದ ಹಣೆಗೆ ಕಾಸನ್ನು ಅಂಟಿಸುವುದು, ಚಟ್ಟದ ನಾಲ್ಕು ಮೂಲೆಗೂ ಎಳೆನೀರು ಕಟ್ಟುತ್ತಾರೆ. ಸತ್ತ ವ್ಯಕ್ತಿ ಅವಿವಾಹಿತನಾಗಿದ್ದರೆ ಒಂಟಿ ಬಂಡಿಯಲ್ಲಿ ಹೊತ್ತುಕೊಂಡು ಹೋಗುತ್ತಾರೆ. ವಿವಾಹಿತರು ಸತ್ತರೆ ಜೋಡಿ ಬಂಡಿಯಲ್ಲಿ ನಾಲ್ಕು ಜನ ಹೊತ್ತು ಹೊಯ್ಯುತ್ತಾರೆ. ಇತ್ತೀಚಿಗೆ ವಾಹನಗಳಲ್ಲಿ ಹೊತ್ತೊಯ್ಯುತ್ತಾರೆ.

ಸತ್ತವರಿಗೆ ಹಿರಿಯಮಗನೆ ಕಿಚ್ಚು ಹಿಡಿಯುವುದು ರೂಢಿ ಇದೆ. ಗುಂಡಿಯ ಬಳಿ ಶವಕ್ಕೆ ಬಿಳಿ ಬಟ್ಟೆ ಹೊದಿಸುವುದು ಅವರವರ ಪದ್ಧತಿಯಂತೆ ಹೂಳುವ, ಸುಡುವ ಸಾಂಪ್ರದಾಯಿಕ ಕಾರ್ಯ ನಡೆಯುತ್ತದೆ. ಗುದ್ದೆಯ ಮೇಲೆ ತುಳಸಿ, ತುಂಬೆ ಗಿಡ ನೆಟ್ಟು ನೀರು ಹಾಕುತ್ತಾರೆ. ಎಲ್ಲರೂ ನೀರಿನ ಬಳಿಹೋಗಿ ನೀರನ್ನು ಮುಟ್ಟಿ ತಮ್ಮ ಮೈಮೇಲೆ ಸಗಣಿ ನೀರನ್ನು ಪ್ರೋಕ್ಷಣೆ ಮಾಡಿಕೊಳ್ಳುತ್ತಾರೆ. ಹೀಗೆ ಬಂದ ನಂತರ ಸಾವಿನ ಮನೆಯಲ್ಲಿ ಉರಿಯುತ್ತಿರುವ ದೀಪ ನೋಡಿ ಪಕ್ಕದಲ್ಲಿರುವ ಮೊರದಲ್ಲಿ ಒಂದು ಹಿಡಿ ಅಕ್ಕಿಯನ್ನು ಬೊಗಸೆಯಲ್ಲಿಟ್ಟುಕೊಂಡು ಮನೆಗೆ ಮುಮ್ಮುಖವಾಗಿ ನಿಂತು ಅಕ್ಕಿಯನ್ನು ಹಿಮ್ಮುಖವಾಗಿ ಮನೆಯೊಳಗೆ ಎರಚುತ್ತಾರೆ. ಅನಂತರ ತಮ್ಮ ತಮ್ಮ ಮನೆ ಊರುಗಳಿಗೆ ಹೋಗುತ್ತಾರೆ.

ಇದಾದ ಬೆಸ ದಿನಕ್ಕೆ ತಿಥಿ. ಮನೆಯನ್ನು ಶುಚಿಗೊಳಿಸಿ, ಸುಣ್ಣ, ಬಣ್ಣ ಬಳಿಯುತ್ತಾರೆ. ತಿಥಿಯ ದಿನ ಗುದ್ದೆಯ ಬಳಿ ಹಾಲು ತುಪ್ಪ ಎಡೆ ಇಟ್ಟು ಪೂಜಿಸಿ, ಕಾಗೆಗಳು ಬಂದು ತಿಂದ ಬಳಿಕ ಮನೆಗೆ ಹಿಂದಿರುಗುತ್ತಾರೆ. ಕೆಟ್ಟಗಳಿಗೆಯಲ್ಲಿ ಸತ್ತರೆ ಮನೆಬಿಡುವುದು, ಗೂಡು ಹಾಕಿಸುವುದು ಇತ್ಯಾದಿ ಸಂಪ್ರದಾಯಗಳಿವೆ. ಆದರೆ ಪರಿವರ್ತನೆಯಾದ ಆಚರಣೆಗಳು ಇಂದು ನಡೆಯುತ್ತಿವೆ. ತಾಲ್ಲೂಕಿನ ಜನರ ಜೀವನದಲ್ಲಿ ಈ ರೀತಿ ಹುಟ್ಟಿನಿಂದ ಸಾಯುವ ತನಕ ಅನೇಕ ರೀತಿಗಳನ್ನು ಗಮನಿಸಬಹುದಾಗಿದೆ.

**ಆಹಾರ ಪದ್ಧತಿ**

**ಹೊಳಲ್ಕೆರೆ ತಾಲ್ಲೂಕಿನ ಆಹಾರ ಪದ್ಧತಿಯನ್ನು ಗಮನಿಸಬಹುದಾದರೆ**

**ಮುದ್ದೆ**: ಇಲ್ಲಿನವರ ಆಹಾರ ಮುದ್ದೆ. ಇದನ್ನು ರಾಗಿ, ಜೋಳ, ಗೋಧಿ ಮುಂತಾದ ಧಾನ್ಯಗಳಿಂದ ತಯಾರಿಸುತ್ತಾರೆ. ಚಟ್ನಿ, ಸೊಪ್ಪಿನ ಸಾರು, ಕಾಳಿನಸಾರು, ಮೊಸರುಗಳ

ಜೊತೆಗೆ ಹೆಚ್ಚಾಗಿ ಬಳಸುತ್ತಾರೆ. ರೊಟ್ಟಿ, ಚಪಾತಿ ಇದನ್ನು ರಾಗಿ, ಜೋಳ, ಸಜ್ಜೆ, ಗೋಧಿ ಧಾನ್ಯಗಳಿಂದ ತಯಾರಿಸುತ್ತಾರೆ. ಚಟ್ನಿ, ಪಲ್ಯೆ, ಕಾಳು ಮುಂತಾದಗಳ ಜೊತೆಗೆ ಬಳಸುತ್ತಾರೆ. ಇವಲ್ಲದೆ ದೋಸೆ, ಕಡಬು, ಇಡ್ಲಿ, ಉಪ್ಪಿಟ್ಟು, ಸಜ್ಜಿಗೆ ಮತ್ತಿತರ ತಿಂಡಿಗಳು ಬಳಕೆಯಲ್ಲಿವೆ.

**ಅನ್ನ**: ಹಿಂದೆ ಅನ್ನ ಅನುಕೂಲವಂತರ ದಿನ ಬಳಕೆಯ ಆಹಾರವಾಗಿತ್ತು. ಭತ್ತ ಉಳ್ಳವರ ಅನ್ನವಾದರೆ ನವಣೆ ಸಾಮೆ–ಮಧ್ಯಮ ವರ್ಗದವರ ಅನ್ನವಾಗಿತ್ತು. ಇತ್ತೀಚೆಗೆ ಸಾಮೆ, ನವಣೆ–ಕಣ್ಮರೆಯಾಗಿ ಭತ್ತದ ಅನ್ನವೇ ವ್ಯಾಪಕವಾಗಿ ಬಳಸುತ್ತಾರೆ. ಮುದ್ದೆ, ರೊಟ್ಟಿ, ಚಪಾತಿಯ ಜೊತೆಗೆ ಸ್ವಲ್ಪ ಪ್ರಮಾಣ ಅನ್ನವನ್ನು ಊಟ ಮಾಡುತ್ತಾರೆ.

ಹುರುಳಿಕಾಳು, ಅವರೆಕಾಳು, ತೊಗರಿಕಾಳು, ಹೆಸರುಕಾಳು ಸೊಪ್ಪುಗಳಿಂದ ಉಪ್ಪೆಸರು, ಕಟ್ಟು, ಬದನೆಕಾಯಿ, ಹುರುದವರೆಸರು, ಕಾಟಿನ ಸಾರು ಹೀಗೆ ವಿವಿಧ ಹುಳಿಸಾರುಗಳನ್ನು ಮಾಡುತ್ತಾರೆ.

ಪಲ್ಯ, ತರಕಾರಿ, ಕಾಳು, ಸೊಪ್ಪುಗಳಿಂದ ನಾನಾ ಬಗೆಯ ಪಲ್ಯ, ಎಣ್‌ಗಾಯಿ, ಗೊಜ್ಜುಗಳನ್ನು ಮಾಡುತ್ತಾರೆ.

ಬಾಳೆಕಾಯಿ, ಕುಂಬಳಕಾಯಿ, ಬದನೆಕಾಯಿ, ಮೆಣಸಿನಕಾಯಿ, ಹಾಗಲಕಾಯಿ, ಆಲೂಗಡ್ಡೆ, ತಿಡೆಕಾಯಿ, ಪಡವಲಕಾಯಿ,ಹೀರೆಕಾಯಿ ಬಸ್ಲೆಸೋಪ್ಪು, ಪಾಲಕ್ ವಿವಿಧ ಸೊಪ್ಪುಗಳ ಪಲ್ಯ ಸಾರು, ಕಟ್ಟು ಸಬಕ್ಕಿ ಸೊಪ್ಪುಗಳ ವಿವಿಧ ಬಗೆಯ ಗೊಜ್ಜು, ಸಾರುಗಳನ್ನು ಮಾಡುತ್ತಾರೆ. ತರಕಾರಿ ಮತ್ತು ಸೊಪ್ಪುಗಳಲ್ಲಿ ವೈದ್ಯಕೀಯ ಸಾರಾಂಶಗಳಿವೆ.

ಸಿಹಿ ತಿಂಡಿಗಳನ್ನು ಹಬ್ಬಗಳಲ್ಲಿ, ಮದುವೆ ಮೊದಲಾದ ವಿಶೇಷ ದಿನಗಳಲ್ಲಿ ವಿವಿಧ ಪಾಯಸ, ಹೋಳಿಗೆ, ಕರ್ಜಿಕಾಯಿ, ಬೂಂದಿ, ಲಾಡು, ಪಂಚಾಮೃತ ಮೊದಲಾದವುಗಳನ್ನು ತಯಾರಿಸಿ ತಿನ್ನುತ್ತಾರೆ. ಕಡಲೆಕಾಳು, ಹುರುಳಿಕಾಳು, ಅವರೆಕಾಳು, ಹಲಸಿನಬೀಜ, ಎಳ್ಳು, ಹುಚ್ಚೆಳು ಮುಂತಾದ ಹುರಿದ ಕಾಳುಗಳನ್ನು ತಿನ್ನುತ್ತಾರೆ. ಎಳನೀರು, ಮಜ್ಜಿಗೆ, ನಿಂಬೆ ಪಾನಕಗಳ ಜೊತೆಗೆ ಹುಣಸೆಹಣ್ಣಿನ ಪಾನಕಗಳನ್ನು ಇಲ್ಲಿನ ಗ್ರಾಮೀಣರು ಬಳಸುತ್ತಾರೆ.

ತಾಲ್ಲೂಕಿನ ಮಾಂಸಹಾರಿಗಳು ಅವರವರ ಅಭ್ಯಾಸಕ್ಕೆ ತಕ್ಕಂತೆ ಆಡು, ಕುರಿ, ಕೋಳಿ, ಎಮ್ಮೆ, ದನ, ಹಂದಿ, ಮೊಲ, ಬಾವುಲಕ್ಕಿ, ನಳ್ಳಿ, ಮೀನು, ಸೀಗಡಿ, ಮೊಟ್ಟೆ, ಆಮೆ, ಪಾರಿವಾಳ ಮುಂತಾದ ಪ್ರಾಣಿ ಪಕ್ಷಿಗಳ ಮಾಂಸ ಸೇವಿಸುವುದುಂಟು.

ತಾಲ್ಲೂಕಿನ ಬಹುಪಾಲು ಜನ ರಾಗಿ, ಜೋಳ ಮುದ್ದೆಗಳನ್ನು ಪ್ರಧಾನವಾಗಿ ಅವಲಂಬಿಸಿದ್ದರೂ ಇತ್ತೀಚೆಗೆ ಅಕ್ಕಿಯನ್ನು ಸಮನಾಗಿ ಸೇವಿಸುತ್ತಾರೆ. ಹಿಂದೆ ಸಜ್ಜೆ, ನವಣೆ ಮುಂತಾದವನ್ನು ಬಳಸುತ್ತಿದ್ದರೂ. ದ್ವಿದಳ ಧಾನ್ಯಗಳಾದ ಅವರೆ, ಹೆಸರು, ತೊಗರಿ, ಉದ್ದು, ಹುರುಳಿ, ಅಲಸಂದೆ ಮುಂತಾದವುಗಳನ್ನು ಬಳಸಲಾಗುತ್ತಿದೆ.

ರಾಗಿ, ಜೋಳದ ಮುದ್ದೆ, ರೊಟ್ಟಿ ಉಪ್ಪೆಸರು, ಮೊಸರು-ಮಜ್ಜಿಗೆ ಹಾಲು ದೈನಂದಿನ ಆಹಾರವಾಗಿ ಸೇವಿಸುತ್ತಾರೆ. ಖಾರ, ಪಲ್ಯ, ಸಾಂಬಾರು, ಉಪ್ಪಿನಕಾಯಿ, ಇತ್ಯಾದಿಗಳು ಸಾಮಾನ್ಯವಾಗಿ ಬಳಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಆರ್ಥಿಕ ಸ್ಥಿತಿಗತಿಗನುಗುಣವಾಗಿ ವಿಶೇಷ ಭಕ್ಷ್ಯಗಳನ್ನು ಮಾಡಿ ಸೇವಿಸುತ್ತಾರೆ. ತಾಲ್ಲೂಕಿನಾದ್ಯಂತ ಬೆಳಗ್ಗೆ ಚಹಾ,ಕಾಫಿ, ಉಪಹಾರ, ಮಧ್ಯಾಹ್ನ ಊಟ, ಸಾಯಂಕಾಲ ಚಹಾ, ಕಾಫಿ, ಹಣ್ಣು, ರಾತ್ರಿ ಊಟ ಸೇವನೆಯೂ ಇದೆ.

**ಸಾಮಾಜಿಕ ಜೀವನ**

ತಾಲ್ಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸಾಮಾಜಿಕ ಬದುಕಿನಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ನಗರ ಪ್ರದೇಶದ ದೈನಂದಿನ ಜೀವನದಲ್ಲಿ ಸಾಕಷ್ಟು ಬದಲಾವಣೆಯಾಗಿವೆ. ಇದಕ್ಕೆ ಸಾರಿಗೆ-ಸಂಪರ್ಕದಲ್ಲಾಗಿರುವ ಪ್ರಗತಿಯು ಕಾರಣ. ಅದರಲ್ಲೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ದೂರವಾಣಿ, ದೂರದರ್ಶನ, ಗಣಕಯಂತ್ರ, ಅಂತರ್ಜಾಲ ಸೌಲಭ್ಯಗಳು ಜೀವನ ಕ್ರಮವನ್ನು ಸರಳಗೊಳಿಸಿವೆ.

ವಾಣಿಜ್ಯ ವ್ಯಾಪಾರ ವಹಿವಾಟಿನಲ್ಲಿ ಗಣನೀಯ ಪ್ರಗತಿಯಾಗಿದ್ದರೂ, ತಾಲ್ಲೂಕು ಕೇಂದ್ರ ಹೊಳಲ್ಕೆರೆ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿರುವ ವಾರದ ಸಂತೆಗಳಿಂದ ನಡೆಯುತ್ತದೆ. ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ರೇಷ್ಮೆ ಮಾರುಕಟ್ಟೆಗಳು ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಹಾಗೂ ಯೋಗ್ಯಬೆಲೆಯನ್ನು ಒದಗಿಸುವ ಮೂಲಕ ರೈತರ ಬದುಕನ್ನು ಹಸನಾಗಿಸುವಲ್ಲಿ ನೆರವಾಗಿದೆ.

ನಗರ ಜೀವನದಲ್ಲಿ ಜಾತಿ ವ್ಯವಸ್ಥೆಯ ಹಿಡಿತವನ್ನು ಸಡಿಲಗೊಳಿಸುವಲ್ಲಿ ಹೋಟೆಲ್ ವ್ಯವಸ್ಥೆಯಂತಹ ಅನೇಕ ಅಂಶಗಳು ಕೈಜೋಡಿಸಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಮುಂದುವರೆದಿದೆಯಾದರೂ ಸಾಕಷ್ಟು ಪರಿವರ್ತನೆಯಾಗಿದೆ. ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗು ಕಾನೂನು ಬಾಹಿರವಾಗಿದ್ದು ಸಾರ್ವಜನಿಕವಾಗಿ ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದ ಜನರ ಹಿತಾಸಕ್ತಿಯನ್ನು ಸಂರಕ್ಷಿಸುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿದ ಹಲವಾರು ಕಾಯ್ದೆ, ಯೋಜನೆಗಳಿಂದಾಗಿ ಕೆಳವರ್ಗದ ಜನರಿಗೆ ಸಮಾನ ಸೌಕರ್ಯ ಲಭಿಸಿ ಎಲ್ಲಾ ರಂಗಗಳಲ್ಲೂ ಅವರಿಗೆ ಪ್ರವೇಶ ದೊರೆಯುವಂತಾಗಿದೆ. ಈ ಎಲ್ಲಾ ಅಂಶಗಳಿಂದಾಗಿ ತಾಲ್ಲೂಕಿನ ಜನರ ಸಾಮಾಜಿಕ ಜೀವನದಲ್ಲಿ ಸಾಕಷ್ಟು ಬದಲಾವಣೆಯುಂಟಾಗಿದ್ದರೂ ಆಹಾರ, ವಸತಿ, ಮೂಲಭೂತ ಸೌಕರ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಸ್ಥಿರತೆ, ಉಡುಗೆ-ತೊಡುಗೆಗಳನ್ನೊಳಗೊಂಡ ಭೌತಿಕ ಸ್ಥಿತಿಗತಿಯಲ್ಲಿ ಪ್ರಗತಿ ಕಂಡು ಕೊಂಡಿದೆಯಾದರೂ ಸಾಂಪ್ರದಾಯಿಕ ಜೀವನ ಕ್ರಮ ಇನ್ನೂ ಉಳಿದುಕೊಂಡು ಬಂದಿದೆ.

## ಜನತೆ

### ಗೃಹಜೀವನ

ತಾಲ್ಲೂಕಿನ ತಾಳ್ಯ ಮುಂತಾದೆಡೆ ಶಿಲಾಯುಗ ಮಾನವರು ಹಿಂದೆ ನೆಲೆಸಿದ್ದ ಅವಶೇಷಗಳ ಬಗ್ಗೆ ಪುರಾತತ್ವ ಇಲಾಖೆ ಈಗಾಗಲೆ ವರದಿ ಮಾಡಿದೆ. ಪ್ರಸ್ತುತ ತಾಲ್ಲೂಕಿನಲ್ಲಿ ಗುಡಿಸಲು, ಮಾಳಗೆ ಮನೆ, ಮಹಡಿಮನೆ, ಕಪ್ಪು ಮತ್ತು ಕೆಂಪು ಹೆಂಚಿನ ಮನೆ ಮುಂತಾದ ಬಗೆ ಬಗೆಯ ಮನೆಗಳು ಕಂಡು ಬರುತ್ತವೆ. ಅವರವರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು, ವಿವಿಧ ವರ್ಗದ ಜನ ವಿವಿಧ ಗಾತ್ರದ ಹಾಗೂ ಸ್ವರೂಪದ ಮನೆಗಳಲ್ಲಿ ವಾಸಿಸುತ್ತಾರೆ. ಗುಡಿಸಲು–ಜೋಪಡಿಗಳಲ್ಲಿ ಕೆಳವರ್ಗದವರು, ಆರ್ಥಿಕವಾಗಿ ಅಶಕ್ತವಾಗಿರುವವರು ಹಿಂದೆ ವಾಸಿಸುತ್ತಿದ್ದರು, ಆದ್ದರಿಂದ ಸರ್ಕಾರದ ಆಸರೆಯಿಂದಾಗಿ ಅವರೂ ಸಹ ಜನತಾಮನೆ, ಆಶ್ರಯಮನೆ ಎಂದು ಕರೆಯುವ ಛಾವಣಿಗೆ ಕೆಂಪು ಹೆಂಚು, ಝುಂಕ್ ಷೀಟ್ ಹಾಕಿರುವ ಸಣ್ಣಪುಟ್ಟ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಕ್ರಮೇಣ ಆಧುನಿಕಗೊಳ್ಳುತ್ತಿವೆ. ಜೊತೆಗೆ ಸಿಮೆಂಟಿನ ತಾರಸಿಯನ್ನುಳ್ಳ ಮೂರ್‍ನಾಲ್ಕು ಅಂತಸ್ತಿನ ಮನೆಗಳು ಪಟ್ಟಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡು ಬಂದರೆ, ಗ್ರಾಮಗಳಲ್ಲೂ ತಾರಸಿ, ಆರ್.ಸಿ.ಸಿ ಮನೆಗಳು ತಲೆ ಎತ್ತುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಆಯಾ ವೃತ್ತಿಯವರು ತಮ್ಮ ಅಗತ್ಯಗಳಿಗನುಗುಣವಾಗಿ ಮನೆಯನ್ನು ನಿರ್ಮಿಸಿಕೊಳ್ಳುತ್ತಿದ್ದು, ರೈತರು ದನದ ಕೊಟ್ಟಿಗೆ, ಕಣಜ, ಹಿತ್ತಲು ಮುಂತಾದವುಗಳನ್ನು ಮನೆ ಪರಿಸರದಲ್ಲೇ ಹೊಂದಿದ್ದು ಒಳಗೆ ವಿಶಾಲ ಮನೆಯಂಗಳದಲ್ಲಿ ಒಂದೆರೆಡು ಕೊಠಡಿ, ಸ್ನಾನದ ಮನೆ, ಅಡಿಗೆ ಮನೆ, ದೇವರ ಮನೆ, ಕಾಳಿನ ಕೋಣೆ, ಇತ್ಯಾದಿಗಳಿರುತ್ತವೆ. ಅದೇ ಬಡವರಾದಲ್ಲಿ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದು, ದನದ ಕೊಟ್ಟಿಗೆಗೆ ತೆಂಗಿನ ಗರಿಯನ್ನು ಬಿಗಿದ ಛಾವಣಿ ಇರುತ್ತದೆ. ಹಿಂದೆ ಸಗಣಿ ನೆಲ ಸಾಮಾನ್ಯವಾಗಿದ್ದು, ಕೆಲವು ಮನೆಗಳಿಗೆ ಕಡಪ, ಚಪ್ಪಡಿಕಲ್ಲಿನ ನೆಲಹಾಸಿರುತ್ತಿತ್ತು. ಆದರೆ ಇಂದು ಅವುಗಳ ಸ್ಥಾನವನ್ನು ಗಾರೆ ಕಡಪಕಲ್ಲು, ಗ್ರಾನೈಟ್ ಮೊದಲಾದವು ನೆಲಹಾಸುವಾಗಿರುವುದು ಸಾಮಾನ್ಯವಾಗಿದೆ. ಮನೆಯ ಗೋಡೆಗಳು ಸುಣ್ಣ, ಕೆಮ್ಮಣ್ಣು ಬಳಿಯುವುದು ಸಾಮಾನ್ಯವಾಗಿತ್ತು. ಆದರೆ ಇತ್ತೀಚೆಗೆ ಡಿಸ್ಟೆಂಪರ್ ಬಣ್ಣ, ಏಷಿಯನ್ ಪೇಂಟ್ ಮೊದಲಾದವುಗಳನ್ನು ಹೊಡೆಸುವುದು ವಿಶೇಷವಾಗಿ ಕಾಣಿಸುತ್ತದೆ. ಇಂದು ತಾಲ್ಲೂಕು ಪೂರಾ ವಿದ್ಯುಧ್ಧೀಕರಣಗೊಂಡಿದ್ದು, ಸರ್ಕಾರದ ನೆರವಿನಿಂದಾಗಿ ಬಹುತೇಕ ಎಲ್ಲಾ ಗೃಹಗಳಿಗೂ ವಿದ್ಯುತ್ ಸಂಪರ್ಕ ಲಭಿಸಿದ್ದು, ವಿದ್ಯುತ್ ರಹಿತ ಮನೆಗಳು ವಿರಳವಾಗುತ್ತಿವೆ. ತಾಲ್ಲೂಕಿನ ಪಟ್ಟಣ ಪ್ರದೇಶದಲ್ಲಿ ಹೊಸ ಬಡಾವಣೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಜನತಾ ಬಡಾವಣೆಗಳಲ್ಲಿ ನವೀನ ಮಾದರಿಯ ಮನೆ, ಸಾಮಾಜಿಕ ಪರಿಸರಗಳು ಇಂದಿಗೂ ಉಳಿದುಕೊಂಡು ಬಂದಿದೆ. ಹೊಳಲ್ಕೆರೆ ಸೇರಿದಂತೆ ಎಲ್ಲೆಡೆಗಳಲ್ಲಿ ಸಂಪ್ರಾದಾಯಿಕ ಮನೆಗಳ ಜೊತೆಗೆ ಆಧುನಿಕ ಕಟ್ಟಡಗಳು ತಲೆ ಎತ್ತಿ ನಿಂತಿವೆ.

## ಗೃಹಪಯೋಗಿ ವಸ್ತುಗಳು

ಬಡವರ್ಗಕ್ಕೆ ಸೇರಿದ ಜನರ ಮನೆಗಳಲ್ಲಿ ಹಿಂದೆ ಮಣ್ಣಿನ ಮಡಕೆ, ಅಲ್ಯೂಮಿನಿಯಂ ಪಾತ್ರೆಗಳು, ಕಂಚಿನ ಪಾತ್ರೆಗಳು, ಹಿತ್ತಾಳೆಯ ತಾಮ್ರದ ಹಂಡೆ, ಬಿಂದಿಗೆ ಮುಂತಾದವುಗಳಿದ್ದು, ಕುರ್ಚಿ, ಬೆಂಚು, ಟೇಬಲ್‌ಗಳು ವಿರಳವಾಗಿರುತ್ತಿದ್ದವು. ಆದರೆ ಇಂದು ಸ್ಟೀಲ್ ಪಾತ್ರೆ, ಫೈಬರ್, ಕಬ್ಬಿಣದ ಕುರ್ಚಿ, ಮಂಚ, ಬೆಂಚು, ಟೇಬಲ್ ಮುಂತಾದವು ಎಲ್ಲರ ಮನೆಗಳಲ್ಲಿವೆ. ಮಧ್ಯಮ ಹಾಗೂ ಮೇಲ್ವರ್ಗದ ಜನರ ಮನೆಗಳಲ್ಲಿ ಹಿತ್ತಾಳೆ, ತಾಮ್ರ, ಆಲ್ಯೂಮಿನಿಯಂ ಪಾತ್ರೆಪಡಗಗಳನ್ನು ಬಳಸುತ್ತಿದ್ದರು. ಪ್ಲಾಸ್ಟಿಕ್ ಕುರ್ಚಿ, ಟೀಪಾಯಿ, ಬಕೇಟ್, ಬಿಂದಿಗೆ, ಬೇಸನ್ ಮುಂತಾದವುಗಳನ್ನು ಎಲ್ಲರೂ ಬಳಸುತ್ತಾರೆ. ಎಲ್.ಪಿ.ಜಿ. ಗ್ಯಾಸ್‌ಸ್ಟೌವ್‌ಗಳು ಹಳ್ಳಿಗಳನ್ನು ಪ್ರವೇಶಿಸಿದ್ದರೂ ಸೌದೆ ಒಲೆ, ಗೋಬರ್‌ಗ್ಯಾಸ್, ಅಡಿಗೆ, ಮನೆಯಲ್ಲಿ ಪ್ರಾಮುಖ್ಯತೆ ಉಳಿಸಿಕೊಂಡಿವೆ.

ಚಾಪೆ, ಜೀಸಣಿಕೆ, ಜಮಖಾನ, ಹಾಸಿಗೆ, ತಲೆದಿಂಬು, ಕಂಬಳಿ, ರಗ್ಗುಗಳನ್ನು ಎಲ್ಲರೂ ಉಪಯೋಗಿಸುತ್ತಿದ್ದರು. ಉಳ್ಳವರು ಮಂಚವನ್ನು ಬಳಸುತ್ತಾರೆ, ಹಳ್ಳಿ ಪಟ್ಟಣಗಳ ಗೃಹಪಯೋಗಿ ವಸ್ತುಗಳಲ್ಲಿ ಗಣನೀಯ ಸುಧಾರಣೆಗಳಾಗಿರುವುದು ಗಮನಾರ್ಹ.

## ಉಡುಪು

ತಾಲ್ಲೂಕಿನ ಸಾಂಪ್ರದಾಯಿಕ ಉಡುಗೆಯ ಭಾಗವಾದ ಪುರುಷರ ಪಂಚೆ, ದೋತ್ರ, ಪಟಾಪಟಿ ಚಡ್ಡಿ, ಪಂಚೆ, ಒಳ ಅಂಗಿ, ಅಂಗಿ, ಜುಬ್ಬ, ಟವೆಲು ಇತ್ಯಾದಿಗಳಾದರೆ, ಮಹಿಳೆಯರು ಸೀರೆ, ರವಿಕೆ, ಕುಪ್ಪಸ, ಲಂಗ, ಜಂಪರ್, ದಾವಣಿ ಮೊದಲಾದವುಗಳನ್ನು ಬಳಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ, ಹೊಲದಲ್ಲಿ ಚಡ್ಡಿ, ಬನಿಯನ್ ಧರಿಸುವ ರೈತರು ಬಿಡುವಿನ ವೇಳೆಯಲ್ಲಿ ಪಂಚೆ, ಶರ್ಟು ತೊಟ್ಟರೂ, ಲುಂಗಿಯ ಬಳಕೆ ಹೆಚ್ಚಾಗುತ್ತಿದೆ. ಇಂದಿನ ಯುವಕರು ಪ್ಯಾಂಟ್, ನಿಕ್ಕರ್, ಟೀ-ಶರ್ಟ್, ಬನಿಯನ್, ಚಡ್ಡಿ, ಲುಂಗಿ ಮುಂತಾದವುಗಳನ್ನು ಧರಿಸುವುದರೊಂದಿಗೆ ಸಾಂಪ್ರದಾಯಿಕ ಉಡುಗೆ ಹಿಂದೆ ಸರಿಯುತ್ತಿದೆ. ಇದೇ ರೀತಿ ಮಹಿಳೆಯರ ಸೀರೆಗಳು ಕೂಡ ಹದಿನೆಂಟು ಮೊಳಗಳಿಂದ ಹನ್ನೆರೆಡು ಮೊಳಕ್ಕೆ ಇಳಿದಿದ್ದು, ಒಳಲಂಗ, ರವಿಕೆಗಳ ಜೊತೆ ಮೊಲೆಕಟ್ಟಿನ ಬಳಕೆಯೂ ಹಳ್ಳಿಗಳಲ್ಲಿ ಸಾಮಾನ್ಯವಾಗಿದೆ.

ಹೆಣ್ಣುಮಕ್ಕಳು ಲಂಗ, ಜಂಪರ್, ಫ್ರಾಕ್, ಸ್ಕರ್ಟ್, ಚೂಡಿದಾರ್, ವೇಲ್, ಲಾಚಾ, ಮಿಡಿ, ಪ್ಯಾಂಟ್-ಶರ್ಟ್, ಜೀನ್ಸ್, ಟಿ-ಶರ್ಟ್ ಮುಂತಾದ ವೈವಿದ್ಯಮಯವಾದ ಉಡುಗೆಗಳು ಪಟ್ಟಣಗಳಲ್ಲಿ ಸಾಮಾನ್ಯವಾಗಿದ್ದು, ಹಳ್ಳಿಗಳಲ್ಲೂ ರೂಢಿಗೆ ಬಂದಿದೆ. ಯುವತಿಯರು ಸಾಂಪ್ರಾದಾಯಕ ಉಡುಗೆಯಾಗಿದ್ದ ಲಂಗ ದಾವಣಿ ವಿರಳವಾಗಿದೆ. ಮನೆಯಲ್ಲಿರುವಾಗ ವಯೋಮಾನಕ್ಕನುಗುಣವಾಗಿ ಹೆಣ್ಣು ಮಕ್ಕಳು ನೈಟಿ, ಸೀರೆ,

ಧರಿಸಿದರೆ, ಪುರುಷರು ಲುಂಗಿ, ನಿಕ್ಕರ್, ಬರ್ಮೂಡ, ಶರ್ಟ್‌ಗಳನ್ನು ಧರಿಸುವುದು ಸಾಮಾನ್ಯವಾಗಿದೆ. ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಹೊಸಬಟ್ಟೆಯನ್ನು ಖರೀದಿಸಿ ಹೊಲಿಸಿ, ಇಲ್ಲವೆ ಸಿದ್ಧ ಉಡುಪುಗಳನ್ನು ಖರೀದಿಸಿ ಯುಗಾದಿ, ಗೌರಿ ಗಣೇಶ ದೀಪಾವಳಿ ಮುಂತಾದ ಹಬ್ಬ ಹರಿದಿನಗಳಲ್ಲಿ ಹಿಂದೂಗಳು ಧರಿಸಿ ಸಂಭ್ರಮಿಸುತ್ತಾರೆ.

ಮುಸ್ಲಿಮ್ ಪುರುಷರ ಉಡುಗೆ, ಕುರ್ತಾ, ಪೈಜಾಮು, ಲುಂಗಿ, ಶರ್ಟ್‌ಗಳು ಆದರೆ, ಮಹಿಳೆಯರು ಸೀರೆ ರವಿಕೆ, ಚೂಡಿದಾರ್ ಮತ್ತು ಬುರ್ಖಾ ಧರಿಸುತ್ತಾರೆ. ಇಂದು ಅವರಲ್ಲೂ ಸಾಕಷ್ಟು ಬದಲಾವಣೆಗಳಾಗಿವೆಯಾದರೂ ಸಂಪ್ರದಾಯಸ್ಥರು ಇನ್ನೂ ಇದ್ದಾರೆ. ಮುಸ್ಲಿಂರಾದಲ್ಲಿ ರಂಜಾನ್, ಬಕ್ರೀದ್ ಹಬ್ಬಗಳಲ್ಲಿ, ಕ್ರಿಶ್ಚಿಯನ್‌ರಾದರೆ, ಕ್ರಿಸ್‌ಮಸ್, ಈಸ್ಟರ್ ಹಬ್ಬಗಳಲ್ಲಿ ಹೊಸಬಟ್ಟೆ ಧರಿಸಿ ಉಲ್ಲಾಸದಿಂದ ಹಬ್ಬ ಆಚರಿಸುತ್ತಾರೆ.

**ಆಭರಣಗಳು**

ಮಹಿಳೆಯರು ಮೂಲತಃ ಆಭರಣ ಪ್ರಿಯರು ಹಬ್ಬ ಹರಿದಿನ, ವಿವಾಹ ಮುಂತಾದ ವಿಶೇಷ ಸಂದರ್ಭಗಳಲ್ಲಿ ತಮ್ಮಲ್ಲಿರುವ ವೈವಿಧ್ಯಮಯ ಆಭರಣಗಳನ್ನು ಧರಿಸಿ ಸಂಭ್ರಮಿಸಿದರೆ, ದಿನನಿತ್ಯ ಓಲೆ, ಮಾಟಿ, ಮೂಗು ಬೊಟ್ಟು, ತಾಳಿ, ಕರಿಮಣಿ ಸರಗಳನ್ನು ವರ್ಗಭೇದವಿಲ್ಲದೇ, ಸಾಮಾನ್ಯವಾಗಿ ಧರಿಸುತ್ತಾರೆ. ಕಾಲಿಗೆ ಕಾಲ್ಮುರಿಯನ್ನು ತೊಡುತ್ತಾರೆ. ಸಾಂಪ್ರಾದಾಯಿಕ ಆಭರಣಗಳಾದ ಕಡಗ, ಜಡೆಬಿಲ್ಲೆ, ನಾಗರ, ಮುರಾವು, ಚೌಲಿಗೂದಲು, ಕೋಳಲೆ, ಪಾಟ್ಲಿ, ಅಡ್ಡಿಗೆ, ಸರ, ಬಳೆ, ಪದಕ, ತೋಳ್ಬಂದಿ ಮುಂತಾದವು ವಿರಳಗೊಂಡು ನವೀನ ಮಾದರಿಯ ಆಭರಣಗಳಿಗೆ ಮಹಿಳೆಯರು ಆಕರ್ಷಿತರಾಗಿದ್ದಾರೆ. ಹಿಂದೆ ಪುರುಷರು ಕೈಗೆ ಕಡಗವನ್ನು ಧರಿಸುತ್ತಿದ್ದರು. ಇಂದು ಪರುಷರು ಕಿವಿಗೆ ಹತ್ತೊಡಕು, ಕಾಳವಾರ, ಕೊರಳಿಗೆ ತಾಯತವನ್ನು, ಕೈಗೆ ಕಡಗವನ್ನು ಧರಿಸಿಕೊಳ್ಳುವರು. ಕೊರಳಿಗೆ ಸರ, ಬೆರಳಿಗೆ ಉಂಗುರ, ಮಣಿಕಟ್ಟಿನ ಸರ ಮುಂತಾದವು ಬಳಕೆಗೆ ಬಂದಿವೆ.

ಮಧ್ಯಮ ವರ್ಗದ ಮಹಿಳೆಯರು ಸೇರಿದಂತೆ, ಇತರರು ತಲೆಬಾಚಿಕೊಂಡು ವಿವಿಧ ಬಗೆಯಲ್ಲಿ ಜಡೆಯನ್ನು ಹೆಣೆದುಕೊಳ್ಳುತ್ತಾರೆ. ಬಾಲಕಿಯರಿಗೆ ಬಾಫ್‌ಕಟ್ ಸೇರಿದಂತೆ ವೈವಿಧ್ಯಮಯವಾಗಿ ತಲೆಗೂದಲನ್ನು ವಿನ್ಯಾಸ ಮಾಡಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹರಳೆಣ್ಣೆ, ಕೊಬ್ಬರಿ ಎಣ್ಣೆಗಳನ್ನು ಬಳಸುತ್ತಾರೆ. ಹಲ್ಲುಜ್ಜಲು ಬ್ರಷ್, ಪೇಸ್ಟ್, ಸ್ನಾನಕ್ಕೆ ಸೋಪು, ಸೀಗೇಕಾಯಿ, ಶಾಂಪು, ಮೇಕಪ್ ಮಾಡಿಕೊಳ್ಳಲು ಸ್ನೋ, ಪೌಡರ್, ಸುಗಂಧ ದ್ರವ್ಯಗಳನ್ನು ಬಳಸುವುದು ಸಾಮಾನ್ಯವಾಗಿದೆ. ಹಳ್ಳಿಗಳಲ್ಲಿ ಬ್ಯೂಟಿಪಾರ್ಲರ್ ಸಾಮಾನ್ಯವಾಗಿದೆ. ಚಪ್ಪಲಿ, ಚಡಾವುಗಳ ಬಳಕೆ ತಾಲ್ಲೂಕಿನಾದ್ಯಂತ ಸಾಮಾನ್ಯವಾಗಿ ರೂಢಿಯಲ್ಲಿದ್ದು, ಹಚ್ಚೆ ಹಾಕಿಸಿಕೊಳ್ಳುವುದು ವಿರಳವಾಗಿರುತ್ತದೆ.

**ಹಬ್ಬ-ಹರಿದಿನ, ಜಾತ್ರೆ ಉತ್ಸವಗಳು**

ತಾಲ್ಲೂಕಿನ ಜನತೆಯು ಯುಗಾದಿ, ಗೌರಿ ಗಣೇಶ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

**ಯುಗಾದಿ**

ಹಿಂದೂಗಳು ಯುಗಾದಿ ಹಬ್ಬವನ್ನು ಹೊಸವರ್ಷದ ಮೊದಲದಿನವಾಗಿ ಆಚರಿಸುತ್ತಾರೆ. ಈ ಹಬ್ಬದಲ್ಲಿ ಎಲ್ಲರೂ ಬೇವು ಬೆಲ್ಲಗಳನ್ನು ತಿಂದು ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಗುರು – ಹಿರಿಯರಿಗೆ ನಮಸ್ಕರಿಸಿ, ದೇವಾಲಯಗಳಿಗೆ ಹೋಗಿ ಬರುತ್ತಾರೆ, ದನಕರುಗಳನ್ನು ತೊಳೆದು ಪೂಜಿಸುತ್ತಾರೆ. ಈ ಹಬ್ಬದಲ್ಲಿ ಹೋಳಿಗೆ ಊಟ ಸರ್ವೇ ಸಾಮಾನ್ಯವಾಗಿದೆ.

ಗ್ರಾಮದ ಮುಖ್ಯದೇವತೆಯ ಉತ್ಸವಗಳನ್ನು ಮಾಡಲಾಗುತ್ತದೆ. ಯುಗಾದಿ ಹಬ್ಬದಂದು ಈಶ್ವರ ದೇವರ ಪೂಜೆ, ಚಂದ್ರ ದರ್ಶನ ಮಾಡುವುದು ಪವಿತ್ರವಾದುದೆಂದು ಭಾವಿಸುತ್ತಾರೆ. ರೈತರು ಕೃಷಿ ಕಾರ್ಯವನ್ನು ಹೊನ್ನಾರು ಕಟ್ಟುವುದರ ಮೂಲಕ ಪ್ರಾರಂಭಿಸುತ್ತಾರೆ.

**ಪಿತೃಪಕ್ಷ**

ತಮ್ಮ ಹಿರಿಯರ ಪೂಜೆಯನ್ನು ಮಹಾಲಯ ಅಮವಾಸ್ಯೆಯಂದು ಮಾಡಿದರೆ, ಕೆಲವರು ಆಯುಧಪೂಜೆಯಂದು, ಮತ್ತೆ ಕೆಲವರು ದೀಪಾವಳಿಯಂದು ಮಾಡತ್ತಾರೆ. ಅವರವರ ಮನೆತನದ ಸಂಪ್ರಾದಾಯಕ್ಕೆ ತಕ್ಕಂತೆ ಕೆಲವರು ಸಿಹಿಯೂಟ ಮಾಡಿದರೆ, ಕೆಲವರು ಮಾಂಸದೂಟ ಮಾಡುತ್ತಾರೆ. ಕಳಶ ಪೂಜಿಸಿ ಹೊಸಬಟ್ಟೆ ಧರಿಸಿ,ಕೋಣೆಯಲ್ಲಿ ಎಡೆ ಇಟ್ಟು ಪೂಜೆ ಮಾಡಿ ನಂತರ ಕೋಣೆಗೆ ಸ್ವಲ್ಪ ಹೊತ್ತು ಯಾರನ್ನು ಬಿಡುವುದಿಲ್ಲ, ಸ್ವಲ್ಪ ಸಮಯ ಕಳೆದ ಮೇಲೆ ಹಿರಿಯರು ಉಂಡು ಹೋದರೆಂದು ಎಡೆಗಾಗಿ ಇಟ್ಟಿದ್ದ ಪದಾರ್ಥಗಳನ್ನು ಪ್ರಸಾದವೆಂದು ಸ್ವೀಕರಿಸಿದ ನಂತರವೇ ಮನೆಯವರೆಲ್ಲರೂ ಊಟ ಮಾಡುತ್ತಾರೆ.

**ದೀಪಾವಳಿ**

ಈ ಹಬ್ಬವನ್ನು ಹಿರಿ ಕಿರಿ ದೀವಳ್ಗೆ, ದೀವಳಿಗೆ ಎಂದು ಕರೆಯುತ್ತಾರೆ. ಈ ಹಬ್ಬದಂದು ದನಕರುಗಳನ್ನು ತೊಳೆದು, ಅವುಗಳನ್ನು ಪೂಜಿಸುತ್ತಾರೆ. ಈ ಹಬ್ಬದಂದು ಎಲ್ಲರ ಮನೆ ಮುಂದೆ ಜಗಲಿ ಮೇಲೆ, ಬಾಗಿಲ ನಿಲಗಳಲ್ಲಿ ಹುಚ್ಚೇಳ್ಳು ಹೂ ಎದ್ದು ಕಾಣುತ್ತಿರುತ್ತದೆ. ಸಗಣಿ ಉಂಡೆ ಮಾಡಿ, ಅದಕ್ಕೆ ಹುಚ್ಚೇಳ್ಳು ಹೂ ಮುಡಿಸಿ ಮನೆ

ಮುಂದೆ ದೀಪ ಹಚ್ಚಿ ಇಡುತ್ತಾರೆ. ಹಟ್ಟಿ ಹೂಗಳಿಂದ ಅಲಂಕರಿಸುತ್ತಾರೆ. ತಂಗಟೆ ಹೂ, ಉತ್ತರಾಣೆ ಕಡ್ಡಿ ಮುಂತಾದವುಗಳನ್ನು ಸಿಕ್ಕಿಸಿ ಅವುಗಳನ್ನು ಮನೆ ಮುಂದೆ ಇಟ್ಟು ಪೂಜಿಸುತ್ತಾರೆ. ಪ್ರತಿಯೊಬ್ಬರು ತಮ್ಮ ಮನೆ ಮುಂದೆ ಒಂದು ತಿಂಗಳವರೆಗೆ ದೀಪಗಳನ್ನು ಸಾಯಂಕಾಲ ಹಚ್ಚಿಡುವ ಪದ್ಧತಿಯಿದೆ. ಈ ಹಬ್ಬದಲ್ಲಿ ಪಿತೃಗಳಿಗೆ ಎಡೆ ಮಾಡಿ ಬಂಧು ಬಳಗದವರನ್ನು ಕರೆಯುತ್ತಾರೆ.

**ಸಂಕ್ರಾಂತಿ**

ಇದನ್ನು ಸುಗ್ಗಿಯ ಹಬ್ಬವೆಂದು ಕರೆಯುತ್ತಾರೆ. ಈ ಹಬ್ಬದಲ್ಲಿ ಅವರೆಕಾಳು, ಕುಂಬಳಕಾಯಿ, ಕಡಲೆಕಾಯಿ, ಗೆಣಸುಗಳನ್ನು ತಿನ್ನುವ ಪರಿಪಾಠವಿದೆ. ಸಂಕ್ರಾಂತಿಯ ಹಬ್ಬ ಬೇಟೆಯ ಹಬ್ಬವಾಗಿದೆ. ಈ ಹಬ್ಬದಂದು "ಎಳ್ಳು ಬೆಲ್ಲ ತಿಂದು ಒಳ್ಳೆಮಾತಾಡು" ಎಂಬಂತೆ ಎಳ್ಳು ಬೆಲ್ಲವನ್ನು ಬಂಧುಮಿತ್ರರಿಗೆ ಹಂಚುವುದು ರೂಢಿ ಇದೆ. ಈ ಹಬ್ಬದಂದು ಮೊಲವನ್ನು ಬೇಟೆಯಾಡಿ ಗ್ರಾಮದೇವತೆ ಬಳಿ ಸೇರಿ ಪೂಜೆಯ ನಂತರ ಎಲ್ಲರೂ ಊರ ಮುಂಭಾಗದಲ್ಲಿ ಮೊಲವನ್ನು ಪೂಜಿಸಿ ಕಾಡಿಗೆ ಬಿಡುವ ಪದ್ಧತಿಯು ಇತ್ತು ಇತ್ತೀಚೆಗೆ ಇದು ವಿರಳವಾಗಿದೆ.

**ಮಹಾಶಿವರಾತ್ರಿ**

ಈ ಹಬ್ಬದಂದು ಶಿವನಿಗೆ ವಿಶೇಷವಾದ ಪೂಜೆ ಸಲ್ಲಿಸುವ ಪರಿಪಾಠವಿದೆ, ಶಿವರಾತ್ರಿಯಂದು ಗ್ರಾಮದೇವತೆಗಳಿಗೆ ಪೂಜೆ ಸಲ್ಲಿಸುತ್ತಾ, ಜಾಗರಣೆ ಮಾಡುತ್ತ, ಭಜನೆಗಳು, ಅಭಿಷೇಕ, ಅದ್ದೂರಿಯಾಗಿ ನಡೆಯುತ್ತದೆ.

**ಗ್ರಾಮದೇವತೆಗಳು**

ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ವಿವಿಧ ದೇವತೆಗಳ ಉತ್ಸವಗಳು ಜರುಗುತ್ತವೆ. ಸೌಮ್ಯದೇವತೆಗಳ ಜೊತೆಗೆ ಇತರೆ ದೇವತೆಗಳ ಹಬ್ಬಗಳು, ಜಾತ್ರೆಗಳು, ಉತ್ಸವಗಳು, ಊರಿನ ಜನ ಸೇರಿ ಮಾಡುವಂತಹ ಹಲವು ಹಬ್ಬಗಳಿವೆ. ಆಂಜನೇಯಸ್ವಾಮಿ ಜಾತ್ರೆ, ಹೊರಕೇರ ರಂಗನಾಥ ಸ್ವಾಮಿ ಜಾತ್ರೆ, ಚಿತ್ರಲಿಂಗೇಶ್ವರ ಸ್ವಾಮಿ ಜಾತ್ರೆ, ವೀರಭದ್ರೇಶ್ವರ, ಕುಕ್ಕಾಡೇಶ್ವರಿ, ಕೆಂಚಾವಧೂತರ ಜಾತ್ರೆ, ದುಮ್ಮಿ ಜುಂಜಪ್ಪನ ಜಾತ್ರೆ, ಬಂಡಿ ಚಿಕ್ಕಿ, ಮಾರಿ, ದುರ್ಗಿ, ಬಸವೇಶ್ವರ ಜಾತ್ರೆಗಳು ನಡೆಯುತ್ತವೆ.

ತಾಲ್ಲೂಕಿನಲ್ಲಿ ಎರಡು ಬಿ ವರ್ಗಕ್ಕೆ ಮತ್ತು ೩೫ ಸಿ ವರ್ಗಕ್ಕೆ ಸೇರಿದ ಧಾರ್ಮಿಕ ಸಂಸ್ಥೆಗಳನ್ನು ಮುಜರಾಯಿ ಇಲಾಖೆಯು ಪಟ್ಟಿ ಮಾಡಿ ಪ್ರಕಟಿಸಿದ್ದು, ಕೆಲವಡೆ ಜಾತ್ರೆಗಳು ಜರಗುತ್ತವೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ಪರಿಚಯಿಸಲಾಗಿದೆ.

## ತಾಲ್ಲೂಕಿನ ಪ್ರಮುಖ ಜಾತ್ರೆಗಳ ಪಟ್ಟಿ

| ಕ್ರ ಸಂ | ದೇವಸ್ಥಾನದ ಹೆಸರು | ಗ್ರಾಮ | ದೇವಸ್ಥಾನದ ವರ್ಗ | ಜಾತ್ರೆ ನಡೆಯುವ ತಿಂಗಳು | ರಥೋತ್ಸವ/ ಉತ್ಸವ |
|---|---|---|---|---|---|
| ೧ | ಶ್ರೀಲಕ್ಷ್ಮೀ ನರಸಿಂಹಸ್ವಾಮಿ | ಹೆಚ್.ಡಿ ಪುರ | "ಬಿ" ವರ್ಗ | ಮಾರ್ಚ್ ಅಕ್ಟೋಬರ್ | ರಥೋತ್ಸವ ದಸರಾ ಉತ್ಸವ |
| ೨ | ಶ್ರೀ ಚಿತ್ರಲಿಂಗೇಶ್ವರ ಸ್ವಾಮಿ | ಚಿತ್ರಹಳ್ಳಿ | "ಬಿ" ವರ್ಗ | ಅಕ್ಟೋಬರ್ | ದಸರಾ ಉತ್ಸವ |
| ೩ | ಶ್ರೀ ದೊಡ್ಡ ಹೊಟ್ಟೆ ರಂಗನಾಥಸ್ವಾಮಿ | ಲೊಕದೊಳಲ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೪ | ಶ್ರೀ ಹನುಮಂತ ದೇವರು | ತಾಳ್ಯ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೫ | ಶ್ರೀ ಪ್ರಾಣ ದೇವರು | ಚಿತ್ರಹಳ್ಳಿ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೬ | ಶ್ರೀ ವೇಣುಗೋಪಾಲ ಸ್ವಾಮಿ | ಹೊಳಲ್ಕೆರೆ | "ಸಿ" ವರ್ಗ | ಮಾರ್ಚ್ | ರಥೋತ್ಸವ |
| ೭ | ಶ್ರೀ ರಂಗನಾಥಸ್ವಾಮಿ | ಕುನುಗಲಿ | "ಸಿ" ವರ್ಗ | ಫೆಬ್ರವರಿ | ರಥೋತ್ಸವ |
| ೮ | ಶ್ರೀ ಕರಿಸಿದ್ಧೇಶ್ವರ ಸ್ವಾಮಿ | ರಾಮಗಿರಿ | "ಸಿ" ವರ್ಗ | ಡಿಸೆಂಬರ್ | ಕಾರ್ತಿಕೋತ್ಸವ |
| ೯ | ಶ್ರೀ ಹನುಮಂತ ದೇವರು | ಉಗಣೇಕಟ್ಟೆ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೧೦ | ಶ್ರೀ ಹನುಮಂತ ದೇವರು | ಹೊಳಲ್ಕೆರೆ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೧೧ | ಶ್ರೀ ಹನುಮಂತ ದೇವರು | ಅಂದನೂರು | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೧೨ | ಶ್ರೀ ಕಂಪ್ಲಿನರಸಿಂಹ ಸ್ವಾಮಿ | ಗಂಜಿಕಟ್ಟೆ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೧೩ | ಶ್ರೀ ರಂಗನಾಥ ಸ್ವಾಮಿ | ಉಗಣೇಕಟ್ಟೆ | "ಸಿ" ವರ್ಗ | ಮಾರ್ಚ್ | ರಥೋತ್ಸವ |
| ೧೪ | ಶ್ರೀ ಆಂಜನೇಯ ಸ್ವಾಮಿ | ರಾಮಗಿರಿ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |

| | | | | | |
|---|---|---|---|---|---|
| ೧೫ | ಶ್ರೀ ಹನುಮಂತ ದೇವರು | ಹಿರೇಕಂದವಾಡಿ | “ಸಿ” ವರ್ಗ | ಏಪ್ರಿಲ್ | ರಥೋತ್ಸವ |
| ೧೬ | ಶ್ರೀ ಸಿದ್ಧರಾಮೇಶ್ವರ ಸ್ವಾಮಿ | ಚನ್ನಸಮುದ್ರ | “ಸಿ” ವರ್ಗ | ಮಾರ್ಚ್ | ರಥೋತ್ಸವ |
| ೧೭ | ಶ್ರೀ ತಿರುಮಲಾ ದೇವರು | ಆಡನೂರು | “ಸಿ” ವರ್ಗ | ಏಪ್ರಿಲ್ | ರಥೋತ್ಸವ |
| ೧೮ | ಶ್ರೀ ಆಂಜನೇಯ ಸ್ವಾಮಿ | ತೊಡ್ರನಾಳ್ | “ಸಿ” ವರ್ಗ | ಏಪ್ರಿಲ್ | ರಥೋತ್ಸವ |
| ೧೯ | ಶ್ರೀ ಆಂಜನೇಯ ಸ್ವಾಮಿ | ಮಲಸಿಂಗನಹಳ್ಳಿ | “ಸಿ” ವರ್ಗ | ಏಪ್ರಿಲ್ | ರಥೋತ್ಸವ |
| ೨೦ | ಶ್ರೀ ಆಂಜನೇಯ ಸ್ವಾಮಿ | ದೊಗ್ಗನಾಳ್ | “ಸಿ” ವರ್ಗ | ಏಪ್ರಿಲ್ | ರಥೋತ್ಸವ |
| ೨೧ | ಶ್ರೀ ರಂಗನಾಥಸ್ವಾಮಿ | ಆರ್.ನುಲೇನೂರು | “ಸಿ” ವರ್ಗ | ಮಾರ್ಚ್ | ರಥೋತ್ಸವ |
| ೨೨ | ಶ್ರೀ ಬಂಡಿ ಚಿಕ್ಕಮ್ಮ | ಹೊಳಲ್ಕೆರೆ | “ಸಿ” ವರ್ಗ | ಮೇ | ಸಿ.ಡಿ(ಉತ್ಸವ) |
| ೨೩ | ಶ್ರೀ ಆಂಜನೇಯ ಸ್ವಾಮಿ | ಬಿ.ಜಿ.ಹಳ್ಳಿ | “ಸಿ” ವರ್ಗ | ಅಕ್ಟೋಬರ್ | ದಸರಾ ಉತ್ಸವ |
| ೨೪ | ಶ್ರೀ ಕರಿಯಮ್ಮ ದೇವರು | ತಾಳ್ಯ | “ಸಿ” ವರ್ಗ | ಅಕ್ಟೋಬರ್ | ನವರಾತ್ರಿ ಉತ್ಸವ |
| ೨೫ | ಶ್ರೀ ಈಶ್ವರ ದೇವರು | ಬಿ.ಜಿ.ಹಳ್ಳಿ | “ಸಿ” ವರ್ಗ | ಅಕ್ಟೋಬರ್ | ದಸರಾ ಉತ್ಸವ |
| ೨೬ | ಶ್ರೀ ವೀರಭದ್ರಸ್ವಾಮಿ ದೇವರು | ಈಚಗಟ್ಟ | “ಸಿ” ವರ್ಗ | ಅಕ್ಟೋಬರ್ | ದಸರಾ ಉತ್ಸವ |
| ೨೭ | ಶ್ರೀ ಮರಡಿ ರಂಗನಾಥಸ್ವಾಮಿ | ಶಿವಗಂಗ | “ಸಿ” ವರ್ಗ | ಡಿಸೆಂಬರ್ | ರಥೋತ್ಸವ |
| ೨೮ | ಶ್ರೀ ಕರಿಯಮ್ಮ ದೇವರು | ಹಿರೇಎಮ್ಮಿಗನೂರು | “ಸಿ” ವರ್ಗ | ಅಕ್ಟೋಬರ್ | ನವರಾತ್ರಿ ಉತ್ಸವ |
| ೨೯ | ಶ್ರೀ ಕರಿಯಮ್ಮ ದೇವರು | ಕುಮ್ಮಿನಘಟ್ಟ | “ಸಿ” ವರ್ಗ | ಏಪ್ರಿಲ್ | ರಥೋತ್ಸವ |
| ೩೦ | ಶ್ರೀ ರಂಗನಾಥ ಸ್ವಾಮಿ | ತಿರುಮಲಾಪುರ | “ಸಿ” ವರ್ಗ | ಏಪ್ರಿಲ್ | ರಥೋತ್ಸವ |

| | | | | | |
|---|---|---|---|---|---|
| ೩೧ | ಶ್ರೀ ಹನುಮಂತ ದೇವರು | ಎನ್ ಜಿ ಹಳ್ಳಿ | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೩೨ | ಶ್ರೀ ರಂಗನಾಥ ಸ್ವಾಮಿ | ಕುಮ್ಮಿನಘಟ್ಟ | "ಸಿ" ವರ್ಗ | ಫೆಬ್ರವರಿ | ರಥೋತ್ಸವ |
| ೩೩ | ಶ್ರೀ ಕಲ್ಲೇಶ್ವರ ಸ್ವಾಮಿ | ಹಿರೇಎಮ್ಮಿಗನೂರು | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೩೪ | ಶ್ರೀ ಸಿದ್ಧರಾಮೇಶ್ವರ ಸ್ವಾಮಿ | ಅಂದನೂರು | "ಸಿ" ವರ್ಗ | ಏಪ್ರಿಲ್ | ರಥೋತ್ಸವ |
| ೩೫ | ಶ್ರೀ ರಾಮಕೃಷ್ಣ ದೇವರು | ಚಿಕ್ಕಜಾಜೂರು | "ಸಿ" ವರ್ಗ | ಏಪ್ರಿಲ್ | ಉತ್ಸವ |
| ೩೬ | ಶ್ರೀ ವೀರಭದ್ರಸ್ವಾಮಿ | ತಾಳ್ಯ | "ಸಿ" ವರ್ಗ | ಅಕ್ಟೋಬರ್ | ದಸರಾ ಉತ್ಸವ |
| ೩೭ | ಶ್ರೀ ಕರಿಯಮ್ಮ ದೇವರು | ಘಟ್ಟಿಹೊಸಳ್ಳಿ | "ಸಿ" ವರ್ಗ | ಅಕ್ಟೋಬರ್ | ನವರಾತ್ರಿ ಉತ್ಸವ |

## ಅಧ್ಯಾಯ–೪

# ಕೃಷಿ ಮತ್ತು ನೀರಾವರಿ

**ಪ್ರಾಚೀನ ಕೃಷಿ ಪದ್ಧತಿಗಳು**: ತಾಲ್ಲೂಕಿನ ಆರ್ಥಿಕ ವ್ಯವಸ್ಥೆಗೆ ಕೃಷಿಯೇ ಬೆನ್ನೆಲುಬು. ಪಶುಪಾಲನೆಯ ನಂತರ ಬಂದ ವ್ಯವಸಾಯದ ಪರಿಕಲ್ಪನೆ ಮಾನವನ ಬದುಕಿಗೆ ಮಹತ್ವವಾದ ತಿರುವು ನೀಡಿತು. ಅಲೆಮಾರಿ ಮಾನವ ಒಂದೆಡೆ ನೆಲೆಯಾಗಲು ಅನುವಾಯಿತಾದರು ಆ ಬಗ್ಗೆ ನಿಖರವಾಗಿ ಹೇಳುವುದು ಕಷ್ಟ. ಪುರಾತನ ಅವಶೇಷಗಳ ಆಧಾರದ ಮೇಲೆ ಹಾಗೂ ಪ್ರಸ್ತುತ ಬೆಟ್ಟಗುಡ್ಡಗಳಲ್ಲಿ ಬದುಕುತ್ತಿರುವ ಬುಡಕಟ್ಟು ಸಮುದಾಯದವರ ವ್ಯವಸಾಯ ಪದ್ಧತಿಯ ಆಧಾರದ ಮೇಲೆ ಇದರ ಉಗಮವನ್ನು ಊಹಿಸಬಹುದಾಗಿದೆ.

ಹೊಳಲ್ಕೆರೆ ತಾಲ್ಲೂಕು ಕೃಷಿ ಸಂಸ್ಕೃತಿಯ ನೆಲೆಯಾಗಿದ್ದು, ಹಿಂದಿನಿಂದಲೂ ಜನ ಸಾಮಾನ್ಯವಾಗಿ ಕೆರೆಕಟ್ಟೆಗಳ ಆಶ್ರಯದಲ್ಲಿ ತೋಟ, ನೀರಾವರಿಯ ಜೊತೆಗೆ ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದರೆಂಬುದಕ್ಕೆ ಪ್ರಾಚೀನ ಕುರುಹುಗಳು ದೊರೆಯುತ್ತವೆ. ಆಧುನಿಕ ಹಾಗೂ ವೈಜ್ಞಾನಿಕ ಜ್ಞಾನ ಮತ್ತು ಸಲಕರಣೆಗಳನ್ನು ಬಿಟ್ಟರೆ ಇಂದಿನ ಮತ್ತು ಅಂದಿನ ಕೃಷಿ ಕ್ರಮಗಳಲ್ಲಿ ಅಷ್ಟೇನು ವ್ಯತ್ಯಾಸವಿಲ್ಲವೆಂದು ಹೇಳಬಹುದು. ರಾಗಿ, ಬತ್ತ, ಜೋಳ, ಮೊದಲಾದ ಧಾನ್ಯಗಳನ್ನು ಬೆಳೆದು ಅವುಗಳು ಪಕ್ವವಾದ ಮೇಲೆ ಕೊಯ್ಲು ಮಾಡುತ್ತಿದ್ದರು. ಕೊಯ್ದ ಧಾನ್ಯದ ತೆನೆಗಳನ್ನು 'ಗುಡ್ಡೆ' ಹಾಕಿ ಸಂಗ್ರಹಿಸಿ, ಕಣದಲ್ಲಿ ಒಕ್ಕಣೆಮಾಡಿ, ಧಾನ್ಯಗಳನ್ನು ಬೇರ್ಪಡಿಸಿ ಅನಂತರ ಮೊರಗಳಿಂದ ಧಾನ್ಯಗಳನ್ನು ತೂರಿ, ಹೊಟ್ಟು ಕಸಕಡ್ಡಿಗಳಿಂದ ಬೇರ್ಪಡಿಸಿ, ಕಣದಲ್ಲಿ ರಾಶಿಮಾಡಿ, ಒಣಗಿಸಿ ಹದವಾದ ಮೇಲೆ ಕೊಂಡೊಯ್ದು ಹಗೇವು, ಕಣಜ, ಇತ್ಯಾದಿಗಳಲ್ಲಿ ಸಂಗ್ರಹಿಸುತ್ತಿದ್ದರು.

### ಕೃಷಿ ಕಾರ್ಮಿಕರು

ತಾಲ್ಲೂಕಿನಲ್ಲಿ ಸುಮಾರು ಶೇ ೭೦ ಕ್ಕಿಂತ ಹೆಚ್ಚಾಗಿ ಜನರು ಪ್ರತ್ಯೇಕವಾಗಿ ಮತ್ತು ಪರೋಕ್ಷವಾಗಿ ಕೃಷಿಯನ್ನೇ ತಮ್ಮ ಮೂಲ ಕಸುಬಾಗಿಯೂ, ಉಪಕಸುಬಾಗಿಯೂ

ಮಾಡಿಕೊಂಡಿದ್ದಾರೆ. ೨೦೧೧ರ ಜನಗಣತಿ ಪ್ರಕಾರ ತಾಲ್ಲೂಕಿನಲ್ಲಿರುವ ಕೃಷಿ ಸಾಗುವಳಿದಾರರು ಹಾಗೂ ಕೃಷಿಕೆಲಸಗಾರರ ವರ್ಗೀಕರಣ ಹೀಗಿದೆ.

| | |
|---|---|
| ಪುರುಷ ಕೃಷಿ ಸಾಗುವಳಿದಾರರು | ೩೫,೧೨೫ |
| ಮಹಿಳಾ ಕೃಷಿ ಸಾಗುವಳಿದಾರರು | ೧೭,೧೩೧ |
| ಒಟ್ಟು ಕೃಷಿ ಸಾಗುವಳಿದಾರರು | ೫೨,೨೫೬ |
| ಪುರುಷ ಕೃಷಿ ಕಾರ್ಮಿಕರು | ೧೩,೭೫೦ |
| ಮಹಿಳಾ ಕೃಷಿ ಕಾರ್ಮಿಕರು | ೨೨,೭೨೨ |
| ಒಟ್ಟು ಕೃಷಿ ಕಾರ್ಮಿಕರು | ೩೬,೪೭೨ |
| ಇತರೆ ಕಾರ್ಮಿಕರು | ೧೧,೭೮೮ |
| ಮಹಿಳೆಯರು | ೩,೮೩೭ |
| ಒಟ್ಟು ಕೆಲಸಗಾರರು | ೧,೦೬,೯೯೪ |

**ಭೂಮಿಯ ಬಳಕೆ**

೨೦೧೫-೧೬ ರ ಅಂಕಿಅಂಶಗಳಂತೆ ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೩೫,೮೬೮ ಹೆಕ್ಟೇರುಗಳು, ಅರಣ್ಯ ಪ್ರದೇಶ ೮,೮೭೮ ಹೆಕ್ಟೇರುಗಳು, ಸಾಗುವಳಿಗೆ ಲಭ್ಯವಿಲ್ಲದ ಭೂಮಿ ಒಟ್ಟು ೧೧,೯೬೮ ಹೆಕ್ಟೇರುಗಳು ಅಂದರೆ ಕೃಷಿ ಬಿಟ್ಟು ಇತರೆ ಉದ್ದೇಶಗಳಿಗೆ ಉಪಯೋಗಿಸಿರುವ ಭೂಮಿ ೬,೧೦೦ ಹೆಕ್ಟೇರುಗಳು ಹಾಗೂ ಬಂಜರು ಮತ್ತು ಕೃಷಿ ಮಾಡಲು ಸಾಧ್ಯವಿಲ್ಲದ ಭೂಮಿ ೫,೮೬೮ ಹೆಕ್ಟೇರುಗಳು, ಸಾಗುವಳಿ ಮಾಡದಿರುವ ಇತರೆ ಭೂಮಿ ಒಟ್ಟು ೨೨,೨೮೨ ಹೆಕ್ಟೇರುಗಳು, ಅಂದರೆ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ ೬೧೭ ಹೆಕ್ಟೇರುಗಳು, ಖಾಯಂ ಗೋಮಾಳ ೨೧,೦೦೦ ಹೆಕ್ಟೇರುಗಳು ಹಾಗೂ ವೃಕ್ಷ ಮತ್ತು ತೋಪುಗಳು ೬೨೫ ಹೆಕ್ಟೇರು. ಒಟ್ಟು ೨೫,೧೮೦ ಹೆಕ್ಟೇರುಗಳು, ಬೀಳು ಭೂಮಿಯಲ್ಲಿ ಚಾಲ್ತಿ ೨೦,೪೫೦ ಹೆಕ್ಟೇರುಗಳು ಮತ್ತು ಇತರೆ ೪,೭೩೦ ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ನಿವ್ವಳ ೬೭,೬೦೦ ಹೆಕ್ಟೇರುಗಳು, ಒಂದಕ್ಕಿಂತ ಹೆಚ್ಚು ಬಾರಿ ೧೨,೩೭೧ ಹೆಕ್ಟೇರುಗಳು, ಒಟ್ಟು ೭೯,೯೭೧ ಹೆಕ್ಟೇರುಗಳಾಗಿದೆ. ನಾಲ್ಕು ರೈತ ಸಂಪರ್ಕ ಕೇಂದ್ರಗಳು ತಾಲ್ಲೂಕಿನಲ್ಲಿವೆ.

| ಭೂಮಿಯ ಬಳಕೆ (ಹೆಕ್ಟೇರ್‌ಗಳಲ್ಲಿ) | | | | | |
|---|---|---|---|---|---|
| ೧ | ಭೌಗೋಳಿಕ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | | ೨೦೧೩–೧೪ರ ಗಣತಿ | ೨೦೧೪–೧೫ರ ಗಣತಿ | ೨೦೧೫–೧೬ರ ಗಣತಿ |
| | | | ೧,೩೫,೮೬೮ | ೧,೩೫,೮೬೮ | ೧,೩೫,೮೬೮ |
| ೨ | ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ | | | | |
| | ಎ | ಅರಣ್ಯ | ೮,೮೭೮ | ೮,೮೭೮ | ೮,೮೭೮ |
| | ಬಿ | ವ್ಯವಸಾಯೇತರ | ೫,೫೪೦ | ೫,೫೪೦ | ೬,೧೦೦ |
| | ಸಿ | ಬಂಜರು | ೫,೮೬೮ | ೫,೮೬೮ | ೫,೮೬೮ |
| | ಡಿ | ಒಟ್ಟು | ೧೧,೪೦೮ | ೧೧,೪೦೮ | ೧೧,೯೬೮ |
| ೩ | ಸಾಗುವಳಿ ಮಾಡದಿರುವ ಇತರೆ ಭೂಮಿ | | | | |
| | ಎ | ಸಾಗುವಳಿಗೆ ಯೋಗ್ಯವಾದ ಬಂಜರು | ೬೧೭ | ೬೧೭ | ೬೧೭ |
| | ಬಿ | ಖಾಯಂ ಗೋಮಾಳ | ೨೧,೦೦೦ | ೨೧,೦೦೦ | ೨೧,೦೦೦ |
| | ಸಿ | ವೃಕ್ಷ ಮತ್ತು ತೋಪುಗಳು | ೬೨೫ | ೬೨೫ | ೬೨೫ |
| | ಡಿ | ಒಟ್ಟು | ೨೨,೨೪೨ | ೨೨,೨೪೨ | ೨೨,೨೪೨ |
| ೪ | ಬೀಳು ಭೂಮಿ | | | | |
| | ಎ | ಚಾಲ್ತಿ | ೧೪,೫೭೯ | ೨೨,೭೪೮ | ೨೦,೪೫೦ |
| | ಬಿ | ಇತರೆ | ೪,೭೩೦ | ೪,೭೨೫ | ೪,೭೩೦ |
| | ಸಿ | ಒಟ್ಟು | ೧೯೩೦೯ | ೨೭,೪೭೩ | ೨೫,೧೮೦ |
| ೫ | ಬಿತ್ತನೆಯಾದ ಪ್ರದೇಶ | | | | |
| | ಎ | ನಿವ್ವಳ | ೭೪,೦೩೧ | ೬೫,೮೬೭ | ೬೭,೬೦೦ |
| | ಬಿ | ಒಂದಕ್ಕಿಂತ ಹೆಚ್ಚು ಬಾರಿ | ೮,೧೩೦ | ೧,೭೦೦ | ೧೨,೩೭೧ |
| | ಸಿ | ಒಟ್ಟು | ೮೨,೧೬೧ | ೮೨,೮೬೭ | ೭೯,೯೭೧ |

**ಆಧಾರ: ಚಿತ್ರದುರ್ಗ ಜಿಲ್ಲಾ ಅಂಕಿಅಂಶಗಳ ನೋಟ ೨೦೧೩–೧೪, ೨೦೧೪–೧೫ ಮತ್ತು ೨೦೧೫–೧೬**

## ಮಣ್ಣು

ಶಾಸನ ಸಾಹಿತ್ಯ ಮತ್ತಿತರ ಆಧಾರಗಳು ತಾಲ್ಲೂಕಿನ ಪ್ರಾಚೀನ ಕಾಲದಲ್ಲಿದ್ದ ಕೃಷಿಯ ಸ್ಮೃತಿಗಳ ಬಗ್ಗೆ ಬೆಳಕು ಬೀರುತ್ತವೆ. ಕೃಷಿಯೇ ಆಗಿನ ಪ್ರಮುಖ ಆದಾಯದ ಮೂಲವಾದ್ದರಿಂದ ಆಡಳಿತಗಾರರು ಬೇಸಾಯ ಭೂಮಿಯನ್ನು ಗುಣಮಟ್ಟ ಫಲವತ್ತತೆಗಳ ಆಧಾರದ ಮೇಲೆ ವಿಂಗಡಿಸಿ ಕಂದಾಯ ಇತ್ಯಾದಿಗಳನ್ನು ನಿಷ್ಕರ್ಷೆ

ಮಾಡುತ್ತಿದ್ದಂತಹ ಅನೇಕ ಹೆಸರುಗಳು ಉಲ್ಲೇಖವಾಗಿದೆ. ಅವುಗಳೆಂದರೆ, ಎರೆ ಅಥವಾ ಕರಿಯ ಮಣ್ಣಿನ ಭೂಮಿ, ಕಿಸುಮಣ್ಣು ಅಥವಾ ಕೆಂಪು ಮಣ್ಣಿನ ಭೂಮಿ, ಮರಳು ಭೂಮಿ ಅಥವಾ ಮಧ್ಯಮ ಭೂಮಿ ಇತ್ಯಾದಿ. ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಕೆಂಪು, ಮರಳು ಮಿಶ್ರಿತ ಕಪ್ಪು ಮಣ್ಣು, ಶೇ ೬೦ ರಷ್ಟು ಹೆಚ್ಚು ಭಾಗದಲ್ಲಿದ್ದು ಉತ್ತಮ ಇಳುವರಿ ಪಡೆಯಲು ನೆರವಾಗಿದೆ.

### ಕೃಷಿ ಮತ್ತು ಹಿಡುವಳಿಗಳು

ತಾಲ್ಲೂಕಿನ ಭೂಹಿಡುವಳಿಗಳು ಮತ್ತು ವಿಸ್ತೀರ್ಣದ ವಿವರಗಳು ೨೦೧೦-೧೧ ರ ಕೃಷಿ ಗಣತಿಯಂತೆ ಹೀಗಿವೆ.

| ೧ | ಅತಿ ಸಣ್ಣ (< ೧ ಹೆಕ್ಟೇರ್) | | | ೨೦೧೦-೧೧ ರ ಗಣತಿ |
|---|---|---|---|---|
| | ೧ | ಪ. ಜಾತಿ | | |
| | | ೧ | ಸಂಖ್ಯೆ | ೩,೮೭೪ |
| | | ೨ | ವಿಸ್ತೀರ್ಣ | ೨,೩೧೦.೨೨ |
| | ೨ | ಪ. ಪಂಗಡ | | |
| | | ೧ | ಸಂಖ್ಯೆ | ೨,೦೮೪ |
| | | ೨ | ವಿಸ್ತೀರ್ಣ | ೧,೨೧೫.೫೧ |
| | ೩ | ಇತರೆ | | |
| | | ೧ | ಸಂಖ್ಯೆ | ೧೩,೮೯೪ |
| | | ೨ | ವಿಸ್ತೀರ್ಣ | ೭,೭೬೪.೫೫ |
| | ೪ | ಒಟ್ಟು | | |
| | | ೧ | ಸಂಖ್ಯೆ | ೧೯,೮೫೨ |
| | | ೨ | ವಿಸ್ತೀರ್ಣ | ೧೧,೪೯೦.೨೮ |
| ೨ | ಸಣ್ಣ (೧-೨ ಹೆಕ್ಟೇರ್) | | | |
| | ೧ | ಪ. ಜಾತಿ | | |
| | | ೧ | ಸಂಖ್ಯೆ | ೨,೬೪೦ |
| | | ೨ | ವಿಸ್ತೀರ್ಣ | ೩,೫೯೩.೩೧ |
| | ೨ | ಪ. ಪಂಗಡ | | |
| | | ೧ | ಸಂಖ್ಯೆ | ೧,೪೯೬ |
| | | ೨ | ವಿಸ್ತೀರ್ಣ | ೨,೦೩೯.೪೩ |

| | | | | |
|---|---|---|---|---|
| | ೩ | **ಇತರೆ** | | |
| | | ೧ | ಸಂಖ್ಯೆ | ೧೦,೧೨೨ |
| | | ೨ | ವಿಸ್ತೀರ್ಣ | ೧೪,೦೭೭.೯೬ |
| | ೪ | **ಒಟ್ಟು** | | |
| | | ೧ | ಸಂಖ್ಯೆ | ೧೪,೨೫೮ |
| | | ೨ | ವಿಸ್ತೀರ್ಣ | ೧೯,೭೧೦.೭ |
| **೩** | **ಅರೆ ಮಧ್ಯಮ (೨–೪ ಹೆಕ್ಟೇರ್)** | | | |
| | ೧ | **ಪ. ಜಾತಿ** | | |
| | | ೧ | ಸಂಖ್ಯೆ | ೮೪೭ |
| | | ೨ | ವಿಸ್ತೀರ್ಣ | ೨,೧೪೬.೬೨ |
| | ೨ | **ಪ. ಪಂಗಡ** | | |
| | | ೧ | ಸಂಖ್ಯೆ | ೫೬೯ |
| | | ೨ | ವಿಸ್ತೀರ್ಣ | ೧,೪೮೩.೧೩ |
| | ೩ | **ಇತರೆ** | | |
| | | ೧ | ಸಂಖ್ಯೆ | ೫,೮೮೩ |
| | | ೨ | ವಿಸ್ತೀರ್ಣ | ೧೫,೭೮೪.೪೦ |
| | ೪ | **ಒಟ್ಟು** | | |
| | | ೧ | ಸಂಖ್ಯೆ | ೭,೨೯೯ |
| | | ೨ | ವಿಸ್ತೀರ್ಣ | ೧೯,೪೧೪.೧೫ |
| **೪** | **ಮಧ್ಯಮ (೪–೧೦ ಹೆಕ್ಟೇರ್)** | | | |
| | ೧ | **ಪ. ಜಾತಿ** | | |
| | | ೧ | ಸಂಖ್ಯೆ | ೧೩೨ |
| | | ೨ | ವಿಸ್ತೀರ್ಣ | ೬೭೪.೨ |
| | ೨ | **ಪ. ಪಂಗಡ** | | |
| | | ೧ | ಸಂಖ್ಯೆ | ೧೪೭ |
| | | ೨ | ವಿಸ್ತೀರ್ಣ | ೭೯೪.೬೨ |
| | ೩ | **ಇತರೆ** | | |
| | | ೧ | ಸಂಖ್ಯೆ | ೨,೧೨೭ |
| | | ೨ | ವಿಸ್ತೀರ್ಣ | ೧೧,೬೯೭.೧೫ |
| | ೪ | **ಒಟ್ಟು** | | |

| | | | | |
|---|---|---|---|---|
| | | ೧ | ಸಂಖ್ಯೆ | ೨,೪೧೨ |
| | | ೨ | ವಿಸ್ತೀರ್ಣ | ೧೩,೨೧೭.೦೯ |
| **೫** | **ದೊಡ್ಡ (< ೧೦ ಹೆಕ್ಟೇರ್)** | | | |
| | ೧ | **ಪ. ಜಾತಿ** | | |
| | | ೧ | ಸಂಖ್ಯೆ | ೬ |
| | | ೨ | ವಿಸ್ತೀರ್ಣ | ೭೩.೦೪ |
| | ೨ | **ಪ. ಪಂಗಡ** | | |
| | | ೧ | ಸಂಖ್ಯೆ | ೯ |
| | | ೨ | ವಿಸ್ತೀರ್ಣ | ೧೧೨.೮ |
| | ೩ | **ಇತರೆ** | | |
| | | ೧ | ಸಂಖ್ಯೆ | ೧೪೫ |
| | | ೨ | ವಿಸ್ತೀರ್ಣ | ೧,೯೧೯.೧೪ |
| | ೪ | **ಒಟ್ಟು** | | |
| | | ೧ | ಸಂಖ್ಯೆ | ೧೭೮ |
| | | ೨ | ವಿಸ್ತೀರ್ಣ | ೩,೩೯೯.೮೧ |
| **೬** | **ಒಟ್ಟು (ಹೆಕ್ಟೇರ್)** | | | |
| | ೧ | **ಪ. ಜಾತಿ** | | |
| | | ೧ | ಸಂಖ್ಯೆ | ೭,೪೯೯ |
| | | ೨ | ವಿಸ್ತೀರ್ಣ | ೮,೭೯೭.೩೯ |
| | ೨ | **ಪ. ಪಂಗಡ** | | |
| | | ೧ | ಸಂಖ್ಯೆ | ೪,೩೦೫ |
| | | ೨ | ವಿಸ್ತೀರ್ಣ | ೫,೬೪೫.೪೯ |
| | ೩ | **ಇತರೆ** | | |
| | | ೧ | ಸಂಖ್ಯೆ | ೩೨,೧೭೧ |
| | | ೨ | ವಿಸ್ತೀರ್ಣ | ೫೧,೨೪೩.೨ |
| | ೪ | **ಒಟ್ಟು** | | |
| | | ೧ | ಸಂಖ್ಯೆ | ೪೩,೯೯೯ |
| | | ೨ | ವಿಸ್ತೀರ್ಣ | ೬೭,೦೩೨.೦೩ |

ಆಧಾರ: ಕೃಷಿ ಗಣತಿ ೨೦೧೦-೧೧.

# ಕೃಷಿ ಮತ್ತು ನೀರಾವರಿ

## ಕೃಷಿ ಬೆಳೆಪದ್ಧತಿ

ಹೊಳಲ್ಕೆರೆ ತಾಲ್ಲೂಕಿನ ಹವಾಗುಣ ಒಟ್ಟಾರೆ ಹಿತಕರವಾಗಿರುವುದರಿಂದ ಹಲವಾರು ಕೃಷಿ ಬೆಳೆಗಳನ್ನು ಬೆಳೆಯಬಹುದಾಗಿದೆ. ಧಾನ್ಯಗಳಲ್ಲಿ ರಾಗಿ, ಬತ್ತ, ಮುಸುಕಿನ ಜೋಳ, ನವಣೆ, ಸಜ್ಜೆ, ಸಾವೆ, ಹಾರಕ, ತೊಗರಿ, ಅಲಸಂದೆ, ಹೆಸರು, ಉದ್ದು, ಹುರುಳಿ, ಅವರೆ, ನಾರು ಬೆಳೆಗಳಲ್ಲಿ ಹತ್ತಿ, ಹಿಪ್ಪುನೇರಳೆ, ಸಾಂಬಾರು ಬೆಳೆಗಳು, ಮೆಣಸಿನಕಾಯಿ, ಸಾಸುವೆ, ಕೊತ್ತಂಬರಿ, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಮೆಣಸು, ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹರುಳು, ಎಳ್ಳು, ಕುಸುಬೆ, ಹುಚ್ಚೆಳ್ಳು, ಕಡಲೆಕಾಯಿ, ಸೂರ್ಯಕಾಂತಿ, ಮೊದಲಾದ ಎಣ್ಣೆಕಾಳು ಬೆಳೆಗಳನ್ನು ಸಹ ಬೆಳೆಯಲಾಗುತ್ತಿದೆ.

ವಿಳೆಯದೆಲೆ, ತೆಂಗು, ಅಡಕೆ, ಬಾಳೆ ಮುಂತಾದ ತೋಟದ ಬೆಳೆಗಳು ಮಾವು, ಸಪೋಟ, ಬಾಳೆ, ಹಲಸು, ದಾಳಿಂಬೆ, ನಿಂಬೆ, ಕಲ್ಲಂಗಡಿ, ಕರಬೂಜ, ಪಪ್ಪಾಯಿ ಮೊದಲಾದ ಹಣ್ಣಿನ ಬೆಳೆಗಳನ್ನು ಬೆಳೆಯಲಾಗುತ್ತಿದೆ. ತರಕಾರಿ ಬೆಳೆಗಳಲ್ಲಿ ಬದನೆ, ಟೊಮಾಟೊ, ಕುಂಬಳ, ಹಾಗಲ, ಹೀರೆ, ಪಡವಲ, ಬೆಂಡೆ, ಸೌತೆ, ಹುರುಳಿಕಾಯಿ, ಮೂಲಂಗಿ, ಮುಂತಾದ ಬೆಳೆಗಳನ್ನು ಚೆಂಡುಹೂ, ಜಾಜಿ, ಮಲ್ಲಿಗೆ, ಸಂಪಿಗೆ, ಕನಕಾಂಬರ, ಸೇವಂತಿಗೆ, ಗುಲಾಬಿ, ಮುಂತಾದ ಹಲವು ಬಗೆಯ ಹೂವಿನ ಗಿಡಗಳನ್ನು ಬೆಳೆಯಲಾಗುತ್ತಿದೆ.

**ಪ್ರಮುಖ ಬೆಳೆಗಳ ವಿಸ್ತೀರ್ಣ – ಹೊಳಲ್ಕೆರೆ ತಾಲ್ಲೂಕು**

| | ೨೦೧೫–೧೬ |
|---|---|
| ೧)ಏಕದಳ ಧಾನ್ಯಗಳ ವಿಸ್ತೀರ್ಣ(ಹೆ) | |
| ೧.೧) ಬತ್ತ | ೫ |
| ೧.೨) ಜೋಳ | ೬೩೩ |
| ೧.೩) ಸಜ್ಜೆ | ೦ |
| ೧.೪) ಮುಸುಕಿನಜೋಳ | ೩೬,೬೨೪ |
| ೧.೫) ರಾಗಿ | ೭,೮೦೦ |
| ೧.೬) ಗೋಧಿ | ೦ |
| ೧.೭) ಇತರ ತೃಣ ಧಾನ್ಯಗಳು | ೧೧೨ |
| ೧.೮) ಒಟ್ಟು ಏಕದಳ ಧಾನ್ಯಗಳು | |
| ಮತ್ತು ಉಪತೃಣ ಬೆಳೆಗಳು | ೪೫,೧೭೪ |
| | |
| ೨) ದ್ವಿದಳ ಧಾನ್ಯಗಳ ವಿಸ್ತೀರ್ಣ (ಹೆ) | |

| | |
|---|---|
| ೨. ೧) ತೊಗರಿ | ೭೬೮ |
| ೨. ೨) ಹುರುಳಿ | ೨೫೦ |
| ೨. ೩) ಉದ್ದು | ೦ |
| ೨. ೪) ಹೆಸರು | ೪೧೭ |
| ೨. ೫) ಅವರೆ | ೫೮೦ |
| ೨. ೬) ಅಲಸಂದಿ | ೧೮೨ |
| ೨. ೭) ಕಡಲೆ | ೨,೨೧೭ |
| ೨. ೮) ಒಟ್ಟು ದ್ವಿದಳ ಧಾನ್ಯಗಳು | ೪,೪೧೪ |
| ೩) ಒಟ್ಟು ಆಹಾರ ಧಾನ್ಯಗಳು | ೪೯,೫೮೮ |
| ೪) ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ೨,೭೩೫ |
| ೫) ಒಟ್ಟು ತರಕಾರಿ ಬೆಳೆಗಳ ವಿಸ್ತೀರ್ಣ | ೨,೨೪೨ |
| | |
| ೩) ಪ್ರಮುಖ ಎಣ್ಣೆಕಾಳು ಬೆಳೆಗಳ ವಿಸ್ತೀರ್ಣ (ಹೆ) | |
| ೩. ೧) ಶೇಂಗಾ | ೨೩೮ |
| ೩.೨) ಸೂರ್ಯಕಾಂತಿ | ೫೨ |
| ೩. ೩) ಕುಸುಮೆ | ೮ |
| ೩. ೪) ಹರಳು | ೧೨೭ |
| ೩. ೫) ಎಳ್ಳು | ೧,೨೦೧ |
| ೩. ೬) ಅಗಸೆ | ೦ |
| ೩. ೭) ಸೋಯ ಅವರೆ | ೦ |
| ೩. ೮) ಹುಚ್ಚೆಳ್ಳು | ೦ |
| ೩. ೯) ಇತರೆ | ೦ |
| ೩. ೧೦) ಒಟ್ಟು ಎಣ್ಣೆ ಕಾಳುಗಳು | ೧,೬೨೬ |
| ೪) ವಾಣಿಜ್ಯ ಬೆಳೆಗಳ ವಿಸ್ತೀರ್ಣ (ಹೆ) | |
| ೪. ೧) ಹತ್ತಿ | ೩,೮೫೬ |
| ೪. ೨) ಕಬ್ಬು | ೦ |
| ೪. ೩) ಒಟ್ಟು ವಾಣಿಜ್ಯ ಬೆಳೆಗಳು | ೩,೮೫೬ |

ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬

**ರಾಗಿ** : ತಾಲ್ಲೂಕಿನ ಮುಖ್ಯ ಆಹಾರ ಬೆಳೆಯಾದ ಇದು ಪೌಷ್ಟಿಕ ಆಹಾರವೆಂದೂ ಹೆಸರಾಗಿದೆ. ಇದಕ್ಕೆ ಕೆಂಪು(ಕೆಬ್ಬೆ) ಮಣ್ಣು ಅಥವಾ ಮೆಕ್ಕಲು ಮಣ್ಣು ಸೂಕ್ತ. ಮುಖ್ಯವಾಗಿ ಮಳೆಯ ಆಶ್ರಯದಲ್ಲಿ ಬೆಳೆಯುವ ಇದನ್ನು ಜೂನ್ ತಿಂಗಳಿನಲ್ಲಿ ಬಿತ್ತಿ ನಂತರ ನವೆಂಬರ್, ಡಿಸೆಂಬರ್‌ನಲ್ಲಿ ಕಟಾವು ಮಾಡುವರು. ರಾಗಿ ಬಿತ್ತನೆಯಲ್ಲಿ ನಾಟಿಮಾಡುವುದು ಎರಚುವುದು, ಕೂರಿಗೆಯಲ್ಲಿ ಬಿತ್ತುವುದು, ಗುಣೆರಾಗಿ ಹಾಕುವುದು ಮುಂತಾದ ಪದ್ಧತಿಗಳಿವೆ. ವಿವಿಧ ಸುಧಾರಿತ ರಾಗಿ ತಳಿಗಳನ್ನು ಬೆಳೆಯಲಾಗುತ್ತಿದೆ. ಖುಷ್ಕಿ ಜಮೀನಿನಲ್ಲಿ ಬೆಳೆಯುವ ರಾಗಿ, ಅಲಸಂದೆ, ಅವರೆ, ತೊಗರಿ, ಉದ್ದು, ಹುಚ್ಚೆಳ್ಳು, ಹರಳು, ಸಾಸಿವೆ, ಮೊದಲಾದ ಧಾನ್ಯಗಳನ್ನು 'ಸಾಲು' ಬಿಡುವುದಿದೆ. ತಾಲ್ಲೂಕಿನಲ್ಲಿ ೨೦೧೦-೧೧ ಅಂಕಿಅಂಶಗಳಂತೆ ೧,೫೭೦ ಹೆ. ಪ್ರದೇಶದಲ್ಲಿ ಈ ಬೆಳೆಯನ್ನು ಬೆಳೆಯಲಾಗಿದ್ದು, ಜಿಲ್ಲೆಯ ರಾಗಿ ಬೆಳೆಯುವ ಮುಖ್ಯ ತಾಲ್ಲೂಕುಗಳಲ್ಲಿ ಈ ತಾಲ್ಲೂಕು ಒಂದಾಗಿದೆ. ರಾಗಿಹುಲ್ಲು ಜಾನುವಾರುಗಳಿಗೆ ಪ್ರಮುಖ ಆಹಾರವಾಗಿ ಬಳಕೆಯಾಗುತ್ತಿದ್ದು, ಇತ್ತೀಚೆಗೆ ರೈತರು ವಾಣಿಜ್ಯ ಬೆಳೆಗಳಲ್ಲಿ ಆಕರ್ಷಿತರಾಗಿರುವುದರಿಂದ ರಾಗಿ ಬೆಳೆಯನ್ನು ಬೆಳೆಯುವುದು ಕಡಿಮೆಯಾಗುತ್ತಿದೆ.

**ಬತ್ತ**: ಬತ್ತದ ಬೆಳೆಯು ಸಹ ಮುಖ್ಯ ಆಹಾರ ಬೆಳೆಯಾಗಿದ್ದು, ತಾಲ್ಲೂಕಿನಲ್ಲಿ ನೀರಾವರಿ ಆಶ್ರಯದಲ್ಲಿ ಬೆಳೆಯಲಾಗುತ್ತಿದೆ. ಮರಳು ಮಿಶ್ರಿತ ಮಣ್ಣು, ಎರೆ ಮಣ್ಣುಗಳಲ್ಲಿ ಬೆಳೆಯಬಹುದು. ತಾಲ್ಲೂಕಿನಲ್ಲಿ ನಾಟಿ ಮತ್ತು ಎರಚುವ ಪದ್ಧತಿಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಕೆರೆ ಕಟ್ಟೆ,ಗದ್ದೆ ಇತ್ಯಾದಿ ನೀರಾವರಿ ಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಾರೆ. ೨೦೧೦-೧೧ ರ ಮಾಹಿತಿಯಂತೆ ೧೫೦ ಹೆ. ಪ್ರದೇಶದಲ್ಲಿ ಸಾಗುವಳಿ ಮಾಡಲಾಗಿದೆ.

ಹಾರಕ, ಸಾವೆ, ನವಣೆ,ಸಜ್ಜೆ, ಮುಸುಕಿನ ಜೋಳ ಹೆಚ್ಚಾಗಿ ಮೆಕ್ಕೆಜೋಳ ಬೆಳೆಯುತ್ತಾರೆ.

**ಗೊಬ್ಬರ ಬಳಕೆ**: ಯಾವುದೇ ಬೆಳೆಗೂ ಸತ್ವಪೂರ್ಣವಾದ ಗೊಬ್ಬರದ ಬಳಕೆ ಅತ್ಯವಶ್ಯಕವಾಗಿದ್ದು, ಪ್ರಾಚೀನ ಕಾಲದಿಂದಲೂ ಜಾನುವಾರುಗಳ ಸಗಣಿ ಮತ್ತಿತರ ಕಸಕಡ್ಡಿಗಳಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಿ ಬೆಳೆಗೆ ಬಳಸಿ ಉತ್ತಮ ಬೆಳೆಗಳ ಇಳುವರಿ ಪಡೆಯುತ್ತಿದ್ದರು. ತಿಪ್ಪೆ ಗೊಬ್ಬರವನ್ನು ಬಳಸಿ ಬೆಳೆದ ಆಹಾರ ಧಾನ್ಯಗಳನ್ನು ಬಳಸಲಾಗುತ್ತಿತ್ತು. ಪ್ರಸ್ತುತದಲ್ಲಿ ಇತರೆಡೆಗಳಂತೆ ತಾಲ್ಲೂಕಿನಲ್ಲಿ ಅಧಿಕ ಪ್ರಮಾಣದ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿಕೀಟಗಳ ನಾಶಕ್ಕಾಗಿ ಔಷಧಗಳನ್ನು ಬಳಸಲಾಗುತ್ತಿದ್ದು, ವರ್ಷದಿಂದ ವರ್ಷಕ್ಕೆ ರಾಸಾಯನಿಕ ಗೊಬ್ಬರ ಬಳಕೆ ಅಧಿಕಗೊಳ್ಳುತ್ತಿರುವುದನ್ನು ಅಂಕಿ ಅಂಶಗಳಿಂದ ತಿಳಿಯಬಹುದಾಗಿದೆ.

೨೦೧೫-೧೬ ರ ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟದಂತೆ ೬,೫೧೫ ಟನ್ ಸಾರಜನಕ, ೩,೧೦೫ ಟನ್ ರಂಜಕ, ೧,೯೪೫ ಟನ್ ಪೊಟ್ಯಾಷ್ ಎಲ್ಲಾ ಸೇರಿ ಒಟ್ಟು

೧೧,೫೭೫ ಟನ್ನಗಳಷ್ಟು ರಾಸಾಯನಿಕ ಗೊಬ್ಬರಗಳನ್ನು ಬಳಸಲಾಗಿದೆ. ಆಧುನಿಕ ಕೃಷಿಯ ಅಳವಡಿಕೆಯಲ್ಲಿ ಕೃಷಿ ಬೆಳೆ ಬೆಳೆಯುವ ತಾಂತ್ರಿಕತೆಯನ್ನು ರೈತರಿಗೆ ಒದಗಿಸುವುದರಲ್ಲಿ ಕೃಷಿ ಇಲಾಖೆಯ ಪಾತ್ರ ಪ್ರಮುಖವಾಗಿದೆ. ಸರ್ಕಾರದಿಂದ ರೈತರಿಗೆ ಉಚಿತವಾಗಿ ಸಿಗುವ ಬಿತ್ತನೆ ಬೀಜ, ಔಷಧಿ, ಗೊಬ್ಬರ ಹಾಗೂ ಉಪಕರಣಗಳನ್ನು ರೈತರಿಂದ ತಲುಪಿಸಲಾಗುತ್ತಿದೆ. ತಾಲ್ಲೂಕಿನಲ್ಲಿ ಕೃಷಿ ಬೆಳೆ ಪದ್ಧತಿಯ ಅಗತ್ಯ ಮಾಹಿತಿಗಳನ್ನು ಒದಗಿಸಲಾಗುತ್ತಿದೆ. ರೈತರಿಗೆ ಕೃಷಿ ತರಬೇತಿ ಮತ್ತು ಕೃಷಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವಲ್ಲಿ ಇಲಾಖೆಯು ಪ್ರಮುಖ ಪಾತ್ರವಹಿಸುತ್ತದೆ.

**ತೋಟಗಾರಿಕೆ**

ಚಿತ್ರದುರ್ಗ ಜಿಲ್ಲೆಯ ಇತರ ತಾಲ್ಲೂಕುಗಳಂತೆ ಈ ತಾಲ್ಲೂಕಿನಲ್ಲಿಯೂ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಫಲವತ್ತಾದ ಮಣ್ಣು, ಯೋಗ್ಯವಾದ ಭೂಮಿ ಅನುಕೂಲಕರವಾದ ಹವಾಗುಣ ಹಾಗೂ ನೀರಾವರಿ ಸೌಲಭ್ಯಗಳಿಂದಾಗಿ ಹಲಸು, ಬಾಳೆ, ಮಾವು, ನಿಂಬೆ, ಸಪೋಟ, ಸೀಬೆ, ಅನಾನಸ್, ಪರಂಗಿ, ದಾಳಿಂಬೆ, ಪಪ್ಪಾಯಿ ಮುಂತಾದ ಮುಖ್ಯ ಹಣ್ಣಿನ ಬೆಳೆಗಳನ್ನು ಬೆಳೆಯಲಾಗುತ್ತಿದೆ. ತೋಟಗಾರಿಕೆ ಇಲಾಖೆಯು ತೋಟ ಹಾಗೂ ಹಣ್ಣು ಅಭಿವೃದ್ಧಿಗೆ ಆದ್ಯತೆ ಕೊಟ್ಟಿರುವುದರಿಂದ ಫಲ ಉತ್ಪಾದನೆ ಅಧಿಕಗೊಂಡಿದೆ. ಹನಿ ನೀರಾವರಿಯಿಂದ ಸೌಲಭ್ಯಗಳು, ಅಗತ್ಯ ಉಪಕರಣಗಳು ಹಾಗೂ ಇತರ ಸೌಲಭ್ಯಗಳ ಜೊತೆಗೆ ತೋಟಗಾರಿಕೆ ಇಲಾಖೆಯ ಮಾರ್ಗದರ್ಶನದಿಂದ ತೋಟಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿದೆ.

**೨೦೧೪-೧೫ನೇ ಸಾಲಿನ ಹೊಳಲ್ಕೆರೆ ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗವಾರು, ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉತ್ಪನ್ನ (ಮೆ.ಟನ್ನುಗಳಲ್ಲಿ), ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ), ಮತ್ತು ಮೌಲ್ಯ (ರೂ. ಲಕ್ಷಗಳಲ್ಲಿ) ವಿವರಗಳು**

| **ಹಣ್ಣಿನ ಬೆಳೆಗಳು** | | | |
|---|---|---|---|
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೫,೭೦೫ | ೯೨,೦೩೧ | ೧೬.೪೨ | ೧೩,೯೦೩ |
| **ತರಕಾರಿ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೪,೪೧೭ | ೭೨,೭೫೫ | ೧೬.೪೭ | ೧೨,೧೯೯ |
| **ಸಾಂಬಾರು ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೫೮೨ | ೧,೪೬೫ | ೨.೫೨ | ೩೪೪ |

| | | | |
|---|---|---|---|
| **ತೋಟದ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೩೩,೨೪೩ | ೨೩,೬೦೩ | ೦.೭೧ | ೪೯,೮೫೮ |
| **ವಾಣಿಜ್ಯ ಪುಷ್ಪಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೫೯೯ | ೩,೩೨೧ | ೫.೫೪ | ೮೭೪ |
| **ಒಟ್ಟು ಮೊತ್ತ** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೪೪,೪೪೬ | ೧,೯೩,೧೭೬ | ೪.೩೫ | ೭೭,೧೭೮ |

**೨೦೧೫–೧೬ನೇ ಸಾಲಿನ ಹೊಳಲ್ಕೆರೆ ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗವಾರು, ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉತ್ಪನ್ನ (ಮೆ.ಟನ್ನುಗಳಲ್ಲಿ), ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ), ಮತ್ತು ಮೌಲ್ಯ (ರೂ. ಲಕ್ಷಗಳಲ್ಲಿ) ವಿವರಗಳು.**

| | | | |
|---|---|---|---|
| **ಹಣ್ಣಿನ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೫,೫೪೫ | ೯೦,೫೧೫ | ೧೬.೩೨ | ೧೬,೪೫೨ |
| **ತರಕಾರಿ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೪,೪೩೫ | ೭೦,೮೪೯ | ೧೫.೯೭ | ೭,೮೫೮ |
| **ಸಾಂಬಾರು ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೬೦೬ | ೧,೪೭೨ | ೨.೪೩ | ೪೮೮ |
| **ತೋಟದ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೩೩,೨೨೫ | ೧,೨೭,೪೭೦ | ೩.೮೪ | ೩೫,೫೨೩ |
| **ವಾಣಿಜ್ಯ ಪುಷ್ಪಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೬೯೧ | ೫,೦೨೫ | ೭.೨೭ | ೨,೧೬೧ |
| **ಒಟ್ಟು ಮೊತ್ತ** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೪೪,೫೦೨ | ೨,೯೫,೩೩೧ | ೬.೬೪ | ೬೨,೪೮೩ |

**ತೆಂಗು**

ತೆಂಗು ರಾಜ್ಯದಲ್ಲಿ ಅತಿಮುಖ್ಯ ಬಹುವಾರ್ಷಿಕ ಬೆಳೆಯಾಗಿದೆ. ರಾಜ್ಯದ ಇತರೆಡೆಗಳಂತೆ ತಾಲ್ಲೂಕಿನಲ್ಲೂ ತೆಂಗನ್ನೇ ಪೂರ್ಣ ಬೆಳೆಯಾಗಿ ಕೃಷಿ ಮಾಡುವುದರ ಜೊತೆಗೆ ಪ್ರತಿ ಮನೆಯಲ್ಲೂ ಒಂದೆರೆಡು ತೆಂಗಿನ ಗಿಡಗಳನ್ನು ತೋಟದಂಚು, ಬೇಲಿಪಕ್ಕ ಮುಂತಾದ ಸ್ಥಳವಿರುವೆಡೆಯಲ್ಲೆಲ್ಲ ನೆಡಲಾಗುತ್ತಿದೆ. ಸುಮಾರು ೪೦–೫೦ ಗಿಡಗಳನ್ನು ಒಂದು ಎಕರೆ ಪ್ರದೇಶದಲ್ಲಿ ನೆಡಬಹುದಾಗಿದೆ. ತೆಂಗು ಬೆಳೆಯು ಸುಮಾರು ೫೦–೬೦ ವರ್ಷಗಳ ಕಾಲ ಫಲಕೊಡುವುದು. ಇದರ ಪ್ರತಿಯೊಂದು ಭಾಗವು ಉಪಯುಕ್ತವಾಗಿದೆ. ತೆಂಗಿನಕಾಯಿ, ಜುಂಗೀನಾರು, ಚಿಪ್ಪು ಹೊಂಬಾಳೆ, ಎಲೆ, ಗರಿ, ಕಾಂಡ ಭಾಗಗಳಿಂದ ದೊರೆಯುವ ವಿವಿಧ ಉತ್ಪನ್ನಗಳು ಜನಜೀವನದ ನಿತ್ಯಬಳಕೆಯಲ್ಲಿ ಉಪಯುಕ್ತವಾಗಿವೆ.

ಎಳನೀರು, ತೆಂಗಿನಕಾಯಿ, ತೆಂಗಿನ ಚಿಪ್ಪು, ಕೊಬ್ಬರಿಎಣ್ಣೆ ಮತ್ತು ಹಿಂಡಿ ಉತ್ಪನ್ನಗಳು ತೆಂಗಿನ ಬೆಳೆಯಿಂದ ದೊರೆಯುತ್ತದೆ, ಜುಂಗಿನಿಂದ ಜಮಖಾನೆ, ಹಗ್ಗಗಳನ್ನು ತಯಾರಿಸುತ್ತಾರೆ, ಅದರ ಪುಡಿಯು ಹಾಸಿಗೆ ದಪ್ಪರಟ್ಟು, ಉರುವಲಾಗಿ, ಸೌದೆಯಾಗಿ ಚಿತ್ರ ಕೌಶಲ ವಸ್ತುಗಳಿಗಾಗಿ, ದಂತಚೂರ್ಣ ಮತ್ತು ಪೊಟ್ಯಾಸಿಯಂ ಗೊಬ್ಬರ ತಯಾರಿಕೆಗೆ ಉಪಯುಕ್ತವಾಗಿದೆ. ಎಳನೀರು ತುಂಬಾ ಬೇಡಿಕೆಯ ಪಾನೀಯವಾಗಿರುತ್ತದೆ. ತೆಂಗಿನ ಗರಿಗಳು ಮಾಡು, ಹೊದಿಕೆ, ಪಟ್ಟೆ, ಮರಡು ಪೊರಕೆಗಳಿಗೆ ಉಪಯುಕ್ತವಾಗಿವೆ. ಬಿದ್ದ ಹೊಂಬಾಳೆಗಳು, ಎಲೆಯ ಬುಡ, ಗೊಂಚಲು ಪಾಳುಗಳು ಉತ್ತಮ ಸೌದೆಯಾಗಿ ಬಳಸಲಾಗುತ್ತದೆ.

**ಅಡಿಕೆ**

ಅಡಿಕೆ ಬೆಳೆಯು ಸಹ ಅತಿಮುಖ್ಯ ಬಹು ವಾರ್ಷಿಕ ಬೆಳೆಯಾಗಿದೆ. ಇದು ರಫ್ತು ಮಾಡುವ ವಸ್ತುಗಳಲ್ಲಿ ಪ್ರಮುಖವಾಗಿದೆ. ಹಿಂದಿನಿಂದಲೂ ಈ ಭಾಗದಲ್ಲಿ ವಾಣಿಜ್ಯ ಬೆಳೆಯಾಗಿದೆ. ಬಾವಿ, ಕೆರೆ ಆಶ್ರಯಗಳ ಮೂಲಕವೇ ಹೆಚ್ಚಾಗಿ ಬೆಳೆಯಲಾಗುತ್ತಿದ್ದ ಈ ಬೆಳೆಯು ಈಗ ಬೋರ್‌ವೆಲ್‌ಗಳ ಆಶ್ರಯದಲ್ಲಿ ಎಲ್ಲೆಡೆಯಲ್ಲೂ ವ್ಯಾಪಿಸುತ್ತಿದೆ. ಇದರ ಪ್ರತಿಯೊಂದು ಭಾಗವೂ ಉಪಯುಕ್ತವಾಗಿದೆ. ಕಾಯಿ, ನಾರು, ಸಿಪ್ಪೆ, ಹೊಂಬಾಳೆ, ಗರಿ, ಕಾಂಡಭಾಗಗಳು ವಿವಿಧ ಉತ್ಪನ್ನಗಳು ಸಾಮಾನ್ಯ ಜನಜೀವನದ ಬಳಕೆಗೆ ದೊರೆಯುತ್ತವೆ.

**ನೀರಾವರಿ**

ಕೃಷಿಗೆ ಬೇಕಾಗುವ ನೀರನ್ನು ಮಾನವ ನಿರ್ಮಿತ ಕೆರೆ, ಕಟ್ಟೆ, ಸರೋವರಗಳಿಂದ ಕಾಲುವೆ ಮೂಲಕ ಸರಬರಾಜು ಮಾಡುವ ವಿಧಾನವೇ ನೀರಾವರಿ. ಕೃಷಿಗಾಗಿ ಮಳೆ

ನೀರನ್ನು ಮಾತ್ರ ಆಶ್ರಯಿಸದೆ ಇತರೆ ನೈಸರ್ಗಿಕ ಮೂಲಗಳಾದ ನದಿ, ಹಳ್ಳ, ಕೆರೆ, ಬಾವಿ ಮುಂತಾದವುಗಳಿಂದ ನೀರನ್ನು ಒದಗಿಸುವುದು ನೀರಾವರಿಯ ಉದ್ದೇಶ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಯಾವ ನದಿಗಳು ಹರಿಯುವುದಿಲ್ಲ, ಜಿನಗನ ಹಳ್ಳವು ಮುಖ್ಯವಾದ ಹಳ್ಳವಾಗಿದ್ದು, ಹೊಳಲ್ಕೆರೆ ತಾಲ್ಲೂಕಿನಲ್ಲಿ ಹುಟ್ಟಿ ಚಿತ್ರದುರ್ಗ ಮತ್ತು ಜಗಳೂರು ಮುಖಾಂತರ ಹರಿಯುತ್ತದೆ. ನಂತರ ಮೊಳಕಾಲ್ಮೂರಿನ ಕೆರೆಗೆ ಸೇರಿಕೊಳ್ಳುತ್ತದೆ. ಇದರ ಜೊತೆಗೆ ಪಶ್ಚಿಮದಿಂದ ಕೆಲವು ನೀರಿನ ಹಳ್ಳಗಳು ಬಂದು ಸೇರಿಕೊಳ್ಳುತ್ತವೆ. ಈ ಹಳ್ಳದ ನೀರು ಶಾಂತಿಸಾಗರ ಸೇರುತ್ತದೆ.

ಶ್ಯಾಗಲಿ ಹಳ್ಳವು ಮುಖ್ಯವಾದ ಹಳ್ಳವಾಗಿದ್ದು, ಹೊಳಲ್ಕೆರೆಯ ಪಶ್ಚಿಮದ ಬೆಟ್ಟಗಳಲ್ಲಿ ಹುಟ್ಟಿ, ದಾವಣಗೆರೆ ತಾಲ್ಲೂಕಿನ ಮೂಲಕ ತುಂಗಭದ್ರಾ ನದಿಯನ್ನು ಸೇರುವುದು. ಭದ್ರಾ ಜಲಾಶಯದ ಮೇಲ್ದಂಡೆಯ ಕಾಲುವೆಯನ್ನು ಹೊಳಲ್ಕೆರೆಯ ಪೂರ್ವದಲ್ಲಿನ ಕಣಿವೆಯ ಮುಖಾಂತರ ಕೊಂಡು ಹೋಗುವ ಸಮೀಕ್ಷೆ ನಡೆದಿದೆ.

ಈ ತಾಲ್ಲೂಕಿನಲ್ಲಿ ಒಟ್ಟು ೫೪ ಕೆರೆಗಳಿವೆ. ತಾಲ್ಲೂಕಿನ ಮುತ್ತುಗದೂರು ಕೆರೆ ಜಿಲ್ಲೆಯ ಹತ್ತು ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಕೆರೆಗಳು ತುಂಬಿಕೊಂಡಿದ್ದಾಗ ಮೀನುಗಳನ್ನು ಬೆಳೆಸಲು ಅನುಕೂಲವಾಗಿದೆ. ಕೆರೆಗಳ ಹಿಂದಿರುವ ಗದ್ದೆಗಳಿಗೆ, ತೋಟಗಳಿಗೆ, ನೀರುಹಾಯಿಸಿ ಅಡಿಕೆ, ತರಕಾರಿ ಇತ್ಯಾದಿಗಳನ್ನು ಬೆಳೆಯಲಾಗುತ್ತಿದೆ. ಕೆರೆ, ಬಾವಿ, ಕಪಿಲೆ ಕಾಲುವೊಳೆ ಮುಂತಾದ ಜಲಸಂಪನ್ಮೂಲಗಳನ್ನು ನಿರ್ಮಿಸಿ, ಸಂರಕ್ಷಿಸಿ ಅವುಗಳಿಂದ ಅಂದಿನ ಕೃಷಿಯನ್ನು ಅಭಿವೃದ್ಧಿಪಡಿಸಿರುವ ನಿದರ್ಶನಗಳು ತಾಲ್ಲೂಕಿನಲ್ಲಿ ಲಭಿಸುತ್ತವೆ. ಹೊಳಲ್ಕೆರೆ ತಾಲ್ಲೂಕು ಮಲೆನಾಡು ಜಿಲ್ಲೆ ಶಿವಮೊಗ್ಗದ ಪೂರ್ವ ಭಾಗದಲ್ಲಿದ್ದು, ಈ ತಾಲ್ಲೂಕಿಗೆ ಮುಂಗಾರು ಮಳೆಯಾಗುವ ಸಾಧ್ಯತೆ ಹೆಚ್ಚಿದೆ. ಮಲೆನಾಡಿನಲ್ಲಿ ಸುರಿದು ಸುಸ್ತಾದ ಮಳೆರಾಯ ಹೊಳಲ್ಕೆರೆ ತಾಲ್ಲೂಕಿನವರೆಗೂ ಬಂದು ಚಿತ್ರದುರ್ಗ ತಲುಪುವಲ್ಲಿಗೆ ಸುಮ್ಮನಾಗುತ್ತದೆ. ತಾಲ್ಲೂಕಿನಲ್ಲಿ ಯಾವುದೇ ದೊಡ್ಡ ಜಲಮಾರ್ಗಗಳಿಲ್ಲ, ಯಾವುದೇ ನದಿ, ಜಲಾಶಯ, ಕಾಲುವೆಗಳಿಲ್ಲ. ರೈತ ಮಳೆಯಾಶ್ರಯದಲ್ಲಿಯೇ ಕೃಷಿ ಮಾಡಬೇಕಾಗಿದೆ. ತಾಲ್ಲೂಕಿನ ಕೆರೆಗಳ ಅಂಗಳಗಳು ಊಳು ತುಂಬಿರುವುದರಿಂದ ಕೆರೆಗಳ ಆಶ್ರಯದಲ್ಲಿ ದೊರೆಯುವ ನೀರಾವರಿ ಸೌಲಭ್ಯ ಶೋಚನೀಯ ಸ್ಥಿತಿಯಲ್ಲಿದೆ. ಬೇಸಿಗೆಕಾಲದಲ್ಲಿ ಕಾಡು/ಸಾಕು ಪ್ರಾಣಿಗಳಿಗೆ, ಹಕ್ಕಿ ಪಕ್ಷಿಗಳಿಗೂ ನೀರು ದೊರೆಯದಂತಾಗುತ್ತದೆ.

**ನೀರಾವರಿಯಾದ ನಿವ್ವಳ ಪ್ರದೇಶ,ಹೊಳಲ್ಕೆರೆ ತಾಲ್ಲೂಕು**

| **೧) ಕಾಲುವೆಗಳಿಂದ** | ೨೦೧೫-೧೬ |
|---|---|
| ೧. ೧) ಉದ್ದ (ಕಿ.ಮೀ) | ೦ |
| ೧. ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೧. ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |

| | |
|---|---|
| **೨) ಕೆರೆಗಳಿಂದ** | |
| ೨. ೧)ಸಂಖ್ಯೆಗಳು | ೫೭ |
| ೨. ೨)ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೨. ೩)ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೩) ಬಾವಿಗಳಿಂದ** | |
| ೩. ೧) ಸಂಖ್ಯೆಗಳು | ೭೦೩ |
| ೩. ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೩. ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೪) ಕೊಳವೆ ಬಾವಿಗಳಿಂದ** | |
| ೪. ೧) ಸಂಖ್ಯೆಗಳು | ೧೦,೭೪೦ |
| ೪. ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೧೬,೩೧೯ |
| ೪. ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೧೪,೨೦೦ |
| **೫) ಏತ ನೀರಾವರಿ** | |
| ೫. ೧) ಸಂಖ್ಯೆಗಳು | ೧೯ |
| ೫. ೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೦ |
| ೫. ೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೦ |
| **೬) ಇತರೆ ಮೂಲಗಳಿಂದ** | ೦ |
| **೭) ಒಟ್ಟು ನೀರಾವರಿಯಾ ಪ್ರದೇಶ** | ೧೬,೩೧೯ |
| **೮) ಒಟ್ಟು ನಿವ್ವಳ** | ೧೪,೨೦೦ |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

**ಪಶುಸಂಗೋಪನೆ**

ತಾಲ್ಲೂಕಿನಲ್ಲಿ ದನ, ಎಮ್ಮೆ, ಕುರಿ, ಮೇಕೆ, ಹಂದಿ, ಕೋಳಿಗಳನ್ನು ಸಾಕಲಾಗುತ್ತದೆ. ದನಗಳನ್ನು ಸಾಕಲೆಂದೇ ಈ ತಾಲ್ಲೂಕಿನಲ್ಲಿ ಅನೇಕ ಪ್ರದೇಶಗಳನ್ನು ಹುಲ್ಲುಗಾವಲಾಗಿ ಉಳಿಸಿದ್ದರೂ ಸಹ ಕೃಷಿಗಾಗಿ ಬಳಸಲಾಗುತ್ತಿದೆ. ಕುರಿ, ಆಡು, ಹಂದಿ, ಕೋಳಿಗಳನ್ನು ಮಾಂಸ ಉತ್ಪಾದನೆಗಾಗಿ ಸಾಕುತ್ತಾರೆ. ಜೊತೆಗೆ ಆರ್ಥಿಕವಾಗಿ ಮುಂದುವರೆಯಲು ಈ ಪಶುಸಂಗೋಪನೆಯನ್ನು ಜನರು ಅವಲಂಬಿಸಿದ್ದಾರೆ.

**ದನಗಳು:** ಹೊಳಲ್ಕೆರೆ ತಾಲ್ಲೂಕಿನಲ್ಲಿ ದನಗಳನ್ನು ಹಾಲು ಉತ್ಪಾದನೆಗೆ(ಕರಾವಿಗೆ) ಮತ್ತು ಉಳುಮೆಗೆ ಬಳಸುತ್ತಾರೆ. ಈ ದನಗಳಲ್ಲಿ ವಿವಿಧ ರೀತಿಯ ತಳಿಗಳನ್ನು

ಕಾಣಬಹುದಾಗಿದೆ. ಅಮೃತಮಹಲ್, ಹಳ್ಳಿಕಾರ್, ಸ್ಥಳೀಯದನ, ಸಿಂಧಿಜಾತಿ ಮುಂತಾದ ತಳಿಗಳನ್ನು ಸಾಕುವರು.

**ಎಮ್ಮೆಗಳು**: ಹೊಳಲ್ಕೆರೆ ತಾಲ್ಲೂಕಿನಲ್ಲಿ ಹೆಚ್ಚು ಕಡಿಮೆ ಎಲ್ಲಾ ಹಳ್ಳಿಗಳಲ್ಲೂ ಎಮ್ಮೆ ಗಳಿವೆ. ಇಲ್ಲಿ ಹಾಲು ಉತ್ಪಾದನೆ(ಕರಾವಿ)ಗೋಸ್ಕರ ಸಾಕುತ್ತಾರೆ. ಇಲ್ಲಿಯ ಸ್ಥಳೀಯ ಎಮ್ಮೆಗಳು ಸಾಧಾರಣ ಮೈಕಟ್ಟನ್ನು ಹೊಂದಿರುತ್ತವೆ. ಇವುಗಳು ಕಪ್ಪು, ಬಿಳಪು ಮಿಶ್ರ ಬಣ್ಣದಿಂದ ಕೂಡಿವೆ. ಈ ಪ್ರದೇಶಕ್ಕೆ ಹೊಂದಿಕೊಂಡು ಹಾಲು ಹಿಂಡುತ್ತವೆ. ಸ್ಥಳೀಯ ಎಮ್ಮೆಗಳಲ್ಲಿ ಮುರ್ರಾಗಳಿಂದ ಸುಧಾರಿಸಿದ ಎಮ್ಮೆಗಳನ್ನು ಕಾಣಬಹುದು.

**ಕುರಿಗಳು**: ತಾಲ್ಲೂಕಿನಾದ್ಯಂತ ಕುರಿಗಳನ್ನು ಮಾಂಸಾಹಾರಕ್ಕಾಗಿ ಮತ್ತು ಆರ್ಥಿಕವಾಗಿ ಸಬಲರಾಗಲೂ ಸಾಕುತ್ತಾರೆ. ಈ ತಾಲ್ಲೂಕಿನ ವಿವಿಧ ಸಂತೆಗಳಲ್ಲಿ ಇವುಗಳ ವ್ಯಾಪಾರ ನಡೆಯುತ್ತದೆ.

**ಆಡು/ಮೇಕೆ**: ತಾಲ್ಲೂಕಿನಲ್ಲಿ ಆಡನ್ನು ಸಾಕುತ್ತಾರೆ. ಇವುಗಳನ್ನು ಮಾಂಸಕ್ಕಾಗಿ ಸಾಕಿದ್ದರೆ, ಕೆಲವರು ಆರ್ಥಿಕವಾಗಿ ಸಬಲರಾಗಲು ಸಾಕುತ್ತಾರೆ. ಇವು ಬಿಳಿ, ಕಪ್ಪು ಮತ್ತು ಮಿಶ್ರ ಬಣ್ಣಗಳಿಂದ ಕೂಡಿರುತ್ತವೆ. ಸಮತಟ್ಟಾದ ಎತ್ತರವನ್ನು ಹೊಂದಿದ್ದು ಉತ್ತಮ ತೂಕವನ್ನು ಹೊಂದಿರುತ್ತವೆ.

**ಹಂದಿ**: ತಾಲ್ಲೂಕಿನಲ್ಲಿ ಹಂದಿಯನ್ನು ಅಲ್ಲಲ್ಲಿ ಸಾಕುತ್ತಾರೆ. ಇವು ಬಿಳಿ ಮತ್ತು ಕಪ್ಪುಬಣ್ಣವನ್ನು ಹೊಂದಿದ್ದು ಉತ್ತಮ ತೂಕವಿದ್ದು, ಸಮತಟ್ಟಾದ ಎತ್ತರವನ್ನು ಹೊಂದಿರುತ್ತವೆ.

**ಕೋಳಿ**:ತಾಲ್ಲೂಕಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಕೋಳಿಗಳನ್ನು ಸಾಕುತ್ತಾರೆ. ಇವುಗಳನ್ನು ಮಾಂಸಾಹಾರಕ್ಕಾಗಿ ಮತ್ತು ವ್ಯಾಪಾರಕ್ಕಾಗಿ ಸಾಕುತ್ತಾರೆ. ಕೋಳಿಗಳಲ್ಲಿ ನಾಟಿಕೋಳಿ, ಫಾರಂಕೋಳಿ, ಬಾಯ್ಲರ್‌ಕೋಳಿ ಪ್ರಮುಖವಾಗಿವೆ.

**ಪಶುಪಾಲನೆ ಮತ್ತು ಪಶುವೈದ್ಯ ಸೇವೆಗಳು**

| **೧) ಜಾನುವಾರು ಗಣತಿ** | ೨೦೧೨ರ ಗಣತಿ |
|---|---|
| ೧.೧) ದನಕರುಗಳು | |
| ೧.೨) ಸ್ಥಳೀಯ | ೩೮,೩೦೩ |
| ೧.೩) ವಿದೇಶಿ ತಳಿ | – |
| ೧.೪) ಮಿಶ್ರ ತಳಿ | ೫,೮೮೨ |
| ೧.೫) ಒಟ್ಟು | ೪೪,೧೮೫ |

| | |
|---|---|
| **೨) ಎಮ್ಮೆಗಳು** | ೩೫,೬೪೯ |
| **೩) ಕುರಿಗಳು** | |
| ೩. ೧) ಸ್ಥಳೀಯ | ೫೫,೬೦೦ |
| ೩. ೨) ವಿದೇಶಿ ತಳಿ | – |
| ೩. ೩) ಮಿಶ್ರ ತಳಿ | ೨೪ |
| ೩. ೪) ಒಟ್ಟು | ೫೫,೬೨೪ |
| **೪) ಮೇಕೆಗಳು** | ೧೯,೨೩೦ |
| **೫) ಹಂದಿಗಳು** | |
| ೫. ೧) ಸ್ಥಳೀಯ | ೨೮ |
| ೫. ೨) ವಿದೇಶಿ ತಳಿ | – |
| ೫. ೩) ಮಿಶ್ರ ತಳಿ | – |
| ೫. ೪) ಒಟ್ಟು | ೨೮ |
| **೬) ಮೊಲಗಳು** | ೧೭ |
| **೭) ನಾಯಿಗಳು** | ೩,೧೧೬ |
| **೮) ಇತರೆ** | ೫೮೦ |
| **೯) ಒಟ್ಟು ಜಾನುವಾರಗಳು** | ೧,೫೮,೪೨೯ |
| **೧೦) ಒಟ್ಟು ಕೋಳಿಗಳು** | ೮೨,೩೮೬ |
| **೧೧) ಪಶು ವೈದ್ಯ ಶಾಲೆಗಳು** | |
| ೧೧. ೧) ಪಶು ಆಸ್ಪತ್ರೆಗಳು | ೩ |
| ೧೧. ೨) ಚಿಕಿತ್ಸಾಲಯಗಳು | ೮ |
| ೧೧. ೩) ಪ್ರಾಥಮಿಕ ಪಶುವೈದ್ಯ ಕೇಂದ್ರಗಳು | ೭ |
| ೧೧. ೪) ಸಂಚಾರಿ ಚಿಕಿತ್ಸಾಲಯಗಳು | ೧ |
| ೧೧. ೫) ಕೃತಕ ಗರ್ಭಧಾರಣ ಕೇಂದ್ರಗಳು | – |

| | |
|---|---|
| ೧೧. ೬) ಇತರೆ | – |
| ೧೧. ೭) ಒಟ್ಟು | ೧೯ |
| **೧೨) ಇತರೆ ಮಾಹಿತಿ** | – |
| ೧೨. ೧) ಕೃತಕ ಗರ್ಭಧಾರಣೆ ನೀಡಿದ ಪಶುಗಳ ಸಂಖ್ಯೆ (ಲಕ್ಷಗಳಲ್ಲಿ) | ೧೪,೫೫೮ |
| ೧೨. ೨) ಚಿಕಿತ್ಸೆ ನೀಡಲಾದ ಪ್ರಾಣಿಗಳ ಸಂಖ್ಯೆ | ೮೬,೪೮೦ |
| ೧೨. ೩) ಮೇವು ಉತ್ಪಾದನೆ (ಟನ್) | – |
| ೧೨. ೪) ಹಾಲು ಉತ್ಪಾದನೆ (ಸಾವಿರ ಲೀಟರ್) | – |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬.**

## ಜಾನುವಾರು ಗಣತಿ

೨೦೧೦-೧೧ ರ ಜಾನುವಾರು ಗಣತಿಯಂತೆ ತಾಲ್ಲೂಕಿನಲ್ಲಿ ಸ್ಥಳೀಯ ದನಕರುಗಳು ೪೫,೮೧೧, ಮಿಶ್ರತಳಿಗಳು ೩,೬೦೪, ಒಟ್ಟು ೪೯,೪೧೫ ದನಕರುಗಳು. ೪೦,೭೫೪, ಎಮ್ಮೆಗಳು ೫೯,೨೮೦, ಕುರಿಗಳು ೨೭,೦೪೨, ಮೇಕೆಗಳು ೦೨, ಹಂದಿಗಳು ೫೬೦೧, ನಾಯಿಗಳು ೬೩೩, ಇತರೆ ಎಲ್ಲಾ ಸೇರಿ ಒಟ್ಟು ೧,೮೨,೭೨೭ ಜಾನುವಾರು ಸಂಪತ್ತಿದೆ. ಅಲ್ಲದೆ ೧,೯೫,೨೪೫ ಕೋಳಿಗಳಿದ್ದು, ಜಿಲ್ಲೆಯಲ್ಲಿ ಈ ತಾಲ್ಲೂಕು ಕೋಳಿ ಸಾಕಣೆಯಲ್ಲಿ ಮೂರನೆ ಸ್ಥಾನದಲ್ಲಿದೆ.

ಪಶು ವೈದ್ಯಕೀಯ ಸೇವಾ ಸೌಲಭ್ಯ: ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬ ರಂತೆ ತಾಲ್ಲೂಕಿನಲ್ಲಿ ಮೂರು(೩) ಪಶು ವೈದ್ಯಕೀಯ ಆಸ್ಪತ್ರೆಗಳು, ಎಂಟು(೮) ಚಿಕಿತ್ಸಾಲಯಗಳು, ಏಳು(೭) ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು(೧) ಸಂಚಾರಿ ಚಿಕಿತ್ಸಾಲಯಗಳು, ಹೀಗೆ ಒಟ್ಟು ೧೯ ಪಶು ಚಿಕಿತ್ಸಾ ಆಸ್ಪತ್ರೆಗಳಿವೆ.

## ಮೀನುಗಾರಿಕೆ

ಇತ್ತೀಚೆಗೆ ತಾಲ್ಲೂಕಿನಲ್ಲಿ ಮೀನುಗಾರಿಕೆಯು ವ್ಯವಸಾಯದಂತೆ ಒಂದು ಪ್ರಮುಖ ಆಹಾರ ಉದ್ಯಮವಾಗಿ ರೂಪುಗೊಂಡು ಉದ್ಯೋಗ ಒದಗಿಸುವ ನೈಸರ್ಗಿಕ ಸಾಧನೋಪಾಯಗಳಲ್ಲಿ ಒಂದೆನಿಸಿದೆ. ತಾಲ್ಲೂಕಿನ ಕೆರೆ, ಕಾಲುವೆ ಮುಂತಾದ ಜಲ ಸಂಗ್ರಹಗಳು ಮೀನು ಉತ್ಪಾದನೆಗೆ ಬೇಕಾಗುವ ಸೌಲಭ್ಯವನ್ನು ಒದಗಿಸಿವೆ. ಆಧುನಿಕ ವಿಧಾನಗಳಿಂದ ಉಪಯುಕ್ತ ಮೀನುಗಳನ್ನು ಕೃತಕ ಅಥವಾ ನೈಸರ್ಗಿಕ

ಕೊಳಗಳಲ್ಲಿ ಕೃತಕ ಆಹಾರವನ್ನು ಕೊಟ್ಟು ಬೆಳೆಸುತ್ತಾರೆ. ೨೦೧೧ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿ ೧,೪೪೫ ಮೆಟ್ರಿಕ್ ಟನ್‌ಗಳಷ್ಟು ಮೀನುಗಳನ್ನು ಹಿಡಿಯಲಾಗಿತ್ತು. ತಾಲ್ಲೂಕಿನಲ್ಲಿರುವ ಮೀನುಗಾರಿಕೆಯಲ್ಲಿ ಸ್ಥಳೀಯರಿಗೆ ಮೀನುಸಾಕಣೆ ಬಗ್ಗೆ ಅಗತ್ಯ ಮಾಹಿತಿ ನೀಡುತ್ತಾರೆ. ಪಂಚಾಯತ್ ರಾಜ್‌ಗೆ ಸೇರಿದ ೨೮ ಕೆರೆಗಳು ಮತ್ತು ೨೫ ಸಣ್ಣನೀರಾವರಿ ಯೋಜನೆಗಳ ಮೂಲಕ ಮೀನುಗಾರಿಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ.

**ಮೀನುಗಾರಿಕೆ**

| | ೨೦೧೫–೧೬ |
|---|---|
| ೧) ಹಿಡಿದ ಮೀನುಗಳು (ಟನ್ನುಗಳಲ್ಲಿ) | ೨೦೦ |
| ೨) ಕೆರೆಗಳ ಸಂಖ್ಯೆ(ಮೀನುಗಾರಿಕೆಗೆ ಸಂಬಂಧಿಸಿದಂತೆ) | |
| ಅ)ಪಂಚಾಯತ್ ರಾಜ್ ಸಂಸ್ಥೆಗೆ ಸೇರಿದ | ೩೫ |
| ಆ)ಸಣ್ಣ ನೀರಾವರಿಗೆ ಸೇರಿದ | ೨೫ |
| ೩)ಮೀನುಗಾರಿಕೆಯಲ್ಲಿ  ತೊಡಗಿರುವ ಕುಟುಂಬಗಳ ಸಂಖ್ಯೆ | |
| ಅ)ಪೂರ್ಣಕಾಲಿಕ | ೨೫೦ |
| ಆ)ಅರೆಕಾಲಿಕ | ೧೦೦ |
| ೪)ಮತ್ಸ್ಯಾಶ್ರಯ ಯೋಜನೆ ಫಲಾನುಭವಿಗಳ ಸಂಖ್ಯೆ | ೦೫ |
| ೫) ಮೀನು ಮರಿ ಬಿತ್ತನೆ ಸಂಖ್ಯೆ (ಲಕ್ಷಗಳಲ್ಲಿ) | ೧೬.೦೫ |
| ೬) ಮೀನು ಮಾರುಕಟ್ಟೆಗಳ ಸಂಖ್ಯೆ | – |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ–ಅಂಶಗಳ ನೋಟ ೨೦೧೫–೧೬.**

## ಅಧ್ಯಾಯ–೫

# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

**ಕೈ**ಗಾರಿಕಾ ಬೆಳವಣಿಗೆಗೆ ಪೂರಕವಾದ ಉತ್ತಮ ವಾಯುಗುಣ, ಜಲ, ಖನಿಜ, ಅರಣ್ಯ ಸಂಪನ್ಮೂಲಗಳು, ಸಾರಿಗೆ ಸಂಪರ್ಕ, ಬ್ಯಾಂಕಿಂಗ್, ಹಣಕಾಸು ಮತ್ತಿತರ ಸೌಲಭ್ಯಗಳನ್ನು ಈ ತಾಲ್ಲೂಕು ಹೊಂದಿದೆ. ತಾಲ್ಲೂಕಿನಲ್ಲಿ ಸಣ್ಣ ಮತ್ತು ಅತೀಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲವಿದ್ದರೂ, ಕೈಗಾರಿಕಾ ಬೆಳವಣಿಗೆ ನಿರೀಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ. ಕೈಗಾರಿಕೆಗಳ ಬೆಳವಣಿಗೆಗೆ ತಾಲ್ಲೂಕಿನಲ್ಲಿರುವ ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳು ನೆರವು ನೀಡಿ ಪ್ರೋತ್ಸಾಹಿಸುತ್ತಿವೆ. ವಿದ್ಯಾವಂತ ನಿರುದ್ಯೋಗಿ ಯುವಕ–ಯುವತಿಯರಿಗೆ ವೃತ್ತಿಪರ ತರಬೇತಿಯನ್ನು ವಿವಿಧ ವ್ಯಾಪ್ತಿಯಲ್ಲಿ ಕೈಗಾರಿಕಾ/ಸೇವಾ ಘಟಕಗಳ ಮೂಲಕ ನೀಡಲು ಸರ್ಕಾರವು ವಿನೂತನ ಯೋಜನೆಯೊಂದನ್ನು ಜಾರಿಗೊಳಿಸಿದೆ. ಇದರ ಪ್ರಕಾರ ಪ್ರತಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ ೭೫೦ ರಂತೆ ವಿದ್ಯಾರ್ಥಿ ವೇತನವನ್ನು ತರಬೇತಿ ಸಂಸ್ಥೆಗಳ ಸೂಕ್ತ ಹೊಂದಾಣಿಕೆಯೊಂದಿಗೆ ನೀಡಲಾಗುತ್ತಿದೆ.

### ಪ್ರಾಚೀನ ಕೈಗಾರಿಕೆಗಳು

ಪ್ರಾಚೀನ ಕಾಲದ ಕೈಗಾರಿಕೆಗಳ ಸಾಮಾನ್ಯ ಲಕ್ಷಣವೆಂದರೆ, ಅವು ಕುಲಕಸುಬುಗಳಾಗಿದ್ದವು. ಸಾಮಾನ್ಯವಾಗಿ ಉತ್ಪಾದನಾ ಕೇಂದ್ರಗಳು ಅವರ ಗೃಹ ಅಥವಾ ಕುಟೀರಗಳೇ ಆಗಿರುತ್ತಿತ್ತು. ಕೈಗಾರಿಕೆಗೆ ಬೇಕಾದ ಕಚ್ಚಾ ವಸ್ತುಗಳು ಅನತಿ ದೂರದಲ್ಲಿ ದೊರೆಯುತ್ತಿದ್ದವು. ತಯಾರಿಸಿದ ಪದಾರ್ಥಗಳನ್ನು ಪಟ್ಟಣದಲ್ಲೋ, ಸಂತೆಗಳಲ್ಲೋ ಮಾರಾಟ ಮಾಡಲಾಗುತ್ತಿತ್ತು. ನೇಯ್ಗೆ, ಶಿಲ್ಪ ಮುಂತಾದ ಕೆಲವು ಕಸುಬುಗಳಲ್ಲಿ ಅತ್ಯುತ್ತಮ ಕೌಶಲ್ಯವನ್ನು ಕಾಣಬಹುದು.

ಸಾಮಾನ್ಯವಾಗಿ ಪ್ರತಿಯೊಂದು ವೃತ್ತಿಯವರೂ ತಮ್ಮದೇ ಆದ ಶ್ರೇಣಿಯನ್ನು ಹೊಂದಿದ್ದು, ಅವುಗಳ ಅಧಿಕಾರ ವ್ಯಾಪ್ತಿಯಲ್ಲಿ ತಮ್ಮ ಕಾರ್ಯಗಳನ್ನು ನಡೆಸಿಕೊಂಡು

ಹೋಗುತ್ತಿದ್ದರು. ದೊಡ್ಡ ದೊಡ್ಡ ಊರುಗಳಲ್ಲಿ ಈ ಶ್ರೇಣಿಗಳು ಹೆಚ್ಚಿನ ಅಧಿಕಾರ ಹಾಗೂ ಪ್ರಭಾವವನ್ನು ಹೊಂದಿರುತ್ತಿದ್ದವು. ನೇಯ್ಗೆಯವರ, ಚಮ್ಮಾರರ, ಗಾಣಿಗರ, ಲೋಹಕಾರರ, ಕಲ್ಲುಕುಟಿಗರ – ಹೀಗೆ ಹಲವಾರು ಕಸುಬಿನ ಶ್ರೇಣಿಗಳಿದ್ದುವು. ನೇಯ್ಗೆ ಬಟ್ಟೆಗಳ ಮೇಲೆ ಕಸೂತಿ ಮಾಡುವ, ಎಣ್ಣೆ ತೆಗೆಯುವ, ಮಣ್ಣಿನ ಮಡಕೆ–ಕುಡಿಕೆ, ಪಾತ್ರೆ, ಗೊಂಬೆ ಮಾಡುವ, ಮರಗಳಿಂದ ಪೀಠೋಪಕರಣಗಳು, ಗಾಡಿ, ಗೃಹನಿರ್ಮಾಣ, ವಿವಿಧ ಲೋಹಗಳ ಆಭರಣ, ದೇವತಾ ಮೂರ್ತಿಗಳನ್ನು ಎರಕ ಹುಯ್ಯುವ, ಕಬ್ಬಿಣ ಉಕ್ಕುಗಳಿಂದ ಕತ್ತಿ, ಭಲ್ಲೆ, ಗುರಾಣಿ, ಬಾಣ, ಚಾಕು ಮುಂತಾದವುಗಳನ್ನು ತಯಾರಿಸುವ ಕುಶಲಕರ್ಮಿಗಳಿದ್ದರು.

## ಕೈಗಾರಿಕಾ ನೀತಿ–೨೦೧೪–೧೯

ರಾಜ್ಯ ಸರ್ಕಾರವು ೧೯೮೮, ೧೯೯೦, ೧೯೯೩, ೧೯೯೬, ೧೯೯೮, ೨೦೦೧, ೨೦೦೬, ೨೦೦೯–೧೪ ಹಾಗೂ ೨೦೧೪–೧೯ರ ಕೈಗಾರಿಕಾ ನೀತಿಗಳಲ್ಲಿ ಹೆಚ್ಚು ಸವಲತ್ತು ಮತ್ತು ವಿಶೇಷ ರಿಯಾಯಿತಿಗಳನ್ನು ಘೋಷಿಸಿತು. ಆದ್ದರಿಂದದೊಡ್ಡ, ಮಧ್ಯಮ, ಸಣ್ಣ ಮತ್ತುಅತೀ ಸಣ್ಣ ಪ್ರಮಾಣಗಳ ಕೈಗಾರಿಕೆ ಸ್ಥಾಪನೆಗೆ ಅವಕಾಶ ದೊರೆಯಿತು. ೨೦೧೪–೧೯ರ ಕೈಗಾರಿಕಾ ನೀತಿಯಂತೆ ಹೊಳಲ್ಕೆರೆ ತಾಲೂಕು ಹೈದರಾಬಾದ್ ಕರ್ನಾಟಕೇತರ ಪ್ರದೇಶಗಳಲ್ಲಿನ ತಾಲೂಕುಗಳಲ್ಲಿ ವರ್ಗ–೧ ಕ್ಕೆ ಸೇರಿದೆ.

## ದೃಷ್ಟಿಕೋನ

ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನದಕೈಗಾರಿಕಾಅಭಿವೃದ್ಧಿಯ ಮೂಲಕ ಸಮೃದ್ಧಕರ್ನಾಟಕವನ್ನು ನಿರ್ಮಿಸಿ ತನ್ಮೂಲಕ ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

## ಧ್ಯೇಯ

- ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ ನೀಡಿ, ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಕರ್ನಾಟಕವನ್ನು ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವುದು.
- ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದಎಲ್ಲೆಡೆ ಅವಕಾಶಗಳನ್ನು ಕಲ್ಪಿಸಿ, ಖಾಸಗಿ ವಲಯದ ಮೂಲಕ ಸ್ಥಳೀಯರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.
- ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದು.

## ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

- ಸುಸ್ಥಿರವಾದ ಕೈಗಾರಿಕಾ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧಿಸುವ ಪೂರಕ ಪರಿಸರವನ್ನು ಸೃಷ್ಟಿಸುವುದು.

### ಉದ್ದೇಶಗಳು

- ಕೈಗಾರಿಕಾ ಬೆಳವಣಿಗೆಯನ್ನು ವಾರ್ಷಿಕ ಶೇ.೧೨ರ ಗತಿಯಲ್ಲಿ ಮುಂದುವರೆಸುವುದು.
- ರಾಜ್ಯಜಿ.ಡಿ.ಪಿ ಯಲ್ಲಿ ಪ್ರಸಕ್ತ ಶೇ.೧೬.೮೭ ಇರುವ ಉತ್ಪಾದನಾ ವಲಯದ ಪಾಲನ್ನು, ನೀತಿಯ ಅವಧಿಯ ಅಂತ್ಯದ ವೇಳೆಗೆ ಶೇ.೨೦ಕ್ಕೆ ಹೆಚ್ಚಿಸುವುದು.
- ರೂ. ೫ ಲಕ್ಷ ಕೋಟಿಗಳ ಬಂಡವಾಳವನ್ನು ಆಕರ್ಷಿಸುವುದು.
- ೧೫ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು. ರಾಜ್ಯದಲ್ಲಿ ಸುಸೂತ್ರವಾಗಿ ಉದ್ಯಮ – ವ್ಯವಹಾರ ಕೈಗೊಳ್ಳುವಂತಹ ವಾತಾವರಣವನ್ನು ಕಲ್ಪಿಸುವುದು.

### ಕಾರ್ಯತಂತ್ರಗಳು

- ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು.
- ಸಾಮರ್ಥ್ಯವರ್ಧನೆ ಮತ್ತುಕುಶಲತೆಯಆಧುನೀಕರಣದ ಮೂಲಕ ಮಾನವ ಸಂಪನ್ಮೂಲವನ್ನುಅಭಿವೃದ್ಧಿಪಡಿಸುವುದು.
- ಅನುಕೂಲಕರ ವ್ಯವಸ್ಥೆ ಮತ್ತು ನೀತಿ ನಿಯಮಗಳ ಸುಧಾರಣೆ.
- ತಾಲೂಕುಗಳ ವರ್ಗೀಕರಣ
- ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿಕೈಗಾರಿಕಾಭಿವೃದ್ಧಿಗೆಉತ್ತೇಜನ.
- ಎಮ್.ಎಸ್.ಎಮ್.ಇಗಳಿಗೆ ಉತ್ತೇಜನ
- ಪರಿಶಿಷ್ಟಜಾತಿ/ ಪಂಗಡಗಳನ್ನು ಉತ್ತೇಜಿಸಲು ವಿಶೇಷ ಒತ್ತು
- ಮಹಿಳಾ ಉದ್ಯಮಶೀಲರಿಗೆ ಉತ್ತೇಜನ
- ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಅಂಗವಿಕಲರು, ಮಾಜಿಯೋಧ ಉದ್ಯಮಶೀಲರಿಗೆ ಉತ್ತೇಜನ
- ಅನಿವಾಸಿ ಕನ್ನಡಿಗರಿಗೆ (ಎನ್ ಆರ್‌ಕೆಗಳು) ಉತ್ತೇಜನ
- ರಫ್ತು ವಲಯಕ್ಕೆಉತ್ತೇಜನ

- ಇಂಧನ ಉಳಿತಾಯ ಕ್ರಮಗಳನ್ನು ಅಳವಡಿಸುವ ಘಟಕಗಳಿಗೆ ಉತ್ತೇಜನ
- ಪುನರ್ ಬಳಕೆ ಇಂಧನ ಯೋಜನೆಗಳಿಗೆ ಉತ್ತೇಜನ
- ಪರಿಸರಸ್ನೇಹಿ ಹಸಿರು ಮತ್ತು ಸ್ವಚ್ಛಯೋಜನೆಗಳಿಗೆ ಉತ್ತೇಜನ
- ಆರ್‌ಅಂಡ್ ಡಿ ಹಾಗೂ ಡಿಜಿಟಲ್‌ಡೈರೆಕ್ಟ್‌ತಯಾರಿಕೆಗೆ ಬೆಂಬಲ
- ಇಂಟಲೆಕ್ಚುವಲ್ ಪ್ರಾಪರ್ಟಿರೈಟ್ಸ್‌ಗಾಗಿಉಪಕ್ರಮ
- ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ
- ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ
- ದೊಡ್ಡ, ಬೃಹತ್, ಅತಿ ಬೃಹತ್, ಅತ್ಯಂತ ಬೃಹತ್ ಉದ್ಯಮಗಳಿಗಾಗಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು
- ಪ್ರಮುಖಬಂಡವಾಳ ಕೈಗಾರಿಕೆಗಳು
- ಅಯವ್ಯಯದ ಬೆಂಬಲ

**ಕೈಗಾರಿಕಾ ಕಾರಿಡರ್‌ಗಳ ಸ್ಥಾಪನೆ**

- ಚೆನ್ನೈ – ಬೆಂಗಳೂರು– ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ) ಮತ್ತು ಬೆಂಗಳೂರು–ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ) ಇವುಗಳ ಮೇಲಿನ ಕಾರ್ಯವನ್ನು ದೆಹಲಿ–ಮುಂಬೈ ಕೈಗಾರಿಕಾಕಾರಿಡಾರ್‌ರೀತಿಯಲ್ಲಿ, ಭಾರತ ಸರ್ಕಾರದ ಬೆಂಬಲದೊಂದಿಗೆ ತ್ವರಿತಗೊಳಿಸಲಾಗುವುದು. ಈ ಕಾರಿಡಾರ್‌ಗಳ ಉದ್ದಕ್ಕೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು, ಜಪಾನ್ ಇಂಟರ್ ನ್ಯಾಷನಲ್ ಕೋ–ಆಪರೇಷನ್ ಏಜೆನ್ಸಿ (ಜೆಐಸಿಎ)ಗಳನ್ನು ಸ್ಥಾಪಿಸಲು ಅವಕಾಶಗಳನ್ನು ಸಹ ಪರಿಶೀಲಿಸುತ್ತದೆ.
- (i) ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ
  (ii) ಚಿತ್ರದುರ್ಗ–ಬಳ್ಳಾರಿ–ಕಲಬುರಗಿ–ಬೀದರ
  (iii) ಧಾರವಾಡ–ಕೊಪ್ಪಳ–ರಾಯಚೂರು
  (iv) ಬೆಂಗಳೂರು–ಹಾಸನ–ಮಂಗಳೂರು
  (v) ಚಿತ್ರದುರ್ಗ–ಹಾವೇರಿ–ಕಾರವಾರ
  (vi) ತುಮಕೂರು–ಶಿವಮೊಗ್ಗ–ಹೊನ್ನಾವರ
  (vii) ರಾಯಚೂರ್–ಬಾಗಲಕೋಟೆ–ಬೆಳಗಾವಿ
- ಬೆಂಗಳೂರು – ಮಂಡ್ಯ – ಮೈಸೂರು – ಚಾಮರಾಜನಗರ ಕಾರಿಡಾರ್ ಜ್ಞಾನ ಆಧಾರಿತ ಕೈಗಾರಿಕಾ ಕಾರಿಡಾರ್ ಆಗಿ ಸ್ಥಾಪಿತವಾಗಲು ಸೂಕ್ತವಾಗಿದೆ.

## ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

- ಭಾರತ ಸರ್ಕಾರವು ತುಮಕೂರು, ಕೋಲಾರ, ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ನಾಲ್ಕು ರಾಷ್ಟ್ರೀಯ ಬಂಡವಾಳ ಮತ್ತುಉತ್ಪಾದನಾ ವಲಯಗಳ (ಎನ್ಐಎಮ್ಜೆಡ್) ಸ್ಥಾಪನೆಗೆ ತತ್ವಶಃ ಅನುಮತಿ ನೀಡಿದೆ. ಸಿಬಿಸಿಐಸಿ/ ಎಸ್ಸೈಸಿಯ ಉದ್ದಕ್ಕೆ ಈ ಸ್ಥಳಗಳಲ್ಲಿನ ಎನ್ಐಎಮ್ಜೆಡ್‌ಗಳು ಅಥವಾ ಕೈಗಾರಿಕಾ ಕೇಂದ್ರ ತಾಣಗಳು, ಎಲ್ಲೆಡೆ ಉತ್ಪಾದನಾ ವಲಯದ ಬೆಳವಣಿಗೆಗೆ ಚಾಲನೆ ನೀಡುತ್ತವೆ.
- ಎನ್ಐಎಮ್ಜಡ್‌ಗಳನ್ನು ಭಾರತ ಸರ್ಕಾರದ ರಾಷ್ಟ್ರೀಯ ಉತ್ಪಾದನಾ ನೀತಿಯ ಮಾರ್ಗದರ್ಶನಗಳಡಿ ವಿಶೇಷ ಉದ್ದೇಶದ ಸಂಸ್ಥೆಗಳ (ಎಸ್‌ಪಿವಿಗಳು) ಮುಖೇನ ಅಭಿವೃದ್ಧಿ ಪಡಿಸಲಾಗುವುದು. ರಾಜ್ಯ ಸರ್ಕಾರವು ಈ ಎಸ್‌ಪಿವಿಗಳನ್ನು ಈಕ್ವಿಟಿ ಭಾಗವಹಿಸುವಿಕೆಯ ಮೂಲಕ (ಪ್ರತಿ ಎನ್ಐಎಮ್ಜೆಡ್‌ಗಾಗಿ ರೂ.೫೦೦ ಕೋಟಿ ಮೀರದಂತೆ) ಬೆಂಬಲಿಸುತ್ತದೆ. ಎಸ್‌ಪಿವಿಗಳು ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದನ್ನು ಸಾಧ್ಯವಾಗಿಸಲು ರಾಜ್ಯವು ಅಗತ್ಯ ಕಾನೂನುಗಳನ್ನು ಜಾರಿಗೊಳಿಸುತ್ತದೆ.
- ರಸ್ತೆಗಳು, ನೀರು ಪೂರೈಕೆ, ವಿದ್ಯುತ್ ಮತ್ತು ಬಂದರುಗಳಿಗೆ ಒಳಪಟ್ಟಂತೆ ಕೈಗಾರಿಕಾ ಮೂಲ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವತ್ತ ಹೆಚ್ಚುವರಿ ಖಾಸಗಿ ಬಂಡವಾಳವನ್ನು ಆಕರ್ಷಿಸಲು ಪಿಪಿಪಿ ವಿಧಾನವನ್ನು ಪ್ರೋತ್ಸಾಹಿಸಲಾ ಗುವುದು.
- ರಾಜ್ಯ ಸರ್ಕಾರವು ಮಂಗಳೂರು ಬಂದರು ಸಾಮರ್ಥ್ಯವನ್ನು ಗರಿಷ್ಠವಾಗಿ ಬಳಸಿಕೊಂಡು, ತದಡಿ ಬಂದರನ್ನು ಸರ್ವ ಋತುಗಳ ಬಂದರಾಗಿ ಅಭಿವೃದ್ಧಿ ಪಡಿಸುತ್ತದೆ. ನವ ಮಂಗಳೂರಿನ ಬಂದರನ್ನು ಆಧುನೀಕರಿಸಿ, ಎನ್.ಐ.ಎಮ್.ಜೆಡ್ ತುಮಕೂರು ಮತ್ತು ಬೆಂಗಳೂರಿನೊಂದಿಗೆ ಸಂಪರ್ಕ ಕಲ್ಪಿಸುವುದನ್ನು ಸಿಬಿಸಿಐಸಿ ಯೋಜನೆಯ ಒಂದು ಮುಖ್ಯ ಅಂಗವನ್ನಾಗಿ ಮಾಡಲಾಗುವುದು.

### ತಾಲೂಕುಗಳನ್ನು ವಲಯಗಳಾಗಿ ವರ್ಗೀಕರಿಸುವಿಕೆ

ಈ ನೀತಿಯ ಧ್ಯೇಯವೆಂದರೆ ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನವುಳ್ಳ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು. ರಾಜ್ಯದ ಅನೇಕ ತಾಲೂಕುಗಳು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ ಎನ್ನುವ ಅಂಶವು ಕೈಗಾರಿಕೆಗಳು ಮಾಡಿದ ಬಂಡವಾಳ ಹೂಡಿಕೆಗಳ ಬಗ್ಗೆ ಮಾಡಲಾದ ಒಂದು ವಿಶ್ಲೇಷಣೆಯಿಂದ ತಿಳಿದುಬಂದಿದೆ.

- ಈ ಧ್ಯೇಯವನ್ನು ಸಾಕಾರಗೊಳಿಸಲು ಕೈಗಾರಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಕೈಗಾರಿಕೆಗಳ ಪ್ರಸರಣೆಗಾಗಿ ತೀವ್ರ ಗಮನದ ಅಗತ್ಯವಿದೆ. ತಾಲೂಕುಗಳಲ್ಲಿ ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ತಲಾವಾರು ಉದ್ಯೋಗವನ್ನು ಗಮನಿಸಿ, ತಾಲೂಕುಗಳನ್ನು ವಿವಿಧ ವಲಯಗಳಾಗಿ ವರ್ಗೀಕರಿಸಲಾಗಿದೆ.
- ಸಂವಿಧಾನದ ಅನುಚ್ಛೇದ ೩೭೧(ಜೆ)ನ ಕಲಂಗಳ ರೀತ್ಯ ಪ್ರತ್ಯೇಕವಾದ ಹೈದರಾಬಾದ್ ಕರ್ನಾಟಕ ವಲಯವನ್ನು ರೂಪಿಸಿರುವ ದೃಷ್ಟಿಯಿಂದ ರಾಜ್ಯವನ್ನು ಎರಡು ಪ್ರದೇಶಗಳು ಅಂದರೆ ಹೈದರಾಬಾದ್ – ಕರ್ನಾಟಕ ಪ್ರದೇಶ ಮತ್ತು ಹೈದರಾಬಾದ್ – ಕರ್ನಾಟಕೇತರ ಪ್ರದೇಶ ಎಂದು ವರ್ಗೀಕರಿಸಲಾಗಿದೆ.
- ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಸರಿಸಮಾನ ಹಣ ಸಂಪನ್ಮೂಲಗಳೊಂದಿಗೆ ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ರಚಿಸುವ ಉದ್ದೇಶದಿಂದ, ತಾಲೂಕುಗಳನ್ನು ಕೆಳಕಂಡಂತೆ ವಿಂಗಡಿಸಿದ್ದು, ವಿವಿಧ ವಲಯಗಳಲ್ಲಿ ಪ್ರತ್ಯೇಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪ್ರಸ್ತಾಪಿಸಲಾಗಿದೆ.

i) ಹೈದರಾಬಾದ್ – ಕರ್ನಾಟಕ ಪ್ರದೇಶವನ್ನು ೨ ವಲಯಗಳಾಗಿ ಅಂದರೆ ಹೆಚ್‌ಕೆ ವಲಯ–೧ ಮತ್ತು ಹೆಚ್‌ಕೆವಲಯ–೨ ಎಂದು ವರ್ಗೀಕರಿಸಲಾಗಿದೆ.

ii) ಇದೇ ರೀತಿ ಹೈದರಾಬಾದ್–ಕರ್ನಾಟಕೇತರ ಪ್ರದೇಶದಲ್ಲಿನ ತಾಲೂಕುಗಳನ್ನು ೪ ವಲಯಗಳಾಗಿ ಅಂದರೆ ವಲಯ–೧, ೨, ೩ ಮತ್ತು ೪ ಎಂದು ವರ್ಗೀಕರಿಸಲಾಗಿದೆ.

iii) ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕುಗಳನ್ನು ವಲಯ–೧ರಲ್ಲೂ, ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದಿರುವ ತಾಲೂಕುಗಳನ್ನು ವಲಯ–೨ರಲ್ಲೂ, ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳನ್ನು ವಲಯ–೩ರಲ್ಲೂ ಮತ್ತು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳನ್ನು ವಲಯ–೪ಕ್ಕೆ ಸೇರಿಸಲಾಗಿದೆ. ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕೆಯಲ್ಲಿ ಅತ್ಯಂತವಾಗಿ ಹಿಂದುಳಿದ ತಾಲೂಕುಗಳನ್ನು ಹೆಚ್‌ಕೆ ವಲಯ–೧ಕ್ಕೂ ಮತ್ತು ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದ ತಾಲೂಕುಗಳನ್ನು ಹೆಚ್‌ಕೆವಲಯ–೨ಕ್ಕೆ ಸೇರಿಸಲಾಗಿದೆ.

iv) ತ್ವರಿತ ನಗರೀಕರಣ, ಕೈಗಾರಿಕಾಭಿವೃದ್ಧಿಗಾಗಿ ಸಾಧ್ಯತೆಗಳು ಹಾಗೂ ಹಂತ–೨ ರಲ್ಲಿನ ನಗರಗಳಿಗೆ ವಿಸ್ತರಣೆಯನ್ನು ಗಮನದಲ್ಲಿಟ್ಟು ಕೊಂಡು, ಮೈಸೂರು, ಮಂಗಳೂರು, ತುಮಕೂರು, ನಂಜನಗೂಡು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮುಂತಾದ ತಾಲೂಕುಗಳನ್ನು ವಲಯ–೩ಕ್ಕೆ ಒಳಪಡಿಸಲಾಗಿದೆ.

V) ತಾಲೂಕುಗಳ ವರ್ಗೀಕರಣ ಈ ಕೆಳಗಿನಂತೆ ಇದೆ:

ಹೈದರಾಬಾದ್ – ಕರ್ನಾಟಕೇತರ ಪ್ರದೇಶಗಳಲ್ಲಿನ ತಾಲೂಕುಗಳನ್ನು ನಾಲ್ಕು ವಲಯಗಳನ್ನಾಗಿ ಅಂದರೆ ವಲಯ–೧, ೨, ೩ ಮತ್ತು ೪ ಎಂದು ವರ್ಗೀಕರಿಸಲಾಗಿದೆ. ಅದರಂತೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕನ್ನುವಲಯ–೧ಕ್ಕೆ ಸೇರಿಸಲಾಗಿದೆ. ವಲಯ–೧ರಲ್ಲಿ ಬರುವ ತಾಲೂಕುಗಳು ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕುಗಳಾಗಿವೆ. ಕೈಗಾರಿಕೆಗಳಲ್ಲಿ ಸ್ವಲ್ಪ ಹಿಂದುಳಿದ ತಾಲೂಕುಗಳನ್ನು ವಲಯ–೨ಕ್ಕೆ ಸೇರಿಸಲಾಗಿದೆ. ಹಿರಿಯೂರು, ಮೊಳಕಾಲ್ಮೂರು, ಚಿತ್ರದುರ್ಗ ಮತ್ತು ಹೊಸದುರ್ಗ ತಾಲ್ಲೂಕುಗಳನ್ನು ವಲಯ–೨ಕ್ಕೆ ಸೇರಿಸಲಾಗಿದೆ. ವಲಯ–೩ರಲ್ಲಿ ಬರುವ ತಾಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳೆಂದು ಪರಿಗಣಿಸಿದೆ. ವಲಯ–೩ಕ್ಕೆ ಚಳ್ಳಕೆರೆ ತಾಲ್ಲೂಕು ಸೇರಿದೆ. ವಲಯ–೪ರಲ್ಲಿ ಬರುವ ತಾಲೂಕುಗಳನ್ನು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲೂಕುಗಳೆಂದು ಪರಿಗಣಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ವಲಯ–೪ಕ್ಕೆ ಸೇರಿದ ಯಾವುದೇ ತಾಲೂಕುಗಳಿರುವುದಿಲ್ಲ.

| ಕ್ರ. ಸಂ. | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟು ಸಂಖ್ಯೆ | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್–ಕರ್ನಾಟಕೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ಪ–೧ | ಹೆಚ್‌ಕೆ ಪ–೨ | ವ–೧ | ವ–೨ | ವ–೩ | ವ–೪ |
| ೧ | ಚಿತ್ರದುರ್ಗ | ೬ | – | – | ಹೊಳಲ್ಕೆರೆ | ಹಿರಿಯೂರು, ಮೊಳಕಾಲ್ಮೂರು, ಚಿತ್ರದುರ್ಗ, ಹೊಸದುರ್ಗ | ಚಳ್ಳಕೆರೆ | – |

**ಆಧಾರ: ಕೈಗಾರಿಕಾ ನೀತಿ ೨೦೧೪–೧೯**

## ವಿದ್ಯುತ್

ತಾಲ್ಲೂಕಿನಲ್ಲಿ ೨೦೦೭–೦೮ರಲ್ಲಿ ವಿದ್ಯುಚ್ಛಕ್ತಿ ಬಳಕೆದಾರರ ವಿವರಗಳನ್ನು ಸಂಖ್ಯೆಯಲ್ಲಿ ನೀಡಿದೆ. ೪೧,೦೧೮ ಗೃಹಬಳಕೆ, ೧,೬೦೧ ಕೈಗಾರಿಕೆ ಬಳಕೆ, ೧೪,೨೮೮ ವಾಣಿಜ್ಯ ಬಳಕೆ, ೫೪೪ ನೀರಾವರಿ ಪಂಪ್‌ಸೆಟ್‌ಗಳು, ೨೪೧ ಬೀದಿ ದೀಪಗಳು ಹೀಗೆ ಒಟ್ಟು ೫೭,೬೯೨ ವಿದ್ಯುತ್ ಸಂಪರ್ಕ ಹೊಂದಿದ್ದವು. ವಿದ್ಯುತ್ ಬಳಕೆ (ಲಕ್ಷ ಯುನಿಟ್‌ಗಳಲ್ಲಿ) ೨೦೦೯ರ ಮಾರ್ಚ್ ಅಂತ್ಯಕ್ಕೆ ೬೭.೨೯ ಗೃಹ ಬಳಕೆ, ೯.೨೩ ಕೈಗಾರಿಕೆ ಬಳಕೆ, ೬೧೬.೦೨ ವಾಣಿಜ್ಯ ಬಳಕೆ, ೭.೫೨ ನೀರಾವರಿ ಪಂಪ್‌ಸೆಟ್‌ಗಳು, ೫೯.೧೨ ಇತರೆ ಆಗಿತ್ತು.

೨೦೧೩-೧೪ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿದ್ದ ವಿದ್ಯುಚ್ಛಕ್ತಿ ಬಳಕೆದಾರರ ವಿವರಗಳನ್ನು ಸಂಖ್ಯೆಯಲ್ಲಿ ನೀಡಿದೆ. ೪೬,೧೦೩ ಗೃಹಬಳಕೆ, ೯೨೫ ಕೈಗಾರಿಕಾ ಬಳಕೆ, ೨,೦೯೮ ವಾಣಿಜ್ಯ ಬಳಕೆ, ೧೪,೨೫೬ ನೀರಾವರಿ ಪಂಪ್‌ಸೆಟ್‌ಗಳು, ೧,೨೭೭ ಇತರೆ, ಒಟ್ಟು ೬೪,೬೫೯ ವಿದ್ಯುತ್ ಸಂಪರ್ಕ ಹೊಂದಿವೆ. ವಿದ್ಯುತ್ ಬಳಕೆ (ದಶ ಲಕ್ಷ ಯುನಿಟ್‌ಗಳಲ್ಲಿ) ೧೦.೨೦ ಗೃಹ ಬಳಕೆ, ೦.೮೫ ಕೈಗಾರಿಕಾ ಬಳಕೆ, ೨.೩೫ ವಾಣಿಜ್ಯ ಬಳಕೆ, ೨೩೨.೮೫ ನೀರಾವರಿ ಪಂಪ್‌ಸೆಟ್‌ಗಳು, ೫.೧೪ ಬೀದಿ ದೀಪಗಳು, ೧೨.೩೧ ಇತರೆ ಒಟ್ಟು ೨೬೩.೭೦ ಆಗಿತ್ತು. ವಿದ್ಯುತ್ ಬಳಕೆಯಿಂದ ಇದೇ ಅವಧಿಯಲ್ಲಿ ೫೪೮೦೯.೯೬ ಲಕ್ಷ ರೂಗಳು ಸರ್ಕಾರಕ್ಕೆ ಆದಾಯ ಬಂದಿತ್ತು.

೨೦೧೫-೧೬ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿದ್ದ ವಿದ್ಯುಚ್ಛಕ್ತಿ ಬಳಕೆದಾರರ ವಿವರಗಳನ್ನು ಸಂಖ್ಯೆಯಲ್ಲಿ ನೀಡಿದೆ. ೪೮,೭೦೩ ಗೃಹಬಳಕೆ, ೧,೧೭೧ ಕೈಗಾರಿಕಾ ಬಳಕೆ, ೨,೪೬೯ ವಾಣಿಜ್ಯ ಬಳಕೆ, ೧೫,೭೭೮ ನೀರಾವರಿ ಪಂಪ್‌ಸೆಟ್‌ಗಳು, ೧೮೯೧೩ ಇತರೆ, ಒಟ್ಟು ೮೭,೦೩೪ ವಿದ್ಯುತ್ ಸಂಪರ್ಕ ಹೊಂದಿವೆ. ವಿದ್ಯುತ್ ಬಳಕೆ (ದಶ ಲಕ್ಷ ಯುನಿಟ್‌ಗಳಲ್ಲಿ) ೧೨.೩೮ ಗೃಹ ಬಳಕೆ, ೧.೦೯ ಕೈಗಾರಿಕಾ ಬಳಕೆ, ೨.೯೫ ವಾಣಿಜ್ಯ ಬಳಕೆ, ೧೨೧.೧೯ ನೀರಾವರಿ ಪಂಪ್‌ಸೆಟ್‌ಗಳು, ೧.೩೪ ಬೀದಿ ದೀಪಗಳು, ೮.೫೭ ಇತರೆ, ಒಟ್ಟು ೧೪೭.೫೨ ಆಗಿತ್ತು. ವಿದ್ಯುತ್ ಬಳಕೆಯಿಂದ ೨೦೧೫-೧೬ ರಲ್ಲಿ ೫೩೭೭.೦೫ ಲಕ್ಷ ರೂಗಳು ಸರ್ಕಾರಕ್ಕೆ ಆದಾಯ ಬಂದಿತ್ತು.

## ಖನಿಜ ಸಂಪತ್ತು

ಖನಿಜ ಸಂಪತ್ತು ಆರ್ಥಿಕಾಭಿವೃದ್ಧಿಯ ದಿಕ್ಕನ್ನು ನಿರ್ಧರಿಸುತ್ತದೆ. ಏಕೆಂದರೆ ಖನಿಜಗಳು ಔದ್ಯಮಿಕ ಮತ್ತು ಆರ್ಥಿಕ ಪ್ರಗತಿಯ ಆಧಾರ ಸ್ಥಂಭಗಳು. ಖನಿಜಗಳು ಕೈಗಾರಿಕೆಗಳಿಗೆ ಅವಶ್ಯಕವಾದ ಕಚ್ಚಾ ಸಂಪನ್ಮೂಲಗಳನ್ನು ಪೂರೈಸುತ್ತವೆ. ಖನಿಜಗಳಲ್ಲಿ ಸಮೃದ್ಧವಾಗಿರುವ ಯಾವುದೇ ಪ್ರದೇಶ, ದೇಶ ತೀವ್ರ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿದೆ. ತಾಲ್ಲೂಕಿನಲ್ಲಿ ಗುಡಿ ಕೈಗಾರಿಕೆಗಳ ಕೆಲವು ಜನರು ಅರೆಕಾಲಿಕ ಕಸುಬಾಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಊಟದ ಎಲೆ, ಈಚಲು ಚಾಪೆ, ಹಪ್ಪಳ, ಮಸಾಲೆ ಪುಡಿ, ಬೀಡಿ ಕಟ್ಟುವುದು, ಹಗ್ಗಹುರಿ ಹೊಸೆಯುವುದು, ಮಡಿಕೆ ಮಾಡುವುದು, ಮುಂತಾದ ಕಿರು ಕೈಗಾರಿಕೆಗಳು ತಾಲ್ಲೂಕಿನಲ್ಲಿವೆ. ಗುಡಿಕೈಗಾರಿಕೆಗಳಿಗೆ ಬ್ಯಾಂಕು ಹಾಗೂ ಹಣಕಾಸು ಸಂಸ್ಥೆಗಳು ನೆರವು ನೀಡುತ್ತಿವೆ.

## ಸಣ್ಣ ಪ್ರಮಾಣದ ಕೈಗಾರಿಕೆಗಳು

ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ಆಟೋಮೊಬೈಲ್, ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್, ಕೆಮಿಕಲ್ಸ್, ಫೆರಸ್ ಮತ್ತು ನಾನ್ ಫೆರಸ್, ಆಹಾರ ಮತ್ತು ಮಾದಕ

ವಸ್ತುಗಳು, ಗ್ಲಾಸ್ ಮತ್ತು ಸಿರಾಮಿಕ್ಸ್, ಜಾಬ್ ವರ್ಕ್ಸ್ ಮತ್ತು ರಿಪೇರಿ, ಚರ್ಮ, ಮೆಕಾನಿಕಲ್ ಇಂಜಿನಿಯರಿಂಗ್, ಕಾಗದ ಮತ್ತು ಮುದ್ರಣ, ರಬ್ಬರ್ ಮತ್ತು ಪ್ಲಾಸ್ಟಿಕ್, ಟೆಕ್ಸ್‌ಟೈಲ್ಸ್, ಮರ ಹಾಗೂ ಇತರೆ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ನೋಂದಣಿಗೊಂಡಿದ್ದವು.

**೨೦೦೮-೨೦೦೯ ರಿಂದ ೨೦೧೪-೧೫ ರವರೆಗೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ (ಸಂಖ್ಯೆಗಳಲ್ಲಿ)**

| ಕ್ರ ಸಂ | ವಿವರ | | ೨೦೦೮ ೦೯ | ೨೦೦೯-೧೦ | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ |
|---|---|---|---|---|---|---|---|---|---|
| ೧ | ಆಟೋಮೊಬೈಲ್ | ಸಂಖ್ಯೆ | ೦೨ | ೦೦ | ೦೦ | ೦೦ | ೦೧ | ೦೦ | ೦೧ |
| | | ಕೆಲಸಗಾರರು | ೦೮ | ೦೦ | ೦೦ | ೦೦ | ೦೮ | ೦೦ | ೧೦ |
| ೨ | ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ | ಸಂಖ್ಯೆ | ೦೩ | ೦೩ | ೦೩ | ೦೨ | ೦೩ | ೦೫ | ೦೧ |
| | | ಕೆಲಸಗಾರರು | ೧೨ | ೦೯ | ೧೨ | ೦೮ | ೧೬ | ೧೬ | ೦೫ |
| ೩ | ಕೆಮಿಕಲ್ಸ್ | ಸಂಖ್ಯೆ | ೦೦ | ೦೨ | ೦೦ | ೦೦ | ೦೦ | ೦೧ | ೦೪ |
| | | ಕೆಲಸಗಾರರು | ೦೦ | ೦೮ | ೦೦ | ೦೦ | ೦೦ | ೦೫ | ೧೬ |
| ೪ | ಫೆರಸ್ ಮತ್ತು ನಾನ್ ಫೆರಸ್ | ಸಂಖ್ಯೆ | ೦೦ | ೦೦ | ೦೦ | ೦೦ | ೦೦ | ೦೦ | ೦೦ |
| | | ಕೆಲಸಗಾರರು | ೦೦ | ೦೦ | ೦೦ | ೦೦ | ೦೦ | ೦೦ | ೦೦ |
| ೫ | ಆಹಾರ ಮತ್ತು ಮಾದಕ ವಸ್ತುಗಳು | ಸಂಖ್ಯೆ | ೦೨ | ೦೨ | ೦೫ | ೦೬ | ೦೫ | ೦೬ | ೦೩ |
| | | ಕೆಲಸಗಾರರು | ೦೮ | ೧೦ | ೨೦ | ೨೪ | ೨೦ | ೫೦ | ೨೦ |
| ೬ | ಗ್ಲಾಸ್ ಮತ್ತು ಸಿರಾಮಿಕ್ಸ್ | ಸಂಖ್ಯೆ | ೦೦ | ೦೦ | ೦೦ | ೦೦ | ೦೦ | ೦೦ | ೦೦ |
| | | ಕೆಲಸಗಾರರು | ೦೦ | ೦೦ | ೦೦ | ೦೦ | ೦೦ | ೦೦ | ೦೦ |
| ೭ | ಜಾಬ್ ವರ್ಕ್ಸ ಮತ್ತು ರಿಪೇರಿ | ಸಂಖ್ಯೆ | ೦೩ | ೦೧ | ೦೪ | ೦೩ | ೦೩ | ೦೦ | ೦೦ |
| | | ಕೆಲಸಗಾರರು | ೧೨ | ೦೩ | ೪೦ | ೧೨ | ೧೨ | ೦೦ | ೦೦ |
| ೮ | ಚರ್ಮ | ಸಂಖ್ಯೆ | ೦೪ | ೦೯ | ೦೮ | ೦೪ | ೩೦ | ೦೭ | ೦೬ |
| | | ಕೆಲಸಗಾರರು | ೧೬ | ೧೬ | ೩೨ | ೧೬ | ೧೨ | ೨೦ | ೪೬ |
| ೯ | ಮೆಕ್ಯಾನಿಕಲ್ ಇಂಜಿನಿಯರಿಂಗ್ | ಸಂಖ್ಯೆ | ೦೨ | ೦೦ | ೦೨ | ೦೩ | ೦೪ | ೦೦ | ೦೦ |
| | | ಕೆಲಸಗಾರರು | ೦೮ | ೦೦ | ೦೮ | ೧೨ | ೧೬ | ೦೦ | ೦೦ |

| | | | | | | | | | |
|---|---|---|---|---|---|---|---|---|---|
| ೧೦ | ಕಾಗದ ಮತ್ತು ಮುದ್ರಣ | ಸಂಖ್ಯೆ | ೦೦ | ೦೦ | ೦೦ | ೦೦ | ೦೦ | ೦೧ | ೦೦ |
| | | ಕೆಲಸಗಾರರು | ೦೦ | ೦೦ | ೦೦ | ೦೦ | ೦೦ | ೦೭ | ೦೦ |
| ೧೧ | ರಬ್ಬರ್ ಮತ್ತು ಪ್ಲಾಸ್ಟಿಕ್ | ಸಂಖ್ಯೆ | ೦೦ | ೦೨ | ೦೦ | ೦೦ | ೦೦ | ೦೧ | ೦೨ |
| | | ಕೆಲಸಗಾರರು | ೦೦ | ೦೮ | ೦೦ | ೦೦ | ೦೦ | ೧೦ | ೧೫ |
| ೧೨ | ಟೆಕ್ಸಟೈಲ್ಸ್ | ಸಂಖ್ಯೆ | ೧೧ | ೧೦ | ೦೯ | ೧೦ | ೧೦ | ೧೪ | ೧೩ |
| | | ಕೆಲಸಗಾರರು | ೪೪ | ೬೦ | ೩೬ | ೪೦ | ೪೦ | ೩೭ | ೭೦ |
| ೧೩ | ಮರ | ಸಂಖ್ಯೆ | ೦೬ | ೨೦ | ೧೨ | ೧೧ | ೦೮ | ೨೦ | ೦೮ |
| | | ಕೆಲಸಗಾರರು | ೨೪ | ೯೦ | ೪೮ | ೪೪ | ೩೨ | ೭೮ | ೫೫ |
| ೧೪ | ಇತರೆ | ಸಂಖ್ಯೆ | ೦೩ | ೦೫ | ೦೩ | ೦೨ | ೦೩ | ೦೫ | ೦೫ |
| | | ಕೆಲಸಗಾರರು | ೧೨ | ೧೦ | ೧೨ | ೦೮ | ೧೨ | ೩೨ | ೨೫ |

**ಆಧಾರ: ಚಿತ್ರದುರ್ಗ ಜಿಲ್ಲಾ ಅಂಕಿಅಂಶಗಳ ನೋಟ– ೨೦೦೮–೦೯ರಿಂದ ೨೦೧೫–೧೬ ರವರೆಗೆ**

## ಕರಕುಶಲ ಕೈಗಾರಿಕೆ

ತಾಲ್ಲೂಕಿನಲ್ಲಿ ೨೦೦೮ ರಿಂದ ೨೦೧೧ ರವರೆಗಿದ್ದ ಕುಶಲಕರ್ಮಿಗಳ ವಿವರವನ್ನು ನೀಡಲಾಗಿದೆ. ೨೫೦ ಮಂದಿ ಮರಗೆಲಸದಲ್ಲಿ, ೧೫೦ ಮಂದಿ ಕುಂಬಾರಿಕೆಯಲ್ಲಿ, ೨೨೫ ಮಂದಿ ದೋಬಿ ವೃತ್ತಿಯಲ್ಲಿ, ೨೦೫ ಮಂದಿ ಕಮ್ಮಾರಿಕೆಯಲ್ಲಿ, ೧೨೫ ಮಂದಿ ಕ್ಷೌರಿಕ ವೃತ್ತಿಯಲ್ಲಿ, ೭೫ ಮಂದಿ ಬಿದಿರು ವೃತ್ತಿಯಲ್ಲಿ, ೧೨೦ ಮಂದಿ ಸುಣ್ಣ ಸುಡುವವರು, ೧೬೦ ಮಂದಿ ಚಮ್ಮಾರಿಕೆಯಲ್ಲಿ, ೨೦ ಮಂದಿ ತೆಂಗಿನ ನಾರು ಮತ್ತು ಚಾಪೆ ತಯಾರಿಕೆಯಲ್ಲಿ, ೨೦ ಮಂದಿ ಹತ್ತಿ ಮತ್ತು ಉಣ್ಣೆ ನೇಯ್ಗೆಯಲ್ಲಿ, ೩೨೫ ಮಂದಿ ಟೈಲರಿಂಗ್‌ನಲ್ಲಿ, ೬೦ ಮಂದಿ ಚಿನ್ನ, ಬೆಳ್ಳಿ ಆಭರಣ ತಯಾರಿಕೆಯಲ್ಲಿ ಹೀಗೆ ಒಟ್ಟು ೧೭೩೫ ಮಂದಿ ಕುಶಲಕರ್ಮಿಗಳು ವಿವಿಧ ಕರಕುಶಲ ಕೈಗಾರಿಕೆಗಳಲ್ಲಿ ತೊಡಗಿದ್ದು ತನ್ಮೂಲಕ ತಾಲ್ಲೂಕಿನ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆ.

## ರೇಷ್ಮೆ ಉದ್ಯಮ

ರೇಷ್ಮೆಯು ಗೃಹ ಕೈಗಾರಿಕೆಗಳಲ್ಲಿ ಒಂದಾಗಿದ್ದು, ಕೃಷಿಗೆ ಪೂರಕವಾಗಿದ್ದು, ಗ್ರಾಮೀಣ ಪ್ರದೇಶದ ಕೃಷಿಕರಿಗೆ ಉದ್ಯೋಗಾವಕಾಶ ಮತ್ತು ಗ್ರಾಮೀಣ ಪ್ರದೇಶದ

ಆರ್ಥಿಕಾಭಿವೃದ್ಧಿಗೆ ನೆರವಾಗಿದೆ. ರೇಷ್ಮೆ ಇಲಾಖೆಯು ರೈತರಿಗೆ ಸೂಕ್ತ ಮಾರ್ಗದರ್ಶನದ ತರಬೇತಿ ನೀಡುತ್ತಾ ಬಂದಿದ್ದರೂ ಅಷ್ಟಾಗಿ ಅಭಿವೃದ್ಧಿಯತ್ತ ಸಾಗಿಲ್ಲ. ತಾಲ್ಲೂಕಿನಲ್ಲಿ ೨೦೧೩-೧೪ ರಲ್ಲಿ ೩೦.೬೦ ಹೆ. ಹಿಪ್ಪು ನೇರಳೆ ಬೆಳೆ ವಿಸ್ತೀರ್ಣವನ್ನು ಹೊಂದಿದ್ದು, ೨೧ ರೇಷ್ಮೆ ಕೃಷಿ ಕೈಗೊಂಡಿರುವ ಗ್ರಾಮಗಳ ಸಂಖ್ಯೆಯಾಗಿದ್ದು, ೦೫ ಮಂದಿ ಪರಿಶಿಷ್ಟ ಜಾತಿ, ೪ ಮಂದಿ ಪರಿಶಿಷ್ಟ ಪಂಗಡ, ೩೫ ಇತರೆಯವರು ಸೇರಿದಂತೆ ಒಟ್ಟು ೪೪ ಮಂದಿ ರೇಷ್ಮೆ ಕೃಷಿ ಕೈಗೊಂಡವರಾಗಿದ್ದರು. ೩.೫೮ ಟನ್ ರೇಷ್ಮೆಗೂಡು ಉತ್ಪಾದಿಸಿ ಇದರ ಮೌಲ್ಯ ೧೩.೩೦ ಲಕ್ಷಗಳಾಗಿತ್ತು. ೯ ರೈತರು ಕೆಟಲಿಕ್ ಅಭಿವೃದ್ಧಿ ಯೋಜನೆಯಡಿ ಸಹಾಯ ಪಡೆದಿದ್ದರು.

ತಾಲ್ಲೂಕಿನಲ್ಲಿ ೨೦೧೫-೧೬ ರಲ್ಲಿ ೫೫.೪೦ ಹೆ. ಹಿಪ್ಪು ನೇರಳೆ ಬೆಳೆ ವಿಸ್ತೀರ್ಣವನ್ನು ಹೊಂದಿದ್ದು, ೧೭ ರೇಷ್ಮೆ ಕೃಷಿ ಕೈಗೊಂಡಿರುವ ಗ್ರಾಮಗಳ ಸಂಖ್ಯೆಯಾಗಿದ್ದು, ೦೬ ಮಂದಿ ಪರಿಶಿಷ್ಟ ಜಾತಿ, ೦೭ ಮಂದಿ ಪರಿಶಿಷ್ಟ ಪಂಗಡ, ೭೧ ಇತರೆಯವರು ಸೇರಿದಂತೆ ಒಟ್ಟು ೮೪ ಮಂದಿ ರೇಷ್ಮೆ ಕೃಷಿ ಕೈಗೊಂಡವರಾಗಿದ್ದರು. ೮.೦೬೫ ಟನ್ ರೇಷ್ಮೆಗೂಡು ಉತ್ಪಾದಿಸಿದ್ದು ಇದರ ಮೌಲ್ಯ ೨೪.೪೬ ಲಕ್ಷಗಳಾಗಿತ್ತು. ೫ ರೈತರು ಕೆಟಲಿಕ್ ಅಭಿವೃದ್ಧಿ ಯೋಜನೆಯಡಿ, ೧೩೬ ರೈತರು ವಂದನಾ ಯೋಜನೆಯಡಿ, ೨ ಮಂದಿ (ಎಸ್.ಸಿ.ಪಿ), ೦೧ ಮಂದಿ (ಟಿ.ಎಸ್.ಪಿ) ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಯಡಿಯಲ್ಲಿನ ಸಹಾಯ ಪಡೆದಿದ್ದರು.

## ಹೈನು ಉದ್ಯಮ

ಗ್ರಾಮೀಣ ಜನರ ಆರ್ಥಿಕ ಸ್ಥಾನಮಾನ ಹಾಗೂ ಜೀವನಮಟ್ಟ ಸುಧಾರಣೆಗೆ ಪಶುಸಂಪತ್ತು ಹಿಂದಿನಿಂದಲೂ ಮಹತ್ತರ ಪಾತ್ರ ವಹಿಸುತ್ತಿದೆ. ತಾಲ್ಲೂಕಿನಲ್ಲಿ ಪಶುಸಂಪತ್ತು ಶ್ರೀಮಂತವಾಗಿದ್ದು, ವ್ಯವಸಾಯ ಮಾಡಲು, ಬಾವಿಗಳಿಂದ ನೀರೆತ್ತಲೂ, ದವಸ ಧಾನ್ಯಗಳನ್ನು ಮಾರುಕಟ್ಟೆಗೆ ಸಾಗಿಸಲೂ, ರೈತಾಪಿ ವರ್ಗಕ್ಕೆ ನೆರವಾಗಿದೆ. ಹೈನುಗಾರಿಕೆಯು ಡೈರಿ ಉದ್ಯಮದ ಸ್ಥಾಪನೆಗೆ ಕಾರಣವಾಗಿದೆ. ಉದ್ಯೋಗ ಸೃಷ್ಟಿಸುವ ಜೊತೆಗೆ ಜನರ ಜೀವನಮಟ್ಟ ಸುಧಾರಿಸಲು ನೆರವಾಗಿದೆ. ತಾಲ್ಲೂಕಿನಲ್ಲಿ ೨೦೦೭ರ ಜಾನುವಾರು ಗಣತಿಯಂತೆ, ೪೪೧೮೫ ದನಕರುಗಳು, ೩೫೬೪೯ ಎಮ್ಮೆಗಳು, ೫೫೬೨೪ ಕುರಿಗಳು, ೧೯೨೩೦ ಮೇಕೆಗಳು, ೨೮ ಹಂದಿಗಳು, ೧೭ ಮೊಲಗಳು, ೩೧೧೬ ನಾಯಿಗಳು, ೫೮೦ ಇತರೆ ಸೇರಿದಂತೆ ಒಟ್ಟು ೧೫೮೮೪೨೯ ಜಾನುವಾರುಗಳಿದ್ದವು. ೮೨೩೮೬ ಕೋಳಿಗಳಿದ್ದವು. ತಾಲ್ಲೂಕಿನಲ್ಲಿ ೨೦೧೫-೧೬ರಲ್ಲಿ ೩ ಪಶು ಆಸ್ಪತ್ರೆಗಳು, ೮ ಚಿಕಿತ್ಸಾಲಯಗಳು, ೭ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು ಸಂಚಾರಿ ಚಿಕಿತ್ಸಾಲಯ, ಒಟ್ಟು ೧೯ ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ತಾಲ್ಲೂಕಿನಲ್ಲಿ ೧೪೪೫೮ ರಾಸುಗಳು ಕೃತಕ ಗರ್ಭಧಾರಣೆ, ೮೬೪೮೦ ಚಿಕಿತ್ಸೆ ಪಡೆದ ಪ್ರಾಣಿಗಳಾಗಿದ್ದವು.

**ಭೂ ಬಳಕೆ**

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ ಮೇಲೆ. ಹೊಳಲ್ಕೆರೆ ತಾಲ್ಲೂಕು (೨೦೧೫–೧೬ರಲ್ಲಿ) ೧೩೫೮೬೮ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ೮೮೭೮ ಹೆ. ಅರಣ್ಯ ಪ್ರದೇಶ ಹೊಂದಿತ್ತು. ೧೧೯೬೮ ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ ಹೊಂದಿದ್ದು, ಇದರಲ್ಲಿ ೬೧೦೦ ಹೆ. ವ್ಯವಸಾಯೇತರ ಭೂಮಿ ಹಾಗೂ ೫೮೬೮ ಹೆಕ್ಟೇರ್ ಬಂಜರು ಭೂಮಿಯೂ ಸೇರಿತ್ತು. ೨೨೨೪೨ ಹೆಕ್ಟೇರ್ ಸಾಗುವಳಿ ಮಾಡದಿರುವ ಇತರೆ ಭೂಮಿಯಾಗಿದ್ದು, ಇದರಲ್ಲಿ ೬೧೭ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು, ೨೧೦೦೦ ಹೆಕ್ಟೇರ್ ಖಾಯಂ ಗೋಮಾಳ ಹಾಗೂ  ೬೨೫ ಹೆಕ್ಟೇರ್ ವೃಕ್ಷ ಮತ್ತು ತೋಪುಗಳು ಸೇರಿದ್ದವು. ೨೫೧೮೦ ಹೆಕ್ಟೇರ್ ಬೀಳು ಭೂಮಿಯಾಗಿದ್ದು, ಇದರಲ್ಲಿ ೨೦೪೫೦ ಹೆಕ್ಟೇರ್ ಚಾಲ್ತಿ ಬೀಳುಭೂಮಿ ಹಾಗೂ ೪೭೩೦ ಹೆಕ್ಟೇರ್ ಇತರೆ ಬೀಳು ಭೂಮಿ ಸೇರಿದೆ. ೭೯೯೭೧ ಹೆಕ್ಟೇರ್ ಬಿತ್ತನೆಯಾದ ಪ್ರದೇಶವಾಗಿದ್ದು, ಇದರಲ್ಲಿ ೬೭೬೦೦ ಹೆಕ್ಟೇರ್ ನಿವ್ವಳ, ೧೨೩೭೧ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಪ್ರದೇಶವಾಗಿತ್ತು.

**ಭೂ–ಹಿಡುವಳಿ**

ಕೃಷಿ ಗಣತಿಯು ಪ್ರತಿ ಐದು ವರ್ಷಗಳಿಗೊಮ್ಮೆ ಜರುಗುತ್ತದೆ. ತಾಲ್ಲೂಕಿನಲ್ಲಿ ೨೦೧೦–೨೦೧೧ ರ ಕೃಷಿ ಗಣತಿಯಂತೆ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂ–ಹಿಡುವಳಿ ಹೊಂದಿರುವವರನ್ನು ಅತೀ ಸಣ್ಣ ಭೂ ಹಿಡುವಳಿದಾರರು ಎಂತಲೂ, ಇವರ ಸಂಖ್ಯೆ ೧೯೮೫೨ ಆಗಿದ್ದು, ೧೧೨೯೦.೨೮ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೧ ರಿಂದ ೨ ಹೆ. ಭೂ ವಿಸ್ತೀರ್ಣವನ್ನು ಸಣ್ಣ ಭೂ–ಹಿಡುವಳಿ ಎಂತಲೂ ಇವರ ಸಂಖ್ಯೆ ೧೪೨೫೮ ಆಗಿದ್ದು, ೧೯೭೧೦.೭೦ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೨ ರಿಂದ ೪ ಹೆಕ್ಟೇರ್ ಭೂಹಿಡುವಳಿ  ಹೊಂದಿರುವವರನ್ನು ಅರೆ ಮಧ್ಯಮ ಭೂ ಹಿಡುವಳಿದಾರ ಎಂತಲೂ ಇವರ ಸಂಖ್ಯೆ ೭೨೯ ಆಗಿದ್ದು,  ೧೯೪೧೪.೧೫ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೪ ರಿಂದ ೧೦ ಹೆಕ್ಟೇರ್ ಭೂ ಹಿಡುವಳಿ ಹೊಂದಿರವವರನ್ನು  ಮಧ್ಯಮ ಭೂ ಹಿಡುವಳಿದಾರ ಎಂತಲೂ, ಇವರ ಒಟ್ಟು ಸಂಖ್ಯೆ ೨೪೧೨ ಆಗಿದ್ದು, ೧೩೨೧೭.೦೯ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ೧೦ ಹೆಕ್ಟೇರ್ ಮತ್ತು ಅದಕ್ಕಿಂತ ಹೆಚ್ಚು ಭೂ ಹಿಡುವಳಿ ಹೊಂದಿರವವರನ್ನು ದೊಡ್ಡ ಭೂ ಹಿಡುವಳಿದಾರ ಎಂತಲೂ ಇವರ ಸಂಖ್ಯೆ ೧೭೮ ಆಗಿದ್ದು, ೩೩೯.೮೧ ಹೆಕ್ಟೇರ್ ಭೂ ವಿಸ್ತೀರ್ಣ ಹೊಂದಿದ್ದರು. ಹೀಗೆ ತಾಲ್ಲೂಕಿನಲ್ಲಿ ೪೩೯೯ ಒಟ್ಟು ಭೂ ಹಿಡುವಳಿದಾರರಿದ್ದು, ೬೭೦೩೨.೦೩ ಹೆಕ್ಟೇರ್ ಭೂ ವಿಸ್ತೀರ್ಣವನ್ನು ಹೊಂದಿದ್ದರು. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

## ಕೃಷಿ ಗಣತಿಯಂತೆ (೨೦೧೦-೧೧) ಭೂ ಹಿಡುವಳಿದಾರರ ಸಂಖ್ಯೆ ಮತ್ತು ವಿಸ್ತೀರ್ಣ

| ಕ್ರ. ಸಂ. | ವರ್ಗ | | ಹಿಡುವಳಿದಾರರ ಸಂಖ್ಯೆ | | | | ಭೂ ಹಿಡುವಳಿ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | | | |
|---|---|---|---|---|---|---|---|---|---|---|
| | | | ವೈಯಕ್ತಿಕ | ಜಂಟಿ | ಸಾಂಸ್ಥಿಕ | ಒಟ್ಟು | ವೈಯಕ್ತಿಕ | ಜಂಟಿ | ಸಾಂಸ್ಥಿಕ | ಒಟ್ಟು |
| | | | | | | ಅತಿ ಸಣ್ಣ | | | | |
| ೧ | ೦.೫ ಕ್ಕಿಂತ ಕಡಿಮೆ | ಪು | ೬,೦೮೭ | ೦ | ೦ | ೬,೦೮೭ | ೧,೮೧೩.೮೪ | ೦.೦೦ | ೦.೦೦ | ೧,೮೧೩.೮೪ |
| | | ಮ | ೧,೫೭೧ | ೦ | ೦ | ೧,೫೭೧ | ೪೮೭.೩೯ | ೦.೦೦ | ೦.೦೦ | ೪೮೭.೩೯ |
| | | ಒಟ್ಟು | ೭,೬೫೮ | ೦ | ೦ | ೭,೬೫೮ | ೨,೩೦೧.೨೩ | ೦.೦೦ | ೦.೦೦ | ೨,೩೦೧.೨೩ |
| | (೦.೫ – ೧.೦) | ಪು | ೯,೫೨೭ | ೦ | ೦ | ೯,೫೨೭ | ೭,೦೧೪.೬೭ | ೦.೦೦ | ೦.೦೦ | ೭,೦೧೪.೬೭ |
| | | ಮ | ೨,೬೬೭ | ೦ | ೦ | ೨,೬೬೭ | ೧,೯೭೪.೩೮ | ೦.೦೦ | ೦.೦೦ | ೧,೯೭೪.೩೮ |
| | | ಒಟ್ಟು | ೧೨,೧೯೪ | ೦ | ೦ | ೧೨,೧೯೪ | ೮,೯೮೯.೦೫ | ೦.೦೦ | ೦.೦೦ | ೮,೯೮೯.೦೫ |
| | ಒಟ್ಟು | ಪು | ೧೫,೬೧೪ | ೦ | ೦ | ೧೫,೬೧೪ | ೮,೮೨೮.೫೧ | ೦.೦೦ | ೦.೦೦ | ೮,೮೨೮.೫೧ |
| | | ಮ | ೪,೨೩೮ | ೦ | ೦ | ೪,೨೩೮ | ೨,೪೬೧.೭೭ | ೦.೦೦ | ೦.೦೦ | ೨,೪೬೧.೭೭ |
| | | ಒಟ್ಟು | ೧೯,೮೫೨ | ೦ | ೦ | ೧೯,೮೫೨ | ೧೧,೨೯೦.೨೮ | ೦.೦೦ | ೦.೦೦ | ೧೧,೨೯೦.೨೮ |
| | | | | | | ಸಣ್ಣ | | | | |
| ೨ | (೧.೦ – ೨.೦) | ಪು | ೧೧,೩೩೫ | ೦ | ೦ | ೧೧,೩೩೫ | ೧೫,೬೭೦.೧೬ | ೦.೦೦ | ೦.೦೦ | ೧೫,೬೭೦.೧೬ |
| | | ಮ | ೨,೯೨೩ | ೦ | ೦ | ೨,೯೨೩ | ೪,೦೪೦.೫೪ | ೦.೦೦ | ೦.೦೦ | ೪,೦೪೦.೫೪ |
| | | ಒಟ್ಟು | ೧೪,೨೫೮ | ೦ | ೦ | ೧೪,೨೫೮ | ೧೯,೭೧೦.೭೦ | ೦.೦೦ | ೦.೦೦ | ೧೯,೭೧೦.೭೦ |
| | ಒಟ್ಟು | ಪು | ೧೧,೩೩೫ | ೦ | ೦ | ೧೧,೩೩೫ | ೧೫,೬೭೦.೧೬ | ೦.೦೦ | ೦.೦೦ | ೧೫,೬೭೦.೧೬ |

| | | | | | | | | | | |
|---|---|---|---|---|---|---|---|---|---|---|
| | | ಮ | ೨,೯೨೩ | ೦ | ೦ | ೨,೯೨೩ | ೪,೦೪೦.೫೪ | 0.00 | 0.00 | ೪,೦೪೦.೫೪ |
| | | ಒಟ್ಟು | ೧೪,೨೫೮ | ೦ | ೦ | ೧೪,೨೫೮ | ೧೯,೨೧೦.೨೦ | 0.00 | 0.00 | ೧೯,೨೧೦.೨೦ |
| **ಅರೆ ಮಧ್ಯಮ** | | | | | | | | | | |
| ೩ | (೨.೦ – ೩.೦) | ಪು | ೪,೨೨೭ | ೦ | ೦ | ೪,೨೨೭ | ೯,೯೬೦.೫೯ | 0.00 | 0.00 | ೯,೯೬೦.೫೯ |
| | | ಮ | ೮೬೨ | ೦ | ೦ | ೮೬೨ | ೨,೦೩೧.೪೬ | 0.00 | 0.00 | ೨,೦೩೧.೪೬ |
| | | ಒಟ್ಟು | ೫,೦೮೯ | ೦ | ೦ | ೫,೦೮೯ | ೧೧,೯೯೨.೦೫ | 0.00 | 0.00 | ೧೧,೯೯೨.೦೫ |
| | (೩.೦ – ೪.೦) | ಪು | ೧,೮೬೬ | ೦ | ೦ | ೧,೮೬೬ | ೬,೨೭೬.೭೨ | 0.00 | 0.00 | ೬,೨೭೬.೭೨ |
| | | ಮ | ೩೪೪ | ೦ | ೦ | ೩೪೪ | ೧,೧೪೫.೩೮ | 0.00 | 0.00 | ೧,೧೪೫.೩೮ |
| | | ಒಟ್ಟು | ೨,೨೧೦ | ೦ | ೦ | ೨,೨೧೦ | ೭,೪೨೨.೧೦ | 0.00 | 0.00 | ೭,೪೨೨.೧೦ |
| | ಒಟ್ಟು | ಪು | ೬,೦೯೩ | ೦ | ೦ | ೬,೦೯೩ | ೧೬,೨೩೭.೩೧ | 0.00 | 0.00 | ೧೬,೨೩೭.೩೧ |
| | | ಮ | ೧,೨೦೬ | ೦ | ೦ | ೧,೨೦೬ | ೩,೧೭೬.೮೪ | 0.00 | 0.00 | ೩,೧೭೬.೮೪ |
| | | ಒಟ್ಟು | ೭,೨೯೯ | ೦ | ೦ | ೭,೨೯೯ | ೧೯,೪೧೪.೧೫ | 0.00 | 0.00 | ೧,೯೪೧೪ |
| **ಮಧ್ಯಮ** | | | | | | | | | | |
| ೪ | (೪.೦ – ೫.೦) | ಪು | ೯೪೫ | ೦ | ೦ | ೯೪೫ | ೪,೧೨೦.೭೦ | 0.00 | 0.00 | ೪,೧೨೦.೭೦ |
| | | ಮ | ೧೯೧ | ೦ | ೦ | ೧೯೧ | ೮೪೩.೨೬ | 0.00 | 0.00 | ೮೪೩.೨೬ |
| | | ಒಟ್ಟು | ೧೧೩೬ | ೦ | ೦ | ೧೧೩೬ | ೪,೯೬೩.೯೬ | 0.00 | 0.00 | ೪,೯೬೩.೯೬ |
| | (೫.೦ – ೭.೫) | ಪು | ೮೪೦ | ೦ | ೦ | ೮೪೦ | ೪,೯೩೯.೮೩ | 0.00 | 0.00 | ೪,೯೩೯.೮೩ |
| | | ಮ | ೧೪೧ | ೦ | ೦ | ೧೪೧ | ೮೨೯.೩೨ | 0.00 | 0.00 | ೮೨೯.೩೨ |
| | | ಒಟ್ಟು | ೯೮೧ | ೦ | ೦ | ೯೮೧ | ೫,೭೬೯.೧೫ | 0.00 | 0.00 | ೫,೭೬೯.೧೫ |
| | (೭.೫ – ೧೦.೦) | ಪು | ೨೪೫ | ೦ | ೦ | ೨೪೫ | ೨,೦೫೯.೪೪ | 0.00 | 0.00 | ೨,೦೫೯.೪೪ |
| | | ಮ | ೪೪ | ೦ | ೦ | ೪೪ | ೩೭೩.೪೨ | 0.00 | 0.00 | ೩೭೩.೪೨ |

| | | | | | | | | | | |
|---|---|---|---|---|---|---|---|---|---|---|
| | | ಒಟ್ಟು | ೨೮೯ | ೦ | ೬ | ೨೯೫ | ೨,೪೩೨.೮೬ | ೦.೦೦ | ೫೧.೧೨ | ೨,೪೮೩.೯೮ |
| | ಒಟ್ಟು | ಪು | ೨,೦೩೦ | ೦ | ೦ | ೨,೦೩೦ | ೧೧,೧೧೯.೯೭ | ೦.೦೦ | ೦.೦೦ | ೧೧,೧೧೯.೯೭ |
| | | ಮ | ೩೭೬ | ೦ | ೦ | ೩೭೬ | ೨,೦೪೬.೦೦ | ೦.೦೦ | ೦.೦೦ | ೨೦೪೬.೦೦ |
| | | ಒಟ್ಟು | ೨,೪೦೬ | ೦ | ೬ | ೨,೪೧೨ | ೧೩,೧೬೫.೯೭ | ೦.೦೦ | ೫೧.೧೨ | ೧೩,೨೧೭.೦೯ |
| ದೊಡ್ಡ | | | | | | | | | | |
| ೫ | (೧೦.೦ – ೨೦.೦) | ಪು | ೧೩೯ | ೦ | ೦ | ೧೩೯ | ೧,೮೧೩.೫೧ | ೦.೦೦ | ೦.೦೦ | ೧,೮೧೩.೫೧ |
| | | ಮ | ೧೯ | ೦ | ೦ | ೧೯ | ೨೩೭.೧೦ | ೦.೦೦ | ೦.೦೦ | ೨೩೭.೧೦ |
| | | ಒಟ್ಟು | ೧೫೮ | ೦ | ೧೨ | ೧೭೦ | ೨,೦೫೦.೬೧ | ೦.೦೦ | ೧೨೦.೧೧ | ೨,೧೭೦.೭೨ |
| | ೨೦ ಮತ್ತು ಅದಕ್ಕಿಂತ ಹೆಚ್ಚು | ಪು | ೨ | ೦ | ೦ | ೨ | ೫೪.೩೨ | ೦.೦೦ | ೦.೦೦ | ೫೪.೩೨ |
| | | ಮ | ೦ | ೦ | ೦ | ೦ | ೦.೦೦ | ೦.೦೦ | ೦.೦೦ | ೦.೦೦ |
| | | ಒಟ್ಟು | ೨ | ೦ | ೬ | ೮ | ೫೪.೩೨ | ೦.೦೦ | ೧೧೭೪.೭೨ | ೧,೨೨೯.೦೯ |
| | ಒಟ್ಟು | ಪು | ೧೪೧ | ೦ | ೦ | ೧೪೧ | ೧,೮೬೭.೮೮ | ೦.೦೦ | ೦.೦೦ | ೧,೮೬೭.೮೮ |
| | | ಮ | ೧೯ | ೦ | ೦ | ೧೯ | ೨೩೭.೧೦ | ೦.೦೦ | ೦.೦೦ | ೨೩೭.೧೦ |
| | | ಒಟ್ಟು | ೧೬೦ | ೦ | ೧೮ | ೧೭೮ | ೨,೧೦೪.೯೮ | ೦.೦೦ | ೧೨೯೪.೮೩ | ೩,೩೯೯.೮೧ |
| | ಎಲ್ಲ ವರ್ಗದವರು | ಪು | ೩೫,೨೧೩ | ೦ | ೦ | ೩೫,೨೧೩ | ೫೩,೭೨೩.೮೩ | ೦.೦೦ | ೦.೦೦ | ೫೩,೭೨೩.೮೩ |
| | | ಮ | ೮,೭೬೨ | ೦ | ೦ | ೮,೭೬೨ | ೧೧,೯೬೨.೨೫ | ೦.೦೦ | ೦.೦೦ | ೧೧,೯೬೨.೨೫ |
| | | ಒಟ್ಟು | ೪೩,೯೭೫ | ೦ | ೨೪ | ೪೩,೯೯೯ | ೬೫,೬೮೬.೦೮ | ೦.೦೦ | ೧೩೪೫.೯೫ | ೬೭,೦೩೨.೦೩ |

ಆಧಾರ: ಕೃಷಿ ಗಣತಿ ೨೦೧೦–೧೧

**ಕೆಲಸಗಾರರು**

ಹೊಳಲ್ಕೆರೆ ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ೬೭೯೦೬ ಮುಖ್ಯ ಕೆಲಸಗಾರರಿದ್ದು, ಅವರಲ್ಲಿ ೪೯೬೫೭ ಪುರುಷರು ಮತ್ತು ೧೮೨೪೯ ಮಹಿಳೆಯರು ಸೇರಿದ್ದರು. ಒಟ್ಟು ಮುಖ್ಯ ಕೆಲಸಗಾರರಲ್ಲಿ ೩೬,೩೧೪ (೨೯೩೧೭ ಪುರುಷರು, ೬೯೯೭ ಮಹಿಳೆಯರು) ವ್ಯವಸಾಯಗಾರರು, ೧೯೪೪೬ (೧೦೩೧೦ ಪುರುಷರು, ೯೧೩೬ ಮಹಿಳೆಯರು) ಮಂದಿ ಕೃಷಿ ಕಾರ್ಮಿಕರು, ೧೫೧೪ (೧೩೫೧ ಪುರುಷರು, ೧೬೩ ಮಹಿಳೆಯರು) ಜಾನುವಾರು, ಅರಣ್ಯ, ಮೀನುಗಾರಿಕೆ, ಬೇಟೆ, ಪ್ಲಾಂಟೇಷನ್, ಹಣ್ಣಿನ ತೋಟ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲೂ, ೨೪೦ (೧೪೨ ಪುರುಷರು, ೯೮ ಮಹಿಳೆಯರು) ಮಂದಿ ಗಣಿಗಾರಿಕೆಯಲ್ಲೂ, ೧೮೫೦ (೧೪೦೧ ಪುರುಷರು, ೪೪೯ ಮಹಿಳೆಯರು) ಕೈಗಾರಿಕೆಗಳಲ್ಲೂ, ೫೩೭ (೫೧೪ ಪುರುಷರು, ೨೩ ಮಹಿಳೆಯರು) ಮಂದಿ ನಿರ್ಮಾಣದಲ್ಲೂ, ೩೦೦೭ (೨೫೬೧ ಪುರುಷರು, ೪೪೬ ಮಹಿಳೆಯರು) ಮಂದಿ ವ್ಯಾಪಾರ ಮತ್ತು ವಾಣಿಜ್ಯದಲ್ಲೂ, ೬೩೮ (೬೩೦ ಪುರುಷರು, ೮ ಮಹಿಳೆಯರು) ಮಂದಿ ಸಾರಿಗೆ ಸಂಗ್ರಹಣೆ ಹಾಗೂ ಸಂಪರ್ಕ ಕ್ಷೇತ್ರಗಳಲ್ಲೂ ಹಾಗೂ ೪೩೬೦ (೩೪೩೧ ಪುರುಷರು, ೯೨೯ ಮಹಿಳೆಯರು) ಮಂದಿ ಇತರೆ ಸೇವೆಗಳಲ್ಲೂ ಕಾರ್ಯ ನಿರ್ವಹಿಸುತ್ತಿದ್ದರು. ತಾಲ್ಲೂಕಿನಲ್ಲಿ ೧೪೨೮೮ (೧೦೧೬ ಪುರುಷರು, ೧೩೨೭೨ ಮಹಿಳೆಯರು)ಮಂದಿ ಸೀಮಾಂತ(ಮಾರ್ಜಿನಲ್) ಕೆಲಸಗಾರರು ಹಾಗೂ ೯೭೦೧೬ (೪೦೫೨೬ ಪುರುಷರು,೫೬೪೯೦ ಮಹಿಳೆಯರು) ಮಂದಿ ಕೆಲಸಗಾರರಲ್ಲದವರಿದ್ದರು.

ತಾಲ್ಲೂಕಿನಲ್ಲಿ ೨೦೧೧ ರ ಜನಗಣತಿಯಂತೆ ೧೧೫೨೭೭ (೬೭೬೫೩ ಪುರುಷರು, ೪೭೬೨೪ ಮಹಿಳೆಯರು) ಮಂದಿ ಒಟ್ಟು ಕೆಲಸಗಾರರಿದ್ದರು. ಇವರಲ್ಲಿ ೮೦೩೩೯ (೫೭೨೪೪ ಪುರುಷರು, ೨೩೦೯೫ ಮಹಿಳೆಯರು) ಮುಖ್ಯ ಕೆಲಸಗಾರರು, ೩೪೯೩೮ (೧೦೪೦೯ ಪುರುಷರು, ೨೪೫೨೯ ಮಹಿಳೆಯರು) ಸೀಮಾಂತ ಕೆಲಸಗಾರರು ಸೇರಿದ್ದರು. ೮೦೩೩೯ ಮುಖ್ಯ ಕೆಲಸಗಾರರಲ್ಲಿ ೪೧೦೫೪ ವ್ಯವಸಾಯಗಾರರು, ೨೩೨೫೬ (೧೨,೧೦೭ ಪುರುಷರು, ೧೧,೧೪೯ ಮಹಿಳೆಯರು) ಕೃಷಿ ಕಾರ್ಮಿಕರು, ೧೬೮೯ (೧೨೦೫ ಪುರುಷರು, ೪೮೪ ಮಹಿಳೆಯರು) ಗೃಹ ಕೈಗಾರಿಕೆಗಳಲ್ಲಿ, ೧೪೩೪೦ (೧೦೬೫೫ ಪುರುಷರು ೩೬೮೫ ಮಹಿಳೆಯರು) ಇತರೆ ಕೆಲಸಗಾರರು ಸೇರಿದ್ದರು. ೩೪,೯೩೮ ಸೀಮಾಂತ ಕೆಲಸಗಾರರಲ್ಲಿ, ೯೩೧೬ (೨೨೦೯ ಪುರುಷರು, ೭೧೦೭ ಮಹಿಳೆಯರು) ವ್ಯವಸಾಯಗಾರರು, ೧೮೨೦೦ (೫,೦೧೫ ಪುರುಷರು ೧೩,೧೮೫ ಮಹಿಳೆಯರು) ಕೃಷಿಕಾರ್ಮಿಕರು, ೧,೫೯೩ (೬೩೨ ಪುರುಷರು ೯೬೧ ಮಹಿಳೆಯರು ಗೃಹ ಕೈಗಾರಿಕೆಗಳಲ್ಲಿ ಹಾಗೂ ೫೮೨೯ (೨,೫೫೩ ಪುರುಷರು, ೩,೨೭೬ ಮಹಿಳೆಯರು) ಇತರೆ ಕೆಲಸಗಾರರು ಸೇರಿದ್ದರು.

## ಉದ್ಯೋಗ ವಿನಿಮಯ ಕಛೇರಿ

ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೧೧-೧೨ ರಲ್ಲಿ ಒಟ್ಟು ೪೫೫ ವಿವಿಧ ವರ್ಗದ ಪದವೀಧರರು ಚಿತ್ರದುರ್ಗ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗ ಬಯಸಿ ನೋಂದಾಯಿಸಿಕೊಂಡಿದ್ದರು. ಇವರಲ್ಲಿ ೩೧೦ ಪುರುಷರು ಮತ್ತು ೧೪೫ ಸ್ತ್ರೀಯರು ಸೇರಿದ್ದರು.

## ಬಡತನ ನಿರ್ಮೂಲನೆ

ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳು ಗ್ರಾಮ ಪಂಚಾಯ್ತಿ ಮೂಲಕ ಹಲವಾರು ಪ್ರಗತಿಪರ ಯೋಜನೆಗಳನ್ನು ಅನುಷ್ಟಾನಗೊಳಸಲಾಗಿದೆ.

ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ ೨೦೦೯-೧೦ರಲ್ಲಿ ೩೦೫೩೧೭೯ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಇದೇ ಸಾಲಿನಲ್ಲಿ ತಾಲ್ಲೂಕಿನಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ೪೧೮೨ ಮನೆಗಳನ್ನು ಕಟ್ಟಿ ಫಲಾನುಭವಿಗಳಿಗೆ ವಿತರಿಸಲಾಗಿತ್ತು. ಡಾ॥ ಅಂಬೇಡ್ಕರ್ ಯೋಜನೆಯಡಿಯಲ್ಲಿ ೪೩೬ ಮನೆಗಳನ್ನು ಕಟ್ಟಿ ಪರಿಶಿಷ್ಟ ಜಾತಿಯವರಿಗೆ ವಿತರಿಸಲಾಗಿತ್ತು.

ತಾಲ್ಲೂಕಿನಲ್ಲಿ ೨೦೧೩-೧೪ ರಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಒಟ್ಟು ೫೪೯೧ ಮನೆಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ ೨೨೯ ಪರಿಶಿಷ್ಟ ಜಾತಿಯವರು, ೧೧೨ ಪರಿಶಿಷ್ಟ ಪಂಗಡದವರು, ೩೯ ಇತರೆ ಹಿಂದುಳಿದ ವರ್ಗದವರು ಮತ್ತು ೧೬೧ ಇತರೆ ಫಲಾನುಭವಿಗಳಾಗಿದ್ದರು. ಇದೇ ಅವಧಿಯಲ್ಲಿ ಸ್ವರ್ಣಜಯಂತಿ ಗ್ರಾಮ ಸ್ವರಾಜ್ ಯೋಜನೆಯಡಿ ಒಟ್ಟು ೫೦ ಮಹಿಳಾ ಗುಂಪುಗಳು ಪ್ರಯೋಜನ ಪಡೆದಿದ್ದವು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ೪೫೧೪೫ ಕೆಲಸದ ಚೀಟಿಗಳನ್ನು ವಿತರಿಸಲಾಗಿದ್ದು, ೩೨೮೫೧ ಕುಟುಂಬಗಳು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದವು. ಅದರಂತೆ ೩೨೯೧೧ ಈ ಯೋಜನೆಯಡಿ ಕೆಲಸ ನಿರ್ವಹಿಸಿದ ಕುಟುಂಬಗಳ ಸಂಖ್ಯೆಯಾಗಿತ್ತು. ೧೮೬೦ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿ ಕೊಂಡಿದ್ದರು. ಇದರಿಂದಾಗಿ ೬೯೧೫೨೫ (೩೯೧೦೦೭ ಪುರುಷರು ಹಾಗೂ ೩೦೦೫೧೮ ಮಹಿಳೆಯರು) ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು.

ತಾಲ್ಲೂಕಿನಲ್ಲಿ ೨೦೧೫-೧೬ ರಲ್ಲಿ ಸ್ವರ್ಣಜಯಂತಿ ಗ್ರಾಮ ಸ್ವರಾಜ್ ಯೋಜನೆಯಡಿ ಒಟ್ಟು ೧೨೨೯ ಮಹಿಳಾ ಗುಂಪುಗಳು ಪ್ರಯೋಜನ ಪಡೆದಿದ್ದವು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ೪೦೬೦೧ ಕೆಲಸದ ಚೀಟಿಗಳನ್ನು

ವಿತರಿಸಲಾಗಿದ್ದು, ೨೧೩೯೪ ಕುಟುಂಬಗಳು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದವು. ಅದರಂತೆ ೧೫೫೧೭೮ ಈ ಯೋಜನೆಯಡಿ ಕೆಲಸ ನಿರ್ವಹಿಸಿದ ಕುಟುಂಬಗಳ ಸಂಖ್ಯೆಯಾಗಿತ್ತು. ೧೭೫೮ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿ ಕೊಂಡಿದ್ದರು. ಇದರಿಂದಾಗಿ ೬೩೦೭೩೭(೫೩೩೦೫೦ ಪುರುಷರು ಹಾಗೂ ೪೨೭೬೮೭ ಮಹಿಳೆಯರು) ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು.

ಇದೇ ಸಾಲಿನಲ್ಲಿ ಡಾ. ಅಂಬೇಡ್ಕರ್ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಒಟ್ಟು ೩೪೩ ಮನೆಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ೧೪೩ ಪರಿಶಿಷ್ಟ ಜಾತಿ, ೫೨ ಪರಿಶಿಷ್ಟ ಪಂಗಡ ಮತ್ತು ೧೫೧ ಇತರೆ ಫಲಾನುಭವಿಗಳು ಸೇರಿದ್ದರು. ಹಾಗೆಯೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಒಟ್ಟು ೬೬೩ ಮನೆಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ ೩೪೩ ಪರಿಶಿಷ್ಟ ಜಾತಿ, ೨೦೧ ಪರಿಶಿಷ್ಟ ಪಂಗಡ ಮತ್ತು ೧೧೯ ಇತರೆ ಫಲಾನುಭವಿಗಳಾಗಿದ್ದಾರೆ.

### ಶೌಚಾಲಯಗಳು

ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ. ಅದರಂತೆ ೨೦೧೩-೧೪ ರಲ್ಲಿ ೨೯೫೯ ವೈಯಕ್ತಿಕ ಕೌಟುಂಬಿಕ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ೨೦೧೫-೧೬ ರಲ್ಲಿ ೩೬೫೬ ವೈಯಕ್ತಿಕ ಕೌಟುಂಬಿಕ ಶೌಚಾಲಯಗಳು, ೧೫ ಸಾಮೂಹಿಕ ಶೌಚಾಲಯಗಳು, ೪೭೪ ಶಾಲಾ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು.

### ಕೈಗಾರಿಕಾ ಅಭಿವೃದ್ಧಿ ಸಾಧ್ಯತೆಗಳು

ತಾಲ್ಲೂಕಿನಲ್ಲಿ ೨೦೦೩-೦೪ ರಲ್ಲಿದ್ದಂತೆ ಆಹಾರ ಮತ್ತು ಆಹಾರೇತರ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಐದು ಹೆಕ್ಟೇರ್ ಪ್ರದೇಶದಲ್ಲಿ ಭತ್ತ, ೬೩೩ ಹೆಕ್ಟೇರ್‌ನಲ್ಲಿ ಜೋಳ ೩೬,೭೨೪ ಹೆಕ್ಟೇರ್‌ನಲ್ಲಿ ಮುಸುಕಿನ ಜೋಳ, ೭೮೦೦ ಹೆಕ್ಟೇರ್‌ನಲ್ಲಿ ರಾಗಿ, ೧೧೨ ಹೆಕ್ಟೇರ್‌ನಲ್ಲಿ ಇತರೆ ಉಪ ತೃಣ ಧಾನ್ಯಗಳು ಸೇರಿದಂತೆ ಒಟ್ಟು ೪೫,೧೭೪ ಹೆಕ್ಟೇರ್‌ನಲ್ಲಿ ಒಟ್ಟು ಏಕದಳ ಧಾನ್ಯಗಳನ್ನೂ ಮತ್ತುಉಪತೃಣ ಬೆಳೆಗಳನ್ನು ಬೆಳೆಯಲಾಗಿತ್ತು. ೭೬೮ ಹೆಕ್ಟೇರ್‌ನಲ್ಲಿ ತೊಗರಿ, ೨೫೦ ಹೆಕ್ಟೇರ್‌ನಲ್ಲಿ ಹುರುಳಿ, ೪೧೭ ಹೆಕ್ಟೇರ್‌ನಲ್ಲಿ ಹೆಸರು, ೫೮೦ ಹೆಕ್ಟೇರ್‌ನಲ್ಲಿ ಅವರೆ, ೧೮೨ ಹೆಕ್ಟೇರ್‌ನಲ್ಲಿ ಅಲಸಂದೆ, ೨೨೧೭ ಹೆಕ್ಟೇರ್‌ನಲ್ಲಿ ಕಡಲೆ ಹೀಗೆ ಒಟ್ಟು ೪೪೧೪ ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳು ಸೇರಿದಂತೆ ಒಟ್ಟು ೪೯,೫೮೮ ಹೆಕ್ಟೇರ್‌ನಲ್ಲಿ ಆಹಾರ ಧಾನ್ಯಗಳನ್ನು, ೨೭೩೫ ಹೆಕ್ಟೇರ್‌ನಲ್ಲಿ ಹಣ್ಣುಗಳನ್ನು, ೨೨೪೨ ಹೆಕ್ಟೇರ್‌ನಲ್ಲಿ ತರಕಾರಿಗಳನ್ನು ಹಾಗೂ ೧೬೨೭ ಹೆಕ್ಟೇರ್‌ನಲ್ಲಿ

ಎಣ್ಣೆಕಾಳುಗಳನ್ನು ಬೆಳೆಯಲಾಗುತ್ತಿತ್ತು. ತಾಲ್ಲೂಕಿನಲ್ಲಿ ೨೦೧೧ರ ಜನಗಣತಿಯಂತೆ ೧,೧೫,೨೭೭ ಒಟ್ಟು ಕೆಲಸಗಾರರು, ಇವರಲ್ಲಿ ೮೦,೩೩೯ ಮುಖ್ಯ ಕೆಲಸಗಾರರು ಹಾಗೂ ೩೪,೯೩೮ ಸೀಮಾಂತ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದರು. ಹಾಗೂ ೯೧,೯೮೩ ಕೆಲಸಗಾರರಲ್ಲದವರು ಇದ್ದರು.

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಅಗತ್ಯ ಪ್ರೋತ್ಸಾಹ ನೀಡಿದರೆ, ಕಡಿಮೆ ಬಂಡವಾಳ ಹೂಡಿಕೆ, ಹೆಚ್ಚು ಉದ್ಯೋಗ ಸೃಷ್ಟಿ ಕಡಿಮೆ ಪ್ರಮಾಣದ ಶಕ್ತಿ ಸಂಪನ್ಮೂಲಗಳು ಹಾಗೂ ಕಡಿಮೆ ಪ್ರಮಾಣದ ಮೂಲಭೂತ ಸೌಕರ್ಯಗಳು ದೊರಕಿದರೂ ಸಹ ನಗರ ಪ್ರದೇಶದ ಕೈಗಾರಿಕೆಗಳಗಿಂತ ಹೆಚ್ಚಾಗಿ ಗ್ರಾಮೀಣ ಕೈಗಾರಿಕೆಗಳು ಬೆಳವಣಿಗೆ ಹೊಂದಬಹುದಾಗಿದೆ. ನಿರುದ್ಯೋಗ ಸಮಸ್ಯೆಯ ಪರಿಹಾರರ್ಥವಾಗಿ ಉದ್ದಿಮೆಗಳ ಸೃಷ್ಟಿ ತನ್ಮೂಲಕ ಉದ್ಯೋಗಾವಕಾಶದ ಹೆಚ್ಚಳ, ಜಿಲ್ಲಾದಾಯ, ತಲಾದಾಯಗಳ ಹೆಚ್ಚಳಗಳ ಮೂಲಕ ಜನರ ಜೀವನಮಟ್ಟ ಸುಧಾರಣೆಯಾಗುತ್ತದೆ.

ಏಕದಳ ಮತ್ತು ದ್ವಿದಳ ಧಾನ್ಯಗಳು, ಕಬ್ಬು, ಅಡಿಕೆ, ತೆಂಗು ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿರುವುದರಿಂದ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಫುಲ ಅವಕಾಶವಿದೆ. ಆಧುನಿಕ ಅಕ್ಕಿ ಗಿರಣಿ, ಅವಲಕ್ಕಿ ಗಿರಣಿ, ಭತ್ತದ ಹೊಟ್ಟಿನಿಂದ ಹಲ್ಲುಪುಡಿ ತಯಾರಿಕೆ, ಆಯುರ್ವೇದಿಕ್ ಔಷಧಿಗಳು, ಬಾಳೆಹಣ್ಣಿನ ಚಿಪ್ಸ್ ಹಾಗೂ ಪೌಡರ್, ಮಾವಿನಹಣ್ಣಿನ ಜ್ಯೂಸ್, ತಿರುಳು, ಉಪ್ಪಿನಕಾಯಿ, ಜಾಮ್, ಲೇಹ್ಯ (Jelly) ಹಲಸಿನ ಚಿಪ್ಸ್, ಹಲಸಿನ ಹಣ್ಣುಗಳನ್ನು ಡಬ್ಬಿಗಳಲ್ಲಿ ತುಂಬಿ ಸಂಸ್ಕರಿಸುವುದು, ತೆಂಗಿನಕಾಯಿ ಪೌಡರ್, ಸುಗಂಧಭರಿತ ಅಡಿಕೆ, ಅಡಿಕೆ ಪಟ್ಟಿಯಿಂದ ಕಪ್ಸ್ ಅಂಡ್ ಪ್ಲೇಟ್ಸ್‌ಗಳ ತಯಾರಿಕೆ, ಗೋಡಂಬಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಅವಕಾಶವಿದೆ.

ತಾಲ್ಲೂಕಿನಲ್ಲಿ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ೮೮೭೮ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಪ್ರದೇಶವಿದ್ದು, ಬೆಲೆ ಬಾಳುವ ಮರಗಳಾದ ತೇಗ, ಬೀಟೆ (ರೋಸ್), ಉರುವಲು ಕಟ್ಟಿಗೆ, ಫೈರ್‌ವುಡ್, ಹೊನ್ನೆ ಹಾಗೂ ನಂದಿ ಮರಗಳು ಲಭ್ಯವಿದ್ದು, ಅರಣ್ಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ. ಅಲ್ಲದೆ, ಸೀಗೇಕಾಯಿಪುಡಿ, ಅಂಟುವಾಳಕಾಯಿ, ಜೇನು, ಗೋಂದು, ಉರುವಲು ಕಟ್ಟಿಗೆ ಕೂಡ ಲಭ್ಯವಿದೆ. ೨೦೦೭ರ ಜಾನುವಾರು ಗಣತಿಯಂತೆ ತಾಲ್ಲೂಕಿನಲ್ಲಿ ೫೫೬೨೪ ಜಾನುವಾರುಗಳಿದ್ದು, ಚರ್ಮೋದ್ಯಮದ ಸ್ಥಾಪನೆಗೆ ವಿಫುಲ ಅವಕಾಶವಿದೆ.

ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದ್ದು, ಅವುಗಳನ್ನು ಬೇಡಿಕೆ ಆಧಾರಿತ ಹಾಗೂ ಸಂಪನ್ಮೂಲ ಆಧಾರಿತ ಕೈಗಾರಿಕೆಗಳೆಂದು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಕೆಳಗಿನಂತಿವೆ.

**೧. ಸಂಪನ್ಮೂಲ ಆಧಾರಿತ ಕೈಗಾರಿಕೆಗಳು**

ಹಲಸಿನ ಹಣ್ಣಿನ ಉತ್ಪನ್ನಗಳು, ಐಯೋಡೈಸ್ಡ್ ಉಪ್ಪು (Iodised salt) ಉಪ್ಪಿನಕಾಯಿ, ಗೇರು ಉದ್ದಿಮೆ, ಮಸಾಲೆ ಪುಡಿಗಳು, ಶಾವಿಗೆ, ಹಣ್ಣು ಸಂಸ್ಕರಣೆ, ಪೀಠೋಪಕರಣಗಳು, ಕೇನ್ ಫರ್ನಿಚರ್, ತೆಂಗಿನಕಾಯಿಪುಡಿ, ಕೊಬ್ಬರಿಎಣ್ಣೆ, ಅಣಬೆ ಬೇಸಾಯ ಹಾಗೂ ಸಂಸ್ಕರಣೆ, ಆಲೂಗಡ್ಡೆ ಚಿಪ್ಸ್, ಆಯುರ್ವೇದಿಕ್ ಔಷಧಿಗಳು, ಸಿಮೆಂಟ್ ಇಟ್ಟಿಗೆಗಳು, ಜೇನು ಸಾಕಾಣಿಕೆ, ಸುಗಂಧ ಭರಿತ ಅಡಿಕೆ, ಅಡಿಕೆ ಎಲೆಗಳಿಂದ ಪ್ಲೇಟ್ ಮತ್ತು ಕಪ್ಸ್‌ಗಳು, ಹಲ್ಲರ್ ಅಂಡ್ ಷೆಲ್ಲರ್ ಮಿಲ್‌ಗಳು, ಒಣಗಿಸಿದ ತೆಂಗಿನಕಾಯಿ ಪುಡಿ ಮುಂತಾದವು.

**೨. ಬೇಡಿಕೆ ಆಧಾರಿತ ಕೈಗಾರಿಕೆಗಳು**

ಬೇಕರಿ ಉತ್ಪನ್ನಗಳು, ಐಸ್‌ಕ್ರೀಮ್, ಹಪ್ಪಳ, ಸಂಡಿಗೆ, ನೋಟ್ ಪುಸ್ತಕ, ಕಾಗದದ ಬ್ಯಾಗ್ ಹಾಗೂ ಕವರ್ಸ್, ವಾಹನಗಳಿಗಾಗಿ ಭಟ್ಟಿ ಇಳಿಸಿದ ನೀರು, ಫಿನಾಯಿಲ್, ಕರ್ಪೂರ, ಸ್ಟೀಲ್ ಫ್ಯಾಬ್ರಿಕೇಶನ್, ವಾಹನಗಳ ರಿಪೇರಿ ಹಾಗೂ ಸರ್ವಿಸಸ್, ಸ್ಕೂಲ್ ಬ್ಯಾಗ್ಸ್, ರೋಲಿಂಗ್ ಶಟರ್ಸ್, ಸಾಫ್ಟ್‌ವೇರ್ಸ್ ಅಭಿವೃದ್ಧಿ, ಡಿ.ಟಿ.ಪಿ ಇಂಟರ್‌ನೆಟ್, ವೆಬ್ ಸೆಂಟರ್, ಆಫ್ ಸೆಟ್, ಪ್ರಿಂಟಿಂಗ್, ಡಾಟ–ಪ್ರಿಂಟಿಂಗ್, ಡಾಟ–ಪ್ರೋಸೆಸಿಂಗ್, ಸ್ಕ್ರೀನ್ ಪ್ರಿಂಟಿಂಗ್, ವಾಹನಗಳ ಹೊರ ಕವಚ ನಿರ್ಮಾಣ, ವಿದ್ಯುತ್ ಲಾಂಡ್ರಿ, ಟೈಯರ್ ರೀ–ಟ್ರೇಂಡಿಂಗ್ ಮುಂತಾದ ಉದ್ಯಮಗಳನ್ನು ಸ್ಥಾಪಿಸಲು ಜಿಲ್ಲೆಯಲ್ಲಿ ವಿಫುಲ ಅವಕಾಶಗಳಿವೆ.

## ಅಧ್ಯಾಯ–೬

# ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

**ಯಾ**ವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಬಂಡವಾಳವನ್ನು ಪೂರೈಸುವಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಬ್ಯಾಂಕಿಂಗ್ ವ್ಯವಹಾರವೆಂದರೆ ಬಂಡವಾಳದ ಸಂಗ್ರಹಣೆ ಮತ್ತು ವಿತರಣೆ. ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಸಂಸ್ಥೆಗಳು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿಗೆ ಬೇಕಾಗುವ ಬಂಡವಾಳವನ್ನು ಒದಗಿಸುವ ಸಾಂಸ್ಥಿಕ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಜನರಲ್ಲಿರುವ ಉಳಿತಾಯವನ್ನು ಸಂಗ್ರಹಿಸಿ, ಕೃಷಿ, ವ್ಯಾಪಾರ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಾದ ಸಾಲವನ್ನು ಪೂರೈಸಿದರೆ, ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಉದ್ದೀಪನಗೊಳ್ಳುತ್ತವೆ. ಪರಿವರ್ತನೆಗೊಳ್ಳುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅನುಗುಣವಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಕೂಡ ಸಾಲನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಗ್ರಾಮಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸರ್ಕಾರದ ಆರ್ಥಿಕ ನೀತಿ ನಿರೂಪಣೆಗಳನ್ನು, ಆದ್ಯತೆಗಳನ್ನು ಕಾರ್ಯರೂಪದಲ್ಲಿ ತರಲು ಬ್ಯಾಂಕಿಂಗ್ ವ್ಯವಸ್ಥೆ ಸಹಾಯಕವಾಗುತ್ತಿದೆ. ರಾಜ್ಯದ ಇತರೆ ಭಾಗಗಳಲ್ಲಿ ಕಾಣುತ್ತಿರುವಂತೆ ಹೊಳಲ್ಕೆರೆ ತಾಲ್ಲೂಕಿನಲ್ಲೂ ಸಹ ಬ್ಯಾಂಕಿಂಗ್ ವ್ಯವಸ್ಥೆಯು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಪ್ರಧಾನವಾದ ಪಾತ್ರವಹಿಸುತ್ತಿರುವುದನ್ನು ಕಾಣಬಹುದು.

ಪ್ರಾಚೀನ ಕಾಲದಲ್ಲಿ ರಾಜನ ಹಣಕಾಸಿನ ವ್ಯವಹಾರದ ಹೊಣೆಯನ್ನು ಸುಂಕವೆಗ್ಗಡೆ, ಪ್ರಧಾನಿ, ಬೊಕ್ಕಸದ ಅಧಿಕಾರಿ ಮುಂತಾದವರು ವಹಿಸಿಕೊಂಡು ನಿರ್ವಹಿಸುತ್ತಿದ್ದರು ಹಾಗೂ ಹಣದ ಖಜಾನೆಯ ಭದ್ರತೆಯನ್ನು ನೋಡಿಕೊಳ್ಳುತ್ತಿದ್ದರು. ಕ್ರಿ.ಶ. ೧೪ನೇಯ ಶತಮಾನದ ಬಲ್ಲಾಳ ಸಮುದ್ರ ಶಾಸನದಲ್ಲಿ, ಸಾಮಂತನ ಅಧಿಕಾರಿ

ಪೆದ್ದರಸನ ಹೆಸರು, ಕ್ರಿ.ಶ. ೧೬ನೇಯ ಶತಮಾನದ ಬೂದಿಹಾಳು ರಾಜನ ಅಧಿಕಾರಿ ಬಯಕಾರ ರಾಮಪ್ಪಯ್ಯನ ಹೆಸರು (ಕಲ್ಲಕೆರೆ ಶಾಸನದಲ್ಲಿಯೂ ಇವನ ಹೆಸರಿದೆ), ಬಲ್ಲಾಳ ಸಮುದ್ರದ ಮೊಘಲರ ಕಾಲದ ಶಾಸನದಲ್ಲಿ ಜಾಗೀರದಾರ, ಹವಾಲದಾರ ಹಾಗೂ ಮುಜುಂದಾರರ ಹೆಸರುಗಳು, ಕ್ರಿ.ಶ. ೧೭ನೇ ಶತಮಾನದ ಗುಂಡಸಮುದ್ರ ಶಾಸನದಲ್ಲಿ ಬಾಗೂರಿನ ರುದ್ರಪ್ಪದೇವರಿಗೆ ಬಾಗೂರಿನ ವೀರಾಪುರ ಗ್ರಾಮವನ್ನು ದತ್ತು ನೀಡಿದ ಬೊಕ್ಕಸದ ರುದ್ರಪ್ಪದೇವರಿಗೆ  ಅಧಿಕಾರಿ ಮುದ್ದಣ್ಣನ ಹೆಸರು, ಕ್ರಿ.ಶ.೧೫ನೇ ಶತಮಾನದ ಹೊನ್ನೇನಹಳ್ಳಿ ಶಾಸನದಲ್ಲಿ ಪ್ರಧಾನಿ ಬಾಗೂರು ಮಾರಸಯ್ಯ, ಕೆಲ್ಲೋಡು ಶಾಸನದಲ್ಲಿ ಕರಣಿಕ ಚಿಕ್ಕರಸಪ್ಪ ಮುಂತಾದವರ ಹೆಸರುಗಳನ್ನು ಗಮನಿಸಬಹುದು. ಅಲ್ಲದೇ ಅನೇಕ ಸಂತೆಯ ಸುಂಕಗಳ ವಿವರಗಳನ್ನು ಶಾಸನಗಳಲ್ಲಿ ಗಮನಿಸಬಹುದು. ಮತ್ತೋಡು ಶಾಸನದಲ್ಲಿ ಕ್ಷೌರಿಕರ ಸುಂಕದ ಬಾಕಿ ಸಾವಿರ ವರಹಗಳನ್ನು ಮನ್ನಾ ಮಾಡಿದ ವಿಚಾರವಿದೆ. ಇದೆಲ್ಲವು ಹಣದ ಬೊಕ್ಕಸಕ್ಕೆ ಸಂಬಂಧಿಸಿದುದೇ ಆಗಿದೆ. ಮತ್ತೋಡು ಪಾಳೆಯಗಾರರ ಕಾಲದಲ್ಲಿ ಚಿನ್ನದ ವರಹಗಳನ್ನು ತಯಾರಿಸುತ್ತಿದ್ದ ಬಗ್ಗೆ ದಾಖಲೆ ಇದೆ. ಇವೆಲ್ಲವೂ ಪ್ರಾಚೀನ ಕಾಲದ ಬ್ಯಾಂಕಿಂಗ್ ಮತ್ತು ವಾಣಿಜ್ಯದ ಸಂಗತಿಗಳು.

ವಾಣಿಜ್ಯ ಬ್ಯಾಂಕುಗಳು ಮತ್ತಿತರ ಹಣಕಾಸು ಸಂಸ್ಥೆಗಳು ಒಂದು ಪ್ರದೇಶದ ಆರ್ಥಿಕ ಅಭ್ಯುದಯಕ್ಕೆ ಬಂಡವಾಳವನ್ನು ಒದಗಿಸುವ ಮೂಲಕ ನೆರವಾಗುತ್ತವೆ. ಬಂಡವಾಳದ ಕ್ರೋಢೀಕರಣ, ವಿತರಣೆ ಹಾಗೂ ವಸೂಲಾತಿ ಜವಾಬ್ದಾರಿ ಇವು ಬ್ಯಾಂಕಿಂಗ್‌ನ ಮೂಲ ಲಕ್ಷಣಗಳಾಗಿವೆ. ಬ್ಯಾಂಕ್‌ಗಳು ಮತ್ತು ಹಣಕಾಸಿನ ಇತರ ಸಂಸ್ಥೆಗಳು ಜನರಿಗೆ ಬಂಡವಾಳಗಳನ್ನು ಪ್ರೋತ್ಸಾಹಿಸಿ ಒದಗಿಸಿ, ವ್ಯಾಪಾರ, ಕೈಗಾರಿಕೆ, ಗೃಹ ನಿರ್ಮಾಣ, ಶಿಕ್ಷಣ ಮುಂತಾದವುಗಳನ್ನು ಜನರಿಗೆ ಆರ್ಥಿಕ ಚೈತನ್ಯವನ್ನು ತುಂಬುವುದಲ್ಲದೆ ಆ ಪ್ರದೇಶದ ವಿಕಾಸಕ್ಕೂ ಪರೋಕ್ಷವಾಗಿ ಕಾರಣವಾಗುತ್ತವೆ. ಅಲ್ಲದೇ, ತನ್ನಲ್ಲಿ ಇಡುವ ನಿಧಿಗಳಿಗೆ ನಿಗದಿತ ಬಡ್ಡಿಯನ್ನು ಆಯಾ ವ್ಯಕ್ತಿ ಅಥವಾ ಘಟಕಗಳಿಗೆ ಕಾಲಕ್ಕೆ ಸರಿಯಾಗಿ ವಿತರಿಸುತ್ತವೆ. ಇದರೊಂದಿಗೆ ಸರ್ಕಾರದ ಅನೇಕ ಯೋಜನೆಗಳಿಗೆ ಬರುವ ಅನುದಾನದ ಮೊತ್ತವನ್ನು ನಿಯಮಾನುಸಾರ (ಖಜಾನೆ ಮೂಲಕ) ಒದಗಿಸುತ್ತವೆ. ಪ್ರಚಲಿತ ಆರ್ಥಿಕ ವಿದ್ಯಮಾನಗಳನುಸಾರ ಸಮಕಾಲೀನ ಬ್ಯಾಂಕಿಂಗ್ ವ್ಯವಸ್ಥೆಯು ಸಹ ಸಾಲ ನಿಯಮಾವಳಿಗಳನ್ನು ರೂಪಿಸಿಕೊಂಡಿವೆ. ಗ್ರಾಮೀಣ ಪ್ರದೇಶದ ಪುರೋಭಿವೃದ್ಧಿಗಾಗಿ ಇರುವ ಸರ್ಕಾರದ ಪರಮೋದ್ದೇಶದ ಯೋಜನೆಗಳನ್ನು ಜಾರಿಗೆ ತರುವಲ್ಲಿ ಪ್ರಸ್ತುತ ಬ್ಯಾಂಕಿಂಗ್ ವ್ಯವಸ್ಥೆಯು ಅನಿವಾರ್ಯವೆನಿಸಿದೆ. ರಾಜ್ಯದ ಇತರ ತಾಲ್ಲೂಕುಗಳಲ್ಲಿ ಇರುವಂತೆಯೇ, ಹೊಳಲ್ಕೆರೆ ತಾಲ್ಲೂಕಿನಲ್ಲಿಯೂ ಬ್ಯಾಂಕುಗಳು, ಸ್ಥಳೀಯ ಸಹಕಾರ ಬ್ಯಾಂಕ್‌ಗಳು, ಸೊಸೈಟಿಗಳು, ಎ.ಪಿ.ಎಂ.ಸಿ. ಮುಂತಾದ ಸಂಸ್ಥೆಗಳು ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯಕ್ಕೆ ನಾಂದಿಹಾಡಿವೆ.

## ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

ಈಗಿನ ಬ್ಯಾಂಕಿಂಗ್ ವ್ಯವಸ್ಥೆಯು ಅನುಷ್ಠಾನಕ್ಕೆ ಬರುವ ಮೊದಲು, ಕಳೆದ ಶತಮಾನದ ಮೊದಲಲ್ಲಿ, ಕೃಷಿ ಅಭಿವೃದ್ಧಿಗೆ ಮತ್ತು ವ್ಯಾಪಾರ ವಹಿವಾಟುಗಳಿಗೆ ಸಾಲ ನೀಡುವ ಕ್ರಮವು ರೂಢಿಯಲ್ಲಿದ್ದಿತು. ಗ್ರಾಮಗಳೇ ಅಧಿಕವಾಗಿರುವ ಈ ತಾಲ್ಲೂಕಿನಲ್ಲಿ, ಕೃಷಿಕರೇ ಹೆಚ್ಚು ಜನರಿದ್ದು, ಇವರು ತಮಗೆ ಬೇಕಾದ ಸಾಲಗಳನ್ನು, ಶ್ರೀಮಂತರಿಗೆ ತಮ್ಮ ಆಸ್ತಿಯನ್ನು ಅಥವಾ ಒಡವೆ, ಕಾಗದ ಪತ್ರಗಳನ್ನು ಗಿರವಿ ಒತ್ತೆ ಇಟ್ಟು ಅವರಿಂದ ಬಡ್ಡಿಯ  ಹಾಗೂ ಗಡುವಿನ ಲೆಕ್ಕಾಚಾರದಲ್ಲಿ ಪಡೆಯುತ್ತಿದ್ದರು. ಪ್ರತಿಯೊಂದು ಹಳ್ಳಿಗಳಲ್ಲಿಯೂ ಇರುತ್ತಿದ್ದ ಪರಿಚಿತ ಶ್ರೀಮಂತರಿಂದ ಬಡರೈತರು, ಮಧ್ಯಮ ವರ್ಗದ ರೈತರು ಸಾಲ ಪಡೆಯುತ್ತಿದ್ದು, ಸಾಲ ಕೊಡುತ್ತಿದ್ದವರು ತಮಗೆ ತೋಚಿದಷ್ಟು ಬಡ್ಡಿಯನ್ನು ಅವರಿಗೆ ವಿಧಿಸುತ್ತಿದ್ದರು. ಗಡುವಿನಲ್ಲಿ ಸಾಲ ತೀರಿಸದಿದ್ದರೆ, ಬಡ್ಡಿಗೆ ಚಕ್ರಬಡ್ಡಿ ಸೇರಿಸಿ ಸಾಲ ವಸೂಲಿಗಾಗಿ  ಸಾಲಗಾರರ ಬಳಿಗೆ ಬರುತ್ತಿದ್ದರು. ಅಥವಾ ತಮ್ಮ ಆಳುಗಳನ್ನು ಕಳುಹಿಸಿ ಸಾಲಗಾರರ ಮನೆ ಜಪ್ತಿ ಮಾಡಿಸುತ್ತಿದ್ದುದುಂಟು ಅಥವಾ ಸಾಲಗಾರನು ಬರೆದು ಕೊಟ್ಟಿದ್ದ ಜಮೀನು ಅಥವಾ ಒಡವೆಗಳನ್ನು ಮುಟ್ಟುಗೋಲು ಹಾಕಿಕೊಂಡು ಕ್ರಯಪತ್ರಕ್ಕೆ ಸಹಿ ಪಡೆಯುತ್ತಿದ್ದರು. ಇದರಿಂದಾಗಿ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿ, ಬಡವರು ನಿರ್ಗತಿಕರಾಗುತಿದ್ದುದೂ ಉಂಟು, ಹಿಂದಿನ ಕಾಲದಲ್ಲಿ ರೋಗರುಜಿನುಗಳು ಹೆಚ್ಚು ಇದ್ದು, ರೈತರು ಉತ್ತಮ ಚಿಕಿತ್ಸೆಗಾಗಿ ನಗರಗಳಿಗೆ ಹೋಗಲು ಚೈತನ್ಯವಿಲ್ಲದೆ ಬಳಲಿ, ವ್ಯವಸಾಯ ಮಾಡಲೂ ಆಗದೆ, ದುಡಿಮೆ ಇಲ್ಲದಂತಾಗಿ ಸಾಲ ಮಾಡುತ್ತಿದ್ದರು. ದನಕರುಗಳೂ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದವು. ಹೀಗಾಗಿ ಸಾಮಾನ್ಯ ರೈತರು ಸಾಲಗಳನ್ನು ಮಾಡುವುದು ಅನಿವಾರ್ಯವಾಗುತ್ತಿತ್ತು. ವರದಕ್ಷಿಣೆ, ದೇವರ ಯಾತ್ರೆ, ತಿಥಿ, ನಾಮಕರಣ, ಮಾರಿ ಹಬ್ಬ ಮುಂತಾದ ಹೆಚ್ಚುವರಿ ಖರ್ಚುಗಳಿಗಾಗಿ ಸಾಮಾನ್ಯ ರೈತ ಸಾಲ ಮಾಡುತ್ತಿದ್ದ, ಬರಗಾಲ ಬಂದಾಗ ಜೀವನಕ್ಕಾಗಿ ಅವನು ಸಾಲದ ಮೊರೆ ಹೋಗಲೇ ಬೇಕಿತ್ತು.

**ಹಣಕಾಸು ಸಂಸ್ಥೆಗಳು** : ಗಿರವಿದಾರರು ಮತ್ತು ಖಾಸಗಿಯಾಗಿ ಸಾಲ ನೀಡುವ ವ್ಯಕ್ತಿಗಳಲ್ಲದೆ, ಅನೇಕ ಹಣಕಾಸು ವ್ಯವಹಾರದ ಸಂಸ್ಥೆಗಳು ತಾಲ್ಲೂಕಿನಲ್ಲಿ ಪ್ರಾರಂಭಗೊಂಡಿವೆ. ಇಂತಹ ಸಂಸ್ಥೆಗಳು ಠೇವಣಿ ಇರಿಸುವ ಅರ್ಹ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವ ಮೂಲಕ ಬಂಡವಾಳವನ್ನು ಮೂಲಧನವನ್ನಾಗಿ ಸಂಗ್ರಹಿಸಿ, ಅನೇಕರಿಗೆ ವ್ಯಾಪರಕ್ಕಾಗಿ, ಮನೆಕಟ್ಟಡಕ್ಕಾಗಿ, ಆಸ್ತಿ ಖರೀದಿಗೆ, ಮದುವೆ ವೆಚ್ಚ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಟ್ರ್ಯಾಕ್ಟರ್ ಖರೀದಿ, ವಾಹನ ಖರೀದಿ ಮುಂತಾದವುಗಳಿಗಾಗಿ ಸಾಕಷ್ಟು ಭದ್ರತೆ ಮತ್ತು ಸಾಕ್ಷಿಗಳನ್ನು ಲಿಖಿತರೂಪದಲ್ಲಿ ಪಡೆದುಕೊಂಡು ನಿಯಮಾನುಸಾರ ಬಡ್ಡಿಯ ಲೆಕ್ಕಾಚಾರದಂತೆ ಸಾಲ ನೀಡುತ್ತಿವೆ. ಸದಸ್ಯರುಗಳಿಂದ ಬರುವ ಷೇರು ಬಂಡವಾಳದ ಜೊತೆಗೆ, ನೀಡಿದ ಸಾಲದ ಮೊತ್ತಗಳಿಗೆ ಬರುವ ಬಡ್ಡಿಯ ಮೊತ್ತಗಳೂ ಸೇರಿ ಇವು ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತವೆ. ಕೆಲವರು ಖಾಸಗಿಯಾಗಿ ಕೆಲ ಜನರನ್ನು ಸಂಪರ್ಕಿಸಿ ತಿಂಗಳಿಗೊಮ್ಮೆ ಒಂದೆಡೆ

ಸಭೆ ಸೇರಿ ಚೀಟಿ ವ್ಯವಹಾರವನ್ನು ನಡೆಸುವುದೂ ಉಂಟು. ಚೀಟಿ ವ್ಯವಹಾರವು ಅವರವರ ಪರಸ್ಪರ ನಂಬಿಕೆಯ ಮೇಲೆ ನಡೆಯುತ್ತವೆ. ಹೆಚ್ಚು ಬಡ್ಡಿ ಕೂಗುವವರಿಗೆ (ಹರಾಜಿನಲ್ಲಿ) ಸಾಲದ ಮೊತ್ತ ಕೊಡುತ್ತಾರೆ. ಕಡೆಯಲ್ಲಿ ಲಾಭವನ್ನು ಎಲ್ಲಾ ಸದಸ್ಯರಿಗೆ ಹಂಚಬೇಕಾಗುತ್ತದೆ. ಆದರೆ ಚೀಟಿ ವ್ಯವಹಾರಕ್ಕಿಂತಲೂ ಮೇಲ್ಕಂಡ ಖಾಸಗಿ ಹಣಕಾಸು ಸಂಸ್ಥೆಗಳತ್ತ ಜನರು ಆಸಕ್ತಿ ತೋರಿದ್ದಾರೆ. ಖಾಸಗಿ ಉದ್ಯೋಗಿಗಳು, ಸರ್ಕಾರಿ ನೌಕರರು, ವ್ಯಾಪಾರಸ್ಥರು, ಕಂಟ್ರಾಕ್ಟರುಗಳು, ಗುಡಿಕೈಗಾರಿಕೆ ಮಾಡುವವರು, ಕರಕುಶಲ ವಸ್ತುಗಳನ್ನು ತಯಾರಿಸುವವರು, ವಾಹನ ಖರೀದಿಸುವವರು ಮುಂತಾದ ಅರ್ಹ ಜನರು ಇವುಗಳಿಂದ ನಿಯಮಗಳನುಸಾರ ಸಾಲ ಪಡೆದು ಬಡ್ಡಿ ಕಟ್ಟುತ್ತಾರೆ ಹಾಗೂ ನಿಗದಿತ ಗಡುವಿನಲ್ಲಿ ಸಾಲ ಹಿಂತಿರುಗಿಸಿ ಋಣ ಮುಕ್ತರಾಗುತ್ತಾರೆ. ಈ ರೀತಿಯ ಚಿಟ್‌ಫಂಡ್ಸ್, ಫೈನಾನ್ಸ್ ಸಂಸ್ಥೆಗಳು ತಾಲ್ಲೂಕಿನಲ್ಲಿ ಸಾಕಷ್ಟು ಆರ್ಥಿಕ ಚಟುವಟಿಕೆ ನಡೆಸುತ್ತಿವೆ.

ಹೊಳಲ್ಕೆರೆ ತಾಲ್ಲೂಕಿನಲ್ಲಿ ಚಿತ್ರದುರ್ಗ ಕೋ ಆಪರೇಟಿವ್ ಬ್ಯಾಂಕು ಸ್ಥಾಪನೆಯಾಯಿತು. ಈ ತಾಲ್ಲೂಕಿನಲ್ಲಿ ರೈತ ಸಹಕಾರಿ ಸಂಘಗಳು ಆರಂಭಗೊಂಡವು. ಇವುಗಳು ದಿವಾಳಿಯಾಗಿ ಮುಳಗಿ ಹೋದರು ಮತ್ತೆ ಚೇತರಿಕೆಯಲ್ಲಿ ತೇಲಾಡುತ್ತಿವೆ. ರೈತರ ರಕ್ಷಣೆಗಾಗಿಯೇ ಸರ್ಕಾರವು ಕೃಷಿ ಬ್ಯಾಂಕುಗಳನ್ನು ೧೯೬೮ ರಲ್ಲಿ ಆರಂಭಿಸಿತು. ಸಹಕಾರಿ ತತ್ವಗಳ ಆಧಾರದ ಮೂಲಕ ನೋಂದಣಿಗೊಂಡು ಸದಸ್ಯರಾದ ಭೂ ಮಾಲೀಕರನ್ನೊಳಗೊಂಡ ಚುನಾಯಿತ ಪ್ರತಿನಿಧಿಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲಾರಂಭಿಸಿತು. ಅಲ್ಲಿಂದೀಚೆಗೆ ಬ್ಯಾಂಕಿಂಗ್ ಉದ್ಯಮ ತಾಲ್ಲೂಕು ಪ್ರದೇಶದಲ್ಲೂ ನಿರಂತರವಾಗಿ ನಡೆದುಕೊಂಡು ಬಂದಿವೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾಬ್ಯಾಂಕ್ ಹೊಳಲ್ಕೆರೆಯಲ್ಲಿ ತೆರೆದವು. ವಿಜಯಬ್ಯಾಂಕು, ಹೊಳಲ್ಕೆರೆ ಮತ್ತು ಚಿತ್ರಹಳ್ಳಿಗಳಲ್ಲಿ ತೆರೆಯಿತು., ಮಲ್ಲಾಡಿಹಳ್ಳಿಯಲ್ಲಿ ಸಿಂಡಿಕೇಟ್ ಬ್ಯಾಂಕು, ೧೯೭೫ರ ನಂತರ ಹೊಳಲ್ಕೆರೆಯಲ್ಲಿ ಪ್ರಗತಿ ಗ್ರಾಮೀಣ ಬ್ಯಾಂಕು ಶಾಖೆಗಳು ತಾಲ್ಲೂಕಿನಲ್ಲಿ ಆರಂಭಗೊಂಡವು.

**ವಾಣಿಜ್ಯ ಬ್ಯಾಂಕುಗಳು** : ಆಧುನಿಕ ಜೀವನ ವ್ಯವಸ್ಥೆಯಲ್ಲಿ ಬ್ಯಾಂಕಿಂಗ್ ಸೇವೆಯನ್ನು ಸಹ ಒಂದು ಜನಪ್ರಿಯ ವ್ಯವಹಾರವೆಂದು ಪರಿಗಣಿಸಲಾಗಿದೆ. ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಜೀವನದಲ್ಲಿ ಬ್ಯಾಂಕ್‌ಗಳ ಪಾತ್ರ ಬಹಳ ಮಹತ್ವದ್ದು. ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಉತ್ತಮಗೊಂಡಂತೆಲ್ಲಾ ಬ್ಯಾಂಕ್‌ಗಳ ಅವಶ್ಯಕತೆಯು ಹೆಚ್ಚುತ್ತದೆ. ಬ್ಯಾಂಕ್‌ಗಳು ಜನಸಮುದಾಯದ ಉಳಿತಾಯವನ್ನು ಸಂಗ್ರಹಿಸಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ವ್ಯವಸಾಯ ಕ್ಷೇತ್ರಗಳಿಗೂ ಹಾಗೂ ಸರ್ಕಾರದ ನಾನಾ ಉತ್ಪಾದನಾ ಯೋಜನೆಗಳ ಉದ್ದೇಶಗಳಿಗೂ ಹಣವನ್ನು ಒದಗಿಸುತ್ತವೆ.

## ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

ಹೊಳಲ್ಕೆರೆ ತಾಲ್ಲೂಕಿನಲ್ಲಿ ಅನೇಕ ವಾಣಿಜ್ಯ ಬ್ಯಾಂಕ್‌ಗಳಿವೆ. ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಪ್ರಸ್ತುತ ಈ ಬ್ಯಾಂಕು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾನೊಂದಿಗೆ ವಿಲೀನಗೊಂಡಿದೆ), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ವಿಜಯ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್ ಮುಂತಾದವು ಇದ್ದು, ಇವುಗಳಲ್ಲಿ ಕೆಲ ಬ್ಯಾಂಕುಗಳ ಮುಖ್ಯ ಶಾಖೆ ಹೊಸದುರ್ಗದಲ್ಲಿವೆ. ವಾಣಿಜ್ಯ ಬ್ಯಾಂಕುಗಳಿಂದ ರೈತರಿಗೆ ಮತ್ತಿತರ ಜನರಿಗಷ್ಟೇ ಅಲ್ಲದೆ, ತಾಲ್ಲೂಕಿನ ವಿದ್ಯಾರ್ಥಿಗಳಿಗೂ ಸ್ವಲ್ಪ ಮಟ್ಟಿಗೆ ಸಹಾಯಕವಾಗಿವೆ. ನೌಕರರಿಗೆ ಸಂಬಳ – ಸಾರಿಗೆ ಇತರ ಫಲಾನುಭವಿಗಳ ಚೆಕ್ಕುಗಳು, ವೃದ್ಧಾಪ್ಯವೇತನ ಮತ್ತಿತರ ಸೌಲಭ್ಯಗಳ ಮೊತ್ತವನ್ನು ಸರ್ಕಾರವು ವಾಣಿಜ್ಯ ಬ್ಯಾಂಕ್‌ಗಳ ಮೂಲಕ ವಿತರಿಸುತ್ತದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಕೆನರಾ ಬ್ಯಾಂಕ್ ಲೀಡ್‌ಬ್ಯಾಂಕ್ ಆಗಿದ್ದು, ಕೆಲವು ಮುಖ್ಯ ನಿಯಮಗಳನ್ನು ಪಾಲಿಸುವಂತೆ ಇತರ ಬ್ಯಾಂಕ್‌ಗಳಿಗೆ ಸಲಹೆ–ಸೂಚನೆಗಳನ್ನು ನೀಡುತ್ತದೆ. ಸರ್ಕಾರಿ ಸಭೆಗಳಿಗೆ ಇತರ ವಾಣಿಜ್ಯ ಬ್ಯಾಂಕ್‌ಗಳ ಪ್ರತಿನಿಧಿಯಾಗಿ ಈ ಬ್ಯಾಂಕಿನ ಮುಖ್ಯಾಧಿಕಾರಿಯು ಹಾಜರಾಗುತ್ತಾರೆ.

ತಾಲ್ಲೂಕಿನಲ್ಲಿ ೨೦೧೩–೧೪ ರಲ್ಲಿ ೦೮ ಸಾರ್ವಜನಿಕ ಕ್ಷೇತ್ರಗಳ ಬ್ಯಾಂಕ್‌ಗಳಿದ್ದು ರೂ. ೨೦೮೬೮ ಮಿಲಿಯನ್ ಠೇವಣಿ ಸಂಗ್ರಹಿಸಿದ್ದು, ರೂ. ೧೭೫೬೪ ಮಿಲಿಯನ್ ಸಾಲ ನೀಡಿದ್ದವು. ೧೪ ಪ್ರಾಂತೀಯ ಗ್ರಾಮೀಣ ಬ್ಯಾಂಕ್‌ಗಳಿದ್ದು, ಇವು ರೂ. ೧೫೬೫೪ ಮಿಲಿಯನ್ ಠೇವಣಿ ಸಂಗ್ರಹಿಸಿ, ರೂ. ೨೦೦೫೭ ಮಿಲಿಯನ್ ಸಾಲ ನೀಡಿದ್ದವು. ಒಂದು ಖಾಸಗಿ ಕ್ಷೇತ್ರ ಬ್ಯಾಂಕಿದ್ದು ರೂ. ೧೬೨೫ ಮಿಲಿಯನ್ ಠೇವಣಿ ಸಂಗ್ರಹಿಸಿ ರೂ. ೧೫೬೬ ಮಿಲಿಯನ್ ಸಾಲ ನೀಡಿತ್ತು. ೨೦೧೫–೧೬ ರಲ್ಲಿ ೧೨ ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳಿದ್ದು, ರೂ. ೧೩೨೩ ಮಿಲಿಯನ್ ಸಾಲ ನೀಡಿದ್ದವು. ೧೫ ಪ್ರಾಂತೀಯ ಗ್ರಾಮೀಣ ಬ್ಯಾಂಕಗಳಿದ್ದು, ರೂ. ೨೦೭೫ ಮಿಲಿಯನ್ ಸಾಲ ನೀಡಿದ್ದವು. ಹಾಗೆಯೇ ಒಂದು ಖಾಸಗಿ ಕ್ಷೇತ್ರದ ಬ್ಯಾಂಕಿದ್ದು, ರೂ. ೧೨೫ ಮಿಲಿಯನ್ ಸಾಲ ನೀಡಿತ್ತು.

**ಸಹಕಾರ ಸಂಘಗಳು** : ತಾಲ್ಲೂಕಿನಲ್ಲಿ ೨೦೧೩–೧೪ರಲ್ಲಿ ಎರಡು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ (ಡಿ.ಸಿ.ಸಿ. ಬ್ಯಾಂಕ್) ಶಾಖೆಗಳಿದ್ದು, ಇದರಲ್ಲಿ ೭೨೨೭ ಸಾಲ ಪಡೆದ ಸದಸ್ಯರಿದ್ದರು. ಇದು ೨೧೮೦.೪೭ ಲಕ್ಷ ರೂಗಳ ಕೃಷಿ ಸಾಲವನ್ನು ಮತ್ತು ೪೦೫.೮೬ ಲಕ್ಷ ರೂಗಳ ಇತರೆ ಸಾಲವನ್ನು ನೀಡಿತ್ತು. ಈ ಬ್ಯಾಂಕ್ ೧೧೨೫.೪೯ ಲಕ್ಷ ರೂ. ಗಳ ಠೇವಣಿ ಸಂಗ್ರಹಿಸಿತ್ತು. ಒಂದು ಕ್ಯಾಸ್‌ಕಾರ್ಡ್ (KSCARD) ಬ್ಯಾಂಕ್‌ಯಿದ್ದು, ೪೬ ಮಂದಿ ಸಾಲ ಪಡೆದ ಸದಸ್ಯರಿದ್ದರು. ಇದು ೩೮.೬೪ ಲಕ್ಷ ರೂಗಳ ಕೃಷಿಸಾಲ ವಿತರಿಸಿತ್ತು.

ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೭ ವ್ಯವಸಾಯ ಪತ್ತಿನ ಸಹಕಾರ ಸಂಘಗಳು ಇದ್ದು, ೪೧೨೨೪ ಸದಸ್ಯರಿದ್ದರು. ಐದು ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳಿದ್ದು, ಇದರಲ್ಲಿ ೧೮೫೯ ಸದಸ್ಯರಿದ್ದರು. ಪತ್ತೇತರ ಸಹಕಾರಗಳಲ್ಲಿ ಒಂದು (೫೨೬)

ಮಾರುಕಟ್ಟೆ, ಸಹಕಾರ ಸಂಘ, ಎರಡು (೪೧೭) ಗೃಹ ನಿರ್ಮಾಣ ಸಹಕಾರ ಸಂಘಗಳು, ೪೩ (೭೬೦೦) ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ೨೧ (೯೬೭೨)ಇತರೆ ಸಹಕಾರ ಸಂಘಗಳಿದ್ದವು. ಆವರಣದಲ್ಲಿ ನೀಡಿರುವ ಸಂಖ್ಯೆ ಅವುಗಳು ಹೊಂದಿರುವ ಸದಸ್ಯರನ್ನು ಸೂಚಿಸುತ್ತವೆ.

ತಾಲ್ಲೂಕಿನಲ್ಲಿ ೨೦೧೫-೧೬ ರಲ್ಲಿ ಎರಡು ಡಿ.ಸಿ.ಸಿ. ಬ್ಯಾಂಕ್ ಶಾಖೆಗಳಿದ್ದು, ಇವುಗಳಲ್ಲಿ ೭೦೨೨ ಸಾಲಪಡೆದ ಸದಸ್ಯರಿದ್ದರು. ಇದು ೩೦೩೯.೨೦ ಲಕ್ಷ ರೂಗಳ ಕೃಷಿ ಸಾಲ ಮತ್ತು ೬೦೮.೦೯ ಲಕ್ಷ ರೂಗಳು ಇತರೆ ಸಾಲ ಸೇರಿದಂತೆ ಒಟ್ಟು ೩೬೪೭.೨೯ ಲಕ್ಷ ರೂಗಳ ಸಾಲ ನೀಡಿತ್ತು. ಇದು ೧೮೮೪.೧೫ ಲಕ್ಷ ರೂ.ಗಳ ಠೇವಣಿ ಹೊಂದಿತ್ತು. ಒಂದು ಕ್ಯಾಸ್‌ಕಾರ್ಡ್ (KSCARD) ಬ್ಯಾಂಕ್‌ಯಿದ್ದು, ಇದರಲ್ಲಿ ೨೬ ಸದಸ್ಯರು ಸಾಲ ಪಡೆದಿದ್ದರು. ಇದು ೩೩.೭ ಲಕ್ಷ ರೂ ಕೃಷಿ ಸಾಲ ನೀಡಿತ್ತು. ಪತ್ತಿನ ಸಹಕಾರ ಸಂಘಗಳಲ್ಲಿ ೨೬ (೪೪೧೦೦) ವ್ಯವಸಾಯ ಸಹಕಾರ ಸಂಘಗಳು, ಐದು (೩೧೨೦) ವ್ಯವಸಾಯೇತರ ಸಹಕಾರ ಸಂಘಗಳು ಹೀಗೆ ಒಟ್ಟು ೩೧ (೪೭೨೨೦) ಪತ್ತಿನ ಸಹಕಾರ ಸಂಘಗಳು ಇದ್ದವು. ಪತ್ತೇತರ ಸಹಕಾರ ಸಂಘಗಳಲ್ಲಿ ಒಂದು (೪೫೭) ಮಾರುಕಟ್ಟೆ ಸಹಕಾರ ಸಂಘ, ಎರಡು (೭೦೦) ಗೃಹನಿರ್ಮಾಣ ಸಹಕಾರ ಸಂಘಗಳು, ೪೩ (೮೪೦೦) ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ೨೨ (೧೧೭೮೧) ಇತರೆ ಸಹಕಾರ ಸಂಘಗಳು ಹೀಗೆ ಒಟ್ಟು ೬೮ (೨೧೩೩೮) ಪತ್ತೇತರ ಸಹಕಾರ ಸಂಘಗಳಿದ್ದವು.

**ಸಂತೆಗಳು**: ತಾಲ್ಲೂಕು ಕೇಂದ್ರವಾದ ಹೊಳಲ್ಕೆರೆಯಲ್ಲಿ ಭಾನವಾರದಂದು ಸಂತೆ ನಡೆಯುತ್ತದೆ. ತಾಳ್ಯದಲ್ಲಿ ಮಂಗಳವಾರ, ಚಿಕ್ಕಜಾಜೂರಿನಲ್ಲಿ ಸೋಮವಾರ, ಚಿತ್ರಹಳ್ಳಿಯಲ್ಲಿ ಗುರುವಾರ, ಮಲ್ಲಾಡಿಹಳ್ಳಿಯಲ್ಲಿ ಶುಕ್ರವಾರ, ರಾಮಗಿರಿಯಲ್ಲಿ ಸೋಮವಾರ, ಹೊರಕೆರೆದೇವಪುರದಲ್ಲಿ ಶನಿವಾರ ಸಂತೆ ಕಟ್ಟುತ್ತದೆ. ಈ ಸಂತೆಗಳು ಹಣ್ಣು-ಹಂಪಲು, ಕಾಯಿ-ಪಲ್ಯೆ, ದವಸ-ಧಾನ್ಯ, ಅಡಿಕೆ, ತೆಂಗು, ಈರುಳ್ಳಿ, ಬೆಳ್ಳುಳ್ಳಿ, ಹೀಗೆ ರೈತ ಬೆಳೆದ ಬೆಳೆಗಳಲ್ಲದೇ ಗ್ರಾಮೀಣರು ಬಯಸುವ ತಿಂಡಿ ತೀರ್ಥ, ಕಡಲೆಪುರಿಗಳ ಮಳಿಗೆಗಳು ಇರುತ್ತವೆ ಕಂಚುಮಟ್ಟಿ ಪದಾರ್ಥ ಹಾಗೂ ವಿವಿಧ ಗೃಹಬಳಕೆಯ ವಸ್ತುಗಳು ಮಾರಾಟಕ್ಕಿರುತ್ತವೆ. ರೈತಾಪಿ ಜನಗಳಿಗೆ ಬೇಕಾದ ಹಗ್ಗ, ಹುರಿ, ಕೊಡಲಿ, ಗುದ್ದಲಿ, ಪಿಕಾಸಿ ಮುಂತಾದ ಬೇಸಾಯದ ಉಪಕರಣಗಳನ್ನು ಮಾರಾಟ ಮಾಡಲಾಗುತ್ತದೆ. ಇವುಗಳಲ್ಲದೆ ದನ-ಕರು, ಕುರಿ, ಆಡು, ಕೋಳಿ, ಹಂದಿ, ಮೀನು (ಹಸಿ ಮೀನು ಮತ್ತು ಒಣ ಮೀನು)ಗಳೂ ಸಹ ಲಭ್ಯವಾಗುತ್ತವೆ.

**ಸ್ತ್ರೀ ಶಕ್ತಿ ಸಂಘಗಳು**: ನಗರ ಗ್ರಾಮೀಣ ಪ್ರದೇಶಗಳಲ್ಲಿನ ಸ್ತ್ರೀಯರನ್ನು ಸಂಘಟಿಸುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಸುವುದರ ಜೊತೆಗೆ ಅವರ ಆರ್ಥಿಕಾಭಿವೃದ್ಧಿಗಳಿಗೂ ನಾಡಿನಾದ್ಯಂತ ಸ್ಥಳೀಯವಾಗಿ ರೂಪಿತಗೊಂಡ ಸ್ತ್ರೀಶಕ್ತಿ

ಸಂಘಗಳು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಮೊದಲು ಮೈರಾಡ ಸಂಸ್ಥೆಯು ಯಶಸ್ವಿ ಕಾರ್ಯನಿರ್ವಹಿಸುತ್ತಿದ್ದು ಸ್ತ್ರೀಯರಿಗೆ ಪ್ರೋತ್ಸಾಹದಾಯಕವಾಗಿತ್ತು.

ತಾಲ್ಲೂಕಿನಲ್ಲಿ ೨೦೧೩-೧೪ರಲ್ಲಿ ೭೩೦ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿದ್ದು, ಒಟ್ಟು ೧೩,೦೭೯ ಸದಸ್ಯರಲ್ಲಿ ೩೦೭೬ ಪರಿಶಿಷ್ಟಜಾತಿ, ೧,೬೫೨ ಪರಿಶಿಷ್ಟ ಪಂಗಡ ಹಾಗೂ ೮,೩೪೧ ಇತರ ಸದಸ್ಯರಿದ್ದರು. ತಾಲ್ಲೂಕಿನಲ್ಲಿ ೭೧೫ ಗುಂಪುಗಳು ಬ್ಯಾಂಕಿನಲ್ಲಿ ಉಳಿತಾಯ ಪ್ರಾರಂಭಿಸಿದ್ದವು. ಇವುಗಳು ೬೬೮.೭೧ ಲಕ್ಷ ರೂ.ಗಳ ಉಳಿತಾಯ ಸಂಗ್ರಹಣೆ ಮಾಡಿದ್ದವು. ೬೬೨ ಗುಂಪುಗಳು ಬ್ಯಾಂಕ್‌ನಿಂದ ೧೦೦೫.೪೭ ಲಕ್ಷರೂ. ಗಳನ್ನು ಸಾಲವಾಗಿ ಪಡೆದಿದ್ದವು. ೩೪.೨೦ ಲಕ್ಷ ರೂ.ಗಳನ್ನು ಸರ್ಕಾರದಿಂದ ಸುತ್ತು ನಿಧಿಯಾಗಿ ಪಡೆದಿದ್ದವು.

ತಾಲ್ಲೂಕಿನಲ್ಲಿ ೨೦೧೩-೧೪ ರಲ್ಲಿ ೭೩೦ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿದ್ದು, ಒಟ್ಟು ೧೩೦೭೯ ಸದಸ್ಯರಿದ್ದರು. ಇವರಲ್ಲಿ ೩೦೭೬ ಪರಿಶಿಷ್ಟಜಾತಿ ಮಹಿಳೆಯರು ೧೬೩೨ ಪರಿಶಿಷ್ಟ ಪಂಗಡದ ಮಹಿಳೆಯರು, ೮೩೪೧ ಇತರ ಮಹಿಳೆಯರಿದ್ದರು. ಹಾಗೆಯೆ ೨೦೧೫-೧೬ ರಲ್ಲಿ ೭೩೦ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿದ್ದು, ಒಟ್ಟು ೧೦೭೧೨ ಸದಸ್ಯರಿದ್ದರು. ಇವರಲ್ಲಿ ೨೫೮೨ ಪರಿಶಿಷ್ಟ ಜಾತಿ ಮಹಿಳೆಯರು ೧,೫೬೮ ಪರಿಶಿಷ್ಟ ಪಂಗಡದ ಮಹಿಳೆಯರು, ೬೫೪೨ ಇತರ ಮಹಿಳೆಯರಿದ್ದರು.

**ಸರ್ಕಾರಿ ವಿಮೆ**: ಕರ್ನಾಟಕ ಸರ್ಕಾರಿ ವಿಮಾ ಶಾಖೆಯು ರಾಜ್ಯ ಸರ್ಕಾರಿ ನೌಕರರಿಗೆ ಸೀಮಿತವಾಗಿದ್ದು, ಸರ್ಕಾರಿ ನೌಕರರ ಜೀವ ವಿಮಾ, ವಾಹನ ವಿಮೆಗಳನ್ನು ನಿರ್ವಹಿಸುತ್ತಿದ್ದು, ತಾಲ್ಲೂಕಿನ ಎಲ್ಲಾ ದರ್ಜೆಯ ನೌಕರರ ವಿಮಾ ಖಾತೆಗಳನ್ನು ಜಿಲ್ಲಾ ವಿಮಾ ಕಛೇರಿಯೇ ನಿರ್ವಹಿಸುತ್ತದೆ.

ರಾಷ್ಟ್ರೀಯ ಉಳಿತಾಯ ಸಂಸ್ಥೆಯು (೧೯೫೭) ಆರಂಭವಾಗಿದ್ದು, ಮುಂಚೆಯೇ ೧೮೭೦ ರಷ್ಟು ಹಿಂದೆಯೇ ಉಳಿತಾಯ ಬ್ಯಾಂಕುಗಳು ತಾಲ್ಲೂಕು ಮಟ್ಟದಲ್ಲಿ ಆರಂಭಗೊಂಡವು. ಮುಂದೆ ೧೮೮೨ರಲ್ಲಿ ಅಂಚೆ ಕಛೇರಿಗಳಲ್ಲಿ ಉಳಿತಾಯ ಶಾಖೆ ಯನ್ನು ಗ್ರಾಹಕರಿಗಾಗಿ ಆರಂಭಿಸಲಾಯಿತು. ಆರಂಭದಲ್ಲಿ ಕನಿಷ್ಟ ನಾಲ್ಕಾಣೆಯಿಂದ ಗರಿಷ್ಟ ಐದು ರೂಗಳನ್ನು ಇಡಬಹುದಾಗಿತ್ತು. ಪ್ರಸ್ತುತ ಅಂಚೆ ಇಲಾಖೆಯ ಉಳಿತಾಯ ಖಾತೆ, ಆರ್.ಡಿ, ಎನ್‌ಎಸ್‌ಸಿ, ಇಂದಿರಾ ವಿಕಾಸ್, ಎಂ.ಐ.ಎಸ್ ಮುಂತಾದ ಯೋಜನಾ ಸೌಲಭ್ಯಗಳನ್ನು ಅಂಚೆ ವಿಮಾ ಯೋಜನೆ ನೀಡುತ್ತಿದೆ.

**ಭಾರತೀಯ ಜೀವ ವಿಮೆ**: ಭಾರತೀಯ ವಿಮಾ ಸಂಸ್ಥೆಯು ಶ್ರೀ ಸಾಮಾನ್ಯರಿಂದ ಹಿಡಿದು ಎಲ್ಲಾ ವರ್ಗದವರಿಗೆ ವಿವಿಧ ವಿಮೆಗಳನ್ನು ನಿರ್ವಹಿಸುತ್ತಿದ್ದು ತಾಲ್ಲೂಕಿನ ಎಲ್ಲಾ ವಿಮಾದಾರರ ವಿಮಾ ಖಾತೆಗಳನ್ನು ಜಿಲ್ಲಾ ಕೇಂದ್ರವಾದ ಚಿತ್ರದುರ್ಗ ಶಾಖೆಯಲ್ಲಿ ನಿರ್ವಹಿಸುತ್ತಿತ್ತು. ಇತ್ತೀಚೆಗೆ ಪಾಲಿಸಿದಾರರಿಗೆ ಸರಳ ಸುಲಭದಲ್ಲಿ ಹಲವು ಸೌಲಭ್ಯಗಳ

ನಿರ್ವಹಣೆಯೊಂದಿಗೆ ಹೊಳಲ್ಕೆರೆ (೧೫-೦೯-೨೦೦೭) ಉಪಗ್ರಹ ಶಾಖೆಯು ಉತ್ತಮ ಸೇವೆಯೊಂದಿಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

**ನಿಯಂತ್ರಿತ ಮಾರುಕಟ್ಟೆ**: ರೈತರಿಗೆ ಯೋಗ್ಯ ಹಾಗೂ ಸ್ಪರ್ಧಾತ್ಮಕ ಬೆಲೆಯನ್ನು ದೊರಕಿಸುವ ಸಲುವಾಗಿ ಸರ್ಕಾರವು ನಿಯಂತ್ರಿತ ಮಾರುಕಟ್ಟೆಗಳನ್ನು ಆರಂಭಿಸಿ ಮುಂದೆ ಏಕೀಕರಣದ ನಂತರ ಹೆಚ್ಚು ಸಮಗ್ರವೂ ದರ ಪ್ರಮಾಣವೂ, ಆದ ಕೃಷಿ ಉತ್ಪನ್ನ ಮಾರಾಟ ನೀತಿಯನ್ನು ಒಳಗೊಂಡ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯಂತೆ ಹೊಸದುರ್ಗ ಮತ್ತು ಚಿಕ್ಕಜಾಜೂರುಗಳಲ್ಲಿ ಆರಂಭಗೊಂಡು ಕಾರ್ಯನಿರ್ವಹಿಸುತ್ತಿದ್ದು, ಇತ್ತೀಚೆಗೆ ಹೊಳಲ್ಕೆರೆ ಹೊರವಲಯದಲ್ಲಿ ನೂತನ ಮಾರುಕಟ್ಟೆ ಆರಂಭವಾಗಿದೆ.

**ನಾಣ್ಯಪದ್ಧತಿ**: ತಾಲ್ಲೂಕಿನಲ್ಲಿ ಲಭಿಸಿದ ವಿವಿಧ ರಾಜಮನೆತನಕ್ಕೆ ಸೇರಿದ ಶಾಸನಗಳಲ್ಲಿ ಗದ್ಯಾಣ, ವರಹ, ಹಣ, ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳ ಉಲ್ಲೇಖವಿದೆ. ೧/೪, ೧/೨ ಆಣೆ, ೧೨ ಕಾಸು ಅಥವಾ ನಾಣ್ಯಗಳನ್ನು ಬಳಕೆಗೆ ತರಲಾಯಿತು. ಮುಂದೆ ಸಂಸ್ಥಾನವು ಬ್ರಿಟೀಷ್ ಕಮೀಷನರ್‌ಗಳ ಆಡಳಿತಕ್ಕೊಳಪಟ್ಟ ನಂತರ, ಭಾರತೀಯ ನಾಣ್ಯ ಕಾಯ್ದೆ (೧೮೭೦)ನ್ನು ಸಂಸ್ಥಾನಕ್ಕೂ ವಿಸ್ತರಿಸಲಾಯಿತು. ಇದರೊಂದಿಗೆ ಬ್ರಿಟೀಷ್ ನಾಣ್ಯಗಳು ಸಂಸ್ಥಾನದ ಅಧಿಕೃತ ನಾಣ್ಯಗಳಾದವು. ಮುಂದೆ ೧೯೧೮ರಲ್ಲಿ ನೋಟುಗಳ ಚಲಾವಣೆ ಆರಂಭವಾಯಿತು. ಅಲ್ಲದೇ ಬ್ರಿಟೀಷರು ಚಲಾವಣೆಗೆ ತಂದಿದ್ದ ಕಾಸು ಮೂರು (೧/೪ ಆಣೆ) ಆರು (ಅರ್ಧಆಣೆ) ಕಾಸು ಮೌಲ್ಯದ ತಾಮ್ರದ ನಾಣ್ಯಗಳನ್ನು ಚವಿ (ಎರಡು), ಪಾವಲಿ(ನಾಲ್ಕು) ಆಣೆ ನಿಕಲ್ ನಾಣ್ಯಗಳು ಹಾಗೂ (ಅರ್ಧ ಹಾಗೂ ಒಂದು ರೂಪಾಯಿಯ) ಬೆಳ್ಳಿಯ ರೂಪಾಯಿಗಳು ಚಲಾವಣೆಯಲ್ಲಿದ್ದವು. ಹಣದ ಲೇವಾದೇವಿಯಲ್ಲಿ ಭೂಮಾಲೀಕರು ಹಾಗೂ ಹಣವಂತರು ಸಾಲ ನೀಡಿ ನ್ಯಾಯಯುತವಾಗಿ ಬಡ್ಡಿ ಸಹಿತ ಆ ಹಣವನ್ನು ಹಿಂದೆ ಪಡೆಯುವ ಕ್ರಮವಿತ್ತು. ನೀಡಿದ ಸಾಲಕ್ಕಾಗಿ ಜೀತದಾಳು ಒತ್ತೆಯಾಗಿ ಇಟ್ಟುಕೊಳ್ಳುವ ಜೀತಪದ್ಧತಿಯೂ ಚಾಲ್ತಿಯಲ್ಲಿತ್ತು. ಜೀತ ವಿಮೋಚನಾ ಕಾಯ್ದೆ (೧೯೭೬) ರನ್ವಯ ತಾಲ್ಲೂಕಿನಲ್ಲಿ ಜೀತದಾಳುಗಳನ್ನು ೧೯೮೬ ರ ವೇಳೆಗೆ ಗುರುತಿಸಲಾಗಿದ್ದು, ಹಂತ ಹಂತವಾಗಿ ಮುಕ್ತಗೊಳಿಸಿ ಪುನರ್ವಸತಿ ಕಲ್ಪಿಸಲಾಗಿದೆ.

ಸ್ವಾತಂತ್ರ ನಂತರ ಭಾರತ ಸರ್ಕಾರದ ಲಾಂಛನದೊಂದಿಗೆ ನಾಣ್ಯ ಹಾಗೂ ನೋಟುಗಳು ಚಲಾವಣೆಗೆ ಬಂದವು. ಆದರೂ ಹದಿನಾರು ಆಣೆಯ ರೂಪಾಯಿ ಹಾಗೂ ೧೨ ಕಾಸಿನ ಆಣೆಯ ರೂಪಾಯಿ ಮುಂದುವರೆಯಿತು. ಮುಂದೆ ೧೯೫೭ರಲ್ಲಿ ನಾಣ್ಯ ಪದ್ಧತಿಯಲ್ಲಿ ದಶಮಾಂಶ ಪದ್ಧತಿಯನ್ನು ಅಳವಡಿಸಲಾಯಿತು. ಅಲ್ಲಿಂದೀಚೆಗೆ ಭಾರತೀಯ ನಾಣ್ಯಪದ್ಧತಿ ಸಾಕಷ್ಟು ಸುಧಾರಿಸಿದ್ದು, ರೂಪಾಯಿ ನಾಣ್ಯಗಳೇ ಕನಿಷ್ಠ ಮೌಲ್ಯದ ನಾಣ್ಯ ಮತ್ತು ಒಂದು, ಎರಡು, ಐದು, ಹತ್ತು, ೨೦, ೫೦, ೧೦೦, ೨೦೦,

೫೦೦ ಹಾಗೂ ೨೦೦೦ ಮೌಲ್ಯದ ನೋಟುಗಳ ಜೊತೆಗೆ ಒಂದು, ಎರಡು, ಐದು, ಹತ್ತು ರೂಗಳ ಮೌಲ್ಯದ ನಾಣ್ಯಗಳು ಬಳಕೆಯಲ್ಲಿವೆ.

ಆಧುನಿಕ ಸಮಾಜದಲ್ಲಿ ರೈತ ಸಹಕಾರಿ ಸಂಘ, ಸಹಕಾರಿ ಬ್ಯಾಂಕ್ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್, ಲೇವಾದೇವಿ ವ್ಯವಹಾರಗಳು ತಲೆ ಎತ್ತಿದವು.

**ಸಾರ್ವಜನಿಕ ಪಡಿತರ ವಿತರಣೆ**: ಈ ವ್ಯವಸ್ಥೆಯು ೧೯೪೪ರ ರಷ್ಟು ಹಿಂದೆಯೇ ಇದ್ದರೂ, ೧೯೬೫ರಲ್ಲಿ ಇದರ ಅಗತ್ಯತೆಯನ್ನು ಮನಗಂಡು ಆಯ್ದ ಪ್ರದೇಶಗಳಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ನ್ಯಾಯಬೆಲೆ ಅಂಗಡಿಗಳ ಮೂಲಕ ಆರಂಭಿಸಲಾಯಿತು.

೨೦೧೧ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿ ೯೫ ನ್ಯಾಯಬೆಲೆ ಅಂಗಡಿಗಳಿದ್ದು, ೫೮೬೬ ಬಿ.ಪಿ.ಎಲ್, ೧೦,೯೪೫ ಏ.ಪಿ.ಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು.

೨೦೧೩-೧೪ರ ಅಂತ್ಯಕ್ಕೆ ತಾಲ್ಲೂಕಿನಲ್ಲಿ ಒಟ್ಟು ೯೫ ಪಡಿತರ ಅಂಗಡಿಗಳಿದ್ದು, ೯೦ ಗ್ರಾಮೀಣ ಪ್ರದೇಶದಲ್ಲಿ ಮತ್ತು ೦೫ ನಗರ ಪ್ರದೇಶದಲ್ಲಿದ್ದವು. ಬಿ.ಪಿ.ಎಲ್. ಪಡಿತರ ಚೀಟಿದಾರರಲ್ಲಿ ೫೩೬೩ (೪೯೫೨ ಗ್ರಾಮೀಣ, ೪೧೧ ನಗರ) ಅಂತ್ಯೋದಯ ಪಡಿತರ ಚೀಟಿದಾರರಿದ್ದರು. ಹಾಗೆಯೇ ೭೯೬೯(೭೦೪೫ ಗ್ರಾಮೀಣ ಮತ್ತು ೯೨೪ ನಗರ) ಅಕ್ಷಯ ಸಿಲಿಂಡರ್ ಸಹಿತ ಕಾರ್ಡ್‌ದಾರರಿದ್ದರೆ, ೩೧೪೪೪ (೨೯೯೪೩ ಗ್ರಾಮೀಣ, ೧೫೦೧ ನಗರ) ಅಕ್ಷಯ ಸಿಲಿಂಡರ್ ರಹಿತ ಕಾರ್ಡ್‌ದಾರರಿದ್ದರು. ಎ.ಪಿ.ಎಲ್. ಪಡಿತರ ಚೀಟಿದಾರರಲ್ಲಿ ಒಟ್ಟು ೨೧೪೫ (೧೮೯೪ ಗ್ರಾಮೀಣ ಮತ್ತು ೨೫೧ ನಗರ) ಸಿಲಿಂಡರ್ ಸಹಿತ ಪಡಿತರ ಕಾರ್ಡ್‌ದಾರರಿದ್ದರೆ, ೩೩೦೪ (೩೧೧೮ ಗ್ರಾಮೀಣ ಮತ್ತು ೧೮೬ ನಗರ) ಸಿಲಿಂಡರ್ ರಹಿತ ಕಾರ್ಡ್‌ದಾರರಿದ್ದರು. ಒಟ್ಟು ೫೦೨೨೫ (೪೬೯೫೨ ಗ್ರಾಮೀಣ ಮತ್ತು ೩೨೭೩ ನಗರ) ಪಡಿತರ ಕಾರ್ಡ್‌ದಾರರಿದ್ದರು. ಇವರೆಲ್ಲರೂ ಭಾವಚಿತ್ರ ಹೊಂದಿರುವ ಪಡಿತರ ಚೀಟಿಯನ್ನು ಪಡೆದಿದ್ದರು.

೨೦೧೫-೧೬ರ ಅಂತ್ಯಕ್ಕೆ ತಾಲ್ಲೂಕಿನಲ್ಲಿದ್ದ ಒಟ್ಟು ೯೫ ಪಡಿತರ ಅಂಗಡಿಗಳಿದ್ದು, ೯೦ ಗ್ರಾಮೀಣ ಪ್ರದೇಶದಲ್ಲಿ ಮತ್ತು ೦೫ ನಗರ ಪ್ರದೇಶದಲ್ಲಿದ್ದವು. ಬಿ.ಪಿ.ಎಲ್. ಪಡಿತರ ಚೀಟಿದಾರರಲ್ಲಿ ೩೮೪೯ (೩೫೬೧ ಗ್ರಾಮೀಣ, ೨೮೮ ನಗರ) ಅಂತ್ಯೋದಯ ಪಡಿತರ ಚೀಟಿದಾರರಿದ್ದರು. ಹಾಗೆಯೇ ೯೩೪೫(೮೨೬೨ ಗ್ರಾಮೀಣ ಮತ್ತು ೧೦೮೩ ನಗರ) ಅಕ್ಷಯ ಸಿಲಿಂಡರ್ ಸಹಿತ ಕಾರ್ಡ್‌ದಾರರಿದ್ದರೆ, ೩೧೩೮೫ (೨೯೮೯೨ ಗ್ರಾಮೀಣ, ೧೪೯೩ ನಗರ) ಅಕ್ಷಯ ಸಿಲಿಂಡರ್ ರಹಿತ ಕಾರ್ಡ್‌ದಾರರಿದ್ದರು. ಎ.ಪಿ.ಎಲ್. ಪಡಿತರ ಚೀಟಿದಾರರಲ್ಲಿ ಒಟ್ಟು ೧೦೮ (೫೩ ಗ್ರಾಮೀಣ ಮತ್ತು ೫೫ ನಗರ) ಸಿಲಿಂಡರ್ ಸಹಿತ ಪಡಿತರ ಕಾರ್ಡ್‌ದಾರರಿದ್ದರೆ, ೪೫೫೪ (೩೩೯೧ ಗ್ರಾಮೀಣ ಮತ್ತು ೧೧೬೩ ನಗರ) ಸಿಲಿಂಡರ್ ರಹಿತ ಕಾರ್ಡ್‌ದಾರರಿದ್ದರು. ಒಟ್ಟು ೪೯೨೪೧ (೪೫೧೪೯ ಗ್ರಾಮೀಣ ಮತ್ತು

೪೦೮೨ ನಗರ) ಪಡಿತರ ಕಾರ್ಡ್‌ದಾರರಿದ್ದರು. ಇವರೆಲ್ಲರೂ ಭಾವಚಿತ್ರ ಹೊಂದಿರುವ ಪಡಿತರ ಚೀಟಿಯನ್ನು ಪಡೆದಿದ್ದರು.

**ಉಗ್ರಾಣ ವ್ಯವಸ್ಥೆ** : ಹಿಂದಿನ ಕಾಲದಲ್ಲಿ ವಾಡೇವು, ಪಣತ, ಕಣಜ ಮುಂತಾದವುಗಳಲ್ಲಿ ದವಸ ಧಾನ್ಯಗಳನ್ನು ತುಂಬಿಸಿಡುತ್ತಿದ್ದರು. ಅರವತ್ತು ವರ್ಷಗಳಷ್ಟು ಹಿಂದೆ, ರೈತರು ನೆಲದ ಹಗೇವುಗಳಲ್ಲಿ ಹೀಗೆ ದವಸ ಧಾನ್ಯಗಳನ್ನು ತುಂಬಿ ಹುಲ್ಲು ಪದರ ಹಾಕಿ ಮಣ್ಣಿನಿಂದ ಮುಚ್ಚಿಡುತ್ತಿದ್ದರು. ಶುದ್ಧವಾದ ಗಾಳಿ ಇಲ್ಲದೆ, ಭೂಮಿಯ ಶಾಖಕ್ಕೆ ಅಥವಾ ಮಳೆಗಾಲದ ತೇವಾಂಶ ಭೂಮಿಗಿಳಿದು ಸಂಗ್ರಹಿಸಿಟ್ಟಿದ್ದ ದವಸ ಧಾನ್ಯಗಳು ಕೆಟ್ಟು ಹೋಗುವ ಪ್ರಸಂಗವೇ ಹೆಚ್ಚಾಗಿರುತ್ತಿದ್ದವು. ೧೯೬೨ರಲ್ಲಿ ಸರ್ಕಾರವು ರೈತರ ಅನುಕೂಲಕ್ಕಾಗಿ ಅಲ್ಲಲ್ಲಿ ಉಗ್ರಾಣಗಳನ್ನು ಅಸ್ತಿತ್ವಕ್ಕೆ ತಂದಿತು. ಹೊಳಲ್ಕೆರೆ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಗೋದಾಮುಗಳ ವ್ಯವಸ್ಥೆ ಇದೆ. ಗೋದಾಮುಗಳಲ್ಲಿನ ದಾಸ್ತಾನುಗಳಿಗೆ ಧೂಮೋಪಚಾರ, ಔಷಧ ಸಿಂಪಡಣೆ ಮುಂತಾದ ವಿಧಾನಗಳಿಂದ ದವಸಗಳನ್ನು ರಕ್ಷಿಸಲಾಗುವುದು.

**ತೂಕ ಮತ್ತು ಅಳತೆ** : ಚಿತ್ರದುರ್ಗ ಜಿಲ್ಲೆಯಲ್ಲಿರುವ ಹೆಗ್ಗೆರೆ, ಚಿಕ್ಕಯಗಟಿ, ಹುಣವಿನಡು, ನೀರಗುಂದ, ಹೊನ್ನೇಕೆರೆ ಮತ್ತು ಇತರೆ ಶಾಸನಗಳಲ್ಲಿ ಆಗಿನ ಕಾಲದಲ್ಲಿದ್ದ ಅಳತೆಯ ವಿವಿಧ ಹೆಸರುಗಳನ್ನು ಅರಿತುಕೊಳ್ಳಬಹುದು. ಕೊಳಗ, ಮಾನ, ಬಳ್ಳ ಮುಂತಾದವುಗಳನ್ನು ದವಸಗಳ ಅಳತೆಯಲ್ಲೂ, ಸೊಳ, ಮುಂತಾದವುಗಳನ್ನು ದ್ರವ ಪದಾರ್ಥಗಳ ಅಳತೆಯಲ್ಲೂ ಬಳಸುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಭೂಮಿಯನ್ನು ಅಳೆಯಲು ಕೈಯ್ಯಳತೆ, (ಮಾರು, ಒತ್ತೋಳು ಇತ್ಯಾದಿ) ಮಾಣಿಕದಕೋಲು, ಗಡಿಂಬದ ಕೋಲು ಮುಂತಾದವುಗಳನ್ನು ಬಳಸುತ್ತಿದ್ದರು. ಕಂಬದ ಹೆಸರಿನಲ್ಲಿ ಭೂಮಾಪನ ಮಾಡುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆ. ಚಿಕ್ಕಯಗಟಿಯ ಕ್ರಿ.ಶ. ೧೧೯೪ರ ಶಾಸನದಲ್ಲಿ ಹನ್ನೊಂದು ಮಾರು ಒತ್ತೋಳು ಎಂದು ಮಾವಿನಕೆರೆಯ ಉಂಬಳಿಯ ಗದ್ದೆ-ಬೆದ್ದಲು ಭೂಮಿಯ ಅಳತೆಯನ್ನು ತಿಳಿಸಲಾಗಿದೆ. ಹೊನ್ನೇಕೆರೆಯ ಕ್ರಿ.ಶ. ೧೩೦೬ರ ಶಾಸನದಲ್ಲಿ ಮನೆಯೊಂದರ ದತ್ತಿ ವಿಚಾರದಲ್ಲೂ ಕೈ ಅಳತೆಯನ್ನು ಬಡಗ ಅಗಲ ೧೦ ಕಯಿ ಉದ್ದ, ೨೦ ಕಯಿ....... ಮುಂತಾಗಿ ತಿಳಿಸಿದ್ದಾರೆ. ಕ್ರಿ.ಶ. ೧೫೬೬ರ ಬಲ್ಲಾಳ ಸಮುದ್ರದ ಶಾಸನದಲ್ಲಿ, 'ಬೀಜವರಿ ಬೆದ್ದಲು ಹಾಲಪ್ಪನ ಗುಡ್ಡೆಗೆ ತೆಂಕಲು ಒಂದುದಿನ ಒಂದು ಕೂರಿ ಗೇಲಿ ಬಿತ್ತುವಷ್ಟು ಭೂಮಿ' ಎಂದು ಹೇಳಲಾಗಿರುವುದು ಸ್ವಾರಸ್ಯವಾಗಿದೆ. ಕಾಲಾನಂತರ, ಅಳತೆ ಕೋಲುಗಳನ್ನು ನಿಗದಿಪಡಿಸಿ ದೇವಸ್ಥಾನಗಳಲ್ಲಿ ಇರಿಸಲಾಗಿರುತ್ತಿತ್ತು ಎಂದು ತಿಳಿದು ಬರುತ್ತದೆ. ೧೯೫೮ರ ಕಾಯ್ದೆಯನ್ವಯ ಮೆಟ್ರಿಕ್ ಪದ್ಧತಿಯನ್ನು ೧೯೬೦ರಲ್ಲಿ ಜಾರಿಗೊಳಿಸಿ ೧೯೬೨ರಲ್ಲಿ ಕಡ್ಡಾಯಗೊಳಿಸಲಾಯಿತು. ದ್ರವ ಮಾಪನದಲ್ಲಿ ಸೇರು, ಪಾವು, ಚಟಾಕುಗಳ ಬದಲಾಗಿ ಲೀಟರ್, ವೀಸೆಗೆ ಬದಲು ಕಿಲೋ ಗ್ರಾಮ್ (ಕೆ.ಜಿ.), ಉದ್ದದ ಅಳತೆಗೆ ಗೇಣು, ಮಾರು, ಗಜಕ್ಕೆ ಬದಲಾಗಿ ಸೆಂ.ಮೀ.ಗಳು ಬಳಕೆಗೆ ಬಂದವು.

ಹಿಂದಿನ ಕಾಲದಲ್ಲಿ ತೆರಿಗೆಯನ್ನು ದವಸಧಾನ್ಯಗಳ ರೂಪದಲ್ಲಿ ಸಂಗ್ರಹಿಸುತ್ತಿದ್ದು, ಬರಗಾಲ ಸಂದರ್ಭದಲ್ಲಿ ಜನರಿಗೆ ಪರಿಹಾರವಾಗಿ ನೀಡಲಾಗುತ್ತಿತ್ತು. ಮತ್ತೊಂದು ಪಾಳೆಯಗಾರ ಕಾಲದಲ್ಲಿ (ಕ್ರಿ.ಶ. ೧೬ ರಿಂದ ೧೭ ನೇ ಶತಮಾನದಲ್ಲಿ) ಒಕ್ಕಲುತನ ಮಾಡುವ ರೈತರು ಒಂದು ಬೆಳೆಗೆ ೬ ಸೇರು ದವಸದಂತೆ ಸುಂಕ ಸಲ್ಲಿಸಬೇಕಾಗಿತ್ತು. ಒಂದು ಕುರಿಹುದಿಗೆ ಒಂದು ಕುರಿಯನ್ನು ತೆರಿಗೆಯಾಗಿ ಕೊಡಬೇಕಾಗಿದ್ದಿತು.

ಈಗ ತೂಕ ಮತ್ತು ಅಳತೆಯ ನಿಖರತೆಗಾಗಿ ಅವುಗಳನ್ನು ಪರಿಶೀಲಿಸಲು ತೂಕ ಮತ್ತು ಅಳತೆ ಇಲಾಖೆ, (ಕಾನೂನು ಮಾಪನ ಇಲಾಖೆ) ಕಾರ್ಯ ನಿರ್ವಹಿಸುತ್ತಿದೆ. ವರ್ತಕರು ಹೊಂದಿರುವ ತೂಕ-ಅಳತೆಯ ಸಲಕರಣೆ ಕರಾರುವಕ್ಕಾಗಿರುವ ಬಗ್ಗೆ ಆಗಾಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳಲಾಗುತ್ತದೆ. ತಪ್ಪಿತಸ್ಥರಿಗೆ ದಂಡ ವಿಧಿಸುವ ಇಲ್ಲವೆ ಅವರಲ್ಲಿ ಅಳತೆ ಮತ್ತು ತೂಕದ ಸಾಮಗ್ರಿಗಳನ್ನು ಮಟ್ಟುಗೋಲು ಹಾಕಿಕೊಳ್ಳುವ ಕ್ರಮ ತೆಗೆದುಕೊಳ್ಳಲಾಗುತ್ತದೆ. ತೂಕಕ್ಕಾಗಿ ಇತ್ತೀಚಿನ ವರ್ಷಗಳಲ್ಲಿ ಎಲೆಕ್ಟ್ರಾನಿಕ್ ತಕ್ಕಡಿಗಳನ್ನು ಕಡ್ಡಾಯಗೊಳಿಸಲಾಗಿದೆ. ಬೆಳ್ಳಿ-ಬಂಗಾರದ ಅಂಗಡಿಗಳಲ್ಲಿ, ದಿನಸಿ ಅಂಗಡಿಗಳಲ್ಲಿ ಮುಂತಾದೆಡೆ ಈ ತೂಕದ ಯಂತ್ರಗಳನ್ನು ಕಾಣಬಹುದಾಗಿದೆ. ಆದರೆ ಹೂವಿನ ವ್ಯಾಪಾರಿಗಳು ಇನ್ನು ಮಾರು, ಮೊಳ, ಗೇಣಿನ ಅಳತೆಯಲ್ಲಿ ಹೂಗಳನ್ನು ಮಾರುವುದು ವ್ಯಾಪಕವಾಗಿದೆ. ಸಾರಾಸಗಟಾಗಿ ರೈತರಿಂದ ಹೂಗಳನ್ನು ಕೊಳ್ಳುವಾಗ ತೂಕ ಮಾಡುತ್ತಾರೆ. ಅಥವಾ ಗುತ್ತಿಗೆ ಲೆಕ್ಕದಲ್ಲಿ ಪಡೆಯುತ್ತಾರೆ.

## ಅಧ್ಯಾಯ-೭

# ಸಾರಿಗೆ ಮತ್ತು ಸಂಪರ್ಕ

**ಮಾ**ನವ ಸಮಾಜದ ಸರ್ವಾಂಗೀಣ ಪ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿಯು ಮಹತ್ವದ ಪಾತ್ರ ವಹಿಸುತ್ತದೆ. ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಲಭ್ಯವಿರುವ ಭೌಗೋಳಿಕ ಸಂಪನ್ಮೂಲಗಳ ಸದ್ಬಳಕೆ, ಕಾರ್ಯಶೀಲ ಕೃಷಿರಂಗ, ಉದ್ಯಮಶೀಲ ಕೈಗಾರಿಕಾ ರಂಗ, ಯೋಜನಾಶೀಲ ವಾಣಿಜ್ಯ, ವ್ಯಾಪಾರ, ವಿವೇಚನಾಶೀಲ ಬ್ಯಾಂಕಿಂಗ್, ಪ್ರಗತಿಶೀಲ ಸಾರಿಗೆ ಸಂಪರ್ಕ ವ್ಯವಸ್ಥೆ ಹಾಗೂ ಸೃಜನಶೀಲ ತಾಂತ್ರಿಕ ಬೆಳವಣಿಗೆಗಳು ಅತ್ಯಗತ್ಯವಾಗಿದ್ದು, ಇವುಗಳ ಅರ್ಥಪೂರ್ಣ ಪ್ರಗತಿ, ಆರ್ಥಿಕ ಅಭಿವೃದ್ಧಿಗೆ ಪೂರಕವಾಗುತ್ತದೆ. ಹೀಗೆ ವೈವಿಧ್ಯತೆಯಿಂದ ಕೂಡಿರುವ ಆರ್ಥಿಕ ಅಂಶಗಳನ್ನು ಪರಸ್ಪರ ಜೋಡಿಸುವಲ್ಲಿ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಪಾತ್ರ ಹಿರಿದಾಗಿದೆ. ಅದರಲ್ಲೂ ಈ ರಂಗಕ್ಕೆ ಸಂಬಂಧಿಸಿದಂತೆ ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಾಗಿರುವ ವೈಜ್ಞಾನಿಕ ಪ್ರಗತಿ ಮತ್ತು ಕಂಪ್ಯೂಟರ್ ತಂತ್ರಜ್ಞಾನದ ವಿಸ್ಮಯಗಳು, ಸಾರಿಗೆ-ಸಂಪರ್ಕ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಉಂಟುಮಾಡಿವೆ. ಸಂಪರ್ಕ ಮಾಧ್ಯಮ ರಂಗಕ್ಕೆ ಸಂಬಂಧಿಸಿದಂತೆ, ಅದರಲ್ಲೂ ಕಂಪ್ಯೂಟರ್ ಅಂತರ್ಜಾಲ ವ್ಯವಸ್ಥೆ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಗಿರುವ ಸಂಶೋಧನೆಗಳಿಂದಾಗಿ ವಿಶಾಲ ಪ್ರಪಂಚ ಇಂದು ಕಿರಿದಾಗುತ್ತಿದೆಯೇನೋ ಎಂಬ ಭಾವನೆ ಮೂಡುತ್ತಿದ್ದು, ಸಾವಿರಾರು ಕಿ.ಮೀ.ಗಳ ದೂರ, ಅಂತರ ಎಂದು ಅನಿಸದಂತಾಗಿದೆ. ಇಂದು ಸಂಪರ್ಕ ಮಾಧ್ಯಮದ ಸಕಲ ಸಾಧನಗಳು ಒಂದಲ್ಲಾ ಒಂದು ರೀತಿಯ ತಾಂತ್ರಿಕ ಅಭಿವೃದ್ಧಿಯಿಂದಾಗಿ ಮಾನವನ ದೈನಂದಿನ ಬದುಕನ್ನು ಗಣನೀಯ ಪ್ರಮಾಣದಲ್ಲಿ ಮಾರ್ಪಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ. ಇದೇ ರೀತಿ ಹೊಳಲ್ಕೆರೆ ತಾಲ್ಲೂಕಿನಲ್ಲೂ ಕೂಡ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳು ಪ್ರಗತಿಪಥದಲ್ಲಿ ಮುನ್ನಡೆದಿರುವುದು ಗಮನಾರ್ಹ ಅಂಶವಾಗಿದೆ.

**ರಸ್ತೆ ಸಾರಿಗೆ**

ತಾಲ್ಲೂಕಿನ ಪ್ರತಿಯೊಂದು ಊರು ಹಟ್ಟಿಗಳಿಂದ ಹತ್ತಿರದ ಮತ್ತು ದೂರದ ಊರುಗಳಿಗೆ ಸಂಚರಿಸಲು ಕಾಲು ದಾರಿಗಳು ಮತ್ತು ಓಣಿಗಳನ್ನು ಜನ ಬಳಸುತ್ತಿದ್ದರು. ಈ ಕಾಲುದಾರಿಗಳನ್ನು ಮತ್ತು ಓಣಿಗಳನ್ನು ಮುಂದೆ ನಕಾಶೆಗಳಲ್ಲಿ ಗುರುತಿಸಲಾಗಿದೆ. ಕೆಲವೊಂದು ಕಾಲುದಾರಿಗಳು ಕಾಡಿನಲ್ಲಿಯೂ ಗುರುತಿಸಲ್ಪಟ್ಟಿವೆ. ಹಿಂದಿನ ಕಾಲದ ಜನ ಕಾಲ್ನಡಿಗೆಯಲ್ಲಿ ಹತ್ತಿರದ ಊರುಗಳಿಗೆ, ಎತ್ತಿನ ಬಂಡಿಗಳಲ್ಲಿ ದೂರದ ಊರುಗಳಿಗೆ ಮತ್ತು ಯಾತ್ರಾ ಸ್ಥಳಗಳಿಗೆ ಸಂಚರಿಸುತ್ತಿದ್ದರು. ಹೊಳಲ್ಕೆರೆಯಿಂದ ಶಿವಗಂಗ ಮೂಲಕ ಚಿತ್ರದುರ್ಗಕ್ಕೆ ಹೋಗಲು ಹೆದ್ದಾರಿ ಮಾರ್ಗವಿದೆ. ಹೊಸದುರ್ಗ ಮಾರ್ಗವಾಗಿ ಚಿಕ್ಕಮಗಳೂರಿಗೆ ಹೋಗುವ ರಸ್ತೆ ಇದೆ. ಚನ್ನಗಿರಿ ಮಾರ್ಗವಾಗಿ ಶಿವಮೊಗ್ಗಕ್ಕೆ ಹೋಗುವ ಹೆದ್ದಾರಿ ರಸ್ತೆ ಇದೆ. ಚಿಕ್ಕಜಾಜೂರು ಮಾರ್ಗವಾಗಿ ದಾವಣಗೆರೆ ಹೋಗುವ ಹೆದ್ದಾರಿ ರಸ್ತೆ ಇದೆ. ವಿವಿಧ ಯೋಜನೆಯ ಪ್ರಕಾರ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಇತರ ಜಿಲ್ಲಾ ರಸ್ತೆ ಹಾಗೂ ಗ್ರಾಮಾಂತರ ರಸ್ತೆಗಳು, ಟಿ.ಡಿ.ಬಿ. ರಸ್ತೆಗಳು, ಮುನಿಸಿಪಾಲಿಟಿ ರಸ್ತೆಗಳು, ನೀರಾವರಿ ರಸ್ತೆಗಳು, ಅರಣ್ಯ ರಸ್ತೆಗಳು ಹಾಗೂ ಪಂಚಾಯತ್ ರಸ್ತೆಗಳೆಂದು ವರ್ಗೀಕರಿಸಲಾಗಿದೆ.

**ಅರವಟ್ಟಿಗೆಗಳು**: ಪ್ರಾಚೀನ ಕಾಲದಲ್ಲಿ ವಾಹನ ಸೌಕರ್ಯವಿಲ್ಲದೆ ಓಣಿಗಳಲ್ಲಿ ಸಂಚರಿಸುವ ಪ್ರಯಾಣಿಕರ ಅನುಕೂಲಕ್ಕೆ ಎರಡು ಮೂರು ಓಣಿಗಳು ಕೂಡುವಲ್ಲಿ ಕೆಲವು ಉದಾರಿಗಳು ಹಾಗೂ ಮಾನವೀಯ ಗುಣಗಳಿದ್ದವರು ಕುಡಿಯುವ ನೀರನ್ನು ಮಡಕೆಗಳಲ್ಲಿ ಶೇಖರಿಸಿ ದಾರಿ ಹೋಕರಿಗೆ ನೀಡಿ ಅವರ ದಾಹವನ್ನು ತಣಿಸುತ್ತಿದ್ದರು. ಈ ಉಚಿತ ಸೇವೆಯಿಂದಲೇ ಕೆಲವರು ಕೃತಾರ್ಥರಾದರೆ, ದಾರಿ ಹೋಕರು ನೀರು ಕೊಟ್ಟವರನ್ನು ಹೃದಯ ತುಂಬಿ ವಂದಿಸುತ್ತಿದ್ದರು. ಈ ಉಚಿತ ನೀರು ನೀಡುತ್ತಿದ್ದ ವ್ಯವಸ್ಥೆಗೆ ಅರವಟಿಗೆ/ಅರವಟ್ಟಿಗೆ/ಅರವಂಟಿಗೆ ಎಂದು ಕರೆಯಲಾಗುತ್ತಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಬೆಳೆದಿದ್ದ ಸಾಲು ಮರಗಳು ತಮ್ಮ ನೆರಳು ನೀಡಿ ದಾರಿ ಹೋಕರ ಆಯಾಸವನ್ನು ತುಸು ಕಡಿಮೆ ಮಾಡುತ್ತಿದ್ದವು.

**ರಾಷ್ಟ್ರೀಯ ಹೆದ್ದಾರಿ**: ದೇಶದ ವಿವಿಧ ಭಾಗಗಳೊಂದಿಗೆ ಹಾಗೂ ವಿವಿಧ ರಾಜ್ಯಗಳ ರಾಜ್ಯ ಹೆದ್ದಾರಿಗಳೊಂದಿಗೆ ಸಂಪರ್ಕ ಕಲ್ಪಿಸಲು ರಾಷ್ಟ್ರವ್ಯಾಪಿ ಇರುವ ರಸ್ತೆ ಜಾಲವೇ ರಾಷ್ಟ್ರೀಯ ಹೆದ್ದಾರಿಗಳಾಗಿವೆ. ೨೦೧೩-೧೪ ರಲ್ಲಿ ತಾಲ್ಲೂಕಿನಲ್ಲಿ ೨೯.೪೦ ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ಇತ್ತು. ಇದು ೨೦೧೫-೧೬ ರಲ್ಲಿ ೨೭ ಕಿ.ಮೀ.ಗೆ ಕುಸಿತಗೊಂಡಿರುವುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ.

**ರಾಜ್ಯ ಹೆದ್ದಾರಿ**: ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ, ಪ್ರಮುಖ ಪಟ್ಟಣ ಮತ್ತು ರಾಷ್ಟ್ರೀಯ ಹೆದ್ದಾರಿಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸುವ ರಸ್ತೆಗಳೇ ರಾಜ್ಯ ಹೆದ್ದಾರಿಗಳಾಗಿದೆ.

ಇವುಗಳ ನಿರ್ವಹಣೆ ರಾಜ್ಯ ಸರ್ಕಾರದ ಹೊಣೆಯಾಗಿರುತ್ತದೆ. ತಾಲ್ಲೂಕಿನಲ್ಲಿ ೭೬.೦೬ ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆಗಳಿದ್ದವು. ೨೦೧೫-೧೬ ರಲ್ಲಿಯೂ ಸಹ ೭೬.೦೬ ಕಿ.ಮೀ. ಇರುವುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ತಾಲ್ಲೂಕಿನಲ್ಲಿ ೨೦೧೩-೧೪ ರಲ್ಲಿ ೩೬೨.೦೦ ಕಿ.ಮೀ ಉದ್ದದ ಮುಖ್ಯ ಜಿಲ್ಲಾ ರಸ್ತೆಗಳಿದ್ದು, ೨೦೧೫-೧೬ ರಲ್ಲಿಯೂ ಸಹ ೩೬೨.೦೦ ಕಿ.ಮೀ. ಇರುವುದು ಅಂಕಿ-ಅಂಶಗಳಿಂದ ಸ್ಪಷ್ಟವಾಗುತ್ತದೆ. ತಾಲ್ಲೂಕಿನಲ್ಲಿ ೪ ಕಿ.ಮೀ. ಪಕ್ಕಾ(ಡಾಂಬರ್) ರಸ್ತೆಗಳು, ೧೬೯.೦೧ ಜಲ್ಲಿರಸ್ತೆಗಳು, ೧೦೨.೬೬ ಕಿ.ಮೀ. ಕಚ್ಚಾ (ಮಣ್ಣಿನ) ರಸ್ತೆಗಳಿದ್ದವು. ತಾಲ್ಲೂಕಿನಲ್ಲಿ ಸರ್ವ ಋತು ರಸ್ತೆಗಳಲ್ಲೂ ಸಂಪರ್ಕವಿರುವ ಜನವಸತಿಗಳ ಸಂಖ್ಯೆ ೪೦೭. (ಒಟ್ಟು ಜನವಸತಿಗಳು ೨೨೨ ಹಾಗೂ ರಸ್ತೆಗಳು ಸಂಪರ್ಕವಿರುವ ಜನವಸತಿಗಳ ಸಂಖ್ಯೆ ೧೮೪).

**ಸೇತುವೆಗಳು**: ತಾಲ್ಲೂಕಿನಾದ್ಯಾಂತ ಹಳ್ಳ ಕೊಳ್ಳಗಳಿಗೆ ಕಟ್ಟಿರುವ ಕಿರು ಸೇತುವೆಗಳು ಸಾಕಷ್ಟಿವೆ, ೧೯೮೭ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿ ೨ ಸೇತುವೆಗಳು ಇದ್ದು, ೨೦೧೧ ರ ಮಾರ್ಚ್ ಅಂತ್ಯಕ್ಕೆ ಲೋಕೋಪಯೋಗಿ ಇಲಾಖೆಯ ನಿಯಂತ್ರಣಕೊಳಪಟ್ಟಿದ್ದ ವಿವಿಧ ಗಾತ್ರದ ೨ ಸೇತುವೆಗಳಿದ್ದವು.

## ಸಾರ್ವಜನಿಕ ಸಾರಿಗೆ

ಹೊಳಲ್ಕೆರೆ ತಾಲ್ಲೂಕಿನಲ್ಲಿ ಸರ್ಕಾರಿ ಸೇವೆಯಲ್ಲಿದ್ದ ಅಮಲ್ದಾರರುಗಳಲ್ಲಿ ಕೆಲವರು ಕುದುರೆಗಾಡಿಗಳಲ್ಲಿ ಸಂಚರಿಸುತ್ತಿದ್ದರು. ಕೆಲವು ಶಿರಸ್ತೇದಾರರು ಕೂಡಾ ಕುದುರೆಗಾಡಿಗಳಲ್ಲಿ ಸಂಚರಿಸುತ್ತಿದ್ದರು. ಇವರುಗಳು ತಾವು ಕೆಲಸ ಮಾಡುತ್ತಿದ್ದ ಹೋಬಳಿ ಕೇಂದ್ರದಿಂದ ತಾಲ್ಲೂಕು ಕೇಂದ್ರಕ್ಕೆ ಸಂಚರಿಸಲು ಈ ಗಾಡಿಗಳನ್ನು ಉಪಯೋಗಿಸುತ್ತಿದ್ದರು. ೧೯೩೦ರ ಸುಮಾರಿಗೆ ಉಗಿ ಇಂಜಿನ್‌ನಿಂದ ಸಂಚರಿಸುವ ಲಾರಿ, ಬಸ್ಸುಗಳು ಚಾಲ್ತಿಗೆ ಬಂದವು. ಇವಕ್ಕೆ ಇದ್ದಿಲು ಮತ್ತು ನೀರು ಮುಖ್ಯ ಇಂಧನವಾಗಿದ್ದವು. ಇದ್ದಿಲಿಗೆ ಬೇಡಿಕೆ ಬಂದು ಹಳ್ಳಿಗಳಲ್ಲಿ ಮರಗಳನ್ನು ಕಡಿದು ಇದ್ದಿಲ ಭಟ್ಟಿ ಮಾಡುವ ಹೊಸ ಉದ್ಯಮ ಆರಂಭವಾದವು.

ಈ ಉಗಿಯಂತ್ರವುಳ್ಳ ಲಾರಿ, ಬಸ್ಸುಗಳು ಕುದುರೆ ಗಾಡಿಯ ವೇಗದಷ್ಟೆ ಸಂಚರಿಸುತ್ತಿದ್ದರೂ, ಸ್ವಲ್ಪ ಹೆಚ್ಚಿಗೆ ಸಾಮಾನು ಸರಂಜಾಮು ಮತ್ತು ಜನರನ್ನು ಸಾಗಿಸುತ್ತಿದ್ದವು. ಕೆಲ ಕಾಲಾನಂತರ ಡೀಸೆಲ್ ಇಂಜಿನ್ ಆವಿಷ್ಕಾರವಾಯಿತು. ಮೈಸೂರು ಸರ್ಕಾರವು ೧೯೪೮ರಲ್ಲಿ ಬೆಂಗಳೂರಿನಲ್ಲಿ ರಸ್ತೆ ಸಾರಿಗೆ ಸಂಸ್ಥೆಯನ್ನು ಸ್ಥಾಪಿಸಿ, ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಜೋಗಿಮಟ್ಟಿ ಎಕ್ಸ್‌ಪ್ರೆಸ್ ಎಂಬ ಬಸ್ಸನ್ನು ಓಡಿಸುತ್ತಿತ್ತು. ಈ ಬಸ್ಸು ರಾತ್ರಿ ಚಿತ್ರದುರ್ಗದಲ್ಲಿ ತಂಗಿ, ಬೆಳಗ್ಗೆ ಹೊರಟು ಹಿರಿಯೂರು, ಸಿರಾ, ತೊಂಡೇಬಾವಿ ಮಾರ್ಗವಾಗಿ ಸಂಚರಿಸುತ್ತಿತ್ತು. ಕೆಲಕಾಲಾ ನಂತರ

ಖಾಸಗಿಯವರು ನಂದಿ ಎಕ್ಸ್‌ಪ್ರೆಸ್ ಎಂಬ ಬಸ್ಸನ್ನು ಚಿತ್ರದುರ್ಗದಿಂದ ಬೆಂಗಳೂರಿಗೆ ಓಡಿಸಲು ಆರಂಭಿಸಿದರು. ಬಸ್ಸಿನಲ್ಲಿ ಕೂಡುವ ಆಸನಗಳು ಮರದ ಹಲಗೆಯ ಬೆಂಚ್‌ಮಾದರಿಯಾಗಿದ್ದು ಎದುರು ಬದರಿಗೆ ಕೂಡಬೇಕಾಗಿತ್ತು ಮತ್ತು ಬಸ್ಸು ೧೨೫ ಮೈಲು ದೂರವನ್ನು ೬ ಗಂಟೆಗಳ ಸಮಯದಲ್ಲಿ ಕ್ರಮಿಸುತ್ತಿತ್ತು.

ಇತ್ತೀಚೆಗೆ ತಾಲ್ಲೂಕಿನಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಸೌಕರ್ಯವಿದೆ. ಆದರೆ ತಾಲ್ಲೂಕಿಗೆ ಖಾಸಗಿ ಬಸ್ಸುಗಳು ಮೊದಲೇ ಪ್ರವೇಶಿಸಿದ್ದವು. ಇಂದು ತಾಲ್ಲೂಕಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಉತ್ತಮ ಸೌಕರ್ಯ ಲಭ್ಯವಿದೆ. ಆದರೂ ಕೂಡ ಗ್ರಾಮೀಣ ಭಾಗದಲ್ಲಿ ಸಾರಿಗೆ ಸೌಕರ್ಯ ತೃಪ್ತಿಕರವಾಗಿಲ್ಲ.

**ತಾಲ್ಲೂಕಿನಲ್ಲಿರುವ ವಾಹನಗಳ ಸಂಖ್ಯೆ**: ೨೦೧೩-೧೪ ರಲ್ಲಿ ತಾಲ್ಲೂಕಿನಲ್ಲಿದ್ದ ಮೋಟಾರು ವಾಹನಗಳು ನೋಂದಣಿಗೊಂಡ ವಿವರ ಹೀಗಿದೆ: ೧೨೧ ಮಲ್ಟಿ ಆಕ್ಸಲ್ಡ್ ಆರ್ಟಿಕ್ಯುಲೇಟೆಡ್ ವಾಹನಗಳು, ೩೬೫ ಟ್ರಕ್ಸ್ ಮತ್ತು ಲಾರಿಗಳು, ೧೬೧ ನಾಲ್ಕು ಚಕ್ರಗಳ ವಾಹನಗಳು, ೧೮೧ ಮೂರು ಚಕ್ರಗಳ ವಾಹನಗಳಿದ್ದವು. ಬಸ್ಸುಗಳಲ್ಲಿ ೧೨೨ ಸ್ಟೇಜ್ ಕ್ಯಾರೇಜ್‌ಗಳು, ಎರಡು ಒಪ್ಪಂದದ ವಾಹನಗಳು, ಒಂದು ಖಾಸಗಿ ಸೇವಾ ವಾಹನ, ೧೨ ವಿದ್ಯಾಸಂಸ್ಥೆ ವಾಹನಗಳು ಇದ್ದವು. ಟ್ಯಾಕ್ಸಿಗಳಲ್ಲಿ ೨೧೨ ಮೋಟಾರ್ ಕ್ಯಾಬ್, ೧೨ ಮ್ಯಾಕ್ಸಿಕ್ಯಾಬ್, ಪ್ರಯಾಣಿಕರ ವಾಹನಗಳಲ್ಲಿ ೩೬೫ ಮೂರು ಆಸನಗಳ ವಾಹನ/ಆಟೋರಿಕ್ಷಾಗಳು, ೧೭ ನಾಲ್ಕರಿಂದ ಆರು ಆಸನಗಳ ವಾಹನಗಳು, ದ್ವಿಚಕ್ರವಾಹನಗಳಲ್ಲಿ ೧೩,೧೧೪ ಸ್ಕೂಟರ್‌ಗಳು, ೪,೩೨೨ ಮೊಪೆಡ್‌ಗಳು, ೭೧೭ ಮೋಟಾರ್ ಸೈಕಲ್‌ಗಳು ಹೊಳಲ್ಕೆರೆ ತಾಲ್ಲೂಕಿನಲ್ಲಿದ್ದವು. ೮೦೮ ಕಾರುಗಳು, ೫೮ ಜೀಪುಗಳು, ೨೭ ಓಮ್ನಿ ಬಸ್ಸು, ೧,೫೨೨ ಟ್ರಾಕ್ಟರ್‌ಗಳು, ೧,೪೨೪ ಟ್ರಿಲ್ಲರ್‌ಗಳು, ಮೂರು ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ವಾಹನಗಳು, ಎರಡು ಇತರೆ ವಾಹನಗಳು ನೋಂದಣಿಗೊಂಡಿದ್ದವು.

**೨೦೧೫-೧೬ ರಲ್ಲಿ ತಾಲ್ಲೂಕಿನಲ್ಲಿದ್ದ ಮೋಟಾರು ವಾಹನಗಳು ನೋಂದಣಿಗೊಂಡ ವಿವರ ಹೀಗಿದೆ**: ೧೪೬ ಮಲ್ಟಿ ಆಕ್ಸಲ್ಡ್ ಆರ್ಟಿಕ್ಯುಲೇಟೆಡ್ ವಾಹನಗಳು, ೩೬೭ ಟ್ರಕ್ಸ್ ಮತ್ತು ಲಾರಿಗಳು, ೧೮೬ ನಾಲ್ಕು ಚಕ್ರಗಳ ವಾಹನ, ೨೮೧ ಮೂರು ಚಕ್ರಗಳ ವಾಹನಗಳಿದ್ದವು. ಬಸ್ಸುಗಳಲ್ಲಿ ೧೨೦ ಸ್ಟೇಜ್ ಕ್ಯಾರೇಜ್‌ಗಳು, ಎರಡು ಒಪ್ಪಂದದ ವಾಹನಗಳು, ಒಂದು ಖಾಸಗಿ ಸೇವಾ ವಾಹನ, ೧೨ ವಿದ್ಯಾಸಂಸ್ಥೆ ವಾಹನಗಳು ಇದ್ದವು. ಟ್ಯಾಕ್ಸಿಗಳಲ್ಲಿ ೨೩೦ ಮೋಟಾರ್ ಕ್ಯಾಬ್, ೨೫ ಮ್ಯಾಕ್ಸಿಕ್ಯಾಬ್, ಪ್ರಯಾಣಿಕರ ವಾಹನಗಳಲ್ಲಿ ೩೯೦ ಮೂರು ಆಸನಗಳ ವಾಹನ/ಆಟೋರಿಕ್ಷಾಗಳು, ೧೭ ನಾಲ್ಕರಿಂದ ಆರು ಆಸನಗಳ ವಾಹನಗಳು, ದ್ವಿ ಚಕ್ರವಾಹನಗಳಲ್ಲಿ ೧೬,೯೧೪ ಸ್ಕೂಟರ್‌ಗಳು, ೪೩೨೨ ಮೊಪೆಡ್‌ಗಳು, ೭೫೨ ಮೋಟಾರ್ ಸೈಕಲ್‌ಗಳು ಹೊಳಲ್ಕೆರೆ ತಾಲ್ಲೂಕಿನಲ್ಲಿದ್ದವು. ೮೩೪ ಕಾರುಗಳು, ೬೮ ಜೀಪುಗಳು, ೨೭ ಓಮ್ನಿ ಬಸ್ಸು, ೧,೭೪೨ ಟ್ರಾಕ್ಟರ್‌ಗಳು, ೧,೫೩೪

ಟ್ರಿಲ್ಲರ್‌ಗಳು, ಮೂರು ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ವಾಹನಗಳು, ಎರಡು ಇತರೆ ವಾಹನಗಳು ನೋಂದಣಿಗೊಂಡಿದ್ದವು.

**ರೈಲು ಸಾರಿಗೆ**: ಕ್ರಿ.ಶ. ೧೯೨೧ ಜನವರಿಯಲ್ಲಿ ಚಿಕ್ಕಜಾಜೂರು ರೈಲ್ವೆ ರಸ್ತೆ ಪ್ರಾರಂಭವಾಯಿತು. ಚಿಕ್ಕಜಾಜೂರಿನಿಂದ ಚಿತ್ರದುರ್ಗದವರೆಗೆ ಮಾತ್ರ ರೈಲು ಸಂಚಾರವಿದ್ದು ಈಗ ರಾಯದುರ್ಗ ಮತ್ತು ರಾಮಗಿರಿ ಹೊಳಲ್ಕೆರೆ ರೈಲ್ವೆ ಸ್ಟೇಷನ್, ಚಿಕ್ಕಜಾಜೂರು ಮುತ್ತಗದೂರು ಮಾರ್ಗವಾಗಿ ಬೆಂಗಳೂರು–ಮೈಸೂರು, ದಾವಣಗೆರೆ– ಹುಬ್ಬಳ್ಳಿ, ಚಿತ್ರದುರ್ಗ ಮಾರ್ಗವಾಗಿ ರೈಲು ಸಂಪರ್ಕ ಚೆನ್ನಾಗಿದ್ದು, ತಾಲ್ಲೂಕಿನ ಇತರೆ ಭಾಗದವರಿಗೆ ಈ ಲಭ್ಯತೆ ಇಲ್ಲವಾಗಿರುವುದರಿಂದ ಉದ್ದೇಶಿತ ಯೋಜನೆಗಳ ಮೂಲಕ ಇನ್ನೂ ರೂಪಿತವಾಗಬೇಕಾಗಿದೆ. ಹೊಳಲ್ಕೆರೆ ತಾಲ್ಲೂಕಿಗೆ ಸಮೀಪದ ವಿಮಾನ ನಿಲ್ದಾಣವಿರುವುದಿಲ್ಲ.

**ಅಂಚೆ–ತಂತಿ ಸೇವೆ**: ರಾಜಮಹಾರಾಜರ ಕಾಲದಲ್ಲಿ ದೂತರು ಅಥವಾ ರಾಯಭಾರಿಗಳು ಕಾಲ್ನಡಿಗೆಯಲ್ಲಿ  ಬಂಡಿ ಅಥವಾ ಕುದುರೆಗಳ ಮೇಲೆ ಹೋಗಿ ಸುದ್ದಿಯನ್ನು ತಲುಪಿಸುವ ಮಾಧ್ಯಮಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರೇ ಒಂದು ವಿಧವಾದ ಸಮಾಚಾರ ತಲುಪಿಸುವ ಹಂಸದೂತ ಕಾರ್ಯವನ್ನು ಮಾಡುತ್ತಿದ್ದರು. ಪತ್ರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯುವ ಇವರನ್ನು ಮಾಲೆಬಂಟಣ್ಣ ಎಂದು ಕರೆಯುತ್ತಿದ್ದರು, ಆದರೂ ಹಂಸದೂತ ಪುರಾಣ ಪ್ರಸಂಗದಿಂದ ಹಂಸ ಅಂಚೆಯಾಗಿ ಅಂಚೆಯಣ್ಣ ಶಬ್ದ ರೂಢಿಗೆ ಬಂತು.

ಆಂಗ್ಲರ ಕಾಲದಲ್ಲಿ ವ್ಯವಸ್ಥಿತವಾದ ಟಪಾಲು ಕಛೇರಿಗಳು ಸೃಷ್ಟಿಯಾಗಿ, ಅಂಚೆ ಕಛೇರಿಗಳೆನಿಸಿದವು, ಇವು ಪತ್ರಗಳ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿರದೆ, ದೂರವಾಣಿ ಸಂಪರ್ಕವನ್ನು ಕಲ್ಪಿಸಿದವು. ಹಣ ಕಳುಹಿಸಿಕೊಡುವ ಮನಿ ಆರ್ಡರ್ ವ್ಯವಸ್ಥೆಯೂ ಬಂದಿದ್ದು, ಶೀಘ್ರವಿಲೇವಾರಿಯ ನಂತರದಲ್ಲಿ 'ಸ್ಪೀಡ್‌ಪೋಸ್ಟ್' , ಕೋರಿಯರ್, ವ್ಯವಸ್ಥೆಗಳು ರೂಪುಗೊಂಡಿವೆ. ತಾಲ್ಲೂಕಿನಲ್ಲಿ ೨೦೧೬ ರ ಅಂತ್ಯಕ್ಕೆ ೪೯ ಅಂಚೆ ಕಛೇರಿಗಳಿವೆ, 'ಇಎಂಎಸ್‌ಸ್ಪೀಡ್‌ಪೋಸ್ಟ್' ಸೇವೆಯನ್ನು ಇತ್ತೀಚೆಗೆ ಅಂಚೆ ಇಲಾಖೆಯು ತನಗೆ ಪ್ರತಿ ಸ್ಪರ್ಧಿಸುತ್ತಿರುವ ಖಾಸಗಿವಲಯದ ಕೋರಿಯರ್ ಸೇವೆಗೆ ಸಂವಾದಿಯಾಗಿ ಚಾಲನಗೆ ತಂದಿದೆ. ರಜಾದಿನಗಳಲ್ಲೂ ಬುಕಿಂಗ್ ಸೌಲಭ್ಯವಿದೆ. ಪಾಸ್‌ಪೋರ್ಟ್ ಅರ್ಜಿಯನ್ನು ನಿಗದಿತ ಶುಲ್ಕ ಪಾವತಿ, ಈಗ ಅಂಚೆ ಕಛೇರಿಯಿಂದ ಕಳುಹಿಸಬಹುದು. ಅಲ್ಲದೆ ಪೇದೆಗಳು ಅಂಚೆಪತ್ರ ವಿತರಣೆಯ ಜೊತೆಗೆ ಅಂಚೆ ಚೀಟಿ, ಅಂಚೆಪತ್ರ ಮತ್ತಿತರ ಅಂಚೆ ಸಾಮಗ್ರಿಗಳನ್ನು ಅವಶ್ಯವಿದ್ದವರಿಗೆ ಸ್ಥಳದಲ್ಲಿಯೇ ಮಾರಾಟ ಮತ್ತು ಅಂಚೆಯನ್ನು ಸ್ವೀಕರಿಸುವ 'ಪಿಕ್‌ಅಪ್ ಸರ್ವೀಸ್' ಈಗಾಗಲೇ ಚಾಲ್ತಿಗೆ ಬಂದಿದೆ.

ವೆಸ್ಟ್ರನ್ ಯೂನಿಯನ್ ಮನಿ ಟ್ರಾನ್ಸ್‌ಫರ್ ಸೇವೆಯಿಂದಾಗಿ ವಿದೇಶದಿಂದ ಕಳುಹಿಸಿದ ಹಣವನ್ನು ಕೆಲವೇ ನಿಮಿಷಗಳಲ್ಲಿ ಪಡೆಯುವುದು ಸಾಧ್ಯವಾಗಿದೆ. ಕ್ಯಾಷ್ ಸರ್ಟಿಫಿಕೇಟ್, ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್, ಕಿಸಾನ್ ವಿಕಾಸ್ ಪತ್ರ, ಆರ್.ಡಿ ಮುಂತಾದ ಯೋಜನೆಗಳ ಮೂಲಕ ಸಣ್ಣ ಉಳಿತಾಯ ಮಾಡಲು ಪ್ರೋತ್ಸಾಹವನ್ನು ನೀಡುತ್ತಿದೆ. ಕೊರಿಯರ್ ಸರ್ವಿಸ್‌ಗಳು ಈಗಿನ ಅಂಚೆ ಕಛೇರಿಗಳಿಗೆ ಸ್ಪರ್ಧೆಯನ್ನು ನೀಡುತ್ತಿವೆ. ೧೫೦ ವರ್ಷಗಳ ಪ್ರಾಮಾಣಿಕ ಸೇವೆಯಿಂದ ಗಟ್ಟಿ ನಂಬಿಕೆ ಬೆಳೆಸಿಕೊಂಡಿರುವ ಅಂಚೆಗೆ ಈ ಸ್ಪರ್ಧೆಯನ್ನು ಮೀರಿ ಬೆಳೆಯುವ ಚೈತನ್ಯ ಇದೆ.

**ದೂರವಾಣಿ**: ಜಿಲ್ಲೆಯ ಮೊದಲ ಟೆಲಿಫೋನ್ ಸಂಪರ್ಕವನ್ನು ಪಟ್ಟಣಗಳಲ್ಲಿ ಗುರುತಿಸಬಹುದಾದರೂ ಶಾಶ್ವತ ಸಂಪರ್ಕ ದೊರೆತಿದ್ದು, ಇದೀಗ ಎಲ್ಲೆಡೆಯೂ ವಿಸ್ತರಿಸಲಾಗಿದೆ. ಬಹುಕಾಲ ಇದು ಸರ್ಕಾರಿ ಕಛೇರಿಗಳಿಗೆ, ಸಾರ್ವಜನಿಕ ಸ್ಥಳಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ದೂರವಾಣಿ ಸೇವೆಯು ತಾಲ್ಲೂಕಿಗೆ ಪ್ರವೇಶಿಸಿದ್ದು ೧೯೭೦ ರ ದಶಕದಲ್ಲಿ. ೨೦೧೬ ರ ಅಂತ್ಯಕ್ಕೆ, ತಾಲ್ಲೂಕಿನಲ್ಲಿ ೧೨ ದೂರವಾಣಿ ವಿನಿಮಯ ಕೇಂದ್ರಗಳು, ೮೨೧ ದೂರವಾಣಿಗಳು ಹಾಗೂ ೧೧೧ ಅಂತರ್ಜಾಲ ಸಂಪರ್ಕಗಳಿದ್ದವು. ಏತನ್ಮಧ್ಯೆ ಇತ್ತೀಚಿನ ವರ್ಷಗಳಲ್ಲಿ ಮಾಹಿತಿ ತಂತ್ರಜ್ಞಾನ ರಂಗದಲ್ಲಿರುವ ಕ್ರಾಂತಿಕಾರಿ ಬೆಳವಣಿಗೆಗಳಿಂದ ದೂರವಾಣಿ ಇಲಾಖೆಯು ಏರ್‌ಟೆಲ್, ಟಾಟಾ ಇಂಡಿಕಾಂ, ವೋಡಾಫೋನ್, ಐಡಿಯಾ, ಜಿಯೋ ಮುಂತಾದ ಖಾಸಗಿ ಕಂಪನಿಗಳೊಂದಿಗೆ ಸ್ಪರ್ಧೆ ನೀಡುತ್ತಿದೆ. ತಳವಾಣಿ(ಲ್ಯಾಂಡ್‌ಲೈನ್)ಗಳೂ ಇಳಿಮುಖವಾಗುತ್ತಿದ್ದು, ಮೊಬೈಲ್‌ಗಳು ಜನಸಾಮಾನ್ಯವಾಗಿದ್ದು, ಹೆಚ್ಚು ಆಕರ್ಷಿಸುತ್ತಿವೆ, ತತ್ಪರಿಣಾಮವಾಗಿ ಸ್ಥಿರ ದೂರವಾಣಿಗಳ ಸಂಖ್ಯೆ ಗಣನೀಯವಾಗಿ ಇಳಿದಿದ್ದರೂ, ಸಾರ್ವಜನಿಕ ಕಾಯನ್ ಬೂತ್‌ಗಳು ಗ್ರಾಮೀಣ ಭಾಗವನ್ನು ಪ್ರವೇಶಿಸಿವೆ. ತಾಲ್ಲೂಕಿನಲ್ಲಿ ಎರಡು ಶಾಶ್ವತ ಚಿತ್ರಮಂದಿರಗಳಿದ್ದು, ತಾತ್ಕಾಲಿಕ ಚಿತ್ರಮಂದಿರಗಳಿರುವುದಿಲ್ಲ.

**ಆಕಾಶವಾಣಿ**: ೧೯೩೫ರಲ್ಲಿ ಪ್ರೊ॥ ಎಂ.ವಿ.ಗೋಪಾಲಸ್ವಾಮಿಯವರು ಮೈಸೂರಿನಲ್ಲಿ ಆರಂಭಿಸಿದ ಖಾಸಗಿ ಪ್ರಸರಣಾ ಕೇಂದ್ರವೇ ಮೊದಲ ಕೇಂದ್ರವಾಗಿದ್ದು,ಅದನ್ನೇ ಆಕಾಶವಾಣಿ ಎಂದು ಕರೆಯಲಾಗಿದೆ.

ಇದು ೧೯೪೧ರಲ್ಲಿ ಸರ್ಕಾರದ ಸ್ವಾಧೀನಕ್ಕೊಳಪಟ್ಟಿತು. ಮುಂದೆ ೧೯೫೦ರಲ್ಲಿ ಇದನ್ನು ಆಲ್ ಇಂಡಿಯಾ ರೇಡಿಯೋ ವಹಿಸಿಕೊಂಡು, ೧೯೫೫ ರವರೆಗೆ ನಿರ್ವಹಿಸಿತಾದರೂ ನವೆಂಬರ್ ೧೯೫೫ ರಲ್ಲಿ ಆಕಾಶವಾಣಿ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಭದ್ರಾವತಿ, ಧಾರವಾಡ, ಕಲಬುರಗಿ ಕೇಂದ್ರಗಳೊಂದಿಗೆ, ಬೆಂಗಳೂರು, ಭದ್ರಾವತಿ ಕೇಂದ್ರಗಳಿಗೆ ಅವಕಾಶ ದೊರೆಯುವಂತಾಯಿತು. ಧಾರವಾಡ, ಭದ್ರಾವತಿ ಕೇಂದ್ರಗಳು ಒಂದು ಕಾಲಕ್ಕೆ ಈ ಭಾಗದಲ್ಲಿ ತುಂಬಾ ಜನಮೆಚ್ಚುಗೆ ಪಡೆದಿದ್ದವು.

## ಸಾರಿಗೆ ಮತ್ತು ಸಂಪರ್ಕ

ಬಹುದಿನದಿಂದಲೂ ರೇಡಿಯೋ ಮಾಲೀಕರು ರೇಡಿಯೋ ಲೈಸನ್ಸ್ ಪಡೆದು ಪ್ರತಿವರ್ಷ ನವೀಕರಿಸುವ ಪದ್ಧತಿ ಚಾಲ್ತಿಯಲ್ಲಿತ್ತು. ಆರಂಭದಿಂದಲೂ ತಾಲ್ಲೂಕಿಗೆ ಎಲ್ಲಾ ಕೇಂದ್ರದ ಕಾರ್ಯಕ್ರಮಗಳು ರೇಡಿಯೋ ಮೂಲಕ ಪ್ರಸಾರವಾಗುತ್ತಿದ್ದವು. ನಂತರ ರೇಡಿಯೋ ಲೈಸನ್ಸ್ ಪದ್ಧತಿ ರದ್ದಾಯಿತು. ಎಫ್.ಎಂ ರೇಡಿಯೋಗಳು ಸಾಕಷ್ಟು ಜನಾದರಕ್ಕೆ ಪಾತ್ರವಾಗಿದ್ದರೂ ದೂರದರ್ಶನದಂತಹ ದೃಶ್ಯ, ಶ್ರವಣ ಮಾಧ್ಯಮದಿಂದಾಗಿ ರೇಡಿಯೋಗಳು ತಮ್ಮ ಆಸ್ತಿತ್ವಕ್ಕಾಗಿ ತಿಣುಕಾಡುತ್ತಿವೆ. ಚಿತ್ರದುರ್ಗ ಎಫ್.ಎಮ್ ಸೌಲಭ್ಯಗಳು ಸೇರಿದಂತೆ ವಿವಿಧ ಆಕಾಶವಾಣಿ ಕೇಂದ್ರಗಳ ಸೌಲಭ್ಯವೂ ತಾಲ್ಲೂಕಿನಲ್ಲಿ ದೊರೆಯುತ್ತದೆ.

**ದೂರದರ್ಶನ:** ೧೯೫೯ ರಷ್ಟು ಹಿಂದೆಯೇ ಭಾರತದಲ್ಲಿ ದೂರದರ್ಶನವು ಬಳಕೆಗೆ ಬಂದರೂ, ಕರ್ನಾಟಕ, ಕಲಬುರಗಿಯನ್ನು ೧೯೭೭ರಲ್ಲಿ ಮೊದಲ ಬಾರಿಗೆ ಪ್ರವೇಶಿಸಿತ್ತು. ಬೆಂಗಳೂರು ದೂರದರ್ಶನ ಕೇಂದ್ರ ೧೯೮೧ರಲ್ಲಿ ಆರಂಭಗೊಂಡಿತಾದರೂ, ೧೯೮೩ ರಿಂದ ಸ್ವತಂತ್ರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾರಂಭಿಸಿತು. ಇದರೊಂದಿಗೆ ದೂರದರ್ಶನ ಸೌಲಭ್ಯ ತಾಲ್ಲೂಕಿಗೂ ಲಭಿಸುವಂತಾಯಿತು. ತತ್ಪರಿಣಾಮವಾಗಿ ತಾಲ್ಲೂಕಿನಾದ್ಯಂತ ದೂರದರ್ಶನ ಬಳಕೆ ಸರ್ವೇಸಾಮಾನ್ಯವಾಗಿದ್ದು, ಅಲ್ಲಲ್ಲಿ ಸ್ಥಳೀಯವಾಗಿ ಕೇಬಲ್ ಅಪರೇಟರ್‌ಗಳು ಕೇಬಲ್ ಜಾಲದ ಮೂಲಕ ವಿವಿಧ ಚಾನಲ್‌ಗಳನ್ನು ಪರಿಣಾಮಕಾರಿಯಾಗಿ ವೀಕ್ಷಕರಿಗೆ ನೀಡಲು ಯಶಸ್ವಿಯಾಗಿದ್ದು, ಕೇಬಲ್ ಆಪರೇಟರ್‌ಗಳು ಸಂಘಟಿತ ಪ್ರಸರಣ ವ್ಯವಸ್ಥೆಯನ್ನು ಹೊಳಲ್ಕೆರೆ ತಾಲ್ಲೂಕಿನಲ್ಲೂ ಜಾರಿಗೆ ತರಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ದೂರದರ್ಶನ ಹಾಗೂ ಖಾಸಗಿಯವರು ಒದಗಿಸುತ್ತಿರುವ ಡೈರೆಕ್ಟ್ ಟು ಹೋಮ್ (ಡಿ ಟಿ ಹೆಚ್) ಸೇವೆಯು ಜನಮನ್ನಣೆಗೆ ಪಾತ್ರವಾಗಿದೆ.

ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗಾಗಿ ಅಂತರ್ಜಾಲ ಸೌಕರ್ಯವು ಜನಸಾಮಾನ್ಯರಿಗೆ ತಲುಪುವಂತಾಗಿದೆ, ಹೋಬಳಿ ಕೇಂದ್ರದಲ್ಲಿ ರೈತ ಸಂಪರ್ಕ ಕೇಂದ್ರ, ಶೈಕ್ಷಣಿಕ ಕೇಂದ್ರಗಳು ಆರಂಭಗೊಂಡಿರುವ ಹಿನ್ನಲೆಯಲ್ಲಿ ಜನಸಾಮಾನ್ಯರಿಗೆ ಅಂತರ್ಜಾಲ ಸೇವೆ ಸುಲಭವಾಗಿ ದೊರೆಯುವಂತಾಗಬೇಕೆಂಬುದು ಸರ್ಕಾರದ ಆಶಯವಾಗಿದೆ.

# ಅಧ್ಯಾಯ–೮

## ಸಾರ್ವತ್ರಿಕ ಆಡಳಿತ

**ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆ:** ಇತಿಹಾಸ ಪ್ರಸಿದ್ಧವಾದ ಚಿತ್ರದುರ್ಗ ಜಿಲ್ಲೆಯಲ್ಲಿ ಆರು ತಾಲ್ಲೂಕುಗಳಿದ್ದು, ಅದರಲ್ಲಿ ಹೊಳಲ್ಕೆರೆ ತಾಲ್ಲೂಕು ಒಂದಾಗಿದೆ. ಪಲ್ಲವರು, ಹೊಯ್ಸಳರು, ಗಂಗರು, ಪಾಳೆಯಗಾರರ ಆಳ್ವಿಕೆಗೆ ಈ ತಾಲ್ಲೂಕು ಒಳಪಟ್ಟಿರುತ್ತದೆ.

ಸುಗಮ ಆಡಳಿತಕ್ಕಾಗಿ ಆಳುವವರು ಕೆಲವು ಪದ್ಧತಿಗಳನ್ನು ರೂಢಿಸಿಕೊಂಡರು. ಅನೇಕ ಪದ್ಧತಿಗಳ ನಂತರ ರಾಜ್ಯ, ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಇವುಗಳು ಬಂದವು. ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ಉಪವಿಭಾಗಗಳು ಇದ್ದು, ಹೊಳಲ್ಕೆರೆ ತಾಲ್ಲೂಕು ದಾವಣಗೆರೆಯ ಉಪವಿಭಾಗಕ್ಕೆ ಸೇರಿದ್ದು, ಈಗ ದಾವಣಗೆರೆ ಜಿಲ್ಲೆ ಪ್ರತ್ಯೇಕಗೊಂಡ ನಂತರ ಚಿತ್ರದುರ್ಗ ಉಪವಿಭಾಗಕ್ಕೆ ಸೇರಿದೆ. ಈ ಪ್ರದೇಶದಲ್ಲಿ ಸ್ವಾತಂತ್ರ್ಯ ಪೂರ್ವದ ಗೌಡಿಕೆ, ಯಜಮಾನಿಕೆ, ಪಟೇಲಿಕೆ ರೂಢಿಯಲ್ಲಿದ್ದು, ಶ್ಯಾನಭೋಗರು ತಾತ್ಕಾಲಿಕ ಅಧಿಕಾರ ನಡೆಸುತ್ತಿದ್ದರು. ಈ ಆಡಳಿತ ಕ್ರಮದ ಜಾರಿ ಬಿಗಿಯಾಗಿದ್ದವು. ಪಟೇಲರು ತಾಲ್ಲೂಕಿನ ಯಜಮಾನರಂತಿದ್ದು, ಸ್ಥಳೀಯ ನ್ಯಾಯಾಧೀಶರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ತಾಲ್ಲೂಕಿನ ಜನನ ಮರಣ ನೋಂದಣಿ ಇವರ ಸುಪರ್ದಿಯಲ್ಲಿರುತ್ತಿದ್ದವು. ಪಟೇಲರ ಮಾರ್ಗದರ್ಶನದಲ್ಲಿ ಶ್ಯಾನಭೋಗರು, ಕಂದಾಯ ದಾಖಲಾತಿ, ವಸೂಲಾತಿ, ಭೂ ದಾಖಲೆ, ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಪಟೇಲರು, ಪಂಚಾಯ್ತಿ ಕಟ್ಟೆಗಳಲ್ಲಿ ಊರ ಪ್ರಮುಖರಾದರು. ತಪ್ಪಿತಸ್ಥರಿಗೆ ದಂಡ ವಿಧಿಸುತ್ತಿದ್ದರು, ಪಂಚಾಯತ್ ರಾಜ್ ವ್ಯವಸ್ಥೆಯು ಜಾರಿಗೆ ಬಂದ ನಂತರ ಗ್ರಾಮ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದರೆ, ತಾಲ್ಲೂಕಿನಲ್ಲಿ ತಾಲ್ಲೂಕು ಮಂಡಳಿಗಳು ಹಾಗೂ ತಾಲ್ಲೂಕು ಕಛೇರಿಗಳು ಅಸ್ತಿತ್ವಕ್ಕೆ ಬಂದವು, ತಾಲ್ಲೂಕಿನ ದಂಡಾಧಿಕಾರಿಯಾಗಿ ತಹಶೀಲ್ದಾರ್ ನೇಮಕರಾದರು. ಅವರಿಗೆ ಸಹಾಯಕರಾಗಿ ಶಿರಸ್ತೇದಾರರು, ಕಂದಾಯ ನಿರೀಕ್ಷಕರು ಹಾಗೂ ಗ್ರಾಮಲೆಕ್ಕಿಗರು ನೇಮಕಗೊಂಡರು. ತಾಲ್ಲೂಕಿನಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಆರಕ್ಷಕ ಠಾಣೆಗಳು, ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದವು.

ಈಗಿನ ಸಾರ್ವತ್ರಿಕ ಆಡಳಿತ ವ್ಯವಸ್ಥೆಯಲ್ಲಿ ಸರ್ಕಾರವು ಜನರಿಗೆ ರಕ್ಷಣೆ ನೀಡಲು ಹಾಗೂ ಅವರ ಮೂಲಭೂತ ಹಕ್ಕುಗಳಿಗೆ ಭಂಗ ಬಾರದಂತೆ ನೋಡಿಕೊಳ್ಳಲು ಬದ್ಧವಾಗಿದೆ. ಅದೇ ರೀತಿ ಜನರಿಂದ ನಿಗದಿತ ತೆರಿಗೆಗಳನ್ನು ವಸೂಲಿ ಮಾಡುವ ಅಧಿಕಾರವನ್ನು ಹೊಂದಿದೆ. ಇದರೊಂದಿಗೆ ನ್ಯಾಯಾಡಳಿತ ಮತ್ತು ಕಾನೂನು ರಕ್ಷಣೆಗಾಗಿ ಆರಕ್ಷಕ ಸಿಬ್ಬಂದಿಯನ್ನು ಅಗತ್ಯ ಪ್ರಮಾಣದಲ್ಲಿ ಹೊಂದಿರುತ್ತದೆ. ಸರ್ಕಾರದ ಆಸ್ತಿ ಪಾಸ್ತಿಗಳನ್ನು ರಕ್ಷಿಸಿಕೊಳ್ಳುವುದು ಸಹ ಸರ್ಕಾರದ ಹೊಣೆಗಾರಿಕೆಯಾಗಿದೆ. ಈಗಿನ ಚಿತ್ರದುರ್ಗ ಜಿಲ್ಲೆಯು ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳನ್ನೊಳಗೊಂಡ ಜಿಲ್ಲೆಯಾಗಿ ಸರ್ಕಾರದ ಅಧಿಸೂಚನೆ ಸಂ. ಆರ್.ಡಿ/೪೨/ಎಲ್.ಆರ್.ಡಿ/೮೭/ಭಾಗ-೩ ದಿನಾಂಕ ೨-೮-೧೯೯೭ರಂತೆ ದಿನಾಂಕ ೧೫-೮-೧೯೯೭ರಂದು ಪುನರ್ವಿಂಗಡಣೆಗೊಂಡು ಆರು ತಾಲ್ಲೂಕುಗಳ ಜಿಲ್ಲೆಯಾಗಿ ಉಳಿಯಿತು. ಕಂದಾಯ ಇಲಾಖೆಯಲ್ಲಿ ಜಿಲ್ಲಾಧಿಕಾರಿಯ ಒಟ್ಟು ೧೭ ಸಾಮಾನ್ಯಕಾರ್ಯಗಳು, ೧೧ ಕಂದಾಯ ಆಡಳಿತ, ೩೦ ಕಾನೂನು ಆಡಳಿತ ಹಾಗೂ ೮೧ ನಾಗರಿಕ ಸನ್ನದು ವಿತರಿಸುವ ಅಧಿಕಾರವನ್ನು ನಿರ್ವಹಿಸುತ್ತಾರೆ ಹಾಗೂ ೨೪ ಬಗೆಯ ಅಧಿನಿಯಮಗಳ ಮೇಲೆ ಕ್ರಮ ಜರುಗಿಸುವರು. ಅಲ್ಲದೆ, ೫೧ ವಿವಿಧ ಜಿಲ್ಲಾಮಟ್ಟದ ಸಮಿತಿಗಳಿಗೆ ಅಧ್ಯಕ್ಷರಾಗಿದ್ದಾರೆ ಮತ್ತು ೮ ಮುಖ್ಯ ಕಾಯ್ದೆ ಕಾನೂನುಗಳ ಅನುಷ್ಠಾನದ ಅಧಿಕಾರ ಹೊಂದಿರುತ್ತಾರೆ. ಉಪ ವಿಭಾಗ ಮಟ್ಟದ ಉಪ ವಿಭಾಗಾಧಿಕಾರಿಯು ಒಟ್ಟು ೧೨ ಬಗೆಯ ಅಧಿಕಾರಗಳನ್ನು ಹೊಂದಿರುತ್ತಾರೆ. ಇವರ ಅಧೀನದಲ್ಲಿ ತಹಸೀಲ್ದಾರ್ ೧೮ ಬಗೆಯ ಮುಖ್ಯ ಕಾಯಿದೆ ಕಾನೂನುಗಳ ಅನುಷ್ಠಾನದ ಅಧಿಕಾರ ಹೊಂದಿರುತ್ತಾರೆ ಹಾಗೂ ದಂಡಾಧಿಕಾರಿಯಾಗಿ ವಿವಿಧ ಕಾಯ್ದೆಗಳಡಿಯಲ್ಲಿ ಅಧಿಕಾರ ಕರ್ತವ್ಯಗಳನ್ನು ಹೊಂದಿರುತ್ತಾರೆ.

### ತಹಶೀಲ್ದಾರರು

ತಹಶೀಲ್ದಾರರು ತಾಲ್ಲೂಕಿನ ಮುಖ್ಯ ಕಂದಾಯಾಧಿಕಾರಿಯಾಗಿದ್ದು, ತಮ್ಮದೇ ಆಗಿರುವ ಸಿಬ್ಬಂದಿಯ ಮೂಲಕ ಕರ್ತವ್ಯ ನಿರ್ವಹಿಸುತ್ತಾರೆ. ಶಿರಸ್ತೇದಾರ್‌ಗಳು, ಉಪತಹಶೀಲ್ದಾರ್‌ಗಳು, ಕಂದಾಯ ವೃತ್ತ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕ, ಅಭಿಲೇಖಪಾಲಕ, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವನ್ನು ತಹಶೀಲ್ದಾರರು ಹೊಂದಿದ್ದಾರೆ. ತಹಶೀಲ್ದಾರರು ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆ ಮತ್ತು ಕಾನೂನುಗಳು ಹೀಗಿವೆ: (೧) ಕರ್ನಾಟಕ ಭೂಸುಧಾರಣಾ ಅಧಿನಿಯಮ ೧೯೬೧ ಮತ್ತು ನಿಯಮಾವಳಿ ೧೯೭೪, (೨) ಕರ್ನಾಟಕ ಹಲವು ಇನಾಂ ರದ್ಧತಿ ಅಧಿನಿಯಮ ೧೯೭೭, (೩) ಕರ್ನಾಟಕ ಗ್ರಾಮ ನೌಕರಿಗಳ ರದ್ಧತಿ ಅಧಿನಿಯಮ ೧೯೬೧, (೪) ಕರ್ನಾಟಕ ಪುರಸಭೆಗಳ

ಅಧಿನಿಯಮ ೧೯೬೪, (೫) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರೆ ಉಪಬಂಧಗಳ ಅಧಿನಿಯಮ ೧೯೭೪ ಮತ್ತು ನಿಯಮಾವಳಿ ೧೯೭೫, (೬) ವೃದ್ಧಾಪ್ಯ ವೇತನ ಮಂಜೂರು ಮಾಡುವುದು, (೭) ನಿರ್ಗತಿಕ ವಿಧವಾ ವೇತನ ನಿಯಮಾವಳಿ ೧೯೭೬, (೮) ಮತದಾರರ ನೋಂದಣಿ ನಿಯಮಾವಳಿ ೧೯೬೦, (೯) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ ೧೯೬೬, (೧೦) ಕರ್ನಾಟಕ ನೀರಾವರಿ ಅಧಿನಿಯಮ ೧೯೬೪, (೧೧) ಕರ್ನಾಟಕ ನೀರಾವರಿ (ನೀರಿನ ಕರ ಆಕರಣೆ) ನಿಯಮಾವಳಿ ೧೯೬೫, (೧೨) ಕರ್ನಾಟಕ ಅರಣ್ಯ ನಿಯಮಾವಳಿ ೧೯೬೯, (೧೩) ಉದ್ದಿಮೆಗಳಿಗೆ ಕರ್ನಾಟಕ ರಾಜ್ಯದ ನೆರವು ನಿಯಮಾವಳಿ ೧೯೬೬, (೧೪) ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ ೧೯೬೬, (೧೫) ಏಲಕ್ಕಿ ಅಧಿನಿಯಮ ೧೯೬೫, (೧೬) ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ ೧೯೭೪ ಮತ್ತು ಅದರಡಿಯ ನಿಯಮಾವಳಿ. ಇಷ್ಟೇ ಅಲ್ಲದೆ ತಾಲ್ಲೂಕಿನ ದಂಡಾಧಿಕಾರಿಯಾಗಿ ತಹಶೀಲ್ದಾರರು ಹೊಂದಿರುವ ಅಧಿಕಾರ ಮತ್ತು ಕರ್ತವ್ಯಗಳು ಹೀಗಿವೆ: ೧) ದಂಡ ಪ್ರಕ್ರಿಯೆ ಸಂಹಿತೆ ೧೯೭೪, ೨) ಭಾರತ ಸಾಕ್ಷ್ಯ ಅಧಿನಿಯಮ ೧೯೬೩, ೩) ಕರ್ನಾಟಕ ಪೋಲಿಸ್ ಅಧಿನಿಯಮ, ೪) ಜೀತದಾಳು ಪದ್ಧತಿ (ನಿರ್ಮೂಲನ) ಅಧಿನಿಯಮ ೧೯೭೬, ೫) ಪ್ರಮಾಣವಚನ ಅಧಿನಿಯಮ ೧೯೯೯, ೬) ಭಾರತ–ಮುದ್ರಾಂಕ ಅಧಿನಿಯಮ ೧೮೯೯, ೭) ಭಾರತೀಯ ತಂತಿ ಅಧಿನಿಯಮ ೧೯೮೫, ೮) ನ್ಯಾಯಾಧೀಶರ (ರಕ್ಷಣೆ) ಅಧಿನಿಯಮ ೧೯೬೫, ೯) ಪ್ರಾಣಿಹಿಂಸೆ ತಡೆ ಅಧಿನಿಯಮ ೧೯೬೦, ೧೦) ಕರ್ನಾಟಕ ಭಿಕ್ಷಾಟನಾ (ನಿರ್ಮೂಲನ) ಅಧಿನಿಯಮ ೧೯೭೫, ೧೧) ಸಾರ್ವಜನಿಕ ಆರೋಗ್ಯ ಅಧಿನಿಯಮ ೧೯೪೪, ೧೨) ಕರ್ನಾಟಕ ಮಾರಾಟ ಕರ ಅಧಿನಿಯಮ ೧೯೫೭, ೧೩) ನ್ಯಾಯವಾದಿಗಳ ಅಧಿನಿಯಮ ೧೯೬೧, ೧೪) ವಿದ್ಯುಚ್ಛಕ್ತಿ ಅಧಿನಿಯಮ ೧೯೧೦, ೧೫) ಸತಿಹೋಗುವ (ನಿಷೇಧ) ಅಧಿನಿಯಮ ೧೯೮೭, ೧೬) ನ್ಯಾಯಾಲಯ ನಿಂದನ (ಪ್ರತಿಬಂಧಕ) ಅಧಿನಿಯಮ ೧೯೭೧, ೧೭) ಖೈದಿಗಳನ್ನು ಗುರುತಿಸುವ ಅಧಿನಿಯಮ ೧೯೨೯, ೧೮) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಷೇಧ) ಅಧಿನಿಯಮ ೧೯೮೯, ೧೯) ಕರ್ನಾಟಕ ಆಹಾರ ಮತ್ತು ನಾಗರಿಕ ಸೇವಾ ಅಧಿನಿಯಮ ೧೯೮೯, ೨೦) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ಧಾರ, ೨೧) S.I.T.A. ಅಧಿನಿಯಮ (Suppression of immoral Traffic Act).

೨೦೦೫ ರಿಂದ ತಹಶೀಲ್ದಾರರು ಭೂಮಾಪನ ಸಿಬ್ಬಂದಿಯನ್ನು ಸಹ ಹೊಂದಿದ್ದಾರೆ. ಅಲ್ಲದೆ, ಮಾಹಿತಿ ಹಕ್ಕು ಅಧಿನಿಯಮ ೨೦೦೫ರ ಪ್ರಕಾರ ತಹಶೀಲ್ದಾರರು 'ಸಾರ್ವಜನಿಕ ಮಾಹಿತಿ ಅಧಿಕಾರಿ'ಯಾಗಿದ್ದು, ಕಛೇರಿಯ ತಾಲ್ಲೂಕು ಶಿರಸ್ತೇದಾರನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾನೆ ಹಾಗೂ ಕಂದಾಯ ಉಪ ವಿಭಾಗಾಧಿಕಾರಿಯು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ. ಕರ್ನಾಟಕ

ನಾಗರಿಕ ಸೇವೆಗಳ ಖಾತರಿ ಅಧಿನಿಯಮ ೨೦೧೧ರ ಮೇರೆಗೆ, ಕಂದಾಯ ಇಲಾಖೆಗೆ ಸಂಬಂಧಪಟ್ಟ ಒಟ್ಟು ೧೯ ಸೇವೆಗಳ ದಾಖಲೆಗಳನ್ನು ನಿಗದಿತ ಗಡುವಿನಲ್ಲಿ ಒದಗಿಸುವ ಅಧಿಕಾರಿಯಾಗಿ ತಹಶೀಲ್ದಾರರು ಜವಾಬ್ದಾರಿ ಹೊಂದಿರುತ್ತಾರೆ. ಹಕ್ಕುಗಳ ಪ್ರಮಾಣಪತ್ರ ದಾಖಲೆ, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ, ಜನಸಂಖ್ಯೆ ಪ್ರಮಾಣಪತ್ರ, ನಿವಾಸಿ ಪ್ರಮಾಣಪತ್ರ, ಟೆನೆನ್ಸಿ ಇಲ್ಲದ ಪ್ರಮಾಣಪತ್ರ, ಜೀವಂತ ಪ್ರಮಾಣಪತ್ರ, ಕೃಷಿ ಕುಟುಂಬ ಸದಸ್ಯ ಪ್ರಮಾಣಪತ್ರ, ಮರುವಿವಾಹ ಅಲ್ಲದ ಪ್ರಮಾಣಪತ್ರ, ಭೂರಹಿತ ಪ್ರಮಾಣಪತ್ರ, ಜೀವಿತ ಕುಟುಂಬ ಸದಸ್ಯ ಪ್ರಮಾಣಪತ್ರ, ನಿರುದ್ಯೋಗಿಯ ಪ್ರಮಾಣಪತ್ರ, ಸರ್ಕಾರಿ ಕೆಲಸದಲ್ಲಿಲ್ಲದ ಪ್ರಮಾಣಪತ್ರ, ಕೃಷಿಕ ಪ್ರಮಾಣಪತ್ರ, ಸಣ್ಣ/ ಮಧ್ಯಮ ರೈತ ಪ್ರಮಾಣಪತ್ರ, ಕೃಷಿಕಾರ್ಮಿಕ ಪ್ರಮಾಣಪತ್ರ, ಕೆನೆಪದರ ಅಲ್ಲದ ಪ್ರಮಾಣಪತ್ರ, ವಾಸಸ್ಥಳದ ಪ್ರಮಾಣಪತ್ರ, ಪರಿವರ್ತನೆಯ ಉದ್ಧೃತ-ಇವುಗಳನ್ನು ನಿಗದಿತ ಗಡುವಿನಲ್ಲಿ ತಹಶೀಲ್ದಾರರು ವಿತರಿಸಲು ಬದ್ಧರಾಗಿರುತ್ತಾರೆ.

**ತಹಶೀಲ್ದಾರರ ಕಛೇರಿಯಲ್ಲಿನ ಶಾಖೆಗಳು ಹೀಗಿವೆ**: ಭೂಮಂಜೂರಾತಿ, ಭೂ ಸುಧಾರಣೆ, ಭೂ ಸ್ವಾಧೀನ, ಲೆಕ್ಕಶಾಖೆ, ಪ್ರಕೃತಿವಿಕೋಪ, ಹಕ್ಕು ದಾಖಲೆ, ಸಿಬ್ಬಂದಿ ಶಾಖೆ, ನಗರ ಭೂಪರಿಮಿತಿ, ಅಭಿಲೇಖಾಲಯ, ಭೂಪರಿವರ್ತನೆ, ಸ್ವಾತಂತ್ರ್ಯ ಹೋರಾಟಗಾರರ ಗೌರವಧನ, ಚುನಾವಣೆ, ಆಡಳಿತ, ಮೆಜಿಸ್ಟೀರಿಯಲ್, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಸ್ಥಿರಾಸ್ತಿ ಪರಭಾರೆ ನಿಷೇಧ, ಗಡಿಪ್ರದೇಶಾಭಿವೃದ್ಧಿ, ಕರ್ನಾಟಕ ಗ್ರಾಮರದ್ದಿಯಾತಿ ಕಾಯ್ದೆ, ಪ್ರಕೃತಿ ವಿಕೋಪ ಮುಂತಾದ ೨೮ ಶಾಖೆಗಳಿರುತ್ತವೆ. ಮೇಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಬರುವ ಆದೇಶಗಳನ್ನು ಸಹ ತಹಶೀಲ್ದಾರರು ಅನುಷ್ಠಾನಗೊಳಿಸುತ್ತಾರೆ.

ಉಪವಿಭಾಗಾಧಿಕಾರಿಗಳು ಇವರ ತಕ್ಷಣದ ಮೇಲಾಧಿಕಾರಿಗಳಾಗಿದ್ದು, ಜಿಲ್ಲಾಧಿಕಾರಿಗಳ ಸೂಚನೆಯಂತೆ ಇವರು ಕಾರ್ಯನಿರ್ವಹಿಸುತ್ತಾರೆ. ತಾಲ್ಲೂಕಿನಲ್ಲಿ ಭೂ ಒತ್ತುವರಿ ಸೇರಿದಂತೆ, ವಿವಿಧ ಭೂ ವ್ಯವಹಾರಗಳಿಗೆ ಸಂಬಂಧಿಸಿದಂತೆ, ನಿರ್ಣಾಯಕ ಪಾತ್ರ ವಹಿಸುವ ಇವರು ಕಂದಾಯ ಆಕರಣೆ ಮತ್ತು ಸಂಗ್ರಹಣೆ ತಕಾವಿ, ಸಾಲ ಮರುಪಾವತಿ ಭೂ ಅಭಿವೃದ್ಧಿ ಸಾಲದ ಸದ್ವಿನಿಯೋಗದ ಪರಿಶೀಲನೆ, ನೀರಾವರಿ ಶುಲ್ಕ, ಪೋಟ್‌ಹಿಸ್ಸಾ, ಮಾಪನ ಶುಲ್ಕ ಸಂಗ್ರಹ ಮುಂತಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ತಾಲ್ಲೂಕಿನ ಮುಖ್ಯಸ್ಥರಾಗಿ, ಆಹಾರ ದಾಸ್ತಾನುಗಳೂ ಕ್ರಮಬದ್ಧ ಖರೀದಿ ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ವ್ಯವಸ್ಥಿತವಾಗಿ ವಿತರಣೆ ಮಾಡುವ ಹೊಣೆಯು ಇವರದಾಗಿದೆ. ಲೆವಿ ಬತ್ತ, ಅಕ್ಕಿ ಸಂಗ್ರಹಣೆ, ಜೊತೆಗೆ ವಿವಿಧ ಅಕ್ಕಿ ಗಿರಣಿಗಳ ಹಾಗೂ ಕೃಷಿ ಉತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳಲ್ಲಿರುವ ದಾಸ್ತಾನುಗಳ ಪರಿಶೀಲನೆ ಮಾಡಬೇಕಾಗಿದೆ. ವೃದ್ಧಾಪ್ಯವೇತನ, ಅಂಗವಿಕಲರ, ಇತರರ ಮಾಶಾಸನ ಮಂಜೂರು ಮಾಡುವುದು ಇವರ ಕರ್ತವ್ಯವಾಗಿದೆ. ತಾಲ್ಲೂಕು ಮ್ಯಾಜಿಸ್ಟ್ರೇಟ್‌ರಾಗಿ ತಾಲ್ಲೂಕಿನ

ಶಾಂತಿ ಹಾಗೂ ಕಾನೂನು ಪರಿಪಾಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವು ಇವರಿಗಿರುತ್ತದೆ. ಸಹಾಯಕ ಚುನಾವಣಾ ನೋಂದಣಾಧಿಕಾರಿಯಾಗಿ ಮತಪಟ್ಟಿಯ ರಚನೆ, ಪರಿಷ್ಕರಣೆ, ಇತರ ಜವಾಬ್ದಾರಿಗಳು ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ವಾಚನ ಚುನಾವಣಾಧಿಕಾರಿಯಾಗಿ ಚುನಾವಣೆಯ ಉಸ್ತುವಾರಿಯನ್ನು ನಿರ್ವಹಿಸಬೇಕಾಗುತ್ತದೆ.

## ಕ್ಷೇತ್ರಾಭಿವೃದ್ಧಿ ಅಧಿಕಾರಿ

ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಹಾಗೂ ನಿರ್ವಹಣೆ ಈ ಅಧಿಕಾರಿಗಳ ಹೊಣೆಯಾಗಿದ್ದು, ತಾಲ್ಲೂಕು ಅಭಿವೃದ್ಧಿ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಾಗಿರುತ್ತಾರೆ. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆ ೧೯೯೩ರ ಜಿಲ್ಲಾ ಪಂಚಾಯತ್ ಕಾಯ್ದೆಗಳಿಂದಾಗಿ ಇಂದು ತಾಲ್ಲೂಕು ಪಂಚಾಯಿತಿ ಸಮಿತಿ ಎಂದು ನಾಮಾಂಕಿತಗೊಂಡಿದ್ದು, ನಿರ್ವಾಹಣಾಧಿಕಾರಿಗಳು ಮುಖ್ಯಸ್ಥರಿದ್ದು, ಜಿಲ್ಲಾ ಪಂಚಾಯಿತಿಯ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದು, ಅವರ ನೆರವಿಗೆ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬಂದಿ ವರ್ಗವಿರುತ್ತದೆ.

**ನಾಡಕಛೇರಿ**: ಅಧಿಕಾರ ವಿಕೇಂದ್ರೀಕರಣ ಹಾಗೂ ತಾಲ್ಲೂಕಿನ ಕಛೇರಿಗಳ ಮೇಲಿನ ಕಾರ್ಯಒತ್ತಡವನ್ನು ಹಗುರಗೊಳಿಸುವುದಕ್ಕಾಗಿ ೧೯೮೭ ರಿಂದ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲಿ ಮೂರು ನಾಡಕಛೇರಿಗಳನ್ನು ಆರಂಭಿಸಲಾಗಿದೆ. ಈ ಕಛೇರಿಗೆ ಉಪತಹಶೀಲ್ದಾರ್ ಮುಖ್ಯಸ್ಥರಾಗಿದ್ದು, ತಹಶೀಲ್ದಾರರ ಕಾರ್ಯಗಳ ನಿರ್ವಹಣೆಯನ್ನು ಇವರಿಗೆ ವಹಿಸಿಕೊಡಲಾಗಿದೆ. ಅವರ ನೆರವಿಗೆ ಸಿಬ್ಬಂದಿ ವರ್ಗವಿದ್ದು, ತಹಶೀಲ್ದಾರರು ಇವರ ತಕ್ಷಣ ದಮೇಲಾಧಿಕಾರಿಗಳಾಗಿರುತ್ತಾರೆ.

## ಕಂದಾಯ ನಿರೀಕ್ಷಕರು

ತಾಲ್ಲೂಕಿನಲ್ಲಿರುವ ೪ ಹೋಬಳಿ ಕಂದಾಯ ವೃತ್ತಗಳ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಂದಾಯ ನಿರೀಕ್ಷಕರಿರುತ್ತಾರೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ್‌ರ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಾಹಕ ಕಂದಾಯ ನಿರೀಕ್ಷಕರು ಭೂ ಕಂದಾಯ ಅಭಿವೃದ್ಧಿ ಶುಲ್ಕ, ನೀರಾವರಿ ಶುಲ್ಕ, ಇತರೆ ಸರ್ಕಾರಿ ಬಾಕಿ, ಸಾಲ ಹಾಗೂ ಮುಂಗಡಗಳ ಮರುಪಾವತಿ ಮುಂತಾದವುಗಳ ಶೇಖರಣೆ, ಆಹಾರ ಧಾನ್ಯಗಳ ಖರೀದಿ ಮತ್ತು ವಿತರಣೆ ಮುಂತಾದವುಗಳನ್ನು ನಿಭಾಯಿಸಬೇಕಾಗುತ್ತದೆ. ಗ್ರಾಮಲೆಕ್ಕಿಗರ ಕಾರ್ಯವೈಖರಿ ಮೇಲ್ವಿಚಾರಕರಾಗಿದ್ದು, ಗ್ರಾಮಗಡಿ ತಪಾಸಣೆ, ಸರ್ಕಾರಿ ಜಮೀನಿನ ಒತ್ತುವರಿ ಮುಂತಾದವುಗಳನ್ನು ಗಮನಿಸಬೇಕಾಗುತ್ತದೆ.

ಉಂಬಳಿ ಜಮೀನಿನ ದಾಖಲೆಗಳ ಸಂಯೋಜನೆ ಭೂಸ್ವಾಧೀನಗಳಂತಹ ಕಂದಾಯ ವಿಷಯಗಳ ಜೊತೆಗೆ ವೃದ್ಧಾಪ್ಯ ಇತರೆ ಮಾಶಾಸನ ಮಂಜೂರಾತಿಗೆ ಪೂರಕ ತಪಾಸಣೆಯಂತಹ ಕಾರ್ಯಗಳನ್ನು ಇವರು ನಿರ್ವಹಿಸಬೇಕಾಗುತ್ತದೆ.

**ಗ್ರಾಮ ಲೆಕ್ಕಿಗರು(೫೧)**: ಪ್ರಾಚೀನ ಕಾಲದಲ್ಲಿ ಗ್ರಾಮಗಳ ಆಡಳಿತ ನಿರ್ವಹಣೆಗೆ ಹನ್ನೆರಡು ಜನ ಆಯಗಾರರು (ಬಾರಾಬಲೂತಿ) ಗ್ರಾಮದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ೧೯೪೭ ರ ವೇಳೆಗೆ ಅವುಗಳಲ್ಲಿ ಗೌಡ, ಶ್ಯಾನಭೋಗ, ತೋಟಿ, ತಲಾರಿ, ನೀರ್ಗಂಟಿಗಳಷ್ಟೆ ಚಾಲ್ತಿಯಲ್ಲಿದ್ದರು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಇದ್ದ ವಂಶಾವಾರು ಶ್ಯಾನುಭೋಗಿಕೆಯನ್ನು ೧೯೭೦ರ ಕಾಯ್ದೆಯನ್ವಯ ರದ್ದುಗೊಳಿಸಲಾಯಿತು. ಆಗ ಗ್ರಾಮಾಡಳಿತವನ್ನು ಗ್ರಾಮ ಲೆಕ್ಕಿಗರಿಗೆ ವಹಿಸಿಕೊಡಲಾಯಿತು. ಆಡಳಿತದ ಕೆಳ ಘಟಕದ ಮುಖ್ಯಸ್ಥರಾದ ಇವರು ಸರ್ಕಾರ ಸಮಾಜಗಳ ನಡುವಣ ಕೊಂಡಿಯಾಗಿದ್ದು, ಗ್ರಾಮ ದಾಖಲೆಗಳ ಸಂರಕ್ಷಣೆ ಹಾಗೂ ಕಂದಾಯ ಶೇಖರಣೆ ಇವರ ಹೊಣೆಗಾರಿಕೆಯಾಗಿರುತ್ತದೆ. ಹಿಂದಿನ ಶ್ಯಾನುಭೋಗರ ಅಧಿಕಾರಿಗಳನ್ನೇ ಹೊಂದಿರುವ ಇವರ ನೆರವಿಗೆ ಗ್ರಾಮ ಸಹಾಯಕರಿರುತ್ತಾರೆ.

**ಗ್ರಾಮ ಸಹಾಯಕರು(೫೧)**: ಹಿಂದೆ ಗ್ರಾಮಗಳಲ್ಲಿ ಶ್ಯಾನುಭೋಗ, ಕುಲಕರ್ಣಿ ಅಥವಾ ಪಟೇಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳವಾರ, ಓಲೇಕಾರ, ತೋಟಿ ಮುಂತಾದ ಹುದ್ದೆಗಳಿಗೆ ಬದಲು ಪ್ರಸ್ತುತ ಗ್ರಾಮಸಹಾಯಕರನ್ನು ನೇಮಿಸಲಾಗಿದೆ. ಗ್ರಾಮ ಸಿಪಾಯಿ ಎಂದೂ ಕೆಲವೆಡೆ ಕರೆಯಲ್ಪಡುವ ಇವರು ಗ್ರಾಮ ಲೆಕ್ಕಿಗರ ಸಹಾಯಕರಾಗಿ, ಸಂದೇಶವಾಹಕರಾಗಿ ದಫ್ತಾರು ಸಾಗಿಸುವ ಹಾಗೂ ಭೂಸರ್ವೇಕ್ಷಣ ಸಂದರ್ಭದಲ್ಲಿ ಜಮೀನನ್ನು ಅಳೆಯಲು ಬಳಸುವ ಸರಪಳಿ ಮುಂತಾದ ಸಲಕರಣೆಗಳನ್ನು ಸಾಗಿಸಲು ಕೆಲಸಗಳಲ್ಲಿ ನೆರವಾಗುತ್ತಾರೆ.

## ಸಾಮಾನ್ಯ ಆಡಳಿತ ಮತ್ತು ಕಂದಾಯ ಆಡಳಿತ

ತಾಲ್ಲೂಕಿನಲ್ಲಿ ಕಸಬಾ, ತಾಳ್ಯ, ಭರಮಣ್ಣನಾಯಕನದುರ್ಗ,ರಾಮಗಿರಿ ಹೋಬಳಿಗಳಿವೆ. ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಮಂಡಳಿಗಳು ಜನತಾ ಪ್ರತಿನಿಧಿ ಸಭೆಗಳಾಗಿವೆ. ಪೊಲೀಸ್, ಆರೋಗ್ಯ, ಶಿಕ್ಷಣ, ಕೃಷಿ, ಮುಂತಾದ ಇಲಾಖೆಗಳು ತಾಲ್ಲೂಕಿನಲ್ಲಿ ಪ್ರಾರಂಭವಾಗಿವೆ. ಪ್ರತಿ ಹೋಬಳಿಯಲ್ಲಿ ಕಂದಾಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ತಹಶೀಲ್ದಾರರ ಕಛೇರಿ ಕಾರ್ಯನಿರ್ವಹಿಸುತ್ತಿದೆ.

ಇದು ತನ್ನ ಉಪ ಕಛೇರಿಯನ್ನು ಹೋಬಳಿ ಮಟ್ಟದಲ್ಲಿ ಹೊಂದಿದೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿ ಕಾರ್ಯನಿರ್ವಹಿಸುತ್ತಾರೆ. ಇತ್ತೀಚೆಗೆ

ಕಂದಾಯ ಇಲಾಖೆ ಗಣಕೀಕೃತಗೊಂಡು ತಾಲ್ಲೂಕಿನ ಸಾರ್ವಜನಿಕರಿಗೆ ಅನುಕೂಲವಾಗಿದೆ. ತಾಲ್ಲೂಕಿನಲ್ಲಿ ತಾಲ್ಲೂಕು ಪತ್ರಾಂಕಿತ ಉಪ ಖಜಾನೆಯು ಸಹ ಕಾರ್ಯನಿರ್ವಹಿಸುತ್ತಿದೆ.

**ಕಂದಾಯ ಆಡಳಿತ**

ಆಡಳಿತ ಯಂತ್ರದ ನಿರ್ವಹಣೆ ಹಾಗೂ ಸಮಾಜ ಕಲ್ಯಾಣ ಕಾರ್ಯಗಳ ವೆಚ್ಚ ನಿರ್ವಹಣೆಗಾಗಿ ಸರ್ಕಾರ ವಿಧಿಸುವ ಭೂಕಂದಾಯ, ಆಸ್ತಿ ತೆರಿಗೆ, ಪ್ರವೇಶ ಶುಲ್ಕ, ವೃತ್ತಿ ತೆರಿಗೆ ಮುಂತಾದವುಗಳು ಹಿಂದಿನಿಂದಲೂ ಜಾರಿಯಲ್ಲಿವೆ. ಅದರಲ್ಲೂ ಕೃಷಿಪ್ರಧಾನ ಸಮಾಜದಲ್ಲಿ ಭೂಕಂದಾಯವೇ ಸರ್ಕಾರಗಳ ಪ್ರಧಾನ ಆದಾಯ ಮೂಲವಾಗಿತ್ತು. ಭೂಮಾಪನ ಆಧಾರಿತ ಕಳನಿ, ಮತ್ತರು, ನಿವರ್ತನ, ಕಂಬ, ಕುಳಗಳೆಂದು ಭೂ ಪ್ರಮಾಣ, ಬಿತ್ತನೆ ಸಾಮರ್ಥ್ಯವನ್ನು ಆಧರಿಸಿದ ಖಂಡುಗ, ಕೊಳಗ, ಬಳ್ಳ ಮುಂತಾದ ಭೂಪ್ರಮಾಣಗಳು ಅಸ್ತಿತ್ವದಲ್ಲಿದ್ದು, ಪ್ರಾಕೃತಿಕ ಅಂಶಗಳ ಜೊತೆಗೆ ಅವುಗಳನ್ನು ಆಧರಿಸಿ ಭೂಕಂದಾಯವನ್ನು ನಿರ್ಧರಿಸಿ ಷಡ್ಭಾಗ, ದಶಭಾಗ, ಕುಳಾಯಿ ಎಂಬ ಹೆಸರಿನಲ್ಲಿ ಅದನ್ನು ಸಂಗ್ರಹಿಸಲಾಗುತ್ತಿತ್ತು. ಭೂಆಡಳಿತಕ್ಕೆ ಸಂಬಂಧಿಸಿದಂತೆ ಜಮೀನಿನ ಗಡಿಯನ್ನು ಗ್ರಾಮ ಗಡಿಯನ್ನು ನಿರ್ಧರಿಸಲು ಪ್ರಾಕೃತಿಕ ಅಂಶಗಳ ಜೊತೆಗೆ ಲಿಂಗಮುದ್ರೆ, ಮುಕ್ಕೊಡೆ, ವಾಮನ ಮುದ್ರೆ ಕಲ್ಲುಗಳನ್ನು ಹಡಿಗಲ್ಲಾಗಿ ನಿಲ್ಲಿಸಲಾಗುತ್ತಿದ್ದ ಅಂಶ ವಿವಿಧ ಶಾಸನಗಳಲ್ಲಿ ವ್ಯಕ್ತವಾಗಿದ್ದು ಗದ್ದೆ, ಹೊಲ,ತೋಟ, ಕೆರೆ ಮುಂತಾದ ಭೂವರ್ಗಗಳ ಉಲ್ಲೇಖವಿದೆ.

ಏಕೀಕರಣದ ನಂತರ ಮತ್ತೆ ೧೯೬೪ ರಲ್ಲಿ ಕಂದಾಯ ನಿಗದಿ ಪರಿಷ್ಕರಣಾ ಸರ್ವೇಕ್ಷಣ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಅದರಂತೆ ಪ್ರತಿಯೊಂದು ಜಮೀನನ್ನು ಕರಾರುವಕ್ಕಾಗಿ ಅಳೆದು ಹವಾಗುಣ, ನೀರಾವರಿ ಮೂಲ, ಮಾರುಕಟ್ಟೆ ಸೌಲಭ್ಯ, ಸಾರಿಗೆ ಸೌಕರ್ಯ ಮುಂತಾದವುಗಳನ್ನು ಪರಿಗಣಿಸಿ ಭೂಮಿಯನ್ನು ವರ್ಗೀಕರಿಸಿ ಪ್ರತಿವರ್ಗದ ಜಮೀನಿಗೂ ದರವನ್ನು ನಿಗದಿ ಪಡಿಸಲಾಯಿತು.

**ನೀರಾವರಿ ಕರ**: ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ಕೆರೆ, ಹೊಂಡ, ಕಾಲುವೆ, ಜಂಗಲ್ ಹಳ್ಳ ಮುಂತಾದ ಜಲಮೂಲಗಳ ನೀರಾವರಿ ಸೌಕರ್ಯ ಹೊಂದಿರುವ ಜಮೀನಿಗೆ ವಿಧಿಸಿದ ಶುಲ್ಕವಾಗಿದೆ. ಇದನ್ನು ಕೂಡ ಸರ್ವೇಕ್ಷಣ ಇಲಾಖೆಯೇ ನೀರಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿವರ್ಷ ನಿಗದಿಪಡಿಸುತ್ತಿತ್ತು.

**ನಿರ್ವಹಣೆ ಕರ**: ಕರ್ನಾಟಕ ನೀರಾವರಿ ಕಾಯ್ದೆ (೧೯೫೭)ಯಡಿ ಎಕರೆಗೆ ಪ್ರತಿವರ್ಷಕ್ಕೆ ನಾಲ್ಕು ನಿರ್ವಹಣಾ ಕರವನ್ನು ಆಕರಿಸಿ ವಸೂಲು ಮಾಡಲಾಗುತ್ತದೆ. ಸತತ ಎರಡು ವರ್ಷಕ್ಕಿಂತ ಹೆಚ್ಚು ಅವಧಿ ಜಮೀನಿಗೆ ನೀರು ಪೂರೈಕೆಯಾಗದಿದ್ದರೆ ಇದರ ಆಕರಣೆ ಮಾಡುವಂತಿಲ್ಲ. ಅಭಿವೃದ್ಧಿ ಶುಲ್ಕ ಹಾಗೂ ನೀರಾವರಿ ಕರಗಳನ್ನು

ವಿಧಿಸುವ ಏಕಪ್ರಕಾರದ ನೀರಾವರಿ ಕಾಯ್ದೆಯನ್ನು ೧೯೫೭ರಲ್ಲೂ, ಮೈಸೂರು ನೀರಾವರಿ ನಿಯಮವನ್ನು ೧೯೬೫ರಲ್ಲೂ ಜಾರಿಗೊಳಿಸಲಾಯಿತು.

**ನೀರಿನ ದಂಡ**: ನೀರಾವರಿ ಇಲಾಖೆಯಿಂದ ಪರವಾನಗಿ ಪಡೆಯದೆ ನೀರನ್ನು ಬಳಸಿಕೊಂಡರೆ ಸಾಮಾನ್ಯ ನೀರಿನ ದರದ ೧೫ ಪಟ್ಟು ಹಾಗೂ ಅಧಿಸೂಚಿತ ಬೆಳೆಗಳಿಗೆ ಬದಲು ಬೇರೆ ಬೆಳೆದರೆ ಸಾಮಾನ್ಯ ದರದ ೧೦ ಪಟ್ಟು ಹೆಚ್ಚು ದಂಡ ವಿಧಿಸಲಾಗುತ್ತದೆ. ಸರ್ವೇಕ್ಷಣ ಇಲಾಖೆಯು ಸಿದ್ಧಪಡಿಸಿದ ಪಹಾನಿಸೂಡ್ ಹಾಗೂ ಆಕರಬಂಧಿ ದಫ್ತರುಗಳ ನೆರವಿನೊಂದಿಗೆ ಗ್ರಾಮಲೆಕ್ಕಿಗರು ಖೇತವಾರು ದಾಖಲೆಗಳನ್ನು ರಚಿಸಿಕೊಳ್ಳುತ್ತಾರೆ. ಇದನ್ನಾಧರಿಸಿದ ಗ್ರಾಮದ ಜಮೀನಿನ ಒಡೆತನ ಗೇಣಿ, ಆಕರ ಹಾಗೂ ಬೆಳೆಗಳ ಬಗ್ಗೆ ಮಾಹಿತಿಯನ್ನು ಹೊಂದಿರುವ ಪ್ರಮುಖ ದಾಖಲೆಯಾಗಿದೆ. ಭೂ ಒಡೆತನಕ್ಕೆ ಸಂಬಂಧಿಸಿದ ಎಲ್ಲಾ ಮಾರ್ಪಾಡುಗಳನ್ನು ಇದರಲ್ಲಿ ದಾಖಲಿಸಲಾಗುತ್ತದೆ. ಈ ಮೂಲ ದಾಖಲೆಗಳನ್ನು ತಾಲ್ಲೂಕು ಕಛೇರಿಯಲ್ಲಿ ಸಂರಕ್ಷಿಸಿಡಲಾಗುತ್ತಿದ್ದು, ಐದು ವರ್ಷಗಳಿಗೊಮ್ಮೆ ಈ ದಾಖಲೆಗಳನ್ನು ನವೀಕರಿಸಲಾಗುತ್ತದೆ.

ಖಾತ ದಫ್ತರ್ ಇನ್ನೊಂದು ಮಹತ್ವದ ದಾಖಲೆಯಾಗಿದ್ದು, ಪ್ರತೀ ವರ್ಷ ಜುಲೈ ಒಂದರಂದು ತೆರೆಯಲಾಗುವ ಇದರಲ್ಲಿ ಆರ್.ಟಿ.ಸಿ ಖಿರ್ದಿ (ದಿನವಹಿಕಡತ) ರಸೀದಿ ಪುಸ್ತಕ, ಭೂಕಂದಾಯಕ್ಕೆ ಸಂಬಂಧಿಸಿದಂತೆ ಖಾತಾದಾರನ ಬಾಕಿ ವಿವರ ಪರಿವರ್ತನಾ ಶುಲ್ಕ ಹಾಗೂ ಇತರೆ ದಂಡ ಇತ್ಯಾದಿ ಮಾಹಿತಿ ಇರುತ್ತದೆ. ಈ ದಫ್ತರನ್ನು ಜೂನ್ ೩೦ರಂದು ಮುಕ್ತಾಯಗೊಳಿಸಿ ಗ್ರಾಮಗಳ ವಾರ್ಷಿಕ ಲೆಕ್ಕಪತ್ರವನ್ನು ಅಂತಿಮಗೊಳಿಸಲಾಗುತ್ತದೆ. ಆಯಾ ರೈತರ ಬಳಿ ಅವರವರ ಜಮೀನಿಗೆ ಸಂಬಂಧಿಸಿದಂತೆ ಇರುವ ಪಟ್ಟ ಅಥವಾ ರೈತರ ರಸೀತಿ ಪುಸ್ತಕದಲ್ಲಿ ರೈತರು ಪಾವತಿಸಿದ ಕಂದಾಯ ಹಾಗೂ ಬಾಕಿ ವಿವರಗಳಿರುತ್ತವೆ.

ಗ್ರಾಮಲೆಕ್ಕಿಗರು ನೋಂದಣಿಗೊಂಡ ಎಲ್ಲಾ ಭೂ ವ್ಯವಹಾರಗಳಲ್ಲೂ ಆಯಾ ರೈತರ ಪಟ್ಟದಲ್ಲಿ ಕಡ್ಡಾಯವಾಗಿ ನಮೂದಿಸುವುದು ಅಲ್ಲದೇ ರೈತನು ಸರ್ಕಾರದಿಂದ ಪಡೆಯುವ ಸಾಲ, ಕೊಡಬೇಕಾದ ಬಾಕಿ, ಅಡಮಾನ ವಿವರಗಳನ್ನು ಇದರಲ್ಲಿ ದಾಖಲಿಸಲಾಗುತ್ತದೆ. ಇದನ್ನು ಕಂದಾಯ ದಾಖಲೆ ಶಿರಸ್ತೇದಾರರು ಪರಿಶೀಲಿಸಿ ಧೃಢೀಕರಿಸುತ್ತಾರೆ. ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರರು ತಪಾಸಣೆ ಪ್ರವಾಸ ಸಂದರ್ಭದಲ್ಲಿ ಇದನ್ನು ರೈತರು ಮೌಖಿಕ ವಿವರಣೆಯೊಂದಿಗೆ ತಾಳೆ ಮಾಡುವ ಮೂಲಕ ಪರಶೀಲಿಸುತ್ತಾರೆ.

**ವಾರ್ಷಿಕ ಲೆಕ್ಕಾಚಾರ (ದಿಲ್ವಾರು)**: ಪ್ರತಿ ವರ್ಷ ಜೂನ್ ಅಂತ್ಯಕ್ಕೆ ಪ್ರತಿ ಗ್ರಾಮದ ವಾರ್ಷಿಕ ಲೆಕ್ಕ ಪತ್ರವನ್ನು ಸಿದ್ಧಪಡಿಸುವ ತಾಲ್ಲೂಕು ಕಛೇರಿಯ ದಫ್ತರಿನೊಂದಿಗೆ ತಾಳೆ ಮಾಡಿ ಪರಿಶೀಲಿಸಿ ಗ್ರಾಮಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಾಗೂ ವಾಸ್ತವಿಕ ಕಂದಾಯ ಸಂಗ್ರಹ ವಿವರಗಳನ್ನು ಖಚಿತ ಪಡಿಸಿಕೊಳ್ಳಲಾಗುತ್ತದೆ.

## ಸಾರ್ವತ್ರಿಕ ಆಡಳಿತ

**ಜಮಾ ಬಂದಿ:** ಪ್ರತೀ ಗ್ರಾಮದ ಕಂದಾಯ ಆಡಳಿತವನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿರುವ ವಾರ್ಷಿಕ ಜಮಾಬಂದಿ ಪದ್ಧತಿ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಹಿಂದೆ ಇದನ್ನು ದಸರಾ ರಜೆಯ ನಂತರ ಆರಂಭಿಸಲಾಗುತ್ತಿದ್ದು, ಜಮಾಬಂದಿ ಕಾರ್ಯದ ರೂಪುರೇಷೆಯನ್ನು ಜಿಲ್ಲಾಧಿಕಾರಿಗಳು ಅಂತಿಮ ಗೊಳಿಸುತ್ತಿದ್ದರು. ಇದು ಜಮೀನಿನ ಗಡಿ, ಸಾಲುಮರಗಳ ಪ್ರಗತಿ ಹಾಗೂ ಇತರ ನೀರಾವರಿ ಕಾರ್ಯಗಳ ಪರಿಶೀಲನೆಯನ್ನು ಹೊಂದಿರುತ್ತಿತ್ತು. ಆದರೆ ಕ್ರಮೇಣ ಗ್ರಾಮಲೆಕ್ಕಿಗರ ಲೆಕ್ಕ ಪತ್ರ ಪರಿಶೀಲನೆ ತಕರಾರು ತಃಖ್ತೆ ಹಾಗೂ ದರಖಾಸ್ತುಗಳನ್ನು ಬಗೆಹರಿಸುವುದು, ಪಟ್ಟಗಳ ವರ್ಗಾವಣೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸುವುದು, ಸರ್ಕಾರ ವಿವಿಧ ಕಂದಾಯಗಳ ಆಕರ, ಸ್ವೀಕಾರ ಹಾಗೂ ಬಾಕಿ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸುವುದೇ ಮುಂತಾದವೂ ಸೇರಲ್ಪಟ್ಟವು. ಅಲ್ಲದೇ ಸರ್ಕಾರಿ ಭೂಮಿಯ ಒತ್ತುವರಿ ಗ್ರಾಮದ ಸಾಗುವಳಿ ಸ್ಥಿತಿಗತಿಗಳನ್ನು ಪರಿಶೀಲಿಸುವುದು ಜಮಾಬಂದಿ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

**ದಿತ್ತಂ (ದಿಟ್ಟಂ)**: ಜಮಾಬಂದಿ ಹಾಗೂ ಹುಜೂರು ಜಮಾಬಂದಿ, ಜಮಾಬಂದಿಯ ಎರಡು ವಿಧಗಳಾಗಿದ್ದು, ದಿತ್ತಂ ಜಮಾಬಂದಿಯನ್ನು ಆಯಾ ತಾಲ್ಲೂಕಿನ ತಹಶೀಲ್ದಾರರು ನಡೆಸುತ್ತಾರೆ. ಇದನ್ನು ಡಿಸೆಂಬರ್ ತಿಂಗಳ ಅಂತ್ಯದ ವೇಳೆಗೆ ಹುಜೂರು ಜಮಾಬಂದಿಗೆ ಪೂರ್ವಭಾವಿಯಾಗಿ ಒಂದು ತಿಂಗಳ ಮೊದಲೇ ಮುಗಿಸಬೇಕಾಗುತ್ತದೆ. ಈ ಜಮಾಬಂದಿಯಲ್ಲಿ ಹಿಂದಿನ ಸಾಲಿನ ಕಂದಾಯ ಲೆಕ್ಕವನ್ನು ಸಿದ್ಧಗೊಳಿಸಲಾಗುತ್ತದೆ. ಆ ಸಂದರ್ಭದಲ್ಲಿ ಹಿಂದಿನ ಸಾಲಿಗಾಗಿ ೧೩ ವಿವಿಧ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ.

ಜಿಲ್ಲಾಧಿಕಾರಿ ಅಥವಾ ಉಪವಿಭಾಗಾಧಿಕಾರಿಗಳು ಆಕ್ಟೋಬರ್ ಡಿಸೆಂಬರ್ ತಿಂಗಳಲ್ಲಿ ನಡೆಸುವ ವಾರ್ಷಿಕ ಲೆಕ್ಕಪತ್ರ ತಪಾಸಣೆಯೇ ಹುಜೂರು ಜಮಾಬಂದಿ ಆಗಿದ್ದು, ಆ ಸಂದರ್ಭದಲ್ಲಿ ಹಿಂದಿನ ವರ್ಷದ ಗ್ರಾಮಲೆಕ್ಕ ಪತ್ರಗಳ ತಪಾಸಣೆ ಹಾಗೂ ಇತರ ಬಾಕಿಗಳ ಬಗ್ಗೆ ನಿರ್ಧರಿಸಲಾಗುತ್ತದೆ. ಜಮಾಬಂದಿ ಅಧಿಕಾರಿಯು ಗ್ರಾಮ ಅಥವಾ ವಲಯಕ್ಕೆ ಭೇಟಿ ನೀಡಿದಾಗ ರೈತರ ಅಹವಾಲುಗಳನ್ನು ಆಲಿಸಿ, ಪರಿಹರಿಸಲು ಅನುಕೂಲವಾಗುವಂತೆ ಜಮಾಬಂದಿ ದಿನಾಂಕವನ್ನು ಮೊದಲೇ ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ.

### ಭೂಕಂದಾಯ ವಸೂಲಿ

ಅನಾದಿಕಾಲದಿಂದಲೂ ಕಂದಾಯ ಪಾವತಿಸುವುದು ರೈತಾಪಿ ಜನರ ಋಣಭಾರವಾಗಿತ್ತು, ಆರಂಭದಲ್ಲಿ ಧಾನ್ಯರೂಪದಲ್ಲೂ, ನಾಣ್ಯಪದ್ಧತಿ ಚಲಾವಣೆಗೆ ಬಂದ ನಂತರ ಧನರೂಪದಲ್ಲೂ ಕಂದಾಯ ಸಂಗ್ರಹಿಸಲಾಗುತ್ತಿತ್ತು. ಕಾಲದಿಂದ

ಕಾಲಕ್ಕೆ ಕಂದಾಯ ಪ್ರಮಾಣದಲ್ಲಿ ವ್ಯತ್ಯಾಸವಿದ್ದು, ಉತ್ಪನ್ನದ ೧/೬ ಭಾಗದಿಂದ ೧/೨ ಭಾಗವನ್ನು ತೆರಿಗೆಯಾಗಿ ಸಂಗ್ರಹಿಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ಹಿಂದೆ ಫೆಬ್ರವರಿಯಿಂದ ಮೇ ತಿಂಗಳವರೆಗೆ ನಾಲ್ಕು ಕಂತುಗಳಲ್ಲಿ ಭೂಕಂದಾಯ ಸಲ್ಲಿಸಲು ಅವಕಾಶವಿತ್ತು. ಆದರೆ, ೧೯೬೪ ರ ಕರ್ನಾಟಕ ಭೂಕಂದಾಯ ಅಧಿನಿಯಮದನ್ವಯ ಭೂಕಂದಾಯ ಹಾಗೂ ಇತರೆ ಬಾಕಿ ವಸೂಲಿಯನ್ನು ಜನವರಿಯಿಂದ ಜೂನ್‌ವರೆಗೆ ಮಾಡಲಾಗುತ್ತದೆ. ಭೂಕಂದಾಯವನ್ನು ನಾಲ್ಕು ಸಮಾನ ಕಂತುಗಳಲ್ಲಿ ಜನವರಿಯಿಂದ ಏಪ್ರಿಲ್ ತಿಂಗಳವರೆಗೆ ಆಯಾ ತಿಂಗಳ ೩೦ನೇಯ ತಾರೀಖಿನೊಳಗೆ ಪಾವತಿಸಬೇಕಾಗಿದ್ದು, ಐದು ರೂಪಾಯಿಗಿಂತ ಕಡಿಮೆ ಕಂದಾಯವಿದ್ದಲ್ಲಿ ಜನವರಿ ತಿಂಗಳಲ್ಲೇ ಪೂರ್ಣ ಪಾವತಿಸಬಹುದಾಗಿದೆ.

## ಕಂದಾಯ ಮಾಫಿ

ಪ್ರಾಚೀನ ಕಾಲದಿಂದಲೂ ಅತಿವೃಷ್ಟಿ-ಅನಾವೃಷ್ಟಿಗಳಿಂದಾಗಿ ಕ್ಷಾಮಡಾಮರಗಳು ಬಂದ ಸಂದರ್ಭದಲ್ಲಿ ಕಂದಾಯ ಮನ್ನಾ ಮಾಡುವ ಸಂಪ್ರದಾಯವಿತ್ತು. ಆದರೆ ಅದನ್ನು ಸಮರ್ಥಿಸುವ ಶಾಸನಾಧಾರಗಳು ವಿರಳವಾಗಿದ್ದರೂ ಕೌಟಿಲ್ಯನ ಅರ್ಥಶಾಸ್ತ್ರವೂ ಸೇರಿದಂತೆ ಅನೇಕ ಧರ್ಮಗ್ರಂಥಗಳಲ್ಲಿ ಈ ಬಗ್ಗೆ ಪ್ರಸ್ತಾಪವಿದೆ, ಆದರೂ ೧೯೨೨ ರವರೆಗೆ ಸಂಸ್ಥಾನದಲ್ಲಿ ಕಂದಾಯ ಮನ್ನಾಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಕಾಯ್ದೆಗಳಿರಲಿಲ್ಲ. ಆದರೆ ೧೯೨೨ರ ಕಾಯ್ದೆಯ ನೀರಾವರಿ ಜಮೀನುಗಳಿಗೆ ಕಂದಾಯ ಮಾಫಿ ಸೌಲಭ್ಯವನ್ನು ಕಲ್ಪಿಸಿದ್ದು, ರದ್ದುಮಾಡಿದ್ದ ಕಂದಾಯವನ್ನು ಮರುವರ್ಷ ಪಾವತಿಸಬೇಕಾಗಿತ್ತು. ೧೯೬೬ರ ಭೂ ಕಂದಾಯ ಕಾಯ್ದೆಯನ್ವಯ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರರು ಅಂತಹ ಪ್ರದೇಶಗಳಲ್ಲಿ ಪ್ರಯೋಗಾರ್ಥವಾಗಿ ಕೆಲವೆಡೆ ಬೆಳೆಯನ್ನು ಕಟಾವು ಮಾಡಿ, ಇಳುವರಿ ಆಧಾರದ ಮೇಲೆ ಆದ ನಷ್ಟವನ್ನು ಪರಿಗಣಿಸಿ, ಕಂದಾಯ ಮನ್ನಾ ನೀತಿಯನ್ನು ನಿರ್ಧರಿಸುತ್ತಿದ್ದರು. ಆಗ ಜಮೀನಿನ ಬೆಳೆವಾರು ಸರಾಸರಿ ಇಳುವರಿಯೂ ಎಕರೆಗೆ ಶೇ.೩೫ ಕ್ಕಿಂತ ಕಡಿಮೆ ಇದ್ದರೆ ಪೂರ್ಣ ಕಂದಾಯ ರದ್ದತಿಗೆ ಅವಕಾಶವಿರಲಿಲ್ಲ. ಇದು ತಾತ್ಕಾಲಿಕ ರದ್ದತಿಯಾಗಿದ್ದು ಮರುವರ್ಷ ಚಾಲ್ತಿ ಕಂದಾಯದೊಂದಿಗೆ ಹಿಂದಿನ ವರ್ಷದ್ದನ್ನು ಸಂಗ್ರಹಿಸಲಾಗುತ್ತಿತ್ತು. ಕೆಲವೊಮ್ಮೆ ವಾರ್ಷಿಕ ಬರಗಾಲಕ್ಕೆ ತುತ್ತಾದ ಪ್ರದೇಶಗಳು ಮೂರು ವರ್ಷ ಅವಧಿ ಕಂದಾಯ ಮಾಫಿ ನೀಡುವ ಅಧಿಕಾರವಿತ್ತು, ಆದರೆ ಅವನ್ನು ನಾಲ್ಕನೆಯ ವರ್ಷದಲ್ಲಾದರೂ ಬೆಳೆ ಆಧಾರದ ಮೇಲೆ ಪಾವತಿಮಾಡಬೇಕಾಗಿತ್ತು. ರಾಜ್ಯ ಸರ್ಕಾರದ ೧೯೭೭ ರ ಕಾಯ್ದೆಯಂತೆ ಎರಡು ಹೆಕ್ಟೇರು ಮಳೆಯಾಶ್ರಿತ ಜಮೀನನ್ನು ಹೊಂದಿರುವ ಸಣ್ಣ ಹಿಡುವಳಿದಾರರಿಗೆ ಕಂದಾಯ ಮಾಫಿ ನೀಡಲು ಅವಕಾಶವಿದ್ದರೂ ಒಂದು ರೂಪಾಯಿಯನ್ನು ಕಂದಾಯ ದಾಖಲೆ ನಿರ್ವಹಣೆಗಾಗಿ ಸಂಗ್ರಹಿಸಲಾಗುತ್ತಿತ್ತು.

ಮುಂದೆ ೧೯೮೦ರಲ್ಲಿ ಈ ಸವಲತ್ತನ್ನು ನಾಲ್ಕು ಎಕರೆವರೆಗೂ ಮಳೆಯಾಶ್ರಿತ ಇಲ್ಲವೇ ನೀರಾವರಿಯಾಶ್ರಿತ ಜಮೀನುಗಳಿಗೂ ವಿಸ್ತರಿಸಲಾಯಿತು. ನಿಯಮದಂತೆ ನಾನಾ ಕಾರಣಗಳಿಂದ ತಾಲ್ಲೂಕಿನಲ್ಲಿ ಕ್ಷಾಮಡಾಮರಗಳು ಎದುರಾದ ಸಂದರ್ಭದಲ್ಲಿ ಕಂದಾಯ ಮಾಫಿ ನೀಡಲಾಗುತ್ತದೆ.

## ಇನಾಂ ಭೂಮಿ

ಪ್ರಾಚೀನ ಕಾಲದಲ್ಲಿ ಧಾರ್ಮಿಕ ಕಾರಣಗಳಿಗಾಗಿ ದೇವಾಲಯ, ಧಾರ್ಮಿಕ ಸಂಸ್ಥೆಗಳಿಗೆ, ಯೋಧರಿಗೆ, ವಿವಿಧ ವ್ಯಕ್ತಿಗಳಿಗೆ ಭೂಮಿಯನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು. ಆದರೆ ೧೮ನೇ ಶತಮಾನದಿಂದೀಚೆಗೆ ಭೂಮಿಯನ್ನು ಇನಾಂ ನೀಡುವ ಪದ್ಧತಿ ಇಳಿಮುಖಗೊಂಡಿತು. ೧೯ ನೇಯ ಶತಮಾನದಲ್ಲಿ ಧರ್ಮಛತ್ರ, ತೋಪು, ಕೆರೆ, ಸಾಲುಮರ, ಮುಂತಾದ ಸಮಾಜ ಕಲ್ಯಾಣ ಕಾರ್ಯಗಳಿಗೆ ಮಾತ್ರ ಇದು ಸೀಮಿತವಾಗಿತ್ತು. ಆದರೂ ಸರ್ವಮಾನ್ಯ, ಜೋಡಿ ಹಾಗೂ ಕಾಯಂಗುತ್ತ ಗ್ರಾಮಗಳು ಚಾಲ್ತಿಯಲ್ಲಿದ್ದವು. ಈ ಸಂಬಂಧ ೧೮೬೩ ರಲ್ಲಿ ಇನಾಂ ಆಯೋಗವನ್ನು ರಚಿಸಲಾಗಿತ್ತು. ೧೮೬೩-೧೯೩೨ ರ ಅವಧಿಯಲ್ಲಿ ಅನೇಕ ಇನಾಂ ಆಯೋಗಗಳು ರಚಿಸಲ್ಪಟ್ಟಿದ್ದು, ಇನಾಂ ಗ್ರಾಮಗಳ ರದ್ದತಿಗಾಗಿ ಒತ್ತಾಯವಿತ್ತು.

ಈ ಸಂಬಂಧ ೧೯೪೮ ರಲ್ಲಿ ರಚಿಸಲ್ಪಟ್ಟಿದ್ದ ಸಮಿತಿಯು ನೀಡಿದ ಶಿಫಾರಸ್ಸಿನಂತೆ ೧೯೫೫ ರಲ್ಲಿ ಮೈಸೂರು ಇನಾಂ ರದ್ದತಿ ಕಾಯ್ದೆ ಹಾಗೂ ಮೈಸೂರು ಧಾರ್ಮಿಕ ದತ್ತಿ ರದ್ದತಿ ಕಾಯ್ದೆಗಳು ಜಾರಿಗೆ ಬಂದವು. ಅದರಂತೆ ತಾಲ್ಲೂಕಿನಲ್ಲಿದ್ದ ಜೋಡಿ ಗ್ರಾಮ ಹಾಗೂ ಇನಾಂ ಭೂಮಿಗಳು ರದ್ದಾದವು. ಆದರೆ ಧಾರ್ಮಿಕ ಸಂಸ್ಥೆಗಳಿಗೆ ಇನಾಂಗೆ ಬದಲು ತಸ್ತಿಕ್ ಭತ್ಯೆಯನ್ನು ನಿಗದಿಪಡಿಸಿ ನೀಡಲು ಸರ್ಕಾರ ಕ್ರಮ ತೆಗೆದುಕೊಂಡಿತು. ಈ ಭತ್ಯೆಯನ್ನು ಆ ಸಂಸ್ಥೆಯು ಅಸ್ತಿತ್ವದಲ್ಲಿರುವವರೆಗೆ ವರ್ಷಂಪ್ರತಿ ನೀಡಲಾಗುತ್ತದೆ. ಇದು ಸಾಮಾನ್ಯವಾಗಿ ಸಂಸ್ಥೆಯ ಐದು ವರ್ಷದ ಆದಾಯಕ್ಕೆ ಸಮನಾಗಿದ್ದು, ಮೊತ್ತವನ್ನು ಜಿಲ್ಲಾಧಿಕಾರಿ ನಿರ್ಧರಿಸುತ್ತಾರೆ. ಇದೇ ರೀತಿ ೧೯೬೧ ರ ಕರ್ನಾಟಕ ಭೂಸುಧಾರಣ ಕಾಯ್ದೆಯನ್ವಯ ಇನಾಂ ಜಮೀನು ಕಳೆದುಕೊಂಡ ಸಂಸ್ಥೆಗಳಿಗೂ ತಸ್ತಿಕ್ ಭತ್ಯೆಯನ್ನು ಅದರ ವಾರ್ಷಿಕ ಮಂಜೂರಾತಿಯನ್ನು ಜಿಲ್ಲಾಧಿಕಾರಿಗಳೇ ನೀಡುತ್ತಾರೆ.

## ಭೂಸುಧಾರಣೆ

ಗೇಣಿದಾರಿ ಸಮಸ್ಯೆಯನ್ನು ಬಗೆಹರಿಸಲು ೧೯೫೭ ರಲ್ಲಿ ಬಿ.ಡಿ.ಜತ್ತಿ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿ ಹಾಗೂ ಕೃಷಿಭೂಮಿ ಕಾನೂನು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿ ನೀಡಿದ ಶಿಫಾರಸ್ಸನ್ನು ಆಧರಿಸಿದ ಕಾಯ್ದೆಗೆ ೧೯೬೨

ರಲ್ಲಿ ರಾಷ್ಟ್ರಪತಿಗಳ ಸಮ್ಮತಿ ಲಭಿಸಿ ಅದು ೧೯೬೫ ರ ಅಕ್ಟೋಬರ್‌ನಲ್ಲಿ ರಾಜ್ಯದಲ್ಲಿ ಜಾರಿಗೆ ಬಂದಿತು. ಇದು ಮೇಲಿಂದ ಮೇಲೆ ೧೯೭೪ರ ವರೆಗೆ ಆರು ಬಾರಿ ತಿದ್ದುಪಡಿ ಕಂಡಿತು. ಅಂತಿಮ ತಿದ್ದುಪಡಿ ೧೯೭೪ರ ಪ್ರಕಾರ 'ಉಳುವವನಿಗೇ ಭೂಮಿ' ಎಂಬುದೇ ಘೋಷಣಾ ಮಂತ್ರವಾಯಿತು. ಅದರಂತೆ ಕೃಷಿ ಕಾರ್ಮಿಕರು, ಭೂರಹಿತ ಪರಿಶಿಷ್ಟ ಜಾತಿ ಮತ್ತು ಪಂಗಡದವರೂ, ಭೂ ಒಡೆಯರಾಗಲು ಸಾಧ್ಯವಾಯಿತು. ಈ ಕಾಯ್ದೆಯ ಪ್ರಕಾರ ಕುಟುಂಬವು ಗಂಡ, ಹೆಂಡತಿ, ಅವರ ಅಪ್ರಾಪ್ತ ವಯಸ್ಸಿನ ಗಂಡು ಹಾಗೂ ಅವಿವಾಹಿತ ಹೆಣ್ಣು ಮಕ್ಕಳನ್ನು ಒಳಗೊಂಡಿದ್ದು, ಪ್ರತಿ ಕುಟುಂಬವು ಹೊಂದಿರಬಹುದಾದ ಜಮೀನಿನ ಗರಿಷ್ಟ ಮಿತಿಯನ್ನು ಕಡಿಮೆ ಮಾಡಲಾಯಿತು. ಅಲ್ಲದೇ ಕೃಷಿಯೇತರ ಮೂಲಗಳಿಂದ ವಾರ್ಷಿಕ ರೂ ೧೨,೦೦೦ ಕ್ಕಿಂತ ಹೆಚ್ಚು ವರಮಾನವನ್ನು ಪಡೆಯುವವರು ನಿಶ್ಚಿತ ಕರಾರುಗಳ ಹೊರತಾಗಿ ಭವಿಷ್ಯದಲ್ಲಿ ಕೃಷಿ ಜಮೀನು ಖರೀದಿಸುವುದನ್ನು ಶಾಸನ ನಿಷೇಧಿಸಿತು.

ಈ ಕಾಯ್ದೆಯನ್ವಯ ಸೈನಿಕರು ಹಾಗೂ ನಾವಿಕರ ಹೊಲಗಳನ್ನು ಹೊರತುಪಡಿಸಿ ಉಳಿದಂತೆ ಇದ್ದ ಗೇಣಿದಾರಿ ಪದ್ಧತಿ ರದ್ದಾಗಿ ಭೂ ಮಾಲೀಕ ಗೇಣಿದಾರ ಸಂಬಂಧ ಅಂತ್ಯವಾಯಿತು. ಸ್ವಂತ ಉಳುಮೆ ಮಾಡುವವರಿಗೆ ಮಾತ್ರ ಭೂ ಒಡೆತನದ ಹಕ್ಕನ್ನು ಈ ಕಾಯ್ದೆ ನೀಡುತ್ತದೆ. ಅದರಂತೆ ಕುಟುಂಬದ ಸದಸ್ಯರ ನೆರವಿನೊಂದಿಗೆ ಸ್ವಂತ ಉಳುಮೆ ಇಲ್ಲವೇ ಕೂಲಿಯಾಳುಗಳಿಗೆ ನಗದು ಕೂಲಿ ನೀಡಿ ಉಳುಮೆ ಮಾಡಿಸಬಹುದೇ ಹೊರತು ಧಾನ್ಯ ರೂಪದಲ್ಲಲ್ಲ. ಈ ಕಾಯ್ದೆಯನ್ವಯ ತಾಲ್ಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಲ್ವರು ಸರ್ಕಾರೇತರ ಸದಸ್ಯರನ್ನೊಳಗೊಂಡ ಭೂ ನ್ಯಾಯಮಂಡಳಿಯನ್ನು ಸ್ಥಾಪಿಸಲಾಯಿತು.

ಭೂ ಸುಧಾರಣೆ ಕಾಯ್ದೆಯಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲೆಂದೇ ಇದನ್ನು ರಚಿಸಲಾಗಿದ್ದು, ದುರ್ಬಲ ಗೇಣಿದಾರರ ನೆರವಿಗೆಂದು ಸರ್ಕಾರವು ಕಾನೂನು ಸಲಹಾ ಕೋಶಗಳನ್ನು ಸಚಿವಾಲಯದಲ್ಲಿ ಸ್ಥಾಪಿಸಿದ್ದು, ಅನ್ಯಾಯಕ್ಕೊಳಗಾದ ಗೇಣಿದಾರರು ರಕ್ಷಣೆ ಪಡೆಯಬಹುದಾಗಿದೆ. ಈ ಕಾಯ್ದೆಯನ್ವಯ ಸರ್ಕಾರ ಸ್ವಾಧೀನಪಡಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಸ್ಥಾನಭ್ರಷ್ಟ ಗೇಣಿದಾರರಿಗೆ, ಕೃಷಿ ಕೂಲಿಗಳಿಗೆ, ಭೂ ರಹಿತರಿಗೆ ಹಾಗೂ ೨,೦೦೦ ರೂ ಗಳಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಮಾಜಿ ಸೈನಿಕರಿಗೆ ವಿತರಿಸಬಹುದಾಗಿದ್ದು, ಹೆಚ್ಚುವರಿ ಭೂಮಿಯ ಶೇ.೫೦ ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆಂದೇ ಮೀಸಲಿಡಲಾಗಿದೆ.

ತಾಲ್ಲೂಕು ಮಟ್ಟದ ಭೂ ನ್ಯಾಯಮಂಡಳಿ ತೀರ್ಮಾನದ ವಿರುದ್ಧ ಮೇಲ್ಮನವಿ ಹೋಗಲು ಜಿಲ್ಲಾಮಟ್ಟದಲ್ಲಿ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿತ್ತು. ಆದರೆ ಇದನ್ನು ೧೯೯೦ ರಲ್ಲಿ ಸರ್ಕಾರ ರದ್ದುಗೊಳಿಸಿದೆ.

ಭೂಮಿಯನ್ನು ಸಮಾಜದ ದುರ್ಬಲ ವರ್ಗದವರೊಂದಿಗೆ ಭೂ ರಹಿತರಿಗೆ ಹಾಗೂ ಇತರ ಅರ್ಹರಿಗೆ ನೀಡುವ ನೀತಿಯನ್ನು ಆರಂಭದಲ್ಲಿ ಸರ್ಕಾರವು ಅನುಸರಿಸುತ್ತಿತ್ತು, ಆದರೆ ೧೯೭೪ರಿಂದೀಚೆಗೆ ಗ್ರಾಮದಲ್ಲಿ ವಾಸಿಸುವ ಭೂ ರಹಿತರಿಗೆ ಆದ್ಯತೆಯ ಮೇಲೆ ನೀಡಬೇಕೆಂಬ ನಿಯಮ ಚಾಲನೆ ಬಂದಿತು. ಈ ರೀತಿ ಭೂಮಿ ಪಡೆದವರು ಮೂರು ವರ್ಷದೊಳಗೆ ಅದನ್ನು ಸಾಗುವಳಿಗೆ ಒಳಪಡಿಸಬೇಕು. ಸ್ವಂತ ಉಳುಮೆ ಮಾಡಬೇಕು, ಅಲ್ಲದೆ ಅದನ್ನು ೧೫ ವರ್ಷ ಪರಭಾರೆ ಮಾಡುವಂತಿಲ್ಲ, ಈ ಸಂಬಂಧ ಭೂವಿಲೇವಾರಿ ಅರ್ಜಿಯ ಪರಿಶೀಲನೆ, ವಿಚಾರಣೆ ಹಾಗೂ ವಿತರಣೆಗಳನ್ನು ಉಸ್ತುವಾರಿಯನ್ನೂ ತಹಶೀಲ್ದಾರರೇ ನೋಡಿಕೊಳ್ಳುತ್ತಾರೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಯಾವುದೇ ಜಮೀನನ್ನೂ ಸ್ವಾಧೀನ ಪಡಿಸಿಕೊಳ್ಳುವ ಹಕ್ಕನ್ನು ಹೊಂದಿರುವ ಸರ್ಕಾರ ಆ ಸಂಬಂಧ ೧೯೮೧ರ ಕಾಯ್ದೆಯಂತೆ ಸಾರ್ವಜನಿಕರ ತಿಳುವಳಿಕೆಗಾಗಿ ಅಧಿಸೂಚನೆಯನ್ನು ಹೊರಡಿಸಿ ಜಿಲ್ಲಾಧಿಕಾರಿಗಳ ಮೂಲಕ ಪ್ರಕಟಿಸಲಾಗುತ್ತದೆ. ಅ ತತ್ಸಂಬಂಧ ಬರುವ ಸಾರ್ವಜನಿಕ ಅಹವಾಲನ್ನು ಜಿಲ್ಲಾಧಿಕಾರಿಗಳು ಆಲಿಸಿ ಪರಿಶೀಲಿಸಿದ ನಂತರ ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಹತ್ತು ಲಕ್ಷದವರೆಗಿನ ಪರಿಹಾರವಾದಲ್ಲಿ ಜಿಲ್ಲಾಧಿಕಾರಿಗಳೂ, ೨೦ ಲಕ್ಷದವರೆಗಿನ ಪರಿಹಾರವಾದಲ್ಲಿ ಪ್ರಾದೇಶಿಕ ಆಯುಕ್ತರುಗಳಿಗೆ ಹಾಗೂ ೨೦ ಲಕ್ಷಕ್ಕೂ ಹೆಚ್ಚಿದರೆ ಸರ್ಕಾರ ನೀಡಬಹುದಾಗಿದೆ.

**ಇತರೆ ತೆರಿಗೆಗಳು**: ಭೂ ಕಂದಾಯವಲ್ಲದೇ ಸರ್ಕಾರಕ್ಕೆ ಅನೇಕ ಮೂಲಗಳಿಂದ ತೆರಿಗೆ ರೂಪದಲ್ಲಿ ಆದಾಯ ಬರುತ್ತದೆ. ಅದರಂತೆ ತಾಲ್ಲೂಕು ಮಟ್ಟದಲ್ಲಿ ಅಬಕಾರಿ ತೆರಿಗೆ, ಮಾರಾಟ ತೆರಿಗೆ, ಮನರಂಜನಾ ತೆರಿಗೆ, ವಿದ್ಯುತ್ ತೆರಿಗೆ, ಕೃಷಿ ವರಮಾನ ತೆರಿಗೆ, ವೃತ್ತಿ ತೆರಿಗೆ, ಮುಂತಾದ ರಾಜ್ಯ ಮಟ್ಟದ ತೆರಿಗೆಗಳು ರಾಜ್ಯ ಬೊಕ್ಕಸಕ್ಕೆ ಕಾಯ್ದೆಯಂತೆ ಸಂದಾಯವಾಗುತ್ತಿದೆ. ಅಲ್ಲದೇ ಕೇಂದ್ರ ಸರ್ಕಾರದ ತೆರಿಗೆಗಳಿಂದಲೂ ಸ್ವಲ್ಪ ಭಾಗ ರಾಜ್ಯ ಸರ್ಕಾರಕ್ಕೆ ಸಂದಾಯವಾಗುತ್ತದೆ.

## ಭೂಕಂದಾಯ ಸರ್ವೇಕ್ಷಣ

ಹೊಳಲ್ಕೆರೆ ತಾಲ್ಲೂಕಿನ ಮೂಲ ಭೂಕಂದಾಯ ಸರ್ವೇಕ್ಷಣವನ್ನು ೨೦೦೦ ದ ನಂತರ ಕೈಗೊಂಡು ಅದರ ಪರಿಷ್ಕರಣೆಯನ್ನು ಮಾಡಲಾಯಿತು. ತಾಲ್ಲೂಕಿನ ಗ್ರಾಮಗಳನ್ನು ಒಂದು ಹಾಗೂ ಮೂರನೇ ಗುಂಪುಗಳ ನಡುವೆ ವಿತರಿಸಲಾಗಿತ್ತು. ಒಂದನೇ ಗುಂಪಿಗೆ ಸೇರಿದ ಎಲ್ಲಾ ಹಳ್ಳಿ ಒಣ ಭೂಮಿಗೆ, ಗದ್ದೆ ಹಾಗೂ ತೋಟದವರಿಗೆ ವಿವಿಧ ಪ್ರಮಾಣಿತದರವೆಂದು ಪ್ರತಿ ಎಕರೆಗೆ ನಿಗದಿಪಡಿಸಲಾಗಿತ್ತು. ಅಲ್ಲದೆ ೧೯೮೫ ಜುಲೈಯಲ್ಲಿ ಹೊರಡಿಸಿದ ಸರ್ಕಾರಿ ಆದೇಶದಂತೆ ನೀರಾವರಿ ಸೌಕರ್ಯಕ್ಕಾಗಿ ಎಕರೆ ಲೆಕ್ಕದಲ್ಲಿ ವಿವಿಧ ಬೆಳೆಗಳಿಗೆ ಬೇರೆ ಬೇರೆ ನೀರಾವರಿ ಕರ ಎಂದು ನಿಗದಿಪಡಿಸಲಾಗಿತ್ತು.

**ಪೋಲಿಸ್ ಆಡಳಿತ ವ್ಯವಸ್ಥೆ** :– ಪ್ರಾಚೀನ ಕಾಲದಲ್ಲಿ ಕಾನೂನು ಮತ್ತು ಶಾಂತಿ ಪರಿಪಾಲನೆಯ ಜೊತೆಗೆ ಕಳ್ಳತನ ದರೋಡೆ ರಹಿತ ವಾತಾವರಣವನ್ನು ಗ್ರಾಮಗಳಲ್ಲಿ ಕಾಯ್ದುಕೊಳ್ಳುವ ಹೊಣೆ ಗ್ರಾಮದ ಮುಖ್ಯಸ್ಥರಾಗಿದ್ದ ಗ್ರಾಮವೃದ್ಧ ಅಥವಾ ಗ್ರಾಮಮುಖಂಡರ ಕರ್ತವ್ಯವಾಗಿತ್ತು. ನಂತರದಲ್ಲಿ ಇವರನ್ನು ಪಟೇಲರೆಂದು ಕರೆಯಲಾಗುತ್ತಿತ್ತು. ವಂಶಪಾರಂಪರ್ಯವಾಗಿ ಗೌಡಿಕೆ ಮಾಡುತ್ತಿದ್ದ, ಇವರ ನೆರವಿಗೆ ತಳವಾರರಿರುತ್ತಿದ್ದರು.

ನಗರಗಳಲ್ಲೂ ಕಾನೂನು ಪರಿಪಾಲನೆಯಲ್ಲಿ ತೊಡಗಿರುತ್ತಿದ್ದ ಕಂದಾಚಾರ ವಿಭಾಗಕ್ಕೆ ದಳವಾಯಿ ಮುಖ್ಯಸ್ಥನಾಗಿದ್ದು, ಠಾಣೆದಾರರು ತಾಲ್ಲೂಕಿನ ಠಾಣಿಯಲ್ಲೂ ಹೋಬಳಿದಾರರು ಹೋಬಳಿಗಳಲ್ಲೂ ಪೋಲಿಸ್ ಕಾರ್ಯನಿರ್ವಹಿಸುತ್ತಿದ್ದು, ಓಲೆದಾರರು ಮತ್ತು ಡಂಗುರದವರು ಈ ವಿಭಾಗದಲ್ಲಿದ್ದರು. ಜಾತಿ ಕಟ್ಟುಪಾಡಿನ ಪರಿಪಾಲನೆ ಕಳ್ಳತನ ತಪ್ಪಿಸುವುದು, ವ್ಯಾಪಾರ ವಹಿವಾಟಿನ ಕ್ರಮಬದ್ಧತೆ ಹಾಗೂ ವಿವಿಧ ಅಪರಾಧಿಗಳನ್ನು ಗುರುತಿಸಿ ಬಂಧಿಸುವುದು, ಮುಂತಾದ ಕಾರ್ಯವನ್ನು ಕಂದಾಚಾರ ವಿಭಾಗದವರು ಮಾಡಬೇಕಾಗಿತ್ತು. ಅಪರಾಧಿಗಳನ್ನು ಬಂಧಿಸಿ, ಜೈಲಿನಲ್ಲಿಡುವುದು, ಸಂರಕ್ಷಣೆ, ಅಂಚೆಚೀಲ, ಪಲ್ಲಕ್ಕಿಗಳನ್ನು ಹೊರುವುದೇ ಮುಂತಾದ ಕಾರ್ಯಗಳನ್ನು ಇವರು ನಿರ್ವಹಿಸಬೇಕಾಗಿತ್ತು. ೧೮೩೪ ರ ಹುಕ್ಕುಂ ನಾಮೆಯ ಜಾರಿಯೊಂದಿಗೆ ಕಂದಾಚಾರದ ಸಿಪಾಯಿಗಳು ಸಂಪೂರ್ಣ ಪೋಲಿಸ್ ಸಿಪಾಯಿಗಳಾದರು. ಇವರಿಗೆ ತಾಲ್ಲೂಕಿನಲ್ಲಿ ಜೈಲು ಹಾಗೂ ಖಜಾನೆಗಳ ಸಂರಕ್ಷಣೆ ಸೈನ್ಯಕ್ಕೆ ಬೇಕಾದ ವಸ್ತುಗಳ ಖರೀದಿ, ಬೇಸಾಯದ ಉಸ್ತುವಾರಿಯ ಜೊತೆಗೆ ಭೂ ಕಂದಾಯದ ಶೇಖರಣೆಯಲ್ಲಿ ಕಂದಾಯ ನೌಕರರಿಗೆ ನೆರವಾಗುವುದೇ ಮುಂತಾದ ಕಾರ್ಯಗಳನ್ನು ವಹಿಸಲಾಗಿತ್ತು. ೧೮೮೫ರ ವೇಳೆಗೆ ತಾಲ್ಲೂಕು ಮಟ್ಟದಲ್ಲಿ ಇನ್ಸ್‌ಪೆಕ್ಟರ್ ಹಾಗೂ ಉಪತಾಲ್ಲೂಕು ಮಟ್ಟದಲ್ಲಿ ಜಮೀನುದಾರರು ಕಾನೂನು ಮತ್ತು ಶಾಂತಿ ಪಾಲನೆಯಲ್ಲಿ ಆಡಳಿತ ಯಂತ್ರಕ್ಕೆ ನೆರವಾಗುತ್ತಿದ್ದರು. ತಾಲ್ಲೂಕು, ಉಪ ತಾಲ್ಲೂಕುಗಳಲ್ಲಿ ಲಾಕಪ್‌ಗಳು ಆರಂಭಗೊಂಡವು. ೧೮೯೨ ರಲ್ಲಿ ಮೇಲ್ವಿಚಾರಣೆಯನ್ನು ನ್ಯಾಯಾಂಗಕ್ಕೆ ವಹಿಸಲಾಗಿತ್ತು. ಆದರೆ ತಾಲ್ಲೂಕು ಮಟ್ಟದಲ್ಲಿ ಪೋಲಿಸರು ಅಮಲ್ದಾರರ ನಿಯಂತ್ರಣಕ್ಕೊಳಪಟ್ಟಿದ್ದು, ಅಗತ್ಯವಿದ್ದೆಡೆ ಪೋಲಿಸ್ ಠಾಣೆ (ಸ್ಟೇಷನ್)ಗಳನ್ನು ಸ್ಥಾಪಿಸಲಾಯಿತು. ಆ ದಿನಗಳಲ್ಲಿ ಗ್ರಾಮ ಪೋಲಿಸರಿಗೆ ಬಿದಿರಿನ ಲಾಟಿಯೇ ಪ್ರಧಾನ ಅಸ್ತ್ರವಾಯಿತು. ೧೮೯೧ ರಲ್ಲಿ ಗ್ರಾಮ ಪೋಲಿಸ್ ಹಾಗೂ ಖಾಯಂ ಪೋಲಿಸ್‌ಗಳಿದ್ದು, ಪೊಲೀಸ್ ಕಾರ್ಯದಲ್ಲಿ ತೊಡಗಿದ್ದರು, ಗ್ರಾಮ ಪೊಲೀಸರು ವಂಶಪಾರಂಪರ್ಯವಾಗಿ ಬಂದಿದ್ದ ಪಟೇಲ, ತಳವಾರ ಹಾಗೂ ತೋಟಿಗಳಾಗಿದ್ದು, ಖಾಯಂ ಪೊಲೀಸರಿಗೆ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಲು ನೆರವಾಗಬೇಕಾಗಿತ್ತು. ಅಲ್ಲದೇ ಗ್ರಾಮದಲ್ಲಿ ರಾತ್ರಿಯಿಡೀ ಗಸ್ತು ಹಾಕುತ್ತಾ, ಛತ್ರ, ಗರಡಿ ಮನೆ ಹಾಗೂ ಗ್ರಾಮೀಣ ಆಸ್ತಿ ಪಾಸ್ತಿ ರಕ್ಷಣೆ ಮಾಡಬೇಕಾಗಿತ್ತು. ಅವರಿಗೆ

೧೯೦೧ರಲ್ಲಿ ಸಮವಸ್ತ್ರ ಮತ್ತು ಕತ್ತಿಯನ್ನು ನೀಡಲಾಯಿತು. ೧೯೪೫-೪೬ ರ ವೇಳೆಗೆ ಈ ತಾಲ್ಲೂಕಿನಲ್ಲಿ ಪೋಲಿಸ್ ಠಾಣೆಗಳು ಆರಂಭಗೊಂಡು ಪೋಲೀಸ್ ಇನ್ಸ್‌ಪೆಕ್ಟರ್, ಹೆಡ್‌ಕಾನ್‌ಸ್ಟೇಬಲ್‌ಗಳನ್ನು ಹೊಂದಿದ್ದವು. ಹಿಂದೆ ತಾಲ್ಲೂಕಿನ ಕಾನೂನು ಸುವ್ಯವಸ್ಥೆಗಾಗಿ ಒಂದು ಪೋಲಿಸ್ ಠಾಣೆ ಕಾರ್ಯನಿರ್ವಹಿಸುತ್ತಿತ್ತು. ಅದರ ವ್ಯಾಪ್ತಿಗೆ ತಾಲ್ಲೂಕಿನ ಎಲ್ಲಾ ಹಳ್ಳಿಗಳು ಒಳಪಟ್ಟಿದ್ದವು. ಪ್ರಸ್ತುತ ತಾಲ್ಲೂಕಿನಲ್ಲಿ ಎರಡು ಪೋಲೀಸ್ ಠಾಣೆಗಳೂ ಹೊಳಲ್ಕೆರೆ, ಚಿಕ್ಕಜಾಜೂರು, ಹೊರಕೆರದೇವರಪುರ, ರಾಮಗಿರ ಮಲ್ಲಾಡಿಹಳ್ಳಿ ಉಪಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ತಾಲ್ಲೂಕಿಗೆ ಪೋಲೀಸ್ ವೃತ್ತ ನಿರೀಕ್ಷಕರ ಕಛೇರಿಯು ಇರುತ್ತದೆ. ಈ ವ್ಯಾಪ್ತಿಯಲ್ಲಿ ೧೮೫ ಗ್ರಾಮಗಳಿದ್ದು, ೨ ಪೋಲಿಸ್ ಠಾಣೆಯು ವ್ಯಾಪ್ತಿಯಲ್ಲಿವೆ.

ಇತ್ತೀಚಿನ ಸಮೀಕ್ಷೆಯಂತೆ ಒಂದು ವರ್ಷದಲ್ಲಿ ೮೦೦ ಕ್ಕೂ ಹೆಚ್ಚು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದೆ. ೨೦೧೨ರ ಸಾಲಿನಲ್ಲಿ ತಾಲ್ಲೂಕಿನಲ್ಲಿ ಒಟ್ಟು ೨೦೧ ಅಪಘಾತಗಳು ಸಂಭವಿಸಿದ್ದು, ೨೪ ಮಂದಿ ಮೃತಪಟ್ಟಿದ್ದಾರೆ, ೨೩೯ ಮಂದಿ ಗಾಯಗೊಂಡಿದ್ದಾರೆಂದು ಪೋಲೀಸ್ ಇಲಾಖೆಯ ವರದಿ ತಿಳಿಸುತ್ತದೆ.

**ಗ್ರಾಮ ರಕ್ಷಣಾದಳ** :- ಗ್ರಾಮೀಣ ಪ್ರದೇಶದಲ್ಲಿ ಗ್ರಾಮರಕ್ಷಣಾ ದಳಗಳನ್ನು ೧೯೬೫ರ ಕಾಯ್ದೆಯನ್ವಯ ರಚಿಸಲಾಗಿದ್ದು, ಇದು ಗ್ರಾಮೀಣ ಪೋಲಿಸ್ ವ್ಯವಸ್ಥೆಗೆ ಪರ್ಯಾಯವಾಗಿ ಕಾರ್ಯ ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದ್ದು ಖಾಯಂ ಪೋಲಿಸರಿಗೆ ಪೂರಕ ಮಾಹಿತಿ ಹಾಗೂ ಸಹಕಾರ ನೀಡುತ್ತವೆ. ಜಿಲ್ಲಾ ಪೋಲೀಸ್ ಸೂಪರಿಂಟೆಂಡಂಟರು ಇವರನ್ನು ನೇಮಿಸುವ ಅಧಿಕಾರವನ್ನು ಹೊಂದಿದ್ದು, ಅಗತ್ಯ ಬಿದ್ದಾಗ ಅವರನ್ನು ತುರ್ತು ರಕ್ಷಣಾ ಕಾರ್ಯಕ್ಕೆ ಬಳಸಿಕೊಳ್ಳಲು ಮುಂದಾಗಬಹುದಾಗಿದೆ. ಅದರಂತೆ ತಾಲ್ಲೂಕಿನಲ್ಲಿ ದಳಪತಿಗಳನ್ನು ನೇಮಿಸಿ, ಗ್ರಾಮರಕ್ಷಣಾ ಗುಂಪನ್ನು ರಚಿಸಲಾಗಿದ್ದು ಪ್ರತಿ ಗುಂಪಿನಲ್ಲೂ ಆಯಾ ಗ್ರಾಮದ ೨೫ ಮಂದಿ ಸದಸ್ಯರಿರುತ್ತಾರೆ.

**ಗೃಹರಕ್ಷಕ ದಳ** :- ಇವರು ಕಾನೂನು ಹಾಗೂ ಶಾಂತಿ ಸಂಪಾದನೆಯಲ್ಲಿ ನೆರವು ನೀಡುವ ಸ್ವಯಂ ಸೇವಕರಾಗಿದ್ದು, ಇಚ್ಛೆಯುಳ್ಳ ಆರೋಗ್ಯವಂತ ನಾಗರಿಕರಿಗೆ ಪೋಲೀಸ್ ತರಬೇತಿ ನೀಡಿ ಅಗತ್ಯಕ್ಕನುಗುಣವಾಗಿ ಬಳಸಿಕೊಳ್ಳಲಾಗುತ್ತದೆ, ಹೊಳಲ್ಕೆರೆ ತಾಲ್ಲೂಕಿನಲ್ಲಿ ಗೃಹರಕ್ಷಕ ದಳವು ಕಾರ್ಯಪ್ರವೃತ್ತವಾಗಿದೆ. ೨೦೧೨ ರ ವೇಳೆಗೆ ೫೦ ಮಂದಿ ನೊಂದಣಿಗೊಂಡಿದ್ದು, ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದಾರೆ. ಇಂದಿಗೂ ಇದು ಇತರೆಡೆಗಳಂತೆ ತಾಲ್ಲೂಕಿನಲ್ಲಿ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ.

**ನ್ಯಾಯಾಡಳಿತ** :- ಪ್ರಾಚೀನ ಕಾಲದಲ್ಲಿ ಇತರೆಡೆಗಳಂತೆ ತಾಲ್ಲೂಕಿನಲ್ಲಿ ನ್ಯಾಯಾಡಳಿತವು ಗ್ರಾಮೀಣ ಭಾಗದಲ್ಲಿ ಸಾಂಪ್ರದಾಯಕವಾಗಿ ಜಾತಿ ಕಟ್ಟೆಮನೆ, ಪಂಚಾಯ್ತಿ ಕಟ್ಟೆಗಳಲ್ಲಿ ಕೇಂದ್ರಿಕೃತವಾಗಿದ್ದು, ವೈಯಕ್ತಿಕವಾಗಿ ಬಗೆಹರಿಯದ ವ್ಯಾಜ್ಯಗಳನ್ನು ಜಾತಿಮಟ್ಟದಲ್ಲಿ, ಆಯಾ ಜಾತಿಯ ಪ್ರಮುಖರನ್ನೊಳಗೊಂಡ

ಜಾತಿಮನೆ, ಕಟ್ಟೆಮನೆಗಳಲ್ಲಿ ಪರಿಹರಿಸಲಾಗುತ್ತಿತ್ತು. ಅದಕ್ಕೂ ಮೀರಿ ಮುಂದುವರೆದರೆ ಹೋಬಳಿ ಮಟ್ಟದಲ್ಲಿ ಪ್ರಮುಖ ಗ್ರಾಮಗಳ ಪ್ರತಿಷ್ಠಿತ ಹಿರಿಯರನ್ನೊಳಗೊಂಡ ಮೇಲ್ಪಂಚಾಯ್ತಿಯಲ್ಲಿ ಬಗೆಹರಿಸಿಕೊಳ್ಳಲಾಗುತ್ತಿತ್ತು. ಮೇಲ್ಮಟ್ಟಕ್ಕೆ ವ್ಯಾಜ್ಯವನ್ನು ಕೊಂಡೊಯ್ಯುವುದು ಹಳ್ಳಿಯ ಗೌರವಕ್ಕೆ ಕುಂದು ತಂದಂತೆ ಎಂಬ ಅಭಿಪ್ರಾಯ ಹಳ್ಳಿಗರಲ್ಲಿ ಸಾಮಾನ್ಯವಾಗಿತ್ತು. ಸಾಮಾನ್ಯವಾಗಿ ಗ್ರಾಮದ ಅರಳೀಕಟ್ಟೆ ದೇವಸ್ಥಾನ, ಮಠ, ಊರ ಮಂಟಪಗಳಲ್ಲಿ ಪಂಚಾಯ್ತಿ ಸಭೆಯನ್ನು ಅಮಾವಾಸ್ಯೆ, ಹುಣ್ಣಿಮೆ ದಿನಗಳನ್ನು ಹೊರತುಪಡಿಸಿ, ಪ್ರಶಸ್ತಿ ದಿನಗಳಂದು ಸಂಜೆಯ ತಂಪು ಹೊತ್ತಿನಲ್ಲಿ ಸೇರಿಸಲಾಗುತ್ತಿದೆ. ದೀಪದ ಬೆಳಕನ್ನೇ ಹಲವೆಡೆ ಸಾಕ್ಷಿಯಾಗಿ ಪರಿಗಣಿಸಲಾಗುತ್ತಿದೆ, ವಿಚಾರಣೆಯ ಸಂದರ್ಭದಲ್ಲಿ ಅಗ್ನಿದಿವ್ಯ ಜಲದಾನ್ಯ ಮುಂತಾದ ದಿವ್ಯಪರೀಕ್ಷೆಗೆ ಆರೋಪಿಗಳನ್ನು ಒಳಪಡಿಸಲಾಗುತ್ತಿತ್ತು. ಅಪರಾಧ ಸಾಬೀತಾದಲ್ಲಿ ದೈಹಿಕಶಿಕ್ಷೆ ನಗದು ದಂಡ ವಿಧಿಸಲಾಗುತ್ತಿದ್ದು, ಅಪರಾಧವು ಗುರುತರವಾಗಿದ್ದಲ್ಲಿ ಕೆಲವೊಮ್ಮೆ ಸಾಮಾಜಿಕ ಬಹಿಷ್ಕಾರ, ಇಲ್ಲವೇ ಗಡಿಪಾರು ಶಿಕ್ಷೆಯನ್ನು ಜಾರಿಗೊಳಿಸಲಾಗುತ್ತಿತ್ತು, ಹಿಂದೂಗಳಲ್ಲಿ ನ್ಯಾಯತೀರ್ಮಾನಗಳು ಅವರ ಧರ್ಮ ಸಿದ್ಧಾಂತಕ್ಕನುಗುಣವಾಗಿ ಸಾಂಪ್ರದಾಯಿಕ ರೀತಿಯಲ್ಲಿ ಆಗುತ್ತಿದ್ದು, ಮುಸ್ಲಿಂರಲ್ಲಿ ನ್ಯಾಯ ತೀರ್ಮಾನವನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಕೂಡಿದ ಖಾಜಿ ನ್ಯಾಯದ ಮೂಲಕ ಬಗೆಹರಿಸುವುದು ರೂಢಿಯಲ್ಲಿತ್ತು. ನ್ಯಾಯಾಂಗದ ಉನ್ನತ ಸ್ಥಾನದಲ್ಲಿ ರಾಜನಿರುತ್ತಿದ್ದು, ಅವನಲ್ಲಿ ಪರಮಾಧಿಕಾರ ಕೇಂದ್ರಿಕೃತವಾಗಿರುತ್ತಿತ್ತು.

ಆಂಗ್ಲರ ಆಗಮನದೊಂದಿಗೆ ನ್ಯಾಯಾಡಳಿತದಲ್ಲೂ ಸಾಕಷ್ಟು ಬದಲಾವಣೆಗಳಾದವು. ಆದರೂ ಸಂಪ್ರದಾಯದಂತೆ ಕಂದಾಯ ಅಧಿಕಾರಿಗಳಿಗೆ ನ್ಯಾಯಾಂಗ ಕಾರ್ಯಗಳನ್ನು ವಹಿಸಲಾಗಿದ್ದು, ಅಮಲ್ದಾರರು (ತಹಶೀಲ್ದಾರರು), ಕ್ರಿಮಿನಲ್ ದಾವೆಗಳ ವಿಚಾರಣೆಯನ್ನು ನಡೆಸುತ್ತಿದ್ದರು ಗ್ರಾಮ ಮಟ್ಟದಲ್ಲಿ ಪಂಚಾಯ್ತಿಗಳಲ್ಲದೆ ತಾಲ್ಲೂಕು ಮಟ್ಟದಲ್ಲಿ ಅಮಲ್ದಾರರು ಪಂಚಾಯ್ತಿ ಸೇರಿಸಿ, ಅಹವಾಲುಗಳನ್ನು ಆಲಿಸಿ, ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ ತಪ್ಪಿತಸ್ಥರಿಗೆ ದಂಡಿಸುತ್ತಿದ್ದರು. ಕಮೀಷನರುಗಳ ಆಡಳಿತದೊಂದಿಗೆ (೧೮೩೧), ತಾಲ್ಲೂಕು ಮಟ್ಟದಲ್ಲಿ ಅಮಲ್ ಹಾಗೂ ಟೌನ್ ಮುನ್ಸಿಫ್ ನ್ಯಾಯಾಲಯಗಳು ೧೮೩೪ ರಲ್ಲಿ ಸ್ಥಾಪನೆಗೊಂಡವು. ಒಂದು ನೂರು ರೂಪಾಯಿ ಒಳಗಿನ ಮೌಲ್ಯದಾವೆಗಳನ್ನು ತೀರ್ಮಾನಿಸುವ ಅಧಿಕಾರ ಟೌನ್ ಮುನ್ಸಿಫರಿಗಿತ್ತು. ಅಮಲ್ ನ್ಯಾಯಾಲಯಗಳಲ್ಲಿ ತೀರ್ಮಾನವಾದಾಗ ದಾವೆಗಳ ಮೇಲ್ಮನವಿಯನ್ನು ಪ್ರಿನ್ಸಿಪಲ್ ಸದರ್ ಮುನ್ಸೀಫ್ ನ್ಯಾಯಾಲಯಕ್ಕೆ ಕೊಂಡೊಯ್ಯಬಹುದಾಗಿತ್ತು. ಅಮಲ್ದಾರರ ನೆರವಿಗೆ ಪೇಷ್ಕಾರರಿದ್ದು, ಅರ್ಹ ಪೇಷ್ಕಾರರಿಗೆ ದ್ವಿತೀಯ ದರ್ಜೆಯ ಉಪಮ್ಯಾಜಿಸ್ಟ್ರೇಟರ್ ಅಧಿಕಾರವನ್ನು ನೀಡಲಾಯಿತು. ಮುಂದೆ

೧೮೭೪ ರಲ್ಲಿ ಅಮಲ್ದಾರರ ನ್ಯಾಯಾಂಗ ಕಾರ್ಯಭಾರವನ್ನು ಮುನ್ಸೀಫರಿಗೆ ವರ್ಗಾಯಿಸಲಾಯಿತು. ಅಲ್ಲದೇ ಸಿವಿಲ್‌ದಾವೆಗಳ ನಿರ್ವಹಣೆಯನ್ನೂ ಇವರಿಗೆ ನೀಡಲಾಯಿತು. ಕ್ರಿಮಿನಲ್ ನ್ಯಾಯಾಡಳಿತಕ್ಕೆ ಸಂಬಂಧಿಸಿದಂತೆ ೧೮೭೨ರ ಕಾಯ್ದೆಯು ಇಡೀ ರಾಷ್ಟ್ರಮಟ್ಟದಲ್ಲಿ ಜಾರಿಯಲ್ಲಿದ್ದು ೧೮೮೦ರಲ್ಲಿ ಮುನ್ಸಿಫರನ್ನು ಪದನಿಮಿತ್ತ ತಾಲ್ಲೂಕು ದಂಡಾಧಿಕಾರಿಯೆಂದು ಸ್ವೀಕರಿಸಲಾಯಿತು. ಮುಂದೆ ಅಮಲ್ದಾರರನ್ನು ಮ್ಯಾಜಿಸ್ಟ್ರೇಟ್ ಕರ್ತವ್ಯದಿಂದ ಸಂಪೂರ್ಣ ಮುಕ್ತಗೊಳಿಸುವುದರ ಜೊತೆಗೆ ಕ್ರಿಮಿನಲ್ ಮೊಕದ್ದಮೆಗಳನ್ನು ಮುನ್ಸೀಫರಿಗೆ ವಹಿಸಲಾಯಿತು.

ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಸಹಾಯಕ ಪೋಲಿಸ್ ಸೂಪರಿಂಟೆಂಡೆಂಟ್ ಹಾಗೂ ಅಮಲ್ದಾರರಿಗೆ ತಾಲ್ಲೂಕು ಮಟ್ಟದಲ್ಲಿ ಅಧಿಕಾರವನ್ನು ನೀಡಲಾಯಿತು. ೧೮೮೯ರಲ್ಲಿ ಕ್ರಿಮಿನಲ್ ಪ್ರೋಸೀಜರ್ ಕೋಡನ್ನು–ಸಂಸ್ಥಾನದಲ್ಲಿ ಜಾರಿಗೆ ತಂದಿತು. ಮುನ್ಸಿಫರಿಗೆ ತಾಲ್ಲೂಕು ಮ್ಯಾಜಿಸ್ಟ್ರೇಟರ ಅಧಿಕಾರವನ್ನು ನೀಡಲಾಯಿತು. ೧೯೩೫ರ ವೇಳೆಗೆ ತಾಲ್ಲೂಕು ಮಟ್ಟದಲ್ಲಿ ದ್ವಿತೀಯ ದರ್ಜೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಆರಂಭಿಸಿಲಾಯಿತು.

ಏಕೀಕರಣ ನಂತರ ರಾಜ್ಯದಲ್ಲಿ ಕರ್ನಾಟಕ ನಾಗರಿಕ ಸಂಹಿತೆ ಸಿವಿಲ್‌ಕೋಡ್ ಕಾಯ್ದೆಯನ್ವಯ ಜಾರಿಗೊಳಸಲಾಯಿತು. ಅದರಂತೆ ೧೯೩೪ ರ ಕರ್ನಾಟಕ ಸಿವಿಲ್ ಕೋರ್ಟು ಕಾಯ್ದೆಯನ್ವಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ತರಲಾಯಿತು. ಮುಂದೆ ಅದಕ್ಕೂ ಹೆಚ್ಚಿನ ಮೌಲ್ಯದ ಸಿವಿಲ್ ದಾವೆಗಳನ್ನು ಜಿಲ್ಲಾ ಕೇಂದ್ರ, ಚಿತ್ರದುರ್ಗದಲ್ಲಿ ಅಥವಾ ದಾವಣಗೆರೆಯಲ್ಲಿ ನ್ಯಾಯ ಪಡೆಯಬೇಕಾಗಿತ್ತು.

ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ವ್ಯಾಜ್ಯಗಳಿಗೆ ಹೊಸದುರ್ಗದಲ್ಲಿ ನ್ಯಾಯ ಪಡೆಯಬೇಕಾಗಿತ್ತು. ಈ ನ್ಯಾಯಾಲಯಗಳ ಜೊತೆಗೆ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು, ತಾಲ್ಲೂಕು ಮ್ಯಾಜಿಸ್ಟ್ರೇಟ್ ಕಾರ್ಯನಿರ್ವಾಹಕರಾಗಿ ಕಾನೂನು ಮತ್ತು ಶಾಂತಿ ಪರಿಪಾಲನೆಯನ್ನು ನಿರ್ವಹಿಸುವ ಸಲುವಾಗಿ ಪೂರಕ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿದ್ದರೂ ಅವರ ಆದೇಶವನ್ನು ಜಿಲ್ಲಾ ಹಾಗೂ ಸೆಷನ್ ನ್ಯಾಯಾಧೀಶರು ಪರಿಷ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

೩೧.೦೩.೧೯೯೦ ರಿಂದ ತಾಲ್ಲೂಕಿನ ಜೆ.ಎಂ.ಎಫ್.ಸಿ ಯಲ್ಲಿಯೇ ನ್ಯಾಯ ಪಡೆಯುವ ಅವಕಾಶವಿದೆ.

**ತಾಲ್ಲೂಕು ಕಾನೂನು ನೆರವು ಸಮಿತಿ** :– ಡಿಸೆಂಬರ್ ೧೯೮೩ ರಲ್ಲಿ ಕಾನೂನು ನೆರವು ಸಮಿತಿಯು ಬರುವುದಕ್ಕೆ ಮೊದಲು ದುಡಿಯುವ ಹಾಗೂ ದುರ್ಬಲ

ವರ್ಗದವರ ಕಾನೂನು ನೆರವು ಹಾಗೂ ಸಲಹೆ ಕೇಂದ್ರವು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ತಾಲ್ಲೂಕು ಕಾನೂನು ಸಮಿತಿಯು ಎಂಟು ಸಾವಿರ ರೂ.ಗಿಂತ ಕಡಿಮೆ ವಾರ್ಷಿಕ ಆದಾಯವಿರುವವರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ, ವಿಧವೆಯರಿಗೆ, ರಕ್ಷಣಾ ಇಲಾಖೆಯ ನೌಕರರಿಗೆ ಹಾಗೂ ಮಾಜಿ ಸೈನಿಕರಿಗೆ ಉಚಿತ ಕಾನೂನು ಸಲಹೆ ಸೂಟ್, ಮನವಿ, ಇತರೆ ದಾವೆ, ಕ್ರಿಮಿನಲ್ ಮೊಕದ್ದಮೆ ಮುಂತಾದವನ್ನು ನ್ಯಾಯಾಲಯದಲ್ಲಿ ಹೂಡುವಲ್ಲಿ, ಕಂದಾಯ ಅಧಿಕಾರಿಗಳ ಮುಂದೆ ಅಹವಾಲು ಸಲ್ಲಿಸುವಲ್ಲಿ, ನೋಟಿಸ್ ಜಾರಿಗೊಳಿಸುವಲ್ಲಿ, ಉಚಿತ ಕಾನೂನು ಸೇವೆಯನ್ನು ಒದಗಿಸಬೇಕಾಗಿತ್ತು. ಹಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶರು ಇದರ ಅಧ್ಯಕ್ಷರಾಗಿದ್ದು, ಕಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶರು ಸದಸ್ಯರಿರುತ್ತಾರೆ. ತಾಲ್ಲೂಕು ಕೇಂದ್ರದಲ್ಲಿ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಕಛೇರಿಯು ಕಾರ್ಯನಿರ್ವಹಿಸುತ್ತಿದೆ. ಅದು ಸರ್ಕಾರದ ಪರವಾಗಿ ಹೂಡಲಾಗುವ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ವಕಾಲತ್ತನ್ನು ಮುನ್ಸೀಫ್ ಹಾಗೂ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ವಹಿಸುತ್ತದೆ.

ತಾಲ್ಲೂಕಿನಲ್ಲಿ ಉಚಿತ ಕಾನೂನು ನೆರವು ಸೌಲಭ್ಯ ದೊರೆಯುತ್ತಿದೆ. ೩೧/೦೩/೧೯೯೦ ರಿಂದ ಹೊಳಲ್ಕೆರೆಯಲ್ಲಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಪ್ರಾರಂಭವಾಯಿತು.

**ಕಾರಾಗೃಹ** :– ಪ್ರಾಚೀನ ಕಾಲದಿಂದಲೂ ಅಪರಾಧಿಗಳನ್ನು ಬಂಧನದಲ್ಲಿಡುವುದು ಸಾಮಾನ್ಯವಾಗಿದ್ದು, ಗ್ರಾಮದ ಚಾವಡಿ, ಸೆರೆಮನೆಗಳಲ್ಲಿ ಬಂಧನದಲ್ಲಿಡಲಾಗುತ್ತಿತ್ತು.

ಆಂಗ್ಲರ ಆಗಮನದೊಂದಿಗೆ ವ್ಯವಸ್ಥಿತ ಜೈಲ್ ಆಡಳಿತ ಅಸ್ತಿತ್ವಕ್ಕೆ ಬಂದು ತಾಲ್ಲೂಕು ಮಟ್ಟದಲ್ಲಿ ಲಾಕಪ್‌ಗಳ ಜವಾಬ್ದಾರಿಯನ್ನು ಮುನ್ಸೀಫ್/ಅಮಲ್ದಾರ್ ಅಥವಾ ಉಪ ಅಮಲ್ದಾರರಿಗೆ ವಹಿಸಲಾಯಿತು. ಆದರೆ ೧೮೬೮ರ ನಂತರ ಲಾಕಪ್‌ಗಳ ಹೊಣೆಯನ್ನು ಉಪಸಹಾಯಕ ಇಲ್ಲವೇ ಸರ್ಜನ್ ಶ್ರೇಣಿಯ ವೈದ್ಯಕೀಯ ಅಧಿಕಾರಿಗಳಿಗೆ ವಹಿಸಲಾಯಿತು. ೧೯೦೮–೦೫ ರ ವೇಳೆಗೆ ಕೆಲವೆಡೆ ಲಾಕಪ್‌ಗಳ ಉಸ್ತುವಾರಿಗೆಂದು ವಿಶೇಷ ಉಪರಿಜಿಸ್ಟ್ರಾರರನ್ನು ನೇಮಿಸಲಾಗಿತ್ತು. ಏಕೀಕರಣ ನಂತರ ಪ್ರತಿ ಪೋಲಿಸ್ ಠಾಣೆಯಲ್ಲೂ ಲಾಕಪ್‌ಗಳಿದ್ದು, ಶಿಕ್ಷೆ ವಿಧಿಸಲ್ಪಟ್ಟ ನಂತರ ಚಿತ್ರದುರ್ಗದಲ್ಲಿರುವ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿಡಲಾಗುತ್ತದೆ.

**ಅಗ್ನಿಶಾಮಕ ಸೇವೆಗಳು** :– ತಾಲ್ಲೂಕಿನ ಅಗ್ನಿಶಾಮಕ ಠಾಣೆ ೨೦೦೦–೨೦೦೨ ರಲ್ಲಿ ಆರಂಭಗೊಂಡಿದೆ. ಅನಾಹುತ ಸಂಭವಿಸಿದಾಗ ತುರ್ತು ಸೇವೆಗೆ ಅವಶ್ಯಕವಾಗಿದೆ.

## ಸಾರ್ವತ್ರಿಕ ಆಡಳಿತ

ತಾಲ್ಲೂಕಿನಲ್ಲಿ ೩೧/೦೩/೨೦೧೨ ರ ಮಾಹಿತಿಯಂತೆ ಬಂದ ತುರ್ತು ಕರೆಗಳು ೧೧೫ ಹಾಗೂ ಸಂರಕ್ಷಿಸಲಾದ ಆಸ್ತಿಯ ಮೌಲ್ಯವು ರೂ. ೪೮೯೮೦೦ =೦೦ ರೂ. ಲಕ್ಷಗಳು

**ತಾಲ್ಲೂಕಿನಲ್ಲಿರುವ ಇತರೆ ಇಲಾಖೆಗಳು**

ಆಡಳಿತಾರೂಢ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹಲವು ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುತ್ತವೆ. ಈ ಯೋಜನೆಗಳನ್ನು ಸಂಬಂಧಿಸಿದ ಇಲಾಖೆ, ಮಂಡಳ, ನಿಗಮ ಮೊದಲಾದವುಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಗ್ಯಾಸೆಟಿಯರ್‌ನ ಇತರ ಕೆಲವು ಅಧ್ಯಾಯಗಳಲ್ಲಿ ಅಂತಹ ಕೆಲವೊಂದು ಇಲಾಖೆಗಳ ಕಾರ್ಯಚಟುವಟಿಕೆಗಳ ಬಗೆಗೆ ಪ್ರಸ್ತಾಪಿಸಲಾಗಿದೆ. ಆದರೆ, ಪ್ರಸ್ತುತ ಅಧ್ಯಾಯದಲ್ಲಿ ತಾಲ್ಲೂಕಿನಲ್ಲಿನ ವಿವಿಧ ಇಲಾಖೆಗಳು, ಮಂಡಳ ಹಾಗೂ ನಿಗಮಗಳ ಸ್ಥಾಪನೆ, ಕಚೇರಿಯ ಸಿಬ್ಬಂದಿ ಸ್ವರೂಪ, ಆಡಳಿತ ವ್ಯಾಪ್ತಿ, ಅವುಗಳ ಧ್ಯೇಯೋದ್ದೇಶಗಳು–ಇತ್ಯಾದಿಗಳ ಬಗೆಗೆ ಆಯಾ ಕಚೇರಿಗಳು ಒದಗಿಸಿದ ಮಾಹಿತಿ ಆಧರಿಸಿ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಅಧಿಕಾರಿಗಳು, ಅಧ್ಯಯನಕಾರರು ಹಾಗೂ ಆಸಕ್ತ ಸಾರ್ವಜನಿಕರು ತಾಲ್ಲೂಕು ಆಡಳಿತಯಂತ್ರದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಳ್ಳಲು ಇಲ್ಲಿನ ಮಾಹಿತಿಗಳು ನೆರವಾಗುತ್ತವೆ. ಸರ್ಕಾರದ ಇಲಾಖಾ ಕಛೇರಿಗಳು ಸಾಮಾನ್ಯವಾಗಿ ಒಂದೇ ರೀತಿ ಇರುವುದು ಸಹಜ. ಈ ಅಧ್ಯಾಯದಲ್ಲಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತಹ ಕೆಲವು ಕಚೇರಿಗಳ ಬಗೆಗೂ ಸಾಧ್ಯವಾದಷ್ಟು ಮಾಹಿತಿ ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಲಾಗಿದೆ.

ವಿಜಯನಗರದ ಅರಸರ ಹಾಗೂ ಅನಂತರ ಪಾಳೇಗಾರರ ಕಾಲದಿಂದಲೂ ಭೂ ಕಂದಾಯ ವಸೂಲಿ ಮಾಡುವ ಅಧಿಕಾರಿಗಳ ಜತೆಗೆ ಸೈನ್ಯ ವ್ಯವಸ್ಥೆಯನ್ನೂ ನೇರವಾಗಿ ಆಡಳಿತಗಾರರು ನೋಡಿಕೊಳ್ಳುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿ ಆಡಳಿತ ಮಾಡಲು ಕೆಲವೊಂದು ಇಲಾಖೆಗಳನ್ನು ಸೃಷ್ಟಿಸಲಾಗಿತ್ತು. ಚಿಕ್ಕ ದೇವರಾಜ ಒಡೆಯರ್ ಅವರ ಕಾಲದಲ್ಲಿ (೧೬೭೩–೧೭೦೪) ಆಡಳಿತಕ್ಕೊಂದು ಸ್ಪಷ್ಟ ರೂಪ ನೀಡಿ ಹದಿನೆಂಟು ಚಾವಡಿಗಳನ್ನು ಸ್ಥಾಪಿಸಿದರು.

ಈಗ ಬೆಂಗಳೂರಿನಲ್ಲಿರುವ ಉಚ್ಚನ್ಯಾಯಾಲಯದ ಕಟ್ಟಡವನ್ನು ಅಠಾರಾ ಕಛೇರಿ ಎಂದು ಕರೆಯಲಾಗುತ್ತಿದೆ. ಈ ೧೮ ಚಾವಡಿಗಳು ಕ್ರಮವಾಗಿ ೧) ನಿರೂಪದ ಚಾವಡಿ: ಸಾರ್ವಜನಿಕರ ಅಹವಾಲು ವಿಲೇವಾರಿ ಇಲಾಖೆ ೨) ಆಯಕಟ್ಟಿನ ಚಾವಡಿ: ಸಿವಿಲ್ ಮತ್ತು ಸೈನ್ಯ ಆಡಳಿತ, ಲೆಕ್ಕಪತ್ರ ಇಲಾಖೆ ೩) ಮೈಸೂರು ಹೋಬಳಿ ಚಾವಡಿ: ದಕ್ಷಿಣ ಆಡಳಿತ ಘಟಕಗಳ ಮೇಲಿನ ವಿಚಾರಣಾ ಇಲಾಖೆ ೪) ಪಟ್ಟಣ ಹೋಬಳಿ ವಿಚಾರ ಚಾವಡಿ ೫) ಸೀಮೆ ಕಂದಾಚಾರದ ಚಾವಡಿ ೬) ಬಾಗಿಲ ಕಂದಾಚಾರದ ಚಾವಡಿ:

ಸೈನ್ಯ ಪೌರ ಹುಜೂರ್ ಅಧಿಕಾರಿಗಳು ಮತ್ತು ಪಾಳೇಗಾರರಿಗೆ ಸಂಬಂಧಿಸಿದ ಲೆಕ್ಕಪತ್ರ ವಿಭಾಗ ೭) ಸುಂಕದ ಚಾವಡಿ ೮) ಪೊಮ್ಮಿನ ಚಾವಡಿ ೯) ತೋಡಾಯದ ಚಾವಡಿ ೧೦) ಪಟ್ಟಣ ಹೋಬಳಿ ಅಷ್ಟಗ್ರಾಮದ ಚಾವಡಿ ೧೧) ಮೈಸೂರು ಹೋಬಳಿ ಅಷ್ಟ ಗ್ರಾಮದ ಚಾವಡಿ ೧೨) ಬೆಣ್ಣೆ ಚಾವಡಿ ೧೩) ಪಟ್ಟಣದ ಚಾವಡಿ ೧೪) ಬೇಹಿನ ಚಾವಡಿ ೧೫) ಸಮ್ಮುಖದ ಚಾವಡಿ ೧೬) ದೇವಸ್ಥಾನದ ಚಾವಡಿ ೧೭) ಕಬ್ಬಿಣದ ಚಾವಡಿ ಮತ್ತು ೧೮) ಹೊಗೆ ಸೊಪ್ಪಿನ ಚಾವಡಿ. ಈ ಚಾವಡಿಗಳಲ್ಲಿ ತಕ್ಕಷ್ಟು ಸಿಬ್ಬಂದಿ ಕಾವಲಿನವರು ಇತ್ಯಾದಿ ಇರುತ್ತಿದ್ದರು.

ಮುಂದೆ ೧೮೮೧ರಲ್ಲಿ ಮಾರ್ಚ್ ತಿಂಗಳಲ್ಲಿ ಬ್ರಿಟೀಷರು ಆಡಳಿತವನ್ನು ಮತ್ತೆ ರಾಜ ಮನೆತನಕ್ಕೆ ಬಿಟ್ಟುಕೊಟ್ಟಾಗ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಸಾಮಾನ್ಯ ಕಂದಾಯ ಇಲಾಖೆ ಲೋಕೋಪಯೋಗಿ ಇಲಾಖೆ, ವಿದ್ಯಾ ಇಲಾಖೆ ಮತ್ತು ಸೈನ್ಯದಳ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಮುಂದೆ ಅಗತ್ಯತೆಗೆ ತಕ್ಕಂತೆ ೧೮೮೫ರಲ್ಲಿ ಅರಣ್ಯ ಮತ್ತು ಶಾಂತಿ ಪಾಲನೆ, ೧೮೯೦ರಲ್ಲಿ ಅಬಕಾರಿ, ೧೮೯೦ರಲ್ಲಿ ಮುಜರಾಯಿ, ೧೮೯೪ರಲ್ಲಿ ಗಣಿ ಇಲಾಖೆ, ೧೯೦೨ರಲ್ಲಿ ಕಂದಾಯ, ೧೯೧೨ರಲ್ಲಿ ಕೃಷಿ ಮತ್ತು ೧೯೧೩ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳು ಅಸ್ತಿತ್ವಕ್ಕೆ ಬಂದವು.

ಇದೇ ರೀತಿ ಈಗ ಅಸ್ತಿತ್ವದಲ್ಲಿ ಉಳಿದ ಇತರೆ ಇಲಾಖೆಗಳು ಅವಶ್ಯಕತೆಗನುಸಾರವಾಗಿ ಸೃಷ್ಟಿ ಮಾಡಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಸುವ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ವಹಿಸಲಾಗಿದೆ. ತಾಲ್ಲೂಕಿನಲ್ಲಿ ಕೃಷಿ ಇಲಾಖೆ, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ, ಉಪನೋಂದಣಿ ಅಧಿಕಾರಿಗಳ ಕಛೇರಿ, ತಾಲ್ಲೂಕು ಖಜಾನೆ, ಮೀನುಗಾರಿಕೆ ಕಛೇರಿ, ತೋಟಗಾರಿಕೆ, ಸಾರ್ವಜನಿಕ ಆಸ್ಪತ್ರೆ ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿ, ಪಶು ವೈದ್ಯ ಇಲಾಖೆ, ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಅಭಿಯಂತರರ ಕಛೇರಿ, ಪುರಸಭೆ, ಬೆಸ್ಕಾಂ, ಸಹಾಯಕ ಭೂಮಾಪನ ಅಧಿಕಾರಿಗಳ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಹಕಾರ ಸಂಘಗಗಳ ಇಲಾಖೆ, ಕೈಗಾರಿಕಾ ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಅಂಚೆ ಮತ್ತು ತಂತಿ ಕಛೇರಿ, ದೂರವಾಣಿ ವಿನಿಮಯ ಕೇಂದ್ರ, ನೀರಾವರಿ ಅಭಿಯಂತರರ ಕಛೇರಿ, ಗೃಹ ನಿರ್ಮಾಣ ಮಂಡಳಿ ಮುಂತಾದ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

## ಸ್ಥಳೀಯ ಸ್ವಯಂ ಆಡಳಿತ

ಬಹು ಹಿಂದಿನಿಂದಲೂ ಹಳ್ಳಿಗಳಲ್ಲಿ ನೆಲಸಿದ್ದ 'ಕುಲಹದಿನೆಂಟು' ಜಾತಿಗಳವರು ಆಗಾಗ್ಗೆ ಅಥವಾ ಸಂದರ್ಭ ಒದಗಿದಾಗ ಒಟ್ಟಾಗಿ ಕುಳಿತು ತಮ್ಮ ಸಮಸ್ಯೆಗಳನ್ನು

ಬಗೆಹರಿಸಿಕೊಳ್ಳುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ೧೯೧೪ರಲ್ಲಿ ಹಳ್ಳಿಗಳ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಿದ್ದರು. ಮುಂದೆ ೧೯೧೮ರಲ್ಲಿ ಕಾಯ್ದೆ ಬದ್ಧ ಗ್ರಾಮ ಅಭಿವೃದ್ಧಿ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಇದರನ್ವಯ ನಾಮ ನಿರ್ದೇಶಿತ ಅಧ್ಯಕ್ಷರನ್ನು ಮತ್ತು ಸಂಪನ್ಮೂಲವನ್ನು ಒದಗಿಸಲಾಯಿತು. ಮುಂದೆ ೧೯೨೬ರಲ್ಲಿ ಇವುಗಳನ್ನು ರದ್ದುಪಡಿಸಿ ಶಾಸನಬದ್ಧವಾಗಿ ಪಂಚಾಯ್ತಿಗಳನ್ನು ರಚಿಸಲಾಯಿತು.

ಪಂಚಾಯ್ತಿಗಳಲ್ಲಿ ಐದರಿಂದ ಹತ್ತು ಸದಸ್ಯರು, ಇವರಲ್ಲಿ ಅರ್ಧದಷ್ಟು ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಪಂಚಾಯ್ತಿಗಳು ಮನೆಗಂದಾಯ, ಅಂಗಡಿ, ಹಿತ್ತಿಲುಗಳ ಕಂದಾಯ ವಸೂಲು ಮಾಡುವುದರ ಜತೆಗೆ ಹಳ್ಳಿಯ ನೈರ್ಮಲ್ಯ, ಸಂಪರ್ಕ, ಆರೋಗ್ಯ ಮುಂತಾದುವನ್ನು ನಿರ್ವಹಿಸಬೇಕಾಗಿತ್ತು. ಅನಂತರ ಗುಂಪು ಪಂಚಾಯ್ತಿ, ಮಂಡಲ ಪಂಚಾಯ್ತಿ ಮುಂತಾದ ಬದಲಾವಣೆಗಳನ್ನು ತಂದು ಒಂದೊಂದು ಪಂಚಾಯ್ತಿಗೆ ಏಳೆಂಟು ಹಳ್ಳಿಗಳು ಸೇರ್ಪಡೆಗೊಂಡವು.

**ಕರ್ನಾಟಕ ಜಿಲ್ಲಾ ಪರಿಷತ್ ಕಾಯ್ದೆ ೧೯೮೩:** ಆಡಳಿತ ವಿಕೇಂದ್ರೀಕರಣದ ಮೂಲಕ ಗ್ರಾಮ ಸ್ವರಾಜ್ ಸ್ಥಾಪಿಸುವ ಉದ್ದೇಶದಿಂದ ಸರ್ಕಾರ ೧೯೮೩ರಲ್ಲಿ ಈ ಕಾಯ್ದೆಯನ್ನು ಅಂಗೀಕರಿಸಿತು. ಇದರನ್ವಯ ಗ್ರಾಮ ಮಟ್ಟದಲ್ಲಿ ಮಂಡಲ ಪಂಚಾಯ್ತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ ೧೯೮೭ರ ಹೊತ್ತಿಗೆ ಅಸ್ತಿತ್ವಕ್ಕೆ ಬಂದವು.

## ಮಂಡಲ ಪಂಚಾಯ್ತಿಗಳು

ಎಂಟು ಸಾವಿರದಿಂದ ೧೨,೦೦೦ ಜನ ಸಂಖ್ಯೆ ಇರುವ ಹಳ್ಳಿಗಳು ಪ್ರತಿ ೪೦೦ ಜನ ಸಂಖ್ಯೆಗೊಬ್ಬರಂತೆ ಸದಸ್ಯರನ್ನು ಚುನಾಯಿಸಿ ಮಂಡಲ ಪಂಚಾಯ್ತಿ ರಚನೆ ಮಾಡಲಾಗುತ್ತದೆ. ಸದಸ್ಯರು ಸೇರಿ ಪ್ರಧಾನ, ಉಪಪ್ರಧಾನರನ್ನು ಆರಿಸುತ್ತಾರೆ. ಮಂಡಲ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪಂಚಾಯ್ತಿ ಮಾಡುತ್ತದೆ.

## ಗ್ರಾಮಸಭೆ

ವಿವಿಧ ಯೋಜನೆಗಳಡಿ ಗ್ರಾಮಸಭೆ ಸೇರಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಇದರ ಮುಖ್ಯ ಜವಾಬ್ದಾರಿ. ಗ್ರಾಮ ಸಭೆಯ ತೀರ್ಮಾನಗಳನ್ನು ಮಂಡಲ ಪಂಚಾಯ್ತಿ ಸ್ವೀಕರಿಸುತ್ತಿತ್ತು.

**ತಾಲ್ಲೂಕು ಪಂಚಾಯ್ತಿ**

ತಾಲ್ಲೂಕಿನ ಚುನಾಯಿತ ಸದಸ್ಯರು, ಶಾಸಕರು ಮಂಡಲ ಪಂಚಾಯ್ತಿ ಪ್ರಧಾನರು ಮತ್ತು ಭೂಮಿ ಬ್ಯಾಂಕಿನ ಅಧ್ಯಕ್ಷರು ತಾಲ್ಲೂಕು ಪಂಚಾಯ್ತಿಯ ಸದಸ್ಯರು. ಇದು ಗ್ರಾಮ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್‌ಗಳ ಸಂಪರ್ಕ ಸೇತುವೆಯಾಗಿ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತದೆ.

**ಕರ್ನಾಟಕ ಪಂಚಾಯಿತಿರಾಜ್ ಕಾಯ್ದೆ (೧೯೯೩)**

ಗ್ರಾಮ ಸ್ವರಾಜ್ ವ್ಯವಸ್ಥೆಯನ್ನು ಇನ್ನಷ್ಟು ಸದೃಢಗೊಳಿಸುವ ಸಲುವಾಗಿ ೧೯೯೩ರಲ್ಲಿ ಈ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಮಂಡಲ ಪಂಚಾಯಿತಿಯನ್ನು ಗ್ರಾಮ ಪಂಚಾಯ್ತಿ ಎಂದು ಹೆಸರಿಸಲಾಯಿತು. ತಾಲ್ಲೂಕು ಪಂಚಾಯ್ತಿ ಸದಸ್ಯರು ಹತ್ತು ಸಾವಿರ ಜನಸಂಖ್ಯೆಗೊಬ್ಬರಂತೆ ಮತ್ತು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ತಾಲ್ಲೂಕುಗಳಿಗೆ ಕನಿಷ್ಟ ಹನ್ನೊಂದು ಮಂದಿ ಚುನಾಯಿತ ಸದಸ್ಯರಿರುತ್ತಾರೆ.

**ಗ್ರಾಮ ಪಂಚಾಯಿತಿಯ ರಚನೆ**

ಸಾಮಾನ್ಯವಾಗಿ ೫,೦೦೦ ಕ್ಕಿಂತ ಕಡಿಮೆ ಇಲ್ಲದ ಮತ್ತು ೭,೦೦೦ ಜನಸಂಖ್ಯೆಗೆ ಹೆಚ್ಚಿಗೆ ಇಲ್ಲದ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಒಂದು ಗ್ರಾಮ ಪಂಚಾಯಿತಿ ಎಂದು ಪರಿಗಣಿಸಲಾಗುತ್ತದೆ. ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಚಾಮರಾಜನಗರ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ೨,೫೦೦ ಕ್ಕಿಂತ ಕಡಿಮೆಯಿಲ್ಲದ ಜನಸಂಖ್ಯೆ ಹೊಂದಿದ ಪ್ರದೇಶವನ್ನು ಹಾಗೂ ಜನಸಂಖ್ಯೆಯನ್ನು ಗಣನೆಗೆ ಪರಿಗಣಿಸದೆ, ಅವಶ್ಯಕ ಎಂದು ಕಂಡುಬರುವಲೆಲ್ಲಾ ಸರ್ಕಾರವು ವಿಶೇಷ ಪ್ರಕರಣವೆಂದು ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಹಾಸನ, ಕೊಡುಗು, ಶಿವಮೊಗ್ಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲಾ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ೫ ಕಿ.ಮೀ. ತ್ರಿಜ್ಯದ(ಹತ್ತು ಕಿ.ಮೀ ವ್ಯಾಸದ) ಒಳಗಿರುವ ಪ್ರದೇಶವನ್ನು ಸರ್ಕಾರವು ಗ್ರಾಮಪಂಚಾಯಿತಿ ಎಂದು ನಿರ್ಧರಿಸಬಹುದಾಗಿದೆ. ಪ್ರತಿ ೪೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ  ಗ್ರಾಮ ಪಂಚಾಯಿತಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮ ಪಂಚಾಯಿತಿಯ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ, ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಲಾಗುವುದು. ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಸದಸ್ಯರುಗಳ ಮೀಸಲಾತಿ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

## ೨೦೧೫ರಲ್ಲಿ ನಡೆದ ತಾಲ್ಲೂಕುವಾರು ಗ್ರಾಮ ಪಂಚಾಯಿತಿ ಸದಸ್ಯರುಗಳ ಮೀಸಲಾತಿ ವಿವರ.

| ಕ್ರ. ಸಂ. | ತಾಲ್ಲೂಕಿನ ಹೆಸರು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | ಒಟ್ಟು ಸ್ಥಾನಗಳ ಸಂಖ್ಯೆ | ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ | ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಗೆ ವರ್ಗವಾರು ಸಂಖ್ಯೆಯ ವಿವರ | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | ಅನುಸೂಚಿತ ಜಾತಿ | | | ಅನುಸೂಚಿತ ಪಂಗಡ | | | ಹಿಂದುಳಿದ ಅ ವರ್ಗ | | | ಹಿಂದುಳಿದ ಬ ವರ್ಗ | | | ಸಾಮಾನ್ಯ | | | ಒಟ್ಟು | | |
| | | | | | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು |
| ೧ | ಮೊಳಕಾಲ್ಮೂರು | ೧೫ | ೩೦೮ | ೩೦೭ | ೨೬ | ೩೪ | ೬೦ | ೬೦ | ೬೯ | ೧೨೯ | ೩ | ೫ | ೮ | ೧ | ೧ | ೨ | ೬೨ | ೪೬ | ೧೦೮ | ೧೫೨ | ೧೫೫ | ೩೦೭ |
| ೨ | ಚಳ್ಳಕೆರೆ | ೪೦ | ೭೫೫ | ೭೫೫ | ೮೨ | ೧೦೨ | ೧೮೪ | ೧೦೦ | ೧೨೩ | ೨೨೩ | ೬ | ೨೦ | ೨೬ | ೫ | ೦ | ೫ | ೧೭೮ | ೧೩೯ | ೩೧೭ | ೩೭೧ | ೩೮೪ | ೭೫೫ |
| ೩ | ಚಿತ್ರದುರ್ಗ | ೩೮ | ೭೨೭ | ೭೨೭ | ೯೦ | ೧೧೦ | ೨೦೦ | ೬೪ | ೮೬ | ೧೫೦ | ೧೧ | ೨೮ | ೩೯ | ೫ | ೧ | ೬ | ೧೮೬ | ೧೪೬ | ೩೩೨ | ೩೫೬ | ೩೭೧ | ೭೨೭ |
| ೪ | ಹಿರಿಯೂರು | ೩೩ | ೫೯೦ | ೫೯೦ | ೬೯ | ೮೯ | ೧೫೮ | ೨೨ | ೪೩ | ೬೫ | ೧೬ | ೩೯ | ೫೫ | ೧೦ | ೧ | ೧೧ | ೧೬೭ | ೧೩೪ | ೩೦೧ | ೨೮೪ | ೩೦೬ | ೫೯೦ |
| ೫ | ಹೊಸದುರ್ಗ | ೩೧ | ೪೯೪ | ೪೯೪ | ೪೧ | ೬೪ | ೧೦೫ | ೧೪ | ೩೭ | ೫೧ | ೧೯ | ೪೬ | ೬೫ | ೧೮ | ೧ | ೧೯ | ೧೪೬ | ೧೦೮ | ೨೫೪ | ೨೩೮ | ೨೫೬ | ೪೯೪ |
| ೬ | ಹೊಳಲ್ಕೆರೆ | ೨೯ | ೪೯೩ | ೪೯೨ | ೬೨ | ೭೭ | ೧೩೯ | ೨೧ | ೪೧ | ೬೨ | ೧೩ | ೨೮ | ೪೧ | ೪ | ೩ | ೭ | ೧೩೭ | ೧೦೬ | ೨೪೩ | ೨೩೭ | ೨೫೫ | ೪೯೨ |
| ಒಟ್ಟು | | ೧೮೬ | ೩,೩೬೭ | ೩,೩೬೫ | ೩೭೦ | ೪೭೬ | ೮೪೬ | ೨೮೧ | ೩೯೯ | ೬೮೦ | ೬೮ | ೧೬೬ | ೨೩೪ | ೪೩ | ೭ | ೫೦ | ೮೭೬ | ೬೭೯ | ೧,೫೫೫ | ೧,೬೩೮ | ೧,೭೨೭ | ೩,೩೬೫ |

ಆಧಾರ: ರಾಜ್ಯ ಚುನಾವಣಾ ಆಯೋಗ

ಮಂಡಲ ಪಂಚಾಯಿತಿಗಳ ಆಡಳಿತ ವಿಧಾನಗಳಲ್ಲಿದ್ದ ಲೋಪದೋಷಗಳನ್ನು ಗುರುತಿಸಿ, ಅವುಗಳ ಕಾರ್ಯವ್ಯಾಪ್ತಿ ಮೊಟಕುಗೊಳಿಸಿ, ಗ್ರಾಮ ಪಂಚಾಯಿತಿಗಳನ್ನು ಪುನಃ ಅಸ್ತಿತ್ವಗೊಳಿಸಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾಗಿದ್ದ ಗ್ರಾಮಸಭೆಯನ್ನು ಸದೃಢಗೊಳಿಸಲಾಯಿತು.

ಕಾನೂನಿನ ತಿದ್ದುಪಡಿ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟ ಪಡಿಸಲಾಯಿತು. ಪ್ರತಿ ಗ್ರಾಮ ಪಂಚಾಯಿತಿಗೆ ಪ್ರಾರಂಭದಲ್ಲಿ ರೂ.ಒಂದು ಲಕ್ಷಗಳ ವಾರ್ಷಿಕ ಅನುದಾನ ಒದಗಿಸಲಾಗಿತ್ತು. ಈ ಹಣವು ನೀರು ಪೂರೈಕೆ ಮತ್ತು ದೀಪ ವ್ಯವಸ್ಥೆಗೆ ಮಾತ್ರ ಬಳಕೆಯಾಗಬೇಕಾಗಿತ್ತು. ಪ್ರಸ್ತುತ ಈ ವಾರ್ಷಿಕ ಅನುದಾನವನ್ನು ಐದು ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

**ಶಾಸನಬದ್ಧ ಅನುದಾನ**: ಸರ್ಕಾರವು ಗ್ರಾಮ ಪಂಚಾಯಿತಿಗಳು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗುವಂತೆ ಹೆಚ್ಚು ಮುಕ್ತ ಅನುದಾನ ನೀಡಲು ಕ್ರಮಕೈಗೊಂಡಿದೆ. ೧೯೯೩ರಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿದ್ದ ಶಾಸನಬದ್ಧ ಅನುದಾನ ಕೇವಲ ರೂ. ಒಂದು ಲಕ್ಷ ಮಾತ್ರ ಆಗಿತ್ತು. ಇದನ್ನು ರೂ. ೩.೫ ಲಕ್ಷಗಳಿಗೆ ಹೆಚ್ಚಿಸಲಾಯಿತು.

೨೦೦೩ರಲ್ಲಿ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಶಾಸನಬದ್ಧ ಅನುದಾನವನ್ನು ರೂ. ಐದು ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ನೇರ ಬಿಡುಗಡೆ ಮಾಡುವ ವಿಧಾನವನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯನ್ನು ನವೆಂಬರ್ ೨೦೦೩ ರಿಂದ ಜಾರಿಗೆ ತರಲಾಗಿದೆ.

ನೀರು ಪೂರೈಕೆ ಮತ್ತು ಬೀದಿ ದೀಪಗಳಿಗೆ ಬಳಸಿದ ವಿದ್ಯುಚ್ಛಕ್ತಿ ಬಿಲ್ ಪಾವತಿ ಮಾಡುವಲ್ಲಿ ಗ್ರಾಮ ಪಂಚಾಯಿತಿಗಳು ಎಸ್ಕಾಂಗಳಿಗೆ ನಿಯಮಿತವಾಗಿ ತುಂಬಲು ವಿವರವಾದ ಕೈಪಿಡಿಯನ್ನು ಸರ್ಕಾರವು ೨೦೦೪ ರಿಂದ ಹೊರಡಿಸಿದೆ.

ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಕೈಗೊಂಡ ಕಾಮಗಾರಿಗಳು, ಬರ ಪರಿಹಾರ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳ್ಳಬೇಕು. ಅವುಗಳ ಗುಣಮಟ್ಟದಲ್ಲಿ ಸುಧಾರಣೆಯಾಗ ಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳು ಪ್ರಮಾಣೀಕರಿಸದ ಹೊರತು ಅಂತಹ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡತಕ್ಕದ್ದಲ್ಲ ಎಂಬ ಸೂಚನೆಗಳನ್ನು ಸರ್ಕಾರ ಹೊರಡಿಸಿದೆ.

ಗ್ರಾಮಪಂಚಾಯಿತಿ ಸದಸ್ಯರ ತರಬೇತಿಗಾಗಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ನೋಡಲ್ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಇಲ್ಲಿ ಸ್ಥಾಪಿಸಿರುವ ಉಪಗ್ರಹ ಕೇಂದ್ರದ ಮೂಲಕ ಪ್ರಸಾರ ಮಾಡಲು ರಾಜ್ಯಾದ್ಯಂತ

ಎಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಒಂದು ಕಡೆ ದೃಶ್ಯ,ಎರಡು ಕಡೆ ವಾಕ್ ಶ್ರವಣ ಮೂಲಕ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಚಲನಚಿತ್ರಗಳು, ಸ್ಥಳೀಯ ಅಂತರ ಸಂವಾದ ಮತ್ತು ಸಮುದಾಯ ಸಂಘಟನೆಯಂತಹ ವಿಷಯಗಳನ್ನು ಅಳವಡಿಸಲಾಗಿದೆ.

ಪಂಚಾಯತ್ ರಾಜ್ ಇತಿಹಾಸ ಮತ್ತು ರಚನೆ, ಗ್ರಾಮಸಭೆ, ಗ್ರಾಮಪಂಚಾಯಿತಿ ನಿಯಮಗಳು ಮತ್ತು ಪಂಚಾಯತ್ ಆಯವ್ಯಯ, ಲೆಕ್ಕಪತ್ರ ಮತ್ತು ಜಮಾಬಂದಿ, ಶಿಕ್ಷಣ, ಆರೋಗ್ಯ, ಪೌಷ್ಠಿಕತೆ, ಶಿಶುಸಂರಕ್ಷಣೆ, ನೀರು ನೈರ್ಮಲ್ಯ ಕುರಿತು ವಲಯವಾರು ವಿಚಾರಗಳು ಮತ್ತು ಸಾಮಾನ್ಯ ಆಸ್ತಿ–ಪಾಸ್ತಿಗಳು, ಒಟ್ಟಾರೆ ಅಭಿವೃದ್ಧಿ ಮತ್ತು ಸ್ಥಳೀಯ ಯೋಜನೆ ರೂಪಿಸುವಿಕೆಯಲ್ಲಿ ಗ್ರಾಮ ಪಂಚಾಯಿತಿ ಪಾತ್ರ, ಮಾಹಿತಿ ಹಕ್ಕು ಮತ್ತು ಸ್ಥಳೀಯ ಕಂದಾಯ ಸಂಗ್ರಹಣೆ ಸೇರಿದಂತೆ ಸಾಮಾನ್ಯ ವಿಷಯಗಳನ್ನು ಅಳವಡಿಸಲಾಗಿದೆ. ಅಲ್ಲದೆ ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ ನೀಡಲಾಗಿದೆ.

## ಗ್ರಾಮ ಪಂಚಾಯಿತಿಗಳ ಕಂಪ್ಯೂಟರೀಕರಣ

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಕಂಪ್ಯೂಟರೀಕರಿಸುವ ಪ್ರಮುಖ ಸಾಹಸ ಕಾರ್ಯದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಜಮೀನುಗಳ ಸರ್ವೇ ನಂ, ಅವುಗಳ ವಿವರಗಳು, ಸರ್ವಕುಟುಂಬ ಸಮೀಕ್ಷೆ ಮತ್ತು ಆಸ್ತಿ ತೆರಿಗೆ ಇತ್ಯಾದಿ ಅಗತ್ಯವಾದ ತಂತ್ರಾಂಶಗಳನ್ನು ಈಗಾಗಲೇ ಅಭಿವೃದ್ಧಿಪಡಿಸಿದೆ. ತಂತ್ರಾಂಶ ಕುರಿತಂತೆ ತರಬೇತಿದಾರರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಸಿಬ್ಬಂದಿಗೆ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ವಲಯಗಳ ಯೋಜನೆ ಜನವಸತಿಗಳ ೨೦ ವಲಯಗಳ ಸುಮಾರು ೩೭೫ ಅಂಶಗಳಲ್ಲಿ ಮಾಹಿತಿಯನ್ನು "ಸಾಮಾನ್ಯ ಮಾಹಿತಿ" ಎಂಬ ಶೀರ್ಷಿಕೆಯಡಿ ಸಂಗ್ರಹಿಸಿ ಅಂತರ್ಜಾಲ ತಾಣ (ವೆಬ್‌ಸೈಟ್)ದಲ್ಲಿ ಅಳವಡಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಪಂಚಾಯಿತಿ ಅಧ್ಯಕ್ಷರ ಕಛೇರಿ, ವಿಧಾನಸೌಧ, ಶಾಸಕರಭವನ, ಬಹುಮಹಡಿ ಕಟ್ಟಡ, ಎಲ್ಲಾ ಸಚಿವಾಲಯ ಹಾಗೂ ಇಲಾಖಾ ಕಾರ್ಯದರ್ಶಿಗಳ ಕೊಠಡಿಗಳಲ್ಲಿ ಈ ಮಾಹಿತಿಯುಳ್ಳ 'ಕಿಯೋಸ್ಕ್‌ಗಳನ್ನು' ಸಾರ್ವಜನಿಕರ ಮಾಹಿತಿಗಾಗಿ ಇಡಲಾಗಿದೆ.

ಈ ಮಾಹಿತಿಯನ್ನು ಪ್ರತಿ ವರ್ಷವೂ ಪರಿಷ್ಕರಿಸುವುದರಿಂದ ತಾಜಾ ಮಾಹಿತಿ ಲಭ್ಯವಾಗಿ ಪಂಚಾಯಿತಿಗಳು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

**ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿ ರಚನೆ:** ಗ್ರಾಮ ಪಂಚಾಯಿತಿಯು ಮೂರು ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.

೧) **ಉತ್ಪಾದನಾ ಸಮಿತಿ** :

ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ ಇರುತ್ತದೆ.

೨) **ಸಾಮಾಜಿಕ ನ್ಯಾಯ ಸಮಿತಿ** :

ಎ) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಗಳಿಗೆ ಉತ್ತೇಜನ ನೀಡುವುದಕ್ಕೆ.

(ಬಿ)ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ ಶೋಷಣೆಗಳಿಂದ ಅಂತಹ ಜಾತಿಗಳಿಗೆ ಮತ್ತು ವರ್ಗಗಳಿಗೆ ರಕ್ಷಣೆ ಕೊಡುವುದಕ್ಕೆ.

(ಸಿ)ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ ಕಾರ್ಯನಿರ್ವಹಿಸುತ್ತದೆ.

೩) **ಸೌಕರ್ಯಗಳ ಸಮಿತಿ** :

ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು ಸೌಕರ್ಯಗಳ ಸಮಿತಿಯಿದೆ. ಗ್ರಾಮ ಪಂಚಾಯಿತಿಯ ಆಡಳಿತ ವಿಭಾಗವು ಅನೇಕ ಖಾಸಗಿ ಹಾಗೂ ನೇಮಕ ಸದಸ್ಯರುಗಳನ್ನು ಹೊಂದಿದ್ದು,

೧) ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮೂರು ಅಥವಾ ಐದು ಜನ ಸದಸ್ಯರು ಇರುತ್ತಾರೆ.

೨) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿಯ ಪದನಿಮಿತ್ತ ಸದಸ್ಯ ಸಭಾಪತಿಯಾಗಿರುತ್ತಾರೆ. ಉಪಾಧ್ಯಕ್ಷನು ಸಾಮಾಜಿಕ ನ್ಯಾಯಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರುತ್ತಾರೆ.

೩) ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಠಪಕ್ಷ ಒಬ್ಬ ಮಹಿಳಾ ಸದಸ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರಲೇಬೇಕು.

ಪ್ರತಿಯೊಂದು ಸಮಿತಿಯು, ಗೊತ್ತುಪಡಿಸಿರುವ ರೀತಿಯಲ್ಲಿ ರೈತರ, ಕ್ಲಬ್‌ಗಳ,

ಮಹಿಳಾ ಮಂಡಳಿಗಳ, ಯುವಕ ಮಂಡಳಿಗಳ ಮತ್ತು ಸರ್ಕಾರವು ಅಂಗೀಕರಿಸಿದ ಇತರ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು, ಪಂಚಾಯಿತಿ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನಾ ಸಮಿತಿಗೆ ಕೋ–ಆಪ್ಟ್ ಮಾಡಿಕೊಳ್ಳತಕ್ಕದ್ದು.

**ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕರ್ತವ್ಯಗಳು**

೧. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಮಟ್ಟದ ನೌಕರನಾಗಿದ್ದು, ಆತನು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಹಾಗೂ ಯೋಜನೆಗಳನ್ನು ನಿರ್ವಹಿಸಲು ಬದ್ಧನಾಗಿರತಕ್ಕದ್ದು.

೨. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ೧೯೯೩ ರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳು/ಅಧಿಕಾರಗಳನ್ನು ನಿರ್ವಹಿಸತಕ್ಕದ್ದು.

೩. ಗ್ರಾಮ ಪಂಚಾಯತ್ ನಿಧಿಯ ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಆಫೀಸ್‌ರ್ (*Drawing and Disbursing Officer*) ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು.

೪. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ, ವಿಶೇಷ ಸಭೆ ನಡೆಸುವುದು ಹಾಗೂ ನಿರ್ಣಯಗಳನ್ನು ಜಾರಿಗೊಳಿಸುವುದು.

೫. ಗ್ರಾಮ ಪಂಚಾಯಿತಿಯ ಲೆಕ್ಕಗಳ ಮತ್ತು ಬಜೆಟ್ ಮಂಡನೆ ಮಾಡಲು ಸಂಪೂರ್ಣ ಜವಾಬ್ದಾರಿ ಹೊಂದಿರತಕ್ಕದ್ದು.

೬. ಗ್ರಾಮ ಪಂಚಾಯತ್‌ನ ತೆರಿಗೆ ವಸೂಲಾತಿ ಮೇಲ್ವಿಚಾರಣೆ.

೭. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಮತ್ತು ಸಕಾಲಿಕ ಅನುಷ್ಠಾನ.

೮. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಾಸಿಕ ಪ್ರಗತಿ ವರದಿ ಸಲ್ಲಿಸುವುದು.

೯. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ, ಮೇಲ್ವಿಚಾರಣೆ, ಎಂ.ಐ.ಎಸ್.ನಿರ್ವಹಣೆ ಹಾಗೂ ಸದರಿ ಯೋಜನೆಯಡಿ ಹೊರಡಿಸುವ ಸರ್ಕಾರದ ಎಲ್ಲಾ ನಿರ್ದೇಶನಗಳನ್ನು ಪಾಲಿಸುವುದು.

೧೦. ಪಂಚತಂತ್ರ ತಂತ್ರಾಂಶ, ಇ-ಪಂಚಾಯತ್ ಮತ್ತು ಇ-ಸ್ವತ್ತು ಮೊದಲಾದ ಕಂಪ್ಯೂಟರ್ ಆಧಾರಿತ ಕಾರ್ಯಕ್ರಮಗಳ ನಿರ್ವಹಣೆ.

೧೧. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾಹಿತಿ ಕ್ರೋಢೀಕರಣ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ.

೧೨. ೨೦೦೫ ರ ಮಾಹಿತಿ ಹಕ್ಕು ಅಧಿನಿಯಮದಡಿ ಮೇಲ್ಮನವಿ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಣೆ.

೧೩. ಸಕಾಲ ಸೇವೆಗಳ ನಿರ್ವಹಣೆ

೧೪. ಕಾಲಕಾಲಕ್ಕೆ ಸರ್ಕಾರದಿಂದ ವಹಿಸಬಹುದಾದ ಇತರೆ ಕಾರ್ಯಗಳು.

## ತಾಲ್ಲೂಕು ಪಂಚಾಯಿತಿಯ ರಚನೆ

ಕರ್ನಾಟಕದ ಎಲ್ಲಾ ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ಈ ಕೆಳಗಿನ ಸದಸ್ಯರನ್ನು ಹೊಂದಿರುವಂತೆ ರಚಿಸಲಾಗಿದೆ.

೧. ಪ್ರತಿ ೧೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬರಂತೆ ಚುನಾಯಿತ ಸದಸ್ಯರಿರುತ್ತಾರೆ.

೨. ಯಾವ ಲೋಕಸಭಾ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳು ತಾಲ್ಲೂಕಿನ ಒಳಗೆ ಇದ್ದ ತಾಲ್ಲೂಕನ್ನು ಪೂರ್ತಿ ಅಥವಾ ಭಾಗಶಃ ಪ್ರತಿನಿಧಿಸುತ್ತಾರೋ ಆ ಸದಸ್ಯರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ.

೩. ತಾಲ್ಲೂಕಿನಲ್ಲಿ ಮತದಾರರಾಗಿ ನೋಂದಾಯಿತವಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು ಸದಸ್ಯರಾಗಿರುತ್ತಾರೆ.

೪. ತಾಲ್ಲೂಕಿನ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಲ್ಲಿ ೫/೧ ಭಾಗದಷ್ಟು ಅಧ್ಯಕ್ಷರು ಚೀಟಿ ಎತ್ತುವ ಮೂಲಕ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಒಂದು ವರ್ಷ ಅವಧಿಗೆ ಆಯ್ಕೆ ಮಾಡುತ್ತಾರೆ. ಅಲ್ಲದೆ ಒಮ್ಮೆ ತಾಲ್ಲೂಕು ಪಂಚಾಯಿತಿಗೆ ಅಧ್ಯಕ್ಷರಾದವರು ಎರಡನೇ ಅವಧಿಗೆ ಅಧ್ಯಕ್ಷರಾಗಲು ಅರ್ಹರಿರುವುದಿಲ್ಲ.

ತಾಲ್ಲೂಕಿನಲ್ಲಿ ೨೦೧೩ ರಲ್ಲಿ ನಡೆದ ಚಿತ್ರದುರ್ಗ ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ಆಯ್ಕೆಯಾದ ಒಟ್ಟು ಸದಸ್ಯರ ಮೀಸಲಾತಿ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.ಅದರಂತೆ ಹೊಳಲ್ಕೆರೆ ತಾಲ್ಲೂಕು ಪಂಚಾಯಿತಿಯಲ್ಲಿ ಒಟ್ಟು ೨೦(೧೦) ಸದಸ್ಯರಿದ್ದು ಅವರಲ್ಲಿ ಅನುಸೂಚಿತ ಜಾತಿ ೬(೩), ಅನುಸೂಚಿತ ಪಂಗಡ ೩(೨), ಹಿಂದುಳಿದ ಅ ವರ್ಗ ೧(೦೧), ಹಿಂದುಳಿದ ಬ ವರ್ಗ ೦(೦) ಹಾಗೂ ಸಾಮಾನ್ಯ ವರ್ಗದಿಂದ ೧೦(೦೪) ಸದಸ್ಯರ ಮೀಸಲಾತಿಯನ್ನು ನೀಡಲಾಗಿದೆ.

ಆವರಣದಲ್ಲಿ ನೀಡಿರುವ ಅಂಕಿಗಳು ಮಹಿಳಾ ಸದಸ್ಯರನ್ನು ಬಿಂಬಿಸುತ್ತದೆ. ವಿವರಗಳಿಗೆ ಮುಂದಿನ ಕೋಷ್ಟಕವನ್ನು ನೋಡಿ.

| ಕ್ರ. ಸಂ. | ತಾಲ್ಲೂಕು ಪಂಚಾಯಿತಿಗಳು | ಒಟ್ಟು ಸದಸ್ಯರ ಸಂಖ್ಯೆ | ವರ್ಗವಾರು ಮೀಸಲಿರಿಸಿದ ಸ್ಥಾನಗಳು | | | | |
|---|---|---|---|---|---|---|---|
| | | | ಅನುಸೂಚಿತ ಜಾತಿ | ಅನುಸೂಚಿತ ಪಂಗಡ | ಹಿಂದುಳಿದ (ಅ) ವರ್ಗ | ಹಿಂದುಳಿದ (ಬ) ವರ್ಗ | ಸಾಮಾನ್ಯ |
| ೧ | ಚಿತ್ರದುರ್ಗ | ೨೯(೧೫) | ೮(೪) | ೬(೩) | ೦(೦) | ೦(೦) | ೧೫(೮) |
| ೨ | ಚಳ್ಳಕೆರೆ | ೨೯(೧೫) | ೭(೪) | ೯(೫) | ೦(೦) | ೦(೦) | ೧೩(೬) |
| ೩ | ಮೊಳಕಾಲ್ಮೂರು | ೧೩(೭) | ೩(೨) | ೫(೩) | ೦(೦) | ೦(೦) | ೫(೨) |
| ೪ | ಹಿರಿಯೂರು | ೨೩(೧೨) | ೬(೩) | ೨(೧) | ೨(೨) | ೧(೦) | ೧೨(೬) |
| **೫** | **ಹೊಳಲ್ಕೆರೆ** | **೨೦(೧೦)** | **೬(೩)** | **೩(೨)** | **೧(೧)** | **೦(೦)** | **೧೦(೪)** |
| ೬ | ಹೊಸದುರ್ಗ | ೨೧(೧೧) | ೫(೩) | ೨(೧) | ೨(೨) | ೧(೦) | ೧೧(೫) |

**ಆಧಾರ: ರಾಜ್ಯ ಚುನಾವಣಾ ಆಯೋಗ.**

### ಜಿಲ್ಲಾ ಪಂಚಾಯಿತಿ ರಚನೆ

ಪ್ರತಿ ಜಿಲ್ಲೆಗೊಂದು ಜಿಲ್ಲಾ ಪಂಚಾಯಿತಿ ಇದ್ದು, ಪ್ರತಿ ೪೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ ೩೦,೦೦೦ ಜನಸಂಖ್ಯೆಗೆ ಒಬ್ಬರಂತೆ, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ೧೮,೦೦೦ ಜನಸಂಖ್ಯೆಗೆ ಅಥವಾ ಅದರ ಒಂದು ಭಾಗಕ್ಕೆ ಒಬ್ಬರಂತೆ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಹಾಗೂ ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ವಿಧಾನಸಭಾ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭೆ ಮತ್ತು ವಿಧಾನ ಪರಿಷತ್ತು ಸದಸ್ಯರು ಹಾಗೂ ಜಿಲ್ಲೆಯ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು ಇರುತ್ತಾರೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಒಟ್ಟು ಐದು ಮಂದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಗೊಂಡಿರುತ್ತಾರೆ. ಇವರಲ್ಲಿ ಮೀಸಲಾತಿ ವಿವರ ಈ ರೀತಿ ಇದೆ. ಬೋಕಿಕೆರೆ (ಹಿಂದುಳಿದ ಅ ವರ್ಗ), ಭರಮಣ್ಣ ನಾಯಕನ ದುರ್ಗ (ಸಾಮಾನ್ಯ ಮಹಿಳೆ), ಹೊರಕೆರೆ ದೇವರಪುರ(ಸಾಮಾನ್ಯ), ಮಲ್ಲಾಡಿಹಳ್ಳಿ (ಅನುಸೂಚಿತ ಪಂಗಡ), ರಾಮಗಿರಿ (ಸಾಮಾನ್ಯ).

**ಜಿಲ್ಲಾ ಯೋಜನಾ ಸಮಿತಿ**

ರಾಜ್ಯಾಂಗದ ೭೪ನೇ ತಿದ್ದುಪಡಿಯ ಕಲಂ ೨೪೩ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳು ಹಾಗೂ ಪಟ್ಟಣ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಈ ಸಮಿತಿಯು ಸಮಗ್ರೀಕರಿಸಿ ಪಂಚಾಯಿತಿ ಮತ್ತು ಪುರಸಭೆಗಳ ನಡುವೆ ಪ್ರಾದೇಶಿಕ ಯೋಜನೆ ರೂಪಿಸುವುದು, ನೀರು ಹಂಚಿಕೆ ಮತ್ತು ಇತರೆ ಪ್ರಾಕೃತಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನೂ ಸೇರಿ ಸಾಮಾನ್ಯ ಆಸಕ್ತಿಯ ವಿಚಾರಗಳಿಗೆ ಸಂಬಂಧಪಟ್ಟಂತೆ ಇಡಿಯಾಗಿ ಪರಿಗಣಿಸಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುತ್ತದೆ. ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ಹಣಕಾಸು ಮತ್ತು ಇತರ ಸಂಪನ್ಮೂಲಗಳ ಲಭ್ಯತೆಯ ಅಂಶಗಳನ್ನು ಅದು ಒಳಗೊಂಡಿರುತ್ತದೆ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾ ಯೋಜನಾ ಸಮಿತಿ ಕಾರ್ಯತಂತ್ರವನ್ನು ರೂಪಿಸುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳು ಮಾರ್ಗದರ್ಶನವನ್ನು ಮಾಡುತ್ತವೆ. ಸ್ಥಳೀಯ ಸಂಸ್ಥೆಗಳು ತಯಾರಿಸುವ ಪಂಚವಾರ್ಷಿಕ ಯೋಜನೆಗಳನ್ನು ಚರ್ಚಿಸಿ, ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾರ್ಯಗಳ ಅನುಷ್ಠಾನದ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಯೋಜನೆ ಹಾಗೂ ಇತರೆ ವಿಷಯಗಳಲ್ಲಿ ಸಮನ್ವಯ ಸಾಧಿಸುವ ವಿಶೇಷ ಅಧ್ಯಯನಗಳನ್ನು, ವಿಚಾರ ಸಂಕಿರಣಗಳನ್ನು ಹಾಗೂ ಹೊಸ ಸುಧಾರಣೆಗಳನ್ನು ತರುವ ಪ್ರಕಾರ್ಯಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ವಹಿಸಲಾಗಿದೆ.

ಪಂಚಾಯತ್ ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಖಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಪ್ರತ್ಯೇಕವಾದ ರಾಜ್ಯ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗಗಳನ್ನು ನೇಮಿಸಿದೆ. ಈ ಸಂಸ್ಥೆಗಳಿಗೆ ಪ್ರತಿ ಐದು ವರ್ಷಗಳಿಗೆ ಒಮ್ಮೆ ತಪ್ಪದೇ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿಯೊಂದು ಹಂತದಲ್ಲಿ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ನಿರ್ವಹಣಾ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಅಧಿಕಾರಿಯನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" (ಸಿ.ಇ.ಓ) ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಮೂರನೆಯ ಎರಡು ($\frac{2}{3}$) ಬಹುಮತದ ಆಧಾರದ ಮೇಲೆ ಮಾತ್ರ ಪದಚ್ಯುತಿಗೊಳಿಸಬಹುದಾಗಿದೆ. ಇಂತಹ ವ್ಯವಸ್ಥೆಯಿಂದ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಿರತೆಯನ್ನು ಒದಗಿಸುವುದಕ್ಕೆ ಸಹಾಯಕವಾಗುತ್ತದೆ.

## ಸಾರ್ವತ್ರಿಕ ಆಡಳಿತ

ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳನ್ನು ಸಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ಅಂತಹ ಪಂಚಾಯಿತಿಗಳನ್ನು ರದ್ದುಪಡಿಸಬಹುದು. ಹೊಸ ಕಾನೂನಿನನ್ವಯ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟು ಸಿಬ್ಬಂದಿಯ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಯಾವುದೇ ಗ್ರಾಮದ ಹಿತಕ್ಕೆ ಮಾರಕವಾದ ಕೆಲಸ ಮಾಡುವ ಅಥವಾ ಸಭೆಯಲ್ಲಿ ನಿರ್ಣಯಿಸಿದ ಗೊತ್ತುವಳಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕೆ ಇದೆ. ಪ್ರತಿ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕವಾದ ನಿಧಿಯನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯಿತಿಯ ಕೆಲಸ ಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

### ಪಂಚಾಯಿತಿಗಳಿಗೆ ಬಹುಮಾನ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡುವ ಮೂರು ಹಂತದ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರ ೧೯೯೩ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಅನ್ವಯ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ. ಒಂದು ಲಕ್ಷ, ರೂ. ೫೦ ಸಾವಿರ ಮತ್ತು ರೂ. ೨೫ ಸಾವಿರ), ತಾಲ್ಲೂಕು ಪಂಚಾಯಿತಿಗಳಿಗೂ ಮೂರು ಬಹುಮಾನಗಳನ್ನು (ರೂ. ಎರಡು ಲಕ್ಷ, ರೂ. ಒಂದು ಲಕ್ಷ ಮತ್ತು ರೂ. ೫೦ಸಾವಿರ) ಹಾಗೂ ರಾಜ್ಯ ಮಟ್ಟದ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ ರೂ. ಐದು ಲಕ್ಷದ ಬಹುಮಾನ ನೀಡುವ ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್ತುಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಟ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯಿತಿ ರಚಿಸಲಾಯಿತು. ಗ್ರಾಮೀಣ ಜನತೆಯ ಆಶೋತ್ತರಗಳಿಗನುಗುಣವಾಗಿ ಸರ್ಕಾರವು ಕೈಗೊಳ್ಳುವ ಬಹುತೇಕ ಅಭಿವೃದ್ಧಿ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆ, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗದವರಿಗೆ ಕಾನೂನಿನನ್ವಯ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ. ಮಹಿಳೆಯರಿಗೆ ಚುನಾಯಿತ ಸದಸ್ಯ ಬಲದ

ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಎಲ್ಲಾ ಚುನಾಯಿತ ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

**ಹೊಳಲ್ಕೆರೆ ಪಟ್ಟಣ ಪಂಚಾಯಿತಿ**

ಪಟ್ಟಣದ ವಸತಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಖಾಲಿ ನಿವೇಶನಗಳು ಇವುಗಳಿಂದ ಕಂದಾಯವನ್ನು ಸಂಗ್ರಹಿಸುವುದಲ್ಲದೇ, ತರಕಾರಿ ಮಾರುಕಟ್ಟೆ ಬಾಡಿಗೆ, ಮಟನ್ ಸ್ಟಾಲ್ ಹರಾಜು, ವಾರದ ಸಂತೆ, ಪುಟ್‌ಪಾತ್ ಜಾಗ ಹರಾಜು, ನೀರಿನ ತೆರಿಗೆ ಮುಂತಾದವುಗಳು ಆದಾಯದ ಸಂಪನ್ಮೂಲಗಳಾಗಿವೆ. ಪಟ್ಟಣ ಪಂಚಾಯಿತಿಯು ಪಟ್ಟಣಗಳ ರಸ್ತೆಗಳು, ಚರಂಡಿ, ಬೀದಿ ದೀಪ, ನೈರ್ಮಲ್ಯತೆ ಮುಂತಾದ ನಾಗರಿಕ ಸೌಲಭ್ಯಗಳನ್ನು ನಿರ್ವಹಿಸುತ್ತದೆ.

ಹೊಳಲ್ಕೆರೆ ಪಟ್ಟಣಕ್ಕೆ ಶಾಂತಿ ಸಾಗರ ಜಲಾಶಯ ಮೂಲದಿಂದ ಹಿರೆಕಂದವಾಗಿ ಹತ್ತಿರವಿರುವ ನೀರು ಶುದ್ಧೀಕರಣ ಘಟಕದ ಮುಖಾಂತರ ಮತ್ತು ಕೊಳವೆ ಬಾವಿಗಳಿಂದ ಹೊಳಲ್ಕೆರೆ ಪಟ್ಟಣದ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

ತುಂಗ ಭದ್ರ ನದಿಯಿಂದ ನೀರಿನ ಪೂರೈಕೆ ಮಾಡುತ್ತಿದ್ದು, ನದಿಯಲ್ಲಿ ನೀರಿನ ಹರಿವು ಕಡಿಮೆ ಇದ್ದ ಸಂದರ್ಭದಲ್ಲಿ ಪಟ್ಟಣದ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳಿಂದ ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ೩೦ ಕೊಳವೆ ಬಾವಿಗಳು, ೦೨ ಪಂಪಿಂಗ್ ಸ್ಟೇಷನ್ ಹಾಗೂ ೦೬ ನೀರು ಸಂಗ್ರಾಹಕಗಳಿವೆ. ಟ್ಯಾಂಕ್‌ಗಳ ಕ್ಷಮತೆ ೨.೫೦ ಲಕ್ಷ ಲೀಟರ್‌ನ ಎರಡು ಟ್ಯಾಂಕ್‌ಗಳು, ೨.೨೭ ಲಕ್ಷ ಲೀಟರ್‌ನ ಎರಡು ಟ್ಯಾಂಕ್‌ಗಳು, ೦.೫೦ ಲಕ್ಷ ಲೀಟರ್‌ನ ಎರಡು ಟ್ಯಾಂಕ್‌ಗಳು, ಒಟ್ಟು ೦೬ ಟ್ಯಾಂಕ್‌ಗಳ ಸಂಗ್ರಹಣ ಕ್ಷಮತೆ ೧೦.೫೪ ಲಕ್ಷ ಲೀಟರ್‌ಗಳಾಗಿವೆ. ೩೨ ಸಾರ್ವಜನಿಕ ಕೊಳಾಯಿಗಳು, ೨೪೧೦ ಗೃಹಬಳಕೆ ಹಾಗೂ ೧೮ ವಾಣಿಜ್ಯ ಸಂಪರ್ಕಗಳಿದ್ದವು. ಪಟ್ಟಣದಲ್ಲಿ ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೭೦ ಎಲ್.ಪಿ.ಸಿ.ಡಿ ಆಗಿದೆ. ನೀರು ಸರಬರಾಜಿಗಾಗಿ ರೂ.೧,೦೬,೦೨,೦೯೪-೦೦ ಗಳನ್ನು ವೆಚ್ಚ ಮಾಡಲಾಗಿದೆ. ಪಟ್ಟಣ ಪಂಚಾಯಿತಿಗೆ ೧೯೫೫ ರಲ್ಲಿ ವಿದ್ಯುತ್ ಸಂಪರ್ಕ ದೊರೆತಿರುತ್ತದೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ೯೪೦ ಟ್ಯೂಬ್‌ಲೈಟ್‌ಗಳನ್ನು, ೧೮೦ ಸೋಡಿಯಂ ವೇಪರ್ ದೀಪಗಳನ್ನು, ೦೫ ಹೈಮಾಸ್ಕ ದೀಪಗಳನ್ನು, ೧,೦೧೨ ಸಿಎಫ್‌ಎಲ್ ಹಾಗೂ ೨೧೦ ಎಲ್.ಇ.ಡಿ. ದೀಪಗಳನ್ನು ಹೀಗೆ ಒಟ್ಟು ೨,೩೪೭ ಬೀದಿ ದೀಪಗಳು ಅಳವಡಿಸಲಾಗಿದೆ. ಇದಕ್ಕಾಗಿ ರೂ.೨೨,೬೬,೮೧೦-೦೦ ವೆಚ್ಚ ಮಾಡಲಾಗಿದೆ. ಪಟ್ಟಣ ಪಂಚಾಯಿತಿಗೆ ತೆರಿಗೆ ಮೂಲಕ ಸಂದಾಯವಾಗುತ್ತಿರುವ ಹಣ ರೂ.೩೧,೯೪,೭೬೨-೦೦ ಗಳಾಗಿದೆ. ಹೆಚ್ಚಿನ ವಿವರಗಳಿಗೆ ಮುಂದೆ ನೀಡಿರುವ ಕೋಷ್ಟಕಗಳನ್ನು ನೋಡಿ.

## ೨೦೧೩ ರಲ್ಲಿ ನಡೆದ ಹೊಳಲ್ಕೆರೆ ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ ಆಯ್ಕೆಗೊಂಡ ಸದಸ್ಯರುಗಳ ಮೀಸಲಾತಿ ವಿವರ.

| ಸ್ಥಾನಗಳ ವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ ವರ್ಗ | ೦೫ | ೦೨ | ೦೭ |
| ಹಿಂದುಳಿದ ವರ್ಗ 'ಎ' | ೦೩ | ೦೧ | ೦೪ |
| ಹಿಂದುಳಿದ ವರ್ಗ 'ಬ' | ೦೦ | ೦೧ | ೦೧ |
| ಪರಿಶಿಷ್ಟ ಜಾತಿ | ೦೧ | ೦೧ | ೦೨ |
| ಪರಿಶಿಷ್ಟ ಪಂಗಡ | ೦೦ | ೦೧ | ೦೧ |
| ಒಟ್ಟು | ೦೯ | ೦೬ | ೧೫ |

ಆಧಾರ: ಪಟ್ಟಣ ಪಂಚಾಯಿತಿ, ಹೊಳಲ್ಕೆರೆ.

## ಹೊಳಲ್ಕೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ೨೦೧೩-೧೪ ರಿಂದ ೨೦೧೭-೧೮ ರವರೆಗೆ ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ.

| ವರ್ಷ | ವೆಚ್ಚ (ರೂ ಲಕ್ಷಗಳಲ್ಲಿ) |
|---|---|
| ೨೦೧೩-೧೪ | ೨೯.೭೮ |
| ೨೦೧೪-೧೫ | ೧೫೭.೪೧ |
| ೨೦೧೫-೧೬ | ೧೪೯.೧೭ |
| ೨೦೧೬-೧೭ | ೧೦೫.೭೨ |
| ೨೦೧೭-೧೮ | ೧೦೬.೦೨ |

ಆಧಾರ: ಪಟ್ಟಣ ಪಂಚಾಯಿತಿ, ಹೊಳಲ್ಕೆರೆ.

## ಹೊಳಲ್ಕೆರೆ ಪಟ್ಟಣ ಪಂಚಾಯಿತಿಯ ಆದಾಯ ಮತ್ತು ವೆಚ್ಚಗಳ ವಿವರ

(ರೂ.ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೧೦-೧೧ | ೨೬೬.೨೬ | ೧೪೧.೨೯ |
| ೨೦೧೧-೧೨ | ೩೫೭.೭೬ | ೧೭೦.೦೮ |
| ೨೦೧೨-೧೩ | ೩೨೧.೯೫ | ೧೫೭.೦೬ |
| ೨೦೧೩-೧೪ | ೨೩೭.೯೬ | ೧೩೮.೩೧ |
| ೨೦೧೪-೧೫ | ೨೯೨.೪೫ | ೨೩೦.೨೩ |
| ೨೦೧೫-೧೬ | ೫೫೯.೩೫ | ೨೪೬.೪೪ |
| ೨೦೧೬-೧೭ | ೩೬೯.೬೯ | ೨೬೧.೧೮ |
| ೨೦೧೭-೧೮ | ೫೩೭.೮೬ | ೨೫೮.೯೦ |

**ಹೊಳಲ್ಕೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ೨೦೧೦-೧೧ ರಿಂದ ೨೦೧೭-೧೮ ರವರೆಗೆ ವಿವಿಧ ಮೂಲ ಸೌಕರ್ಯ ಒದಗಿಸಲು ಮಾಡಿದ ವೆಚ್ಚದ ವಿವರ**

(ರೂ.ಲಕ್ಷಗಳಲ್ಲಿ)

| ವಿವರ | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ | ೨೦೧೬-೧೭ | ೨೦೧೭-೧೮ |
|---|---|---|---|---|---|---|---|---|
| ಜನಾರೋಗ್ಯ ಮತ್ತು ನೈರ್ಮಲ್ಯ | ೨.೨೦ | ೨.೭೨ | ೬.೨೪ | ೧೧.೩೮ | ೫.೩೬ | ೫.೦೩ | ೧೧.೮೭ | ೨೬.೪೮ |
| ನೀರು ಸರಬರಾಜು | ೨೫.೨೫ | ೨೫.೩೬ | ೩೮.೧೪ | ೨೯.೭೮ | ೧೫೭.೪೧ | ೧೪೯.೧೭ | ೧೦೫.೭೨ | ೧೦೬.೦೨ |
| ಸಾರ್ವಜನಿಕ ಕಾಮಗಾರಿ | ೨೦.೫೦ | ೧೧.೧೬ | ೫೭.೯೩ | ೨೫.೭೬ | ೧೭.೨೮ | ೨೬.೭೩ | ೨೪.೬೧ | ೨೦.೫೬ |
| ರಸ್ತೆ ಮತ್ತು ದೀಪ ನಿರ್ವಹಣೆ | ೨೦.೪೬ | ೧.೯೯ | ೪೩.೯೨ | ೧೨೯.೦೪ | ೬೪.೨೫ | ೧೦೯.೦೧ | ೮೩.೪೯ | ೧೦೨.೬೮ |
| ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೩೪.೧೭ | ೬೪.೦೮ | ೪೯.೩೯ | ೨೨.೫೭ | ೪೩.೮೬ | ೬೬.೫೦ | ೪೯.೭೩ | ೩೯.೩೨ |
| ಇತರೆ | ೩೮.೭೨ | ೫೫.೨೪ | ೩೬.೫೬ | ೮೦.೨೨ | ೫೭.೯೩ | ೧೦೪.೦೦ | ೧೪.೨೪ | ೩೧.೧೬ |

ಆಧಾರ: ಪಟ್ಟಣ ಪಂಚಾಯಿತಿ, ಹೊಳಲ್ಕೆರೆ.

**ಹೊಳಲ್ಕೆರೆ ಪಟ್ಟಣ ಪಂಚಾಯಿತಿಯ ಸ್ವರ್ಣಜಯಂತಿ ಶಹರಿರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

(ರೂ.ಲಕ್ಷಗಳಲ್ಲಿ)

| ವಿವರ | ೨೦೧೦-೧೧ | | ೨೦೧೧-೧೨ | | ೨೦೧೨-೧೩ | | ೨೦೧೩-೧೪ | | ೨೦೧೪-೧೫ | | ೨೦೧೫-೧೬ | | ೨೦೧೬-೧೭ | | ೨೦೧೭-೧೮ | |
|---|---|---|---|---|---|---|---|---|---|---|---|---|---|---|---|---|
| | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ |
| ತರಬೇತಿ ಕಾರ್ಯಕ್ರಮ | ೨.೯೫ | ೦.೪೦ | ೦.೮೫ | ೨.೫೪ | ೧.೬೦ | ೦.೨೪ | ೨.೬೪ | ೪.೪೫ | ೬.೫೫ | ೬.೯೫ | ೦.೦೦ | ೦.೦೦ | ೧.೫೪ | ೦.೦೦ | ೦.೦೬೪ | ೦.೦೦ |
| ಸಾಮಾಜಿಕ ಸೇವೆ | ೦.೪೧ | ೦.೪೧ | ೦.೫೦ | ೦.೪೦ | ೦.೫೦ | ೦.೦೦ | ೧.೦೦ | ೦.೧೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ |
| ನರಗ ಕೂಲಿ ಉದ್ಯೋಗ | ೧.೧೭ | ೧.೧೭ | ೧.೯೬ | ೧.೮೬ | ೦.೮೯ | ೦.೦೦ | ೦.೦೦ | ೦.೮೨ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ |
| ನಿರಂತರ ಉಳಿತಾಯ ಗುಂಪು ರಚನೆ | ೦.೪೦ | ೦.೨೦ | ೦.೮೦ | ೦.೮೦ | ೦.೪೦ | ೦.೨೦ | ೦.೮೦ | ೦.೪೦ | ೦.೦೦ | ೦.೮೦ | ೧.೫೦ | ೧.೪೦ | ೦.೩೧ | ೦.೦೦ | ೩.೮೫ | ೦.೦೦ |
| ದ್ವಾಕ್ರಾ | ೩.೦೦ | ೩.೦೦ | ೩.೦೦ | ೩.೦೦ | ೩.೦೦ | ೦.೦೦ | ೩.೦೦ | ೬.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ |
| ಮೂಲಭೂತ ಸೌಕರ್ಯ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ |
| ಸ್ವಯಂ ಉದ್ಯೋಗ ಯೋಜನೆ | ೧.೦೦ | ೧.೦೦ | ೨.೦೦ | ೨.೦೦ | ೧.೫೦ | ೧.೫೦ | ೪.೦೦ | ೪.೦೦ | ೦.೦೦ | ೦.೦೦ | ೦.೪೬ | ೦.೦೦ | ೦.೩೯ | ೦.೦೦ | ೦.೪೮ | ೦.೦೬೬ |

ಆಧಾರ: ಪಟ್ಟಣ ಪಂಚಾಯಿತಿ, ಹೊಳಲ್ಕೆರೆ. ಸೂಚನೆ: ಅ-ಅನುದಾನ, ವೆ-ವೆಚ್ಚ.

## ಅಧ್ಯಾಯ-೯

# ಶಿಕ್ಷಣ ಮತ್ತು ಕ್ರೀಡೆ

**ಆ** 'ನಾಡೊಳೆಸೆವುದುನಾನಾ ವಿದ್ವಜ್ಜನ ಸ್ಥಾನಂ ನೀರ್ಗುಂದಮೆನಿಪಗ್ರಹಾರ ಮತ್ತ್ಯಾನಂದಕಾರಿ ಜಗಕ್ಕೆಲ್ಲಂ' ಎಂದು ಪ್ರಾಚೀನ ಕಾಲದಲ್ಲಿದ್ದ ನೀರಗುಂದ ಅಗ್ರಹಾರವನ್ನು ಕ್ರಿ.ಶ. ೧೧೫೮ರ ಶಿಕಾರಿಪುರ ಶಾಸನದಲ್ಲಿ ಹೊಗಳಲಾಗಿದೆ. ವೇದಾಂತ ಪಾರಂಗತ ಬ್ರಾಹ್ಮಣರು ಅಲ್ಲಿದ್ದ ಬಗ್ಗೆ ಹಾಗೂ ಅವರ ಹೆಸರುಗಳು ಮತ್ತು ಗೋತ್ರಗಳ ಬಗ್ಗೆ ಮಳಲಿ ತಾಮ್ರಶಾಸನದಲ್ಲಿ ಹೇಳಲಾಗಿದೆ. ಬೂದಿಹಾಳು ಪಾಳೆಯಗಾರರ ವ್ಯಾಪ್ತಿಯಲ್ಲಿಯೂ ಕೃಷ್ಣರಾಯ ಸಮುದ್ರ ಅಗ್ರಹಾರವಿದ್ದ ಬಗ್ಗೆ ತಾಮ್ರಶಾಸನವೊಂದರಲ್ಲಿ ಹೇಳಲಾಗಿದೆ. ಬಾಗೂರು ಸೀಮೆಗೆ ಸೇರಿದ್ದ 'ಗುಂಟನೂರು ಮಾಗಣೆಯ ಅಗ್ರಹಾರ' ಹಾಗೂ ಮತ್ತೋಡು ಪಾಳೆಯಗಾರರ ಕಾಲದಲ್ಲಿದ್ದ 'ಗಂಜೀಗೆರೆ ಅಗ್ರಹಾರ'ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಈ ಅಗ್ರಹಾರಗಳು 'ವಿಶ್ವವಿದ್ಯಾಲಯಗಳಾಗಿ ಆಗಿನ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು (ನಾನಾ ವಿಷಯಗಳಲ್ಲಿ) ಕಲಿಸುತ್ತಿದ್ದವು. 'ಗದ್ಯ' ಮತ್ತು 'ಪದ್ಯ'ದಲ್ಲಿ ನಕ್ಷತ್ರಶಾಸ್ತ್ರ, ಧರ್ಮಶಾಸ್ತ್ರ, ಶಾಸನ, ಗಣಿತಶಾಸ್ತ್ರ ಮುಂತಾದವುಗಳನ್ನು ಬೇರೆ ಬೇರೆ ವಿದ್ವಾಂಸರು ಬೋಧಿಸುತ್ತಿದ್ದು, ಸಂಸ್ಕೃತ ಮತ್ತು ಕನ್ನಡ ಮಾಧ್ಯಮಗಳಿದ್ದವು. ಕಾಲ ಕ್ರಮೇಣ ಈ ಸೀಮೆಯ ಅನೇಕ ಮಠಗಳಲ್ಲಿ, ದೇವಸ್ಥಾನಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದುದನ್ನು ಕೆಲವು ಲೋಕಾರೂಢಿಯ ಮಾತು ಮತ್ತು ಶಬ್ದಗಳಲ್ಲಿರುವ ಪುರಾವೆಯಿಂದ ಗ್ರಹಿಸಬಹುದು. ಉದಾಹರಣೆಗೆ, ಐವತ್ತು ವರ್ಷಗಳ ಹಿಂದೆ ಜನರು ಶಾಲೆಗಳನ್ನು ಮಠಗಳೆಂದು ಕರೆಯುತ್ತಿದ್ದರು. ಸರ್ಕಾರಿ ಶಾಲೆಗಳಲ್ಲದೆ ಖಾಸಗಿಯಾಗಿ ಕಲಿಸುತ್ತಿದ್ದ ಶಾಲೆಗೆ 'ಕೂಲಿಮಠ' ಎಂದು ಕರೆಯುತ್ತಿದ್ದರು. ಮಗನನ್ನು ಶಾಲೆಗೆ ಸೇರಿಸಿದರೆ ನಮ್ಮ ಮಗನನ್ನು ಮಠಕ್ಕೆ ಸೇರಿಸಿದ್ದೇವೆ ಎಂದು ಹೇಳುವುದು ಚಾಲ್ತಿಯಲ್ಲಿತ್ತು. ಇದನ್ನು ಕೂಲಿಮಠವೆಂದು ಕರೆಯುತ್ತಿದ್ದರು. ಅಂತಹ ಅನೇಕ ಕೂಲಿಮಠಗಳು ಈ ಪ್ರಾಂತ್ಯದಲ್ಲೂ ಇದ್ದವು. ಮುಂದೆ ಸರ್ಕಾರದ ವತಿಯಿಂದ ಈ ಶಾಲೆಗಳಿಗೆ ಅನುದಾನವನ್ನು ಕೊಟ್ಟು ಅವುಗಳನ್ನು ಅನುದಾನಿತ ಶಾಲೆಗಳೆಂದು ಕರೆಯುತ್ತಿದ್ದು, ಈ ಶಾಲೆಗಳು ೧೯೩೦ರ ವರೆಗೂ ಚಾಲ್ತಿಯಲ್ಲಿದ್ದವು. ಆಗ ಅಲ್ಪ

ಸಂಬಳದ ಮೇಲೆ ಇಲ್ಲಿನ ಉಪಾಧ್ಯಾಯರು ಕೆಲಸ ಮಾಡುತ್ತಿದ್ದರು, ಒಟ್ಟಿನಲ್ಲಿ ಶೇ.೪ ರಂತಿದ್ದ ವಿದ್ಯಾವಂತರ ಸಂಖ್ಯೆ ಆಗ ಶೇ.೮ ರಿಂದ ಶೇ.೧೦ ಕ್ಕೇರಿತು. ಈಗಲೂ ಅನೇಕ ಮಠಗಳು ಶಿಕ್ಷಣ ಕೇಂದ್ರಗಳನ್ನು ನಡೆಸುತ್ತಿರುವುದನ್ನು ಕಾಣಬಹುದು. ಹೀಗೆ, ಪ್ರಾಚೀನ ಕಾಲದಿಂದಲೂ ಈ ಸೀಮೆಯಲ್ಲಿ ಶಿಕ್ಷಣಕ್ಕೆ ಪ್ರಾಶಸ್ತ್ಯವಿದ್ದುದನ್ನು ಅರಿಯಬಹುದು. ಹಿಂದೆ, ವಿದ್ಯೆ ಕಲಿಸುವ ಗುರುಗಳಿಗೆ ದವಸಧಾನ್ಯಗಳ ರೂಪದಲ್ಲಿ ಕಾಣಿಕೆ (ಶುಲ್ಕ) ಸಲ್ಲಿಸಲಾಗುತ್ತಿದ್ದಿತು. ವರ್ಷಕ್ಕಿಷ್ಟು ದವಸ ಎಂದು ಆಯ (ನಿಗದಿ) ಕೊಡಲಾಗುತ್ತಿತ್ತು. ಗುರುವಿನ ಪಾದಸೇವಕರಾಗಿ ಶಿಷ್ಯರು (ವಿದ್ಯಾರ್ಥಿಗಳು) ಇರುತ್ತಿದ್ದರು. ಧರ್ಮಛತ್ರಗಳಲ್ಲಿಯೂ, ಊರಿನ ಚಾವಡಿಗಳಲ್ಲಿಯೂ ಪಾಠಶಾಲೆಗಳು ನಡೆಯುತ್ತಿದ್ದವೆನ್ನಲಾಗಿದೆ. ನೀತಿ ಪಾಠಗಳನ್ನು, ಪುಣ್ಯಕಥೆಗಳನ್ನು ರಾಮಾಯಣ, ಮಹಾಭಾರತ, ಶ್ಲೋಕ ಇತ್ಯಾದಿಗಳನ್ನು ಹೆಚ್ಚಾಗಿ ಹೇಳಿಕೊಡಲಾಗುತ್ತಿತ್ತು.

ಆಂಗ್ಲರ ಕಾಲದಲ್ಲಿ ಸಂಸ್ಕೃತ ಕಲಿಕೆಗೆ ಹಿನ್ನಡೆಯಾಯಿತಲ್ಲದೆ, ಕನ್ನಡವೂ ಗೌಣವಾಗತೊಡಗಿ ಇಂಗ್ಲಿಷ್ ಶಾಲೆಗಳು ನಾಡಿನೆಲ್ಲೆಡೆ (ಅಲ್ಲಲ್ಲಿ) ತೆರೆಯಲ್ಪಟ್ಟವು. ಕ್ರಿಶ್ಚಿಯನ್ ವಿದ್ಯಾಸಂಸ್ಥೆಗಳು ಬೇರೆ ಬೇರೆ ವಿಷಯಗಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಬೋಧಿಸತೊಡಗಿದವು. ಕ್ರೈಸ್ತರು ಮತಪ್ರಚಾರದೊಂದಿಗೆ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಾಗಿ ಸ್ಥಾಪಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಮಠಗಳು ಸಹ ಮಂಕಾದವು. ಶಿಕ್ಷಣವನ್ನು ಇಂಗ್ಲಿಷ್‌ನಲ್ಲಿ ಕಲಿಯುವುದು ಅನಿವಾರ್ಯವೆಂಬ ಪರಿಸ್ಥಿತಿ ಇದ್ದಿತು. ೧೮೫೪ರಲ್ಲಿ ವುಡ್ಸ್‌ನ ವರದಿಯ ನಂತರ ಭಾರತದಲ್ಲಾದ ಹೊಸ ಶಿಕ್ಷಣ ನೀತಿ ರಾಜ್ಯದ ಎಲ್ಲೆಡೆ ತನ್ನ ಪ್ರಭಾವ ಬೀರಿತು. ಮೈಸೂರು ಸಂಸ್ಥಾನದಲ್ಲಿ ೧೮೫೭ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾರಂಭವಾಯಿತು. ೧೮೭೮ರಲ್ಲಿ ಬೆಂಗಳೂರಿನಲ್ಲಿ ಪಠ್ಯ ಪುಸ್ತಕಗಳ ಮುದ್ರಣಾಲಯ ಪ್ರಾರಂಭವಾಯಿತು. ಶಿಕ್ಷಕರ ತರಬೇತಿಗಾಗಿ, ನಾರ್ಮಲ್ ಶಾಲೆಗಳು ಪ್ರಾರಂಭಗೊಂಡವು. ೧೮೬೪ರಲ್ಲಿ ಒಂಬತ್ತು ರೂಪಾಯಿಗಿಂತ ಹೆಚ್ಚಿನ ವೇತನ ಪಡೆಯುತ್ತಿದ್ದ ಸರ್ಕಾರಿ ನೌಕರರು ಮಾತ್ರ ಭಾಷೆ ಓದಲು ಬರೆಯಲು ಬಲ್ಲವರಾಗಿರಬೇಕೆಂದು ಕಾನೂನು ಜಾರಿಗೊಳಿಸಿತು. ಬಿ.ಎಲ್. ರೈಸ್‌ರವರು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಪ್ರತಿ ಹೋಬಳಿಗೆ ಒಂದು ಪ್ರಾಥಮಿಕ ಶಾಲೆ ಇರಬೇಕೆಂದು ನಿರ್ಧರಿಸಿ ಶಾಲೆಗಳನ್ನು ಸ್ಥಾಪಿಸಿದರು. ೧೮೭೪ರಲ್ಲಿ ಬಿ.ಎಲ್. ರೈಸ್‌ರವರು ಶಿಕ್ಷಣ ಇಲಾಖೆಯ ಅತ್ಯುನ್ನತ ಹುದ್ದೆಯಾದ ವಿದ್ಯಾಖಾತೆಯ ಕಾರ್ಯದರ್ಶಿಯ ಹುದ್ದೆಗೆ ಬಡ್ತಿ ಪಡೆದು, ಶಾಲೆಗಳ ಸ್ಥಾಪನೆಗೆ ಆದ್ಯ ಗಮನ ಹರಿಸಿ, ಅನೇಕ ಸುಧಾರಣೆಗಳನ್ನು ಮಾಡಿದರು. ೧೮೮೩ರಲ್ಲಿ ಬಿ.ಎಲ್.ರೈಸ್ ಅವರು ಇಡೀ ದೇಶದ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಾಗಿ ಬ್ರಿಟಿಷ್ ಕೇಂದ್ರ ಸರ್ಕಾರಕ್ಕೆ ಆಯೋಗದ ಕಾರ್ಯದರ್ಶಿಯಾಗಿ ವರದಿಯೊಂದನ್ನು ಸಲ್ಲಿಸಿದರು. ಅವರು ಅತ್ಯುತ್ತಮ ಶಿಕ್ಷಣ ತಜ್ಞರೆಂದು ಪ್ರಸಿದ್ಧಿಗೊಂಡಿದ್ದರು. ಇಪ್ಪತ್ತು ರೂಪಾಯಿ ಮಾಸಿಕ ವೇತನ ಪಡೆಯುವ ಸರ್ಕಾರಿ ಹುದ್ದೆಗಳಿಗೆ ಇಂಗ್ಲೀಷನ್ನೊಳಗೊಂಡ ಸಾಮಾನ್ಯ ಶಿಕ್ಷಣ ಪರೀಕ್ಷೆ

ಕಡ್ಡಾಯವಾದುದರಿಂದ ಇಂಗ್ಲೀಷ್ ಶಿಕ್ಷಣದ ಮಹತ್ವ ಅಧಿಕವಾಯಿತು. ಇದು ಗ್ರಾಮೀಣ ಪ್ರದೇಶದಲ್ಲಿ ಪರಿಣಾಮ ಮೂಡಿಸಲಿಲ್ಲ.

೧೮೮೦ ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ರೂಪುಗೊಂಡಾಗ ಹೊಳಲ್ಕೆರೆ ಒಂದು ತಾಲ್ಲೂಕು ಆಗಿತ್ತು, ಅಂದರೆ ೧೮೮೨ರಲ್ಲಿ ನಮ್ಮ ರಾಜ್ಯವ್ಯವಸ್ಥೆಯಲ್ಲಿ ೬೦ ತಾಲ್ಲೂಕುಗಳು, ೧೭ ಉಪತಾಲ್ಲೂಕು ರಚನೆಗೊಂಡಿದ್ದವು. ಹೊಳಲ್ಕೆರೆ ತಾಲ್ಲೂಕು ವಿದ್ಯಾಧಿಕಾರಿಗಳೇ ಶಾಲಾ ತನಿಖಾಧಿಕಾರವನ್ನು ಹೊಂದಿದ್ದರು. ಹೊಳಲ್ಕೆರೆ ವಲಯ ವಿದ್ಯಾಧಿಕಾರಿಗಳು ಈ ವ್ಯಾಪ್ತಿಗೆ ಸೇರಿದ್ದ ಉಪಾಧ್ಯಾಯರಿಗೆ ಸಂಬಳ ಬಟವಾಡೆ ಮಾಡಲು ಬರುತ್ತಿದ್ದು, ಇಲಾಖೆಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆದುಕೊಳ್ಳುತ್ತಿದ್ದರು ಹಾಗೂ ಶಾಲಾ ಮೇಲ್ವಿಚಾರಣೆ, ತನಿಖೆ ಇತ್ಯಾದಿಗಳನ್ನು ನಡೆಸುತ್ತಿದ್ದರು.

## ಸಾಕ್ಷರತೆ

ಹಿಂದಿನ ಕಾಲದಲ್ಲಿ ರೋಗ-ರುಜಿನಗಳು ಅಧಿಕವಾಗಿದ್ದು, ಜನರು ಪ್ರಾಣಾಂತಿಕ ಕಾಯಿಲೆಗಳಿಂದ ಬಳಲುತ್ತಿದ್ದರು. ಇದರಿಂದಾಗಿ ಶಿಕ್ಷಣದ ಕಡೆಗೆ ಹೆಚ್ಚು ಗಮನ ನೀಡಲು ಸಾಧ್ಯವಾಗುತ್ತಿರಲಿಲ್ಲ. ಅನಾರೋಗ್ಯದ ಜೊತೆಗೆ ಬಡತನವೂ ಸೇರಿ, ಜನರು ಜೀವಿಸುವುದು ಪ್ರಯಾಸದಾಯಕವಾಗಿರುತ್ತಿತ್ತು. ಹೀಗೆ ಗ್ರಾಮೀಣ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಅನಾರೋಗ್ಯ ಮತ್ತು ಬಡತನ ಇದ್ದುದರಿಂದ, ಮೂಢ ನಂಬಿಕೆಗಳೂ, ಅಜ್ಞಾನವೂ ಹೆಚ್ಚಾಗಿ ಬೆಳೆಯಲು ಕಾರಣವಾಯಿತು. ಬಾಲ್ಯವಿವಾಹ, ಸತೀಪದ್ಧತಿ, ಗುಲಾಮಗಿರಿ ಮುಂತಾದ ಅನಿಷ್ಟ ಪದ್ಧತಿಗಳು ಬೆಳೆದು ಶಿಕ್ಷಣಕ್ಕೆ ಜನರು ಹೆಚ್ಚು ಗಮನ ಹರಿಸುತ್ತಿರಲಿಲ್ಲ. ಇದರೊಂದಿಗೆ ಭೀಕರ ಬರಗಾಲವೂ ಆಗಾಗ್ಗೆ ತಲೆದೋರುತ್ತಿದ್ದುದರಿಂದ, ಜನಜೀವನ ದುಸ್ತರವಾಗುತ್ತಿತ್ತು. ದುಡಿಮೆಗಾಗಿ ಮಲೆನಾಡು ಪ್ರದೇಶಗಳಿಗೆ ಗುಳೇ ಹೋಗುತ್ತಿದ್ದುದರಿಂದ, ಶಿಕ್ಷಣಕ್ಕೆ ಗಮನ ನೀಡಲು ಸಾಧ್ಯವಾಗುತ್ತಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಬಹಳ ಜನರು ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ವಿವಿಧ ರೀತಿಯ ಆಂದೋಲನಗಳಲ್ಲಿ ಪಾಲ್ಗೊಳ್ಳಲು ಮನೆ ಮಾರಿಬಿಟ್ಟು ಅಜ್ಞಾತ ಸ್ಥಳಗಳಲ್ಲಿದ್ದುಕೊಂಡು ಸಂಘಟನೆಯೊಂದಿಗೆ ಹೋರಾಡುವತ್ತ ಆದ್ಯ ಗಮನ ನೀಡಿ ತಮ್ಮ ಮಕ್ಕಳನ್ನು (ಇಂಗ್ಲೀಷ್) ಶಾಲೆಗಳಿಗೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಎಲ್ಲಾ ಕಾರಣಗಳಿಂದ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆ ಇದ್ದಿರಬೇಕು.

ಪ್ರಪ್ರಥಮವಾಗಿ ವಿದ್ಯಾ ಇಲಾಖೆಯ ಕಛೇರಿ ಆರಂಭವಾದದ್ದು ೧೯೪೫-೪೬ರಲ್ಲಿ. ಅಂದಿನಿಂದ ಈ ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಗಮನಾರ್ಹವಾಗಿ ಮೇಲೇರಿತು. ಮೂಲೆಮೂಲೆ ಹಳ್ಳಿಗಳಲ್ಲೂ ಸಹ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಪ್ರಾರಂಭಗೊಂಡವು. ಹೀಗೆ ಸಾಕ್ಷರರ ಸಂಖ್ಯೆ ೧೯೫೨ರ ಹೊತ್ತಿಗೆ ಗಮನಾರ್ಹವಾಗಿತ್ತು. ೨೦೦೧ರ ಗಣತಿಯಂತೆ ತಾಲ್ಲೂಕಿನಲ್ಲಿ ಒಟ್ಟು

ಜನಸಂಖ್ಯೆಯಲ್ಲಿ ೦-೬ ವರ್ಷದ ಮಕ್ಕಳ ಹೊರತುಪಡಿಸಿ ಶೇ ೬೬ ಜನ ಸಾಕ್ಷರತೆ ಹೊಂದಿದ್ದರು. ಒಟ್ಟು ಪುರುಷರಲ್ಲಿ ಶೇ.೭೭.೬೦ ಹಾಗೂ ಮಹಿಳೆಯರಲ್ಲಿ ಶೇ.೫೬ ಸಾಕ್ಷರಸ್ಥರಾಗಿದ್ದಾರೆ.

೧೯೫೨ರ ಹೊತ್ತಿಗೆ ಸರಕಾರಿ ಪ್ರಾಥಮಿಕ ಶಾಲೆಗಳು ಸುಮಾರು ಒಂದು ನೂರರ ಗಡಿ ದಾಟಿತ್ತು. ಆಗ ಸರ್ಕಾರಿ ಮಾಧ್ಯಮಿಕ ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಇದ್ದು ನೂರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಮುಂದಿನ ಪ್ರೌಢವಿದ್ಯಾಭ್ಯಾಸಕ್ಕೆ ಅನುಕೂಲವಿದ್ದವರು ನಗರ ಪ್ರದೇಶದ ಪ್ರೌಢಶಾಲೆಗಳಿಗೆ ತೆರಳಿ, ಇಲ್ಲದವರು ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದರು. ಊರಲ್ಲೇ ಕಾಲಮಾಪನ ಮಾಡುವ ಪರಿಸ್ಥಿತಿ ಇದ್ದು, ಇದನ್ನು ಮನಗಂಡ ಸರ್ಕಾರ ಜಿಲ್ಲಾ ಬೋರ್ಡ್ ವತಿಯಿಂದ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಪ್ರೌಢಶಾಲೆಗಳನ್ನು ತೆರೆದು ಮಕ್ಕಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟಿತ್ತು.

ಸಿರಿಗೆರೆಯ ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳು ಖಾಸಗಿ ಪ್ರೌಢಶಾಲೆಗಳನ್ನು ಶಿವಪುರ, ಹೊಳಲ್ಕೆರೆ, ಬಿ.ದುರ್ಗ, ಮುತ್ತುಗದೂರು, ಚಿಕ್ಕಜಾಜೂರು, ರಾಮಗಿರಿ, ರಂಗಾಪುರ, ಮೊದಲಾದ ಸ್ಥಳಗಳಲ್ಲೂ, ಮಲ್ಲಾಡಿ ಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳು, ಗ್ರಾಮಾಂತರ ಪ್ರದೇಶದಲ್ಲಿಯೂ ಸಹ ತಮ್ಮ ವ್ಯಾಪ್ತಿಯಲ್ಲಿ ಖಾಸಗಿಯಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿದ್ದರು.

**ಪ್ರಮುಖ ಶಿಕ್ಷಣದ ಹಂತಗಳು**: ೧೯೭೦-೮೦ರ ಅವಧಿಯಲ್ಲಿ ಹಿಂದೆ ಇದ್ದ ಆಡಳಿತ ವ್ಯವಸ್ಥೆಯನ್ನು ಪುನಾರಚಿಸಿ ಶೈಕ್ಷಣಿಕ ಅಭಿವೃದ್ಧಿಗಾಗಿ ಆಗಿದ್ದ ವಲಯ ವಿದ್ಯಾಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಸಹಾಯಕ ಶಿಕ್ಷಣಾಧಿಕಾರಿಗಳೆಂದು ಹೆಸರಿಸಿ ಅವರ ಸಹಾಯಕ್ಕೆ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಿದರು. ಇವರು ತಾಲ್ಲೂಕುಗಳಲ್ಲಿರುವ ಎಲ್ಲಾ ಶಾಖೆಗಳಲ್ಲಿರಬಹುದಾದ ಕುಂದುಕೊರತೆಗಳನ್ನು ನಿವಾರಿಸಲು ಶಾಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಿ ಅದರ ಮೇಲ್ವಿಚಾರಣೆ ನಡೆಸುತ್ತಾ ಮಕ್ಕಳಿಗೆ ಮಧ್ಯಾಹ್ನದ ಊಟದ ಏರ್ಪಾಡನ್ನು ಅಮೇರಿಕಾದ ಕೇರ್ ಸಂಸ್ಥೆಯ ಸಹಕಾರದೊಡನೆ ಜಾರಿಗೆ ತರಲು ಶ್ರಮಿಸಿದರು. ಇದರ ಫಲವಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ವೃಧ್ಧಿಸತೊಡಗಿತು. ಶಾಲೆಯ ಪಾಠ ಪ್ರವಚನಗಳು ಆಸಕ್ತಿ ಪೂರ್ಣವಾಗಿ ನಡೆದು ಪರೀಕ್ಷಾ ಫಲಿತಾಂಶ ಉತ್ತಮಗೊಂಡಿತು. ತಾಲ್ಲೂಕಿನ ೮೦ ಗ್ರಾಮಗಳಲ್ಲಿ ಶಾಲೆಗಳು ನಡೆಯುತ್ತಿದ್ದು, ಉಳಿದ ಹಳ್ಳಿಗಳು ಶಾಲೆ ಪಡೆಯಲು ಕಾತುರವಾಗಿದ್ದವು. ಕೂಲಿಮಠದಿಂದ ಗ್ರಾಂಟ್ ಸ್ಕೂಲ್, ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ. ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಸೇರ್ಪಡೆಯಾಯಿತು. ೧೯೯೫ರ ಹೊತ್ತಿಗೆ ಈ ತಾಲ್ಲೂಕಿನಲ್ಲಿ ೨೧೫ ಪ್ರಾಥಮಿಕ ಶಾಲೆಗಳು, ೪ ಸರ್ಕಾರಿ ಪ್ರೌಢಶಾಲೆಗಳು, ೨ ಸಂಯುಕ್ತ ಪದವಿಪೂರ್ವ ಕಾಲೇಜು, ೨ ಸ್ವತಂತ್ರ ಪದವಿ ಪೂರ್ವ ಕಾಲೇಜು, ಒಂದು ಪದವಿ ಕಾಲೇಜು ನಡೆಯುತ್ತಿದ್ದವು.

## ಶಿಕ್ಷಣ ಮತ್ತು ಕ್ರೀಡೆ

ಹೊಳಲ್ಕೆರೆ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರ, ಅಂಗನವಾಡಿ ಶಿಕ್ಷಕಿಯರ, ಅಂಗನವಾಡಿ ಕಟ್ಟಡಗಳು ಹಾಗೂ ಸ್ತ್ರೀಶಕ್ತಿ ಸಂಘಗಳ ವಿವರ.

| ಕ್ರ.ಸಂ. | ವಿವರ | ಸಂಖ್ಯೆ |
|---|---|---|
| ೧ | ಮಂಜೂರಾದ ಅಂಗನವಾಡಿ ಕೇಂದ್ರಗಳ ಸಂಖ್ಯೆ | ೨೮೫ |
| | ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರ ಸಂಖ್ಯೆ | ೨೮೦ |
| | ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ/ ಸಹಾಯಕಿಯರ ಸಂಖ್ಯೆ | ೨೬೬ |
| ಅಂಗನವಾಡಿ ಕೇಂದ್ರಗಳು ನಡೆಯುತ್ತಿರುವ ಸ್ಥಳಗಳ ವಿವರ | | |
| ೨ | ಸ್ವಂತ ಅಂಗನವಾಡಿ ಕಟ್ಟಡಗಳ ಸಂಖ್ಯೆ | ೨೦೬ |
| | ಶಾಲಾ ಕಟ್ಟಡ | ೨೬ |
| | ಇತರೆ | ೬೩ |
| | ಒಟ್ಟು | ೨೮೫ |
| | | |
| ೩ | ಸ್ತ್ರೀ ಶಕ್ತಿ ಸಂಘಗಳ ವಿವರ | ೭೩೦ |

**ಶಿಕ್ಷಣ**

| ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ | |
|---|---|
| **೧) ಕಿರಿಯ ಪ್ರಾಥಮಿಕ ಶಾಖೆಗಳು** | |
| ಶಾಲೆಗಳ ಸಂಖ್ಯೆ | ೧೨೫ |
| ಒಟ್ಟು ದಾಖಲಾತಿ | |
| ಹುಡುಗರು | ೭,೩೭೦ |
| ಹುಡುಗಿಯರು | ೭,೧೦೬ |
| ಒಟ್ಟು | ೧೪,೪೭೬ |
| **೨) ಹಿರಿಯ ಪ್ರಾಥಮಿಕ ಶಾಲೆಗಳು** | |

| | |
|---|---|
| ಶಾಲೆಗಳ ಸಂಖ್ಯೆ | ೧೩೭ |
| ಒಟ್ಟು ದಾಖಲಾತಿ | |
| ಹುಡುಗರು | ೪,೧೫೭ |
| ಹುಡುಗಿಯರು | ೪,೨೩೪ |
| ಒಟ್ಟು | ೮,೩೯೧ |
| **೩) ಪ್ರೌಢ ಶಾಲೆಗಳು** | |
| ಶಾಲೆಗಳ ಸಂಖ್ಯೆ | ೪೯ |
| ಒಟ್ಟು ದಾಖಲಾತಿ | |
| ಹುಡುಗರು | ೨,೮೦೩ |
| ಹುಡುಗಿಯರು | ೨,೬೮೭ |
| ಒಟ್ಟು | ೫,೪೯೦ |
| **೪) ಪ್ರಾಥಮಿಕ ಶಾಲೆ ಶಿಕ್ಷಕರ ಸಂಖ್ಯೆ** | |
| ಪುರುಷರು | ೬೦೭ |
| ಮಹಿಳೆಯರು | ೪೭೦ |
| ಒಟ್ಟು | ೧,೦೭೭ |
| ವಿದ್ಯಾರ್ಥಿ ಶಿಕ್ಷಕರ ಅನುಪಾತ | ೨೧ |
| ಒಟ್ಟು ದಾಖಲಾತಿ (ಸಂಖ್ಯೆಗಳಲ್ಲಿ) | ೨೨,೮೬೭ |
| ಪ್ರೌಢಶಾಲೆ ಶಿಕ್ಷಕರ ಸಂಖ್ಯೆ | |
| ಪುರುಷರು | ೨೮೭ |
| ಮಹಿಳೆಯರು | ೭೦ |
| ಒಟ್ಟು | ೩೫೭ |
| ವಿದ್ಯಾರ್ಥಿ ಶಿಕ್ಷಕರ ಅನುಪಾತ | ೧೫ |
| **೫) ಪದವಿ ಪೂರ್ವ ಕಾಲೇಜುಗಳು** | |

| | |
|---|---|
| ೧)ಕಾಲೇಜುಗಳ ಸಂಖ್ಯೆ | ೧೬ |
| ೨) ಉಪನ್ಯಾಸಕರ ಸಂಖ್ಯೆ | |
| ಎ) ಪುರುಷರು | ೧೦೧ |
| ಬಿ) ಮಹಿಳೆಯರು | ೧೫ |
| **೩)ಪದವಿ ಪೂರ್ವ(ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ (೧ನೇ ಮತ್ತು ೨ನೇ ವರ್ಷ)** | |
| ಎ)ಸರ್ಕಾರಿ | |
| ಅ)ಹುಡುಗರು | ೫೦೭ |
| ಆ)ಹುಡುಗಿಯರು | ೬೨೮ |
| ಬಿ)ಖಾಸಗಿ–(ಅನುದಾನಿತ) | |
| ಅ) ಹುಡುಗರು | ೭೧೦ |
| ಆ) ಹುಡುಗಿಯರು | ೮೩೦ |
| ಸಿ)ಖಾಸಗಿ–(ಅನುದಾನರಹಿತ) | |
| ಅ) ಹುಡುಗರು | ೧೬೨ |
| ಆ) ಹುಡುಗಿಯರು | ೨೪೫ |
| ಒಟ್ಟು | |
| **೬) ಸಾಮಾನ್ಯ ಪದವಿ ಕಾಲೇಜುಗಳು –ಸರ್ಕಾರಿ ಕಾಲೇಜುಗಳ ಸಂಖ್ಯೆ** | ೨ |
| ಮೊದಲ ವರ್ಷದಿಂದ ಅಂತಿಮ ವರ್ಷದವರೆಗೆ | |
| ಅ) ಹುಡುಗರು | ೨೩೪ |
| ಆ)ಹುಡುಗಿಯರು | ೩೨೭ |
| ಇ) ಒಟ್ಟು | ೫೬೧ |
| **೭) ಸಾಮಾನ್ಯ ಪದವಿ ಕಾಲೇಜುಗಳು–ಖಾಸಗಿ** | – |
| ಅ) ಕಾಲೇಜುಗಳ ಸಂಖ್ಯೆ | ೧ |

| | |
|---|---|
| ಆ) ಮೊದಲ ವರ್ಷದಿಂದ ಅಂತಿಮ ವರ್ಷದ ವರೆಗೆ (ಅನುದಾನಿತ+ಅನುದಾನರಹಿತ) | – |
| ಎ)ಹುಡುಗರು | ೧೮೧ |
| ಬಿ) ಹುಡುಗಿಯರು | ೨೧೫ |
| ಒಟ್ಟು | ೩೯೬ |

**ಮಾಹಿತಿ ಮೂಲ: ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೫-೧೬**

## ಅಂಗನವಾಡಿ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ, ಈ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲೂ ಅಂಗನವಾಡಿ ಕೇಂದ್ರಗಳು ಸ್ಥಾಪಿತವಾಗಿವೆ. ಇಂತಹ ಒಟ್ಟು ೨೯೫ ಕೇಂದ್ರಗಳಿದ್ದು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು ಸೇರಿ ೫೬೮ ಜನರು ಈ ಕೇಂದ್ರದ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಆರೋಗ್ಯದ ಕಡೆ ಹೆಚ್ಚು ಗಮನಹರಿಸುತ್ತಿದ್ದಾರೆ. ಇದರಿಂದ ಮಕ್ಕಳ ಶಾರೀರಿಕ ಹಾಗೂ ಬೌದ್ಧಿಕ ದೃಢ ಬೆಳವಣಿಗೆಗಳಿಗೆ ಸಹಕಾರಿಯಾಗಿದೆ. ಅದೇ ೨೦೧೧ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿ ೨೯೫ ಅಂಗನವಾಡಿ ಕೇಂದ್ರಗಳು ತಾಲ್ಲೂಕಿನಲ್ಲಿದ್ದವು. ೨೦೧೧ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನ ೧೨೭ ಪ್ರಾಥಮಿಕ ಶಾಲೆಗಳಲ್ಲಿ ೮,೧೮೦ ಬಾಲಕರು, ೭,೯೬೫ ಬಾಲಕಿಯರು ಹಾಗೂ ೧೪೪ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೩,೧೮೨ ಬಾಲಕರು, ೩,೦೪೮ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು.

## ಆಡಳಿತ ಸುಧಾರಣೆ

೧೯೯೫ರಲ್ಲೇ ತಾಲ್ಲೂಕನ್ನು ಶಿಕ್ಷಣ ಕ್ಷೇತ್ರವೆಂದು ಗುರುತಿಸಿ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳೆಂದು ಕರೆದು ತಾಲ್ಲೂಕಿನ ಎಲ್ಲಾ ಹಂತಗಳ ಶಿಕ್ಷಣದ ವ್ಯವಸ್ಥೆಯ ಮೇಲ್ವಿಚಾರಣೆಯು ಇವರ ಸುಪರ್ಧಿಗೆ ಬಂದಿತು. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗಿನ ಹಂತದವರೆಗೆ ಇವರು ಮೇಲ್ವಿಚಾರಣೆ ಕಾರ್ಯ ನಿರ್ವಹಿಸುತ್ತಾರೆ. ೧೯೯೭ ರಿಂದ ಜಿಲ್ಲಾ ಶಿಕ್ಷಣ ಯೋಜನೆಗೆ ಒಳಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ನಿರ್ದೇಶನದಲ್ಲಿ ಕೆಲಸ ನಿರ್ವಹಿಸಲು ಕ್ಷೇತ್ರ ಸಂಪನ್ಮೂಲ ಸಂಯೋಜನಾಧಿಕಾರಿ ಹುದ್ದೆಯನ್ನು ಮಂಜೂರು ಮಾಡಿದ್ದಾರೆ. ಶೈಕ್ಷಣಿಕ ಅಭಿವೃದ್ಧಿಗಾಗಿ ಗುಂಪುಗಳನ್ನಾಗಿ ಮಾಡಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳನ್ನು ನೇಮಕಗೊಳಿಸಲಾಗಿದೆ. ಇವರು ಶಿಕ್ಷಣ ಅಭಿವೃದ್ಧಿಗಾಗಿ ನೆರವಾಗುತ್ತಿದ್ದಾರೆ. ಈ

ರೀತಿಯ ಪುನರ್ ವ್ಯವಸ್ಥೆಯಿಂದ (೧೧) ಗುಂಪುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಅಭಿವೃದ್ಧಿಗಾಗಿ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ, "ನಲಿಕಲಿ" ಯುವ ಸರ್ವಶಿಕ್ಷಣ ಅಭಿಯಾನ ಇತ್ಯಾದಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಎಲ್ಲಾ ಮಕ್ಕಳಿಗೂ ಗುಣಾತ್ಮಕವಾದ ಶಿಕ್ಷಣ ದೊರಕಿಸಿಕೊಡುವ ಉದ್ದೇಶದಿಂದ ಸರ್ಕಾರವು ವಿದ್ಯಾರ್ಥಿ ಸಮುದಾಯಕ್ಕೆ ಪ್ರೋತ್ಸಾಹದಾಯಕವಾದ ಹತ್ತು ಹಲವು ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಅನುಷ್ಟಾನಕ್ಕೆ ತಂದಿರುತ್ತದೆ. (೧) ೧ ರಿಂದ ೧೦ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳ ವಿತರಣೆ, (೨) ಮೇಲ್ಕಂಡ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ೨ ಜೊತೆ ಸಮವಸ್ತ್ರ ವಿತರಣೆ, (೩) ಕಂಪ್ಯೂಟರ್ ಶಿಕ್ಷಣ, (೪) ಮಧ್ಯಾಹ್ನದ ಬಿಸಿಯೂಟ ಯೋಜನೆ, (೫) ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ, (೬) ಪೌಷ್ಟಿಕಾಂಶ ಮಾತ್ರೆಗಳ ವಿತರಣೆ, (೭) ವಿವಿಧ ರೀತಿಯ ವಿದ್ಯಾರ್ಥಿ ವೇತನಗಳು, (೮) ಗರಿಷ್ಠ ಅಂಕಗಳಿಸಿದ (ಆಯ್ದ) ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, (೯) ಬಾಲವಿಜ್ಞಾನ ಪುರಸ್ಕಾರ, (೧೦) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ, (೧೧) ಪ್ರತಿಭಾ ಕಾರಂಜಿ ಸ್ಪರ್ಧೆಗಳು, (೧೨) ಕ್ರೀಡಾ ಕೂಟಗಳು, (೧೩) ಮೆಟ್ರಿಕ್ ಮೇಳ, (೧೪) ವಿಜ್ಞಾನ ವಸ್ತುಪ್ರದರ್ಶನ, (೧೫) ಕರ್ನಾಟಕ ದರ್ಶನ ಚಿಣ್ಣರ ಜಿಲ್ಲಾದರ್ಶನ ಪ್ರವಾಸ, (೧೬) ಸಮುದಾಯದತ್ತ ಶಾಲೆ, (೧೭)ದತ್ತು ಯೋಜನೆ, (೧೮) ಶಾಲೆಗಾಗಿ ನಾವು-ನೀವು ಕಾರ್ಯಕ್ರಮಗಳನ್ನು ನಡೆಸಲಾಗಿದ್ದು ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇತ್ತೀಚೆಗೆ ಸರ್ಕಾರವು 'ಮಕ್ಕಳ ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ'ಯನ್ನು ಜಾರಿಗೆ ತಂದಿರುತ್ತದೆ. ಶಾಲೆಗಳ ಭೌತಿಕ ಗುಣಮಟ್ಟ ಹಾಗೂ ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಉತ್ತಮ ಪಡಿಸಲು ಸರ್ವಶಿಕ್ಷಣ ಅಭಿಯಾನ ೧ ರಿಂದ ೮ನೇ ತರಗತಿಯವರೆಗೆ ಹಾಗೂ 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಎಸ್.ಡಿ.ಎಂ.ಗೆ ನೇರವಾಗಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಮಾಡಿಸಲಾಗುತ್ತಿದೆ. (೧) ಶಾಲಾ ಕಟ್ಟಡ ನಿರ್ಮಾಣ, (೨) ಶಾಲಾ ಕಟ್ಟಡ ದುರಸ್ಥಿ, (೩) ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, (೪) ಶಾಲೆಯ ರಕ್ಷಣಾ ಭಿತ್ತಿ, (೫) ಪೀಠೋಪಕರಣಗಳು, (೬) ಪಾಠೋಪಕರಣಗಳು, (೭) ವಿದ್ಯುತ್‌ಚ್ಛಕ್ತಿ ವ್ಯವಸ್ಥೆ, (೮) ಗ್ರಂಥಾಲಯ ಮುಂತಾದವುಗಳ ಜೊತೆಗೆ ಶಾಲಾ ಶಿಕ್ಷಕರಿಗೆ ಅನುಭವಿ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ರೀತಿಯ ತರಬೇತಿಗಳನ್ನು ಆಗಾಗ್ಗೆ ನೀಡಲಾಗುತ್ತದೆ.

**ವಿವಿಧ ಇಲಾಖೆಗಳಿಂದ ಯೋಜನೆಗಳು**: ಹೊಳಲ್ಕೆರೆ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಶಿಕ್ಷಣಕ್ಕೆ ಪೂರಕವಾಗುವ ಅನೇಕ ಯೋಜನೆಗಳನ್ನು ಜಾರಿಗೊಳಿಸಿರುತ್ತದೆ.

**(೧) ಮಹಿಳಾ ಕಲ್ಯಾಣ ಕೇಂದ್ರಗಳು**: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ೩ರಿಂದ ೫ ವರ್ಷ ವಯಸ್ಸಿನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಪೂರ್ವಶಿಕ್ಷಣ, ವೈಯಕ್ತಿಕ ಶುಚಿತ್ವ, ಅಪೌಷ್ಟಿಕತೆಯ ನಿವಾರಣೆ, ಅಕ್ಷರಾಭ್ಯಾಸ ಮತ್ತು ಶಾಲೆಗೆ ಹೋಗುವ ಪ್ರವೃತ್ತಿಯನ್ನು ಬೆಳೆಸಲು ಕೇಂದ್ರಗಳನ್ನು ತೆರೆಯಲಾಗಿದೆ. ಮಕ್ಕಳ ಆಯ್ಕೆಯನ್ನು ಕೇಂದ್ರದ ಸಂಚಾಲಕಿ ಪ್ರತಿ ಮನೆಗಳಲ್ಲಿರುವ ಮಕ್ಕಳ ಗಣತಿಯನ್ನು ಮಾಡಿ, ಪೋಷಕರಿಂದ ಅರ್ಜಿ ಪಡೆದು ನೋಂದಾಯಿಸಿಕೊಳ್ಳುವರು. ಕೇಂದ್ರದಲ್ಲಿರುವ ೫ ವರ್ಷಗಳ ಮೇಲ್ಪಟ್ಟ ಮಕ್ಕಳನ್ನು ಹತ್ತಿರದ ಪ್ರೈಮರಿ ಶಾಲೆಗೆ ಕಡ್ಡಾಯವಾಗಿ ಪ್ರವೇಶ ದಕ್ಕಿಸಿ ಕೊಡುವುದು ಇವರ ಕರ್ತವ್ಯವಾಗಿರುತ್ತದೆ. ಮಕ್ಕಳಿಗೆ ಮಧ್ಯಾಹ್ನ ಪೌಷ್ಟಿಕ ಆಹಾರ ಮತ್ತು ಆಟವಾಡಲು ಕ್ರೀಡಾ ಸಾಮಗ್ರಿಗಳ ಸೌಲಭ್ಯ ಮಾಡಲಾಗಿರುತ್ತದೆ. ಈ ಕೇಂದ್ರಗಳ ಉಸ್ತುವಾರಿಗೆ ಪ್ರತಿ ಕೇಂದ್ರದಲ್ಲಿ ಒಬ್ಬರು ಮಹಿಳಾ ಸಂಚಾಲಕಿ ಮತ್ತು ಒಬ್ಬರು ನಿರ್ವಾಹಕಿಯನ್ನು ನೇಮಕಗೊಳಿಸಲಾಗಿದೆ. ಮಕ್ಕಳಿಗೆ ಮಧ್ಯಾಹ್ನದ ಊಟ, ವರ್ಷಕ್ಕೆ ಎರಡು ಜೊತೆ ಸಮವಸ್ತ್ರ, ಸೋಪು, ಎಣ್ಣೆ ಇತ್ಯಾದಿ ಒದಗಿಸಲಾಗಿರುತ್ತದೆ.

**(೨) ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳು**: ಮೆಟ್ರಿಕ್‌ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ೫ ರಿಂದ ೧೦ನೆಯ ತರಗತಿವರೆಗಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುವುದು. ಶೇ. ೭೫ ರಷ್ಟು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಮತ್ತು ೨೫ ರಷ್ಟು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿ ಮೂಲಕ ದಾಖಲು ಮಾಡಿಕೊಳ್ಳಲಾಗುವುದು. ಉಚಿತ ಊಟ, ವಸತಿ, ವರ್ಷಕ್ಕೆ ಎರಡು ಜೊತೆ ಸಮವಸ್ತ್ರ, ಲೇಖನ ಸಾಮಗ್ರಿ, ಸಾದಿಲ್ವಾರು ಹಾಗೂ ನಿಯಮಿತ ಶಿಕ್ಷಣಮಟ್ಟ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬಾಲಕ ಬಾಲಕಿಯರಿಗೆ ಪ್ರತ್ಯೇಕ ನಿಲಯಗಳ ವ್ಯವಸ್ಥೆ ಇರುತ್ತದೆ.

**(೩) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು**: ಈ ವಿದ್ಯಾರ್ಥಿನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೇಜು ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಿ ದಾಖಲು ಮಾಡಿಕೊಳ್ಳಲಾಗುತ್ತದೆ. ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಇರುವ (ಪಾಲಕರ ವಾರ್ಷಿಕ ಕಂದಾಯ ರೂ. ೧,೦೦,೦೦೦ಕ್ಕಿಂತ ಕಡಿಮೆ ಇರುವ) ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು, ವಿದ್ಯಾರ್ಥಿ ವೇತನ ಹಾಗೂ ಇ.ಬಿ.ಎಲ್. ವೆಚ್ಚದಿಂದ ಭರಿಸಲಾಗುವುದು.

**(೪) ವಿದ್ಯಾರ್ಥಿ ವೇತನಗಳು**: ೧ ರಿಂದ ೫ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ, ಶಾಲೆಗೆ ಗೈರು ಹಾಜರಾಗದೆ, ತರಗತಿಗಳಿಗೆ ಹಾಜರಾಗಿ ಪಾಠ-ಪ್ರವಚನವನ್ನು ಮುಂದುವರೆಸಿಕೊಂಡು ಹೋಗುವಂತೆ ಪ್ರೋತ್ಸಾಹಿಸಲು ವಿದ್ಯಾರ್ಥಿಗಳಿಗೆ ರೂ. ೭೫ ರಂತೆ ವಾರ್ಷಿಕ ಶಿಷ್ಯವೇತನ ನೀಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದ ವಿದ್ಯಾರ್ಥಿಗಳು ನಡುವೆಯೇ ವಿದ್ಯಾಭ್ಯಾಸವನ್ನು ನಿಲ್ಲಿಸದಂತೆ, ಪೋಷಕರು ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸಲು ಇಲಾಖೆಯಿಂದ ೬, ೭ನೇ ತರಗತಿ ವಿದ್ಯಾರ್ಥಿಗಳಿಗೆ ರೂ. ೭೫ ಮತ್ತು ೮, ೯ ಹಾಗೂ ೧೦ನೇ ತರಗತಿ ವಿದ್ಯಾರ್ಥಿಗಳಿಗೆ ರೂ.೧೦೦/– ವಿದ್ಯಾರ್ಥಿ ವೇತನವನ್ನು (ಶಾಲೆಗಳಿಂದ ಅರ್ಜಿಗಳನ್ನು ಪರಿಶೀಲಿಸಿ) ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಮಂಜೂರು ಮಾಡುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪದವಿ ಪೂರ್ವ, ಪದವಿ, ಬಿ.ಇ.ಡಿ., ಡಿ.ಇ.ಡಿ., ನರ್ಸಿಂಗ್, ಐ.ಟಿ.ಪಿ–೧ ಜೆ.ಬಿ.ಸಿ. ಮುಂತಾದ ಕೋರ್ಸ್‌ಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಆಯಾ ತರಗತಿಗನುಗುಣವಾಗಿ ವಿದ್ಯಾರ್ಥಿವೇತನ ನೀಡಲಾಗುವುದು. ದೈನಂದಿನ ವಿದ್ಯಾರ್ಥಿ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪ್ರತ್ಯೇಕ ದರದಲ್ಲಿ ವಿದ್ಯಾರ್ಥಿವೇತನ ನೀಡಲಾಗುವುದು.

ಮೆಟ್ರಿಕ್ ಪೂರ್ವ ೫ ರಿಂದ ೧೦ನೇ ತರಗತಿಯ ಪ.ಜಾತಿ ಮತ್ತು ಪ.ಪಂಗಡ ವಿದ್ಯಾರ್ಥಿಗಳು ಶೇಕಡಾ ೬೦ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ ರೂ.೧೦೦/– ಪ್ರತಿಭಾ ವಿದ್ಯಾರ್ಥಿವೇತನ ನೀಡಲಾಗುವುದು. ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಬಾರಿಗೆ ತೇರ್ಗಡೆ ಹೊಂದಿದ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ರೂ. ೫೦೦/–ನಗದು ಬಹುಮಾನ ನೀಡಲಾಗುವುದು. ಪ.ಜಾತಿ/ಪ.ಪಂಗಡದ ಕಾಲೇಜು ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದಲ್ಲಿ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ತಲಾ ರೂ. ೧,೧೫೦/– ಹಾಗೂ ವೈದ್ಯಕೀಯ ತಾಂತ್ರಿಕ ವಿದ್ಯಾರ್ಥಿಗಳಿಗೆ ತಲಾ ರೂ. ೫೦೦/– ಪುರಸ್ಕಾರ ಧನ ನೀಡಲಾಗುತ್ತದೆ.

**ಅಧ್ಯಯನ ಪ್ರವಾಸ** :ಮೆಟ್ರಿಕ್ ನಂತರದ ಕೋರ್ಸ್‌ಗಳನ್ನು ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಕೋರ್ಸ್‌ನಲ್ಲಿ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಯ ಪ್ರಾಂಶುಪಾಲರಿಂದ ಪ್ರವಾಸ ಕಡ್ಡಾಯದ ಬಗ್ಗೆ ದೃಢೀಕರಣ ಪತ್ರ ಪಡೆದು ಅರ್ಹ ವಿದ್ಯಾರ್ಥಿಗಳಿಗೆ ತಲಾ ರೂ.೧೦೦/– ಮೀರದಂತೆ ನಿಯಮಾನುಸಾರ ಮಂಜೂರು ಮಾಡಲಾಗುತ್ತದೆ.

**ವಿದ್ಯಾರ್ಥಿನಿಯರಿಗೆ ವಿಶೇಷ ಪ್ರೋತ್ಸಾಹಧನ** : ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ ಪ.ಪಂಗಡದ ೮, ೯ ಹಾಗೂ ೧೦ನೇ ತರಗತಿಗಳ ಬಾಲಕಿಯರಿಗೆ ವರ್ಷಕ್ಕೆ ರೂ. ೫೦೦/– ರಂತೆ ವಿಶೇಷ ಪ್ರೋತ್ಸಾಹ ಧನವನ್ನು ರಾಜ್ಯ ವಲಯದಡಿ ನೀಡಲಾಗುತ್ತದೆ. ೬ ಮತ್ತು ೭ನೇ ತರಗತಿಯ ಪ.ಜಾತಿ/ಪ.ಪಂಗಡದ ಹೆಣ್ಣುಮಕ್ಕಳಿಗೆ ಅವರ ಬಟ್ಟೆ ಮತ್ತು ಇತರ ಖರ್ಚುಗಳಿಗೆ ಸಹಾಯವಾಗುವಂತೆ ವರ್ಷಕ್ಕೆ ರೂ. ೨೫೦/–ರಂತೆ ವಿಶೇಷ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ.

**ತರಬೇತಿ ಮತ್ತು ಧನಸಹಾಯ** : ಪ.ಜಾತಿ/ಪ.ಪಂಗಡದ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಲು ಕಾನೂನು ಆಡಳಿತ ೪

ವರ್ಷಗಳ ಕಾಲ ತರಬೇತಿ ನೀಡುವುದು. ತರಬೇತಿ ಅವಧಿಯಲ್ಲಿ ಪ್ರತಿ ಮಾಹೆ ರೂ.೧,೦೦೦/–ದಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ವಕೀಲರ ಸಂಘದಲ್ಲಿ ನೊಂದಾಯಿಸಿಕೊಳ್ಳಲು ಮತ್ತು ಕಾನೂನು ಗ್ರಂಥಗಳನ್ನು ಕೊಳ್ಳಲು ರೂ. ೫,೦೦೦/– ಸಹಾಯಧನ ನೀಡಲಾಗುತ್ತದೆ.

## ಪ್ರೌಢಶಾಲೆ

ತಾಲ್ಲೂಕಿನ ಪ್ರೌಢಶಾಲೆಗಳು, ಹೊಳಲ್ಕೆರೆ, ಮಲ್ಲಾಡಿಹಳ್ಳಿ,ತಾಳ್ಯ, ಹೊರಕೇರೆ ದೇವರಪುರ, ಚಿಕ್ಕಜಾಜೂರು, ಮುತ್ತಗದೂರು, ರಾಮಗಿರಿ, ಶಿವಪುರ ಮತ್ತು ರಂಗಾಪುರಗಳಲ್ಲಿ ಆರಂಭವಾಗಿ ದಕ್ಷ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇನ್ನೂ ಹಲವು ಶಾಲೆಗಳು ಸರ್ಕಾರಿ ಮತ್ತು ಖಾಸಗಿಯವರ ನೇತೃತ್ವದಲ್ಲಿ ಆರಂಭಗೊಂಡಿವೆ. ಪ್ರಸ್ತುತ ೧೩ ಸರ್ಕಾರಿ ಪ್ರೌಢಶಾಲೆಗಳು, ೩೨ ಖಾಸಗಿ ಶಾಲೆಗಳು, ಒಟ್ಟು ೪೫ ಪ್ರೌಢಶಾಲೆಗಳು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ೨೦೧೨ ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕಿನಲ್ಲಿದ್ದ ೪೫ ಪ್ರೌಢಶಾಲೆಗಳಲ್ಲಿ ೪,೧೧೧ ಬಾಲಕರು ಹಾಗೂ ೪,೨೦೯ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು. ಅಲ್ಲದೇ ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರಿಗೆ ಉಚಿತ ಪುಸ್ತಕ,ಸಮವಸ್ತ್ರ, ಸೈಕಲ್‌ನ್ನು ಸರ್ಕಾರದ ವತಿಯಿಂದ ನೀಡಲಾಗುತ್ತಿದೆ.

**ಟ್ರೈಮಿಸ್ಟರ್ ಪದ್ಧತಿ**: ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ೨೦೦೪ರ ಶಿಕ್ಷಣ ತಜ್ಞರ ಸಮಾವೇಶದಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಅದರಂತೆ ಅಧಿಕ ಪಠ್ಯಕ್ರಮ, ಅತಿಯಾದ ಪುಸ್ತಕಗಳ ಹೊರೆ ಹಾಗೂ ಪರೀಕ್ಷಾ ಭೀತಿಗಳಿಂದ ಮಕ್ಕಳನ್ನು ಮುಕ್ತಗೊಳಿಸುವ ಉದ್ದೇಶದಿಂದ ತ್ರೈಮಾಸಿಕ ಪದ್ಧತಿಯನ್ನು ೨೦೦೪–೦೫ರ ಶೈಕ್ಷಣಿಕ ವರ್ಷದಿಂದ ರಾಜ್ಯಾದ್ಯಂತ ಜಾರಿಗೆ ತರಲಾಗಿದೆ. ಈ ಬದಲಾವಣೆಯಿಂದಾಗಿ ಹಿಂದೆ ನಡೆಸಲಾಗುತ್ತಿದ್ದ ಕಿರು, ಮಧ್ಯಂತರ ವಾರ್ಷಿಕ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಮೂರು ಮೂರು ತಿಂಗಳ (ಜುಲೈ– ಸೆಪ್ಟಂಬರ್, ಆಕ್ಟೋಬರ್ – ಡಿಸೆಂಬರ್, ಜನವರಿ – ಮಾರ್ಚ) ಅವಧಿಗೆ ಮಾತ್ರ ಪಾಠ ಪ್ರವಚನ, ಮೌಲ್ಯಮಾಪನಗಳು ನಡೆದು ಅಂಕಗಳಿಗೆ ಬದಲು ಶ್ರೇಣಿ ನೀಡುವ ಪದ್ಧತಿಯನ್ನು ಅಳವಡಿಸಲಾಗಿದೆ. ಮೇಲ್ಕಂಡ ಮೂರು ಅವಧಿಯ ಮೌಲ್ಯಮಾಪನಗಳನ್ನು ಆಧರಿಸಿ ಮಕ್ಕಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲಾಗುತ್ತದೆ.

ಮಕ್ಕಳನ್ನು ಹಂತ ಹಂತವಾಗಿ ಶಾಲೆಗೆ ದಾಖಲು ಮಾಡಿಕೊಳ್ಳುವ ಚಿಣ್ಣರ ಕಾರ್ಯ ಕ್ರಮವನ್ನು ೨೦೦೧–೦೨ರಲ್ಲಿ ಜಾರಿಗೊಳಿಸಲಾಯಿತು. ಅದಕ್ಕಾಗಿ ರಾಜ್ಯದಲ್ಲಿ ಗುರುತಿಸಲ್ಪಟ್ಟಿರುವ ೧,೭೬೬ ಕೇಂದ್ರಗಳಲ್ಲಿ ಕೆಲವು ಈ ತಾಲ್ಲೂಕಿನಲ್ಲಿ ಇದ್ದವು. ಉಚಿತ

ಶಿಕ್ಷಣ ವ್ಯವಸ್ಥೆಯು ಹೆಣ್ಣುಮಕ್ಕಳಿಗೆ ಲಭಿಸುತ್ತಿದೆ. ನಂತರದಲ್ಲಿ ಟ್ರೈಮಿಸ್ಟರ್ ಪದ್ಧತಿಯನ್ನು ಹಿಂತೆಗೆದುಕೊಂಡು ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಲಾಯಿತು.

## ಅಕ್ಷರ ದಾಸೋಹ

ಮಧ್ಯಾಹ್ನದ ಊಟ, ಸಂಸ್ಥಾನದ ಶಾಲೆಗಳಲ್ಲಿ ೧೯೪೭-೪೭ರ ಹಿಂದೆಯೇ ೧-೧೦ನೇ ತರಗತಿಯವರೆಗೆ ದುರ್ಬಲ ವರ್ಗಗಳ ಮಕ್ಕಳಿಗೆ ಮಧ್ಯಾಹ್ನದ ಊಟ ನೀಡುವ ವ್ಯವಸ್ಥೆ ಇತ್ತು. ಮುಂದೆ ಇದು ಸುಧಾರಣೆ ಹೊಂದಿ ಇತ್ತೀಚೆಗೆ ಅಕ್ಷರ ದಾಸೋಹ ಕಾರ್ಯಕ್ರಮದಡಿ ಐದನೇ ತರಗತಿಯವರೆಗಿನ ಮಕ್ಕಳಿಗೆ ಮಧ್ಯಾಹ್ನದ ಊಟ ಶಾಲೆಯಲ್ಲೇ ಒದಗಿಸಲಾಗುತ್ತಿದೆ. ಈ ಯೋಜನೆ ಮುಖ್ಯ ಉದ್ದೇಶ ಮಕ್ಕಳನ್ನು ಶಾಲೆಯತ್ತ ಸೆಳೆಯುವ ಮೂಲಕ ಹಾಜರಾತಿಯನ್ನು ಸುಧಾರಿಸುವುದೇ ಆಗಿದ್ದು, ತಾಲ್ಲೂಕಿನ ಶಾಲೆಗಳಲ್ಲಿ ಈ ಯೋಜನೆಯು ಅನುಷ್ಠಾನಗೊಂಡಿದೆ.

## ಪದವಿ ಪೂರ್ವ ಕಾಲೇಜು

ಪದವಿಪೂರ್ವ ಕಾಲೇಜು ಪ್ರಥಮವಾಗಿ ಮಲ್ಲಾಡಿಹಳ್ಳಿ, ಹೊಳಲ್ಕೆರೆಯಲ್ಲಿ ಖಾಸಗಿ ವಲಯದಲ್ಲಿ ಆರಂಭವಾಗಿ ಇಂದು ಒಟ್ಟು ೧೫ ಕಾಲೇಜುಗಳಿವೆ. ತಾಲ್ಲೂಕಿನಲ್ಲಿ ನಾಲ್ಕು ಸರ್ಕಾರಿ ಹಾಗೂ ೧೧ ಖಾಸಗಿ ಕಾಲೇಜುಗಳಿವೆ. ಎರಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಕ್ರಮವಾಗಿ ಹೊಳಲ್ಕೆರೆ ಮತ್ತು ಚಿತ್ರಹಳ್ಳಿಯಲ್ಲಿದ್ದು, ಎರಡು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳು ಹೊಳಲ್ಕೆರೆ ಪಟ್ಟಣ ಮತ್ತು ಚಿಕ್ಕಜಾಜೂರಿನಲ್ಲಿವೆ. ಹೊಳಲ್ಕೆರೆಯ ಬಿ.ಪರಮೇಶ್ವರಪ್ಪ ಪ್ರಥಮ ದರ್ಜೆ ಕಾಲೇಜು, ಸಿರಿಗೆರೆಯ ತರಳಬಾಳು ವಿದ್ಯಾಸಂಸ್ಥೆಯ ವತಿಯಿಂದ ನಡೆಯುತ್ತಿದ್ದರೆ ಚಿಕ್ಕಜಾಜೂರಿನ ಕಾಲೇಜು ಚಿತ್ರದುರ್ಗದ ಎಸ್.ಜೆ.ಎಂ ವಿದ್ಯಾಪೀಠದಿಂದ ನಡೆಯುತ್ತಿದೆ.

## ಪದವಿ ಶಿಕ್ಷಣ

ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳಲ್ಲಿ ಮೂರು ವರ್ಷಗಳ ಪದವಿ ಶಿಕ್ಷಣವನ್ನು ನೀಡುವ ಪ್ರಥಮ ದರ್ಜೆ ಕಾಲೇಜುಗಳೂ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಶೈಕ್ಷಣಿಕವಾಗಿ ಕಾರ್ಯನಿರ್ವಹಿಸುತ್ತವೆ. ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಆರಂಭಗೊಂಡು ನಂತರ ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟು ಈಗ ದಾವಣಗೆರೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ, ಮೂರು ಖಾಸಗಿ ಕಾಲೇಜುಗಳು, ಬಿಎಡ್ ಮತ್ತು ಬಿ.ಪಿ.ಎಡ್ ಕಾಲೇಜುಗಳಿದ್ದು, ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

**ವಯಸ್ಕರ ಶಿಕ್ಷಣ**

ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ೧೯೪೭ ರಿಂದ ೭೫ ರವರೆಗೆ ವಯಸ್ಕರ ಶಿಕ್ಷಣ ಬಹಳ ಯಶಸ್ವಿಯಾಗಿ ನಡೆದು, ದೇಶದ ಸಾಕ್ಷರತೆಗೆ ಸಾಕಷ್ಟು ಕಾಣಿಕೆ ಸಲ್ಲಿಸಿದೆ. ಈ ತಾಲ್ಲೂಕಿನಲ್ಲಿ ೧೯೪೭ ರಿಂದ ೭೦ ರವರೆಗೆ ಅನೇಕ ಹಳ್ಳಿಗಳಲ್ಲಿ ರಾತ್ರಿ ಶಾಲೆಗಳು ನಡೆಯುತ್ತಿದ್ದವಲ್ಲದೆ ವಯಸ್ಕರ ಅನುಕೂಲಕ್ಕಾಗಿ ಪುಸ್ತಕ ಭಂಡಾರಗಳನ್ನಾಗಿ ತೆರೆದು ನಡೆಸುತ್ತಿದ್ದವು. ೧೯೭೫ ರಿಂದೀಚೆಗೆ ವಯಸ್ಕರ ಶಿಕ್ಷಣ ಸಮಿತಿಯು ರದ್ದಾಗಿದ್ದು, ಸಂಪೂರ್ಣ ಸಾಕ್ಷರತಾ ಆಂದೋಲನದಡಿ ಜಿಲ್ಲಾ ಮತ್ತು ತಾಲ್ಲೂಕು ಸಾಕ್ಷರತಾ ಸಮಿತಿಗಳು ಸಾಕ್ಷರತಾ ಚಟುವಟಿಕೆಗಳನ್ನು ನಡೆಸುತ್ತಿವೆ. ಕೆಲವು ಕಾಲ ಶಿಕ್ಷಣ ಇಲಾಖೆಯಿಂದ ಅನೌಪಚಾರಿಕ ಶಿಕ್ಷಣ ಯೋಜನೆ ಆಶ್ರಯದಲ್ಲಿ ೧೪ ವರ್ಷದಿಂದ ಮೇಲ್ಪಟ್ಟ ವಯಸ್ಕರೆಲ್ಲರಿಗೂ ಜಿಲ್ಲಾ ಪರಿಷತ್ ಸಹಕಾರದೊಡನೆ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಇದರಿಂದ ಸಾಕ್ಷರತಾ ಪ್ರಮಾಣ ಹೆಚ್ಚಲು ಸಹಕಾರಿಯಾಯಿತು.

**ವಿದ್ಯಾರ್ಥಿ ನಿಲಯಗಳು**

ತಾಲ್ಲೂಕಿನಲ್ಲಿ ಒಂದು ಆಶ್ರಮ ಶಾಲೆ ಹಾಗೂ ಎರಡು ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದು ಗ್ರಾಮೀಣ ಮಕ್ಕಳಿಗೆ ಉತ್ತಮ ಸೌಕರ್ಯವನ್ನು ನೀಡುತ್ತಿದೆ.

**ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ**

ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಟ್ಟು ೩೪ ಸಾರ್ವಜನಿಕ ಗ್ರಂಥಾಲಯಗಳಿವೆ. ತಾಲ್ಲೂಕು ಕೇಂದ್ರದಲ್ಲಿ ಮುಖ್ಯ ಗ್ರಂಥಾಲಯವಿದ್ದು, ತಾಲ್ಲೂಕಿನಾದ್ಯಂತ ಪ್ರಮುಖ ಗ್ರಾಮಗಳಲ್ಲಿ ೩೦ ಶಾಖೆಗಳು ಇವೆ. ಮುಖ್ಯ ಗ್ರಂಥಾಲಯದಲ್ಲಿ ಸಾವಿರಾರು ಪುಸ್ತಕಗಳಿವೆ. ಇತರ ಶಾಖೆಗಳಲ್ಲೂ ಒಂದೊಂದು ಸಣ್ಣ ಗ್ರಂಥಾಲಯಗಳಿದ್ದು, ಅವುಗಳಲ್ಲಿ ಗ್ರಂಥಗಳ ಸಂಖ್ಯೆ ೩೦೦ ರಷ್ಟಿದೆ. ಮುಖ್ಯ ಗ್ರಂಥಾಲಯದಲ್ಲಿ ನಾಡಿನ ದಿನಪತ್ರಿಕೆಗಳು, ನಿಯತಕಾಲಿಕೆಗಳು, ವಾರ ಪತ್ರಿಕೆಗಳು, ಮಾಸಪತ್ರಿಕೆಗಳು ಬರುತ್ತಿದ್ದು, ಪ್ರತಿ ನಿತ್ಯ ಸಾರ್ವಜನಿಕರು ಇದರ ಉಪಯೋಗ ಪಡೆಯುತ್ತಿದ್ದಾರೆ.

**ಕ್ರೀಡೆಗಳು**

ಕ್ರಿ.ಶ. ೮ನೇ ಶತಮಾನದಲ್ಲಿ ನೀರ್ಗುಂದ ನಾಡಿನ ದೊರೆ ವಿಕ್ರಮರಾಯನ ಮಗಳು ರತ್ನವತಿ ಎಂಬ ರಾಜಕುಮಾರಿಯನ್ನು ವಿವಾಹವಾಗಲು, ರತ್ನಪುರಿದೇಶ (ಈಗಿನ

ಲಕ್ಕಿಹಳ್ಳಿ/ಲಕ್ಕವ್ವನಹಳ್ಳಿ)ದ ರಾಜಕುಮಾರನು, ನೀರ್ಗುಂದ ಹೊರ ತೋಟವೊಂದರಲ್ಲಿದ್ದು, ಜನರಿಗೆ ತೊಂದರೆ ನೀಡುತ್ತಿದ್ದ ಸಿಂಹವನ್ನು ಕೊಲ್ಲುವ ಸ್ಪರ್ಧೆ (ಸವಾಲು) ಸ್ವೀಕರಿಸಿ ಯಶಸ್ವಿಯಾದ ಬಗ್ಗೆ ದಂತಕಥೆಯೊಂದು ಪ್ರಚಲಿತದಲ್ಲಿದ್ದು, ಈ ಕಥೆಯನ್ನಾಧರಿಸಿ ನಾಟಕವನ್ನು ಹಿಂದಿನ ಕಾಲದಲ್ಲಿ ಆಡುತ್ತಿದ್ದರು. ಸಿಂಹವನ್ನು ಬೇಟೆಯಾಡುವುದು ರಾಜಕುಮಾರ ಚಿತ್ರಶೇಖರನಿಗೆ ಒಂದು ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕಿಂತ ಭಿನ್ನವಾಗಿಯೇನು ಇಲ್ಲ. ಈ ಸ್ಪರ್ಧೆಯಲ್ಲಿ ಗೆದ್ದು ಅವನು ರಾಜಕುಮಾರಿಯನ್ನು ಬಹುಮಾನವಾಗಿ ಪಡೆದನು. ಕ್ರಿ.ಶ. ೧೫ನೇ ಶತಮಾನದಲ್ಲಿ ಬೂದಿಹಾಳನ್ನು ಆಳುತ್ತಿದ್ದ ಗೊಲ್ಲಸಿರುಮನಾಯಕನು, ತನ್ನ ರಾಜ್ಯದ ಗೋವುಗಳಿಗೆ (ದಶರಥ ರಾಮೇಶ್ವರ ಅರಣ್ಯದಲ್ಲಿ) ತೊಂದರೆ ಕೊಡುತ್ತಿದ್ದ ವನ್ಯಮೃಗಗಳನ್ನು ಬೇಟೆಯಾಡಲು ಅರಣ್ಯಕ್ಕೆ ಹೋಗುತ್ತಿದ್ದ ಬಗ್ಗೆ ಸಾಂಗತ್ಯ ಕೃತಿಗಳಲ್ಲಿ ವರ್ಣಿಸಲಾಗಿದೆ. ರಾಜನಾದ ಇವನಿಗೆ ಬೇಟೆಯಾಡುವುದು ಕ್ರೀಡೆಯಾಗಿದ್ದು ಅದರಿಂದ ಅವನಿಗೆ ಸಂತೋಷವಾಗುತ್ತಿದ್ದರಿಂದ ಸಾಹಸಿ ಸೈನಿಕರನ್ನಷ್ಟೇ ಬೇಟೆಗೆ ಕಳುಹಿಸದೆ, ತಾನೇ ಸ್ವತ: ಬೇಟೆಯಾಡುತ್ತಿದ್ದನು. ಕ್ರಿ.ಶ ೧೭–೧೮ನೇ ಶತಮಾನದಲ್ಲಿ ಮತ್ತೋಡು ಪಾಳೆಯಪಟ್ಟನ್ನು ಆಳಿದ ಪಾಳೆಯಗಾರರು ಸಹ ಗಂಜಿಗೆರೆ ಅರಣ್ಯಕ್ಕೆ ಬೇಟೆಯಾಡಲು ಹೋಗುತ್ತಿದ್ದರೆಂದು ಆಧಾರಗಳಿಂದ ತಿಳಿಯುವುದು. ಕ್ರಿ.ಶ.೧೫ನೇ ಶತಮಾನದಲ್ಲಿ ಬೂದಿಹಾಳು ಪಾಳೆಯಪಟ್ಟಿನ ಸಂಸ್ಥಾಪಕನಾದ ಕಾಚನಾಯಕನು ಮೊದಲು ವಿಜಯನಗರದ ಪ್ರೌಢರಾಯನಲ್ಲಿ ಅರಮನೆಯ ದ್ವಾರಪಾಲಕನಾಗಿದ್ದ ಸಂದರ್ಭದಲ್ಲಿ, ತನ್ನನ್ನು ಕೆಣಕಿದ ಸೇನಾಪತಿ ಗುಂಡನೊಂದಿಗೆ 'ನಿನ್ನ ಹಲ್ಲು ಉದುರಿಸುವೆ' ಎಂದು ಶಪಥ ಮಾಡಿ ಅವನೊಂದಿಗೆ ನೆಲದಲ್ಲಿ ತೋಡಿದ ಹಗೇವಿನಲ್ಲಿ ಮಲ್ಲಯುದ್ಧ ಮಾಡಿ ಗುಂಡನ ಹಲ್ಲುಗಳನ್ನು ಉದುರಿಸಿ ಗೆದ್ದು, ಪ್ರೌಢರಾಯನಿಂದ ಸೂಜಿಕಲ್ಲು ದುರ್ಗವನ್ನು ಬಹುಮಾನವಾಗಿ ಪಡೆದ ಬಗ್ಗೆ ಸಾಂಗತ್ಯದಲ್ಲಿ ಕಥೆ ಇದೆ.

ಕ್ರಿ.ಶ.೧೫೭೯ ರಲ್ಲಿ ಮತ್ತೋಡು ಪಾಳೆಯಪಟ್ಟಿನ ಸಂಸ್ಥಾಪಕನಾದ ಶೂರ ಗಿರಿಯಪ್ಪ ನಾಯಕನು, ಬೂದಿಹಾಳು ಪಾಳೆಯಪಟ್ಟಿನಲ್ಲಿ ಪೆನುಗೊಂಡೆಯವರು ಹಿಡಿಯಲು ಅಸಾಧ್ಯವಾಗಿದ್ದ ಮದ್ದಾನೆಯೊಂದನ್ನು ಪರಾಕ್ರಮದಿಂದ ಬಂಧಿಸಿ, ೬,೦೦೦ ಪಗೋಡಗಳಷ್ಟು ಆದಾಯವುಳ್ಳ ಲಕ್ಕವ್ವನಹಳ್ಳಿ ಪಾಳೆಯಪಟ್ಟನ್ನು ಬಹುಮಾನವಾಗಿ ಪಡೆದ ಬಗ್ಗೆ ಆಧಾರಗಳಿವೆ. ಹೀಗೆ, ಹಿಂದಿನ ಕಾಲದಲ್ಲಿ ಪರಾಕ್ರಮವನ್ನು ಮೆರೆಯಬಲ್ಲ ಶೂರರಿಗೆ ಅನೇಕ ಸ್ಪರ್ಧೆಗಳು ಸವಾಲಿನಂತೆ ಎದುರಾಗುತ್ತಿದ್ದವು. ಆದಿಕಾಲದಿಂದ ಇಂದಿನವರೆಗೂ ಕ್ರೀಡೆಗಳು ಬೆಳೆಯುತ್ತಾ ಬಂದಿವೆ.ಕಾಲದಿಂದ ಕಾಲಕ್ಕೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಕ್ರೀಡೆಗಳು ಬದಲಾಗುತ್ತಾ ಹೋಗುತ್ತವೆ. ಪ್ರಸ್ತುತ ಬ್ಯಾಡ್ಮಿಂಟನ್, ಕೇರಂ, ಚೆಸ್, ಷಟ್ಲಕಾಕ್, ಮುಂತಾದ ನವ್ಯ ಕ್ರೀಡೆಗಳು ಗ್ರಾಮೀಣ ಹುಡುಗರ ನೆಚ್ಚಿನ ಕ್ರೀಡೆಗಳಾಗಿವೆ. ಇವುಗಳಿಂದಾಗಿ ಹಳ್ಳಿಗಳಲ್ಲಿ ಹುಟ್ಟಿಕೊಂಡ ಹಲವು ಆಟಗಳು ನಶಿಸುತ್ತಿರುವುದು ವಿಷಾದನೀಯ. ಗೋಲಿ, ಗಜ್ಜುಗ, ಬುಗುರಿ, ಕಡ್ಡಿ ಆಟ, ಪಚ್ಚಿ ಆಟ,

ಟಿಕ್ಕಿ ಆಟ, ಅಳಗುಳಿ ಮನೆ, ಚಿನ್ನಿದಾಂಡು ಆಟದಂತಹ ಶುದ್ಧ ದೇಶಿಯ ಕ್ರೀಡೆಗಳು ವಿನಾಶದ ಅಂಚಿನಲ್ಲಿವೆ. ಇಂಥ ಹಲವಾರು ಗ್ರಾಮೀಣ ಕ್ರೀಡೆಗಳು ನಶಿಸುತ್ತಾ ಹೋದಂತೆ ನಗರ ಕ್ರೀಡೆಗಳು ತಲೆ ಎತ್ತುತ್ತಾ ಆ ಸ್ಥಾನವನ್ನು ತುಂಬುತ್ತಾ ಸಾಗಿವೆ. ಹಳೆಯದರ ಜೊತೆಗೆ ಹೊಸತನವನ್ನು ಉಳಿಸಿಕೊಂಡಿರುವ ಹಳ್ಳಿಗಳು ವಿರಳ. ಇಂದು ನಾವು ಯಾವ ಹಳ್ಳಿ ದರ್ಶನ ಮಾಡಿದರೂ ಅಲ್ಲಿ ಸಾಮಾನ್ಯವಾಗಿ ಕಾಣುವುದು ಕ್ರಿಕೆಟ್, ವಾಲಿಬಾಲ್ ಅಂತಹ ಕ್ರೀಡೆಗಳು. ಹೊಳಲ್ಕೆರೆ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಜನಪ್ರಿಯವಾಗಿರುವ ಕ್ರೀಡೆಗಳೆಂದರೆ, ವಾಲಿಬಾಲ್, ಬ್ಯಾಡ್ಮಿಂಟನ್, ಇತ್ತೀಚೆಗೆ ಕ್ರಿಕೆಟ್ ಉಳಿದಂತೆ ಕೇರಂ, ಚೆಸ್, ಫುಟ್‌ಬಾಲ್ ಜೊತೆಗೆ ಕರಾಟೆಯಂತಹ ಆಟಗಳು ವಿರಳವಾಗಿವೆ, ಚಿಕ್ಕಮಕ್ಕಳಿಗೆ ಮೀಸಲಾದಂತ ಬುಗುರಿ, ಗೋಲಿ, ಆಟಗಳು ಮಾತ್ರ ಪ್ರತಿ ಗ್ರಾಮಗಳಲ್ಲೂ ಸಾಮಾನ್ಯವಾಗಿದೆ.

ಜಾತ್ರೆ ಹಬ್ಬಗಳಲ್ಲಿ ಟಗರಿನ ಕಾಳಗ, ಕುಸ್ತಿ, ಕೋಳಿಯಂಕ, ಇಸ್ಪೀಟು, ಚೌಕಾಬಾರ, ಇವು ನಡೆದು ಬರುತ್ತಿದ್ದ ಸಾಂಪ್ರದಾಯಿಕ ಕ್ರೀಡೆಗಳು. ಇತ್ತೀಚೆಗೆ ಕಾನೂನಿನ ಭಯದಿಂದಾಗಿ ಇಂಥ ಆಟಗಳೂ ಕಣ್ಮರೆಯಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಶಿವರಾತ್ರಿ, ಯುಗಾದಿ ಹಬ್ಬದಂದು ಇಸ್ಪೀಟು, ಚಿನ್ನಿದಾಂಡು ಚೆಂಡಾಟ, ಕಬಡ್ಡಿ, ಅತ್ಯಂತ ಪ್ರಸಿದ್ಧವಾದವು, ಆದರೆ ಈಗ ಇವು ವಿರಳವಾಗುತ್ತಿವೆ.

ಹೊಳಲ್ಕೆರೆಯಲ್ಲಿ ಕುಸ್ತಿ ವಿಶೇಷ ಸ್ಥಾನ ಪಡೆದುಕೊಂಡ ಕ್ರೀಡೆಯಾಗಿದೆ. ಕುಸ್ತಿ ಮೂಲಕ ಹೊಳಲ್ಕೆರೆ ಹೆಸರನ್ನು ಪ್ರಸಿದ್ಧಗೊಳಿಸಿದವರೂ ಇಲ್ಲಿದ್ದಾರೆ. ಹೊಳಲ್ಕೆರೆ ಪಟ್ಟಣವನ್ನು ಆಳಿದ ಪಾಳೆಯಗಾರರು ಕುಸ್ತಿ ಆಟಕ್ಕೆ ನೀಡಿದ ಪ್ರೋತ್ಸಾಹಗಳು ಸಹ ಇತಿಹಾಸದಿಂದ ತಿಳಿದು ಬರುತ್ತದೆ. ಪಟ್ಟಣದಲ್ಲಿ ಕುಸ್ತಿ ವೈಭವ ಪೂರ್ಣವಾಗಿ ನಡೆದುಬಂದಿರುತ್ತದೆ. ಘಟಾನುಘಟಿಗಳಿಗೆ ಮಣ್ಣು ಮುಕ್ಕಿಸಿ ಮೆರೆದ ಪೈಲ್ವಾನರುಗಳು ಕುಸ್ತಿಯನ್ನು ಪ್ರೋತ್ಸಾಹಿಸುವ ಜನತೆ ಇಂದಿಗೂ ತಾಲ್ಲೂಕಿನಲ್ಲಿ ಇದ್ದಾರೆ. ಕುಸ್ತಿ ನಡೆಯುತ್ತದೆ ಎಂದರೆ ಹತ್ತಾರು ಮೈಲಿಗಳಿಂದ ನೋಡಲು ಬರುವ ಕುಸ್ತಿ ಪ್ರಿಯರು ಈ ತಾಲ್ಲೂಕಿನಲ್ಲಿ ಕಡಿಮೆಯೇನು ಇಲ್ಲ. ಈ ಕಾರಣಗಳಿಂದಾಗಿ ಮೀಸೆ ಸಿದ್ಧರಾಮಣ್ಣ, ಚನ್ನಬಸಪ್ಪ, ಟೈರ್ ಗಾಡಿ ಬಾಬಣ್ಣ ಮೊದಲಾದವರು ಗರಡಿ ಮನೆಯ ಮೂಲಕ ತರಬೇತಿ ನೀಡಿ ಪ್ರೋತ್ಸಾಹಿಸುತ್ತಿದ್ದರು.

ಈ ಆಟಗಳಲ್ಲದೇ ಹಬ್ಬ ಹರಿದಿನಗಳಲ್ಲಿ ತೆಂಗಿನಕಾಯಿಗೆ ಗುರಿಯಿಟ್ಟು ಹೊಡೆಯುವ ಸ್ಪರ್ಧೆ, ವಿಶೇಷವಾಗಿ ಯುಗಾದಿಯಲ್ಲಿ ಜೋಕಾಲಿ, ಕುಂಟೇಬಿಲ್ಲೆಯಾಟ, ಕಣ್ಣಾಮುಚ್ಚಾಲೆಯಾಟ, ಕೋಲಾಟ ಮೊದಲಾದ ಸಾಂಪ್ರದಾಯಿಕ ಆಟಗಳನ್ನು ಜನ ಈಗಲೂ ಆಡುತ್ತಾರೆ.

## ಅಧ್ಯಾಯ–೧೦

# ಸಾಹಿತ್ಯ ಮತ್ತು ಸಂಸ್ಕೃತಿ

**ಹೊ**ಳಲ್ಕೆರೆ ತಾಲ್ಲೂಕು ಚಾರಿತ್ರಿಕ, ಸಾಮಾಜಿಕ, ಸಾಹಿತ್ಯಕ, ಜಾನಪದ, ಧಾರ್ಮಿಕ, ಕಲೆ ಮತ್ತು ವಾಸ್ತು ಶಿಲ್ಪಗಳ ನೆಲೆಯಾಗಿದೆ. ತಾಲ್ಲೂಕಿನ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ಸಾಧಕರನ್ನು ಇಲ್ಲಿ ಪರಿಚಯಿಸಲಾಗಿದೆ.

ಹೊಳಲ್ಕೆರೆ ತಾಲ್ಲೂಕು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಹೊಂದಿದೆ. ಕನ್ನಡ ಸಾಹಿತ್ಯ ಸರಸ್ವತಿಯ ಕಣಜಕ್ಕೆ ಈ ತಾಲ್ಲೂಕಿನ ಬರಹಗಾರರ ಬೆಳೆಯೂ ತುಂಬಿದೆ. ಸಾಹಿತ್ಯದ ನಾನಾ ಪ್ರಕಾರಗಳಾದ ಕಾದಂಬರಿ, ಕಾವ್ಯ, ಕಥೆ, ಪ್ರಬಂಧ, ವಿಮರ್ಶೆ, ಚಿಂತನೆಗಳು, ಸಂಶೋಧನೆ, ಸಂಪಾದನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರು ಹೊಳಲ್ಕೆರೆ ತಾಲ್ಲೂಕಿನ ಕೀರ್ತಿಯನ್ನು ನಾಡಿನೆಲ್ಲೆಡೆ ಬೆಳಗಿಸಿದ್ದಾರೆ.

**ಸಾಹಿತ್ಯ:** ಈ ತಾಲ್ಲೂಕಿನಲ್ಲಿ ಸಾಹಿತ್ಯಿಕವಾಗಿ ಪ್ರೌಢಮಟ್ಟದ ರಚನೆಗಳು ಹೆಚ್ಚಾಗಿ ಕಂಡುಬಂದಿಲ್ಲ.

ಶ್ರೀ ಬಿ.ಎಲ್.ರೈಸ್ ಸಂಪಾದಿಸಿ ಪ್ರಕಟಿಸಿದ ಎಪಿಗ್ರಾಫಿಯ ಕರ್ನಾಟಕ ಸಂಪುಟ ೧೧ರಲ್ಲಿ (೧೯೦೩) ಆಗ ಹೊಳಲ್ಕೆರೆ (ಹೊಸದುರ್ಗ ತಾಲ್ಲೂಕಿನ ಗ್ರಾಮಗಳು ಸೇರಿದ್ದರೂ ಹೊಸದುರ್ಗ ಇನ್ನು ಪ್ರತ್ಯೇಕ ತಾಲ್ಲೂಕು ಆಗಿರಲಿಲ್ಲ) ತಾಲ್ಲೂಕಿನವೆಂದು ಕೊಟ್ಟಿರುವ ೧೪೧ ಕನ್ನಡ ಶಾಸನಗಳಲ್ಲಿ ೮೯ ಶಾಸನಗಳು ಈಗಿನ ಹೊಳಲ್ಕೆರೆ ತಾಲ್ಲೂಕಿಗೆ ಸೇರಿವೆ. ಇವುಗಳಲ್ಲಿ ಹೊಳಲ್ಕೆರೆಯ ಕ್ರಿ.ಶ. ೧೧೫೮ ರ ಶಾಸನ, ದಿನಾಂಕ ತಿಳಿಯದ ಇನ್ನೊಂದು ಶಾಸನ ಹಾಗೂ ಭರಮಣ್ಣ ನಾಯಕನ ದುರ್ಗ ಹೋಬಳಿಯ ಹಿರೇಎಮ್ಮಿಗನೂರಿನ ಕ್ರಿ.ಶ. ೧೨೨೦ರ ಶಾಸನಗಳು ಹಳೇಗನ್ನಡದ ವೃತ್ತಕಂದಗಳಿಂದ ಕೂಡಿದ್ದು ಕಾವ್ಯಮಯವಾಗಿವೆ. ಆದರೂ ಅವು ಬಹುತೇಕ ತ್ರುಟಿತ ಅವಸ್ಥೆಯಲ್ಲಿದ್ದು ಆ ಪಠ್ಯ ಅಪೂರ್ಣವಾಗಿದೆ. ಅವುಗಳ ರಚನೆಕಾರರು ಎಂಬ ಮಾಹಿತಿ ಲಭ್ಯವಿಲ್ಲ. ಈ ತಾಲ್ಲೂಕಿನ ಆರಂಭಕಾಲದ ಸಾಹಿತ್ಯ ರಚನೆಯ ಹೆಜ್ಜೆಗಳನ್ನು ಈ ಶಾಸನಗಳಿಂದಲೇ

ಗುರುತಿಸಬೇಕಾಗುತ್ತದೆ. ಇದಲ್ಲದೇ ರಾಮಗಿರಿಯ ಪ್ರಸಿದ್ಧ ವೀರಶೈವ ಯಾತ್ರಿ ಕರಿಸಿದ್ದೇಶನಿಂದ ರಚಿತವಾದ "ಪ್ರಶೋದ ಚಂದ್ರೋದಯ" ಎಂಬ ವಿವಿಧ ಷಟ್ಪದಿಗಳ ಕೃತಿಯೊಂದು ರಚಿತವಾಗಿರುವುದಾಗಿ ತಿಳಿದುಬರುತ್ತದೆ. ತಮಗೆ ದೊರೆತ ಏಕೈಕ ಹಸ್ತಪ್ರತಿ ಆಧರಿಸಿ ಶ್ರೀ ಎನ್.ಬಸವಾರಾಧ್ಯ ಅವರು ಈ ಕೃತಿಯನ್ನು ಸಂಪಾದಿಸಿದ್ದು, ಅದು ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಹಸ್ತಪ್ರತಿ ತೀರಾ ಅಶುದ್ಧವಾಗಿದ್ದುದರಿಂದ ಅನೇಕ ಕಡೆ ಪಾಠದೋಷಗಳ ಪರಿಷ್ಕರಣೆ ಪೂರ್ಣವಾಗಿ ಸಾಧ್ಯವಾಗಿಲ್ಲ, ಅದರಲ್ಲಿ ಕೃತಿ ರಚನೆಯ ಕಾಲವನ್ನು ಹೇಳಿರುವುದಿಲ್ಲ. ಆದರೂ ಈ ಕೃತಿಯ ಕಾಲ ಸುಮಾರು ಕ್ರಿ.ಶ ೧೬೫೦ ಎಂದು ಸಂಪಾದಕರು ಊಹಿಸಿದ್ದಾರೆ.

**ಸಾಹಿತ್ಯ**

ಕನ್ನಡ ಸಾಹಿತ್ಯಕ್ಕೆ ಪ್ರಾಚೀನ ಕವಿಗಳ ಹಾಗೂ ಆಧುನಿಕ ಲೇಖಕರ ಕೊಡುಗೆ ಸ್ಮರಣೀಯವಾಗಿದೆ. ವಚನಕಾರರಾದ ನುಲಿಯಚಂದಯ್ಯನವರು ಪ್ರಾಚೀನ ಸಾಹಿತ್ಯ ಇತಿಹಾಸದಲ್ಲಿ ಚಿರಸ್ಮರಣೀಯವಾದವರು. ಈ ಹಳೆಯ ಪರಂಪರೆಯ ಜೊತೆಗೆ ಹೊಸ ತಲೆಮಾರಿನ ತಾಲ್ಲೂಕಿನ ಲೇಖಕರು ಆಧುನಿಕ ಸಾಹಿತ್ಯದಲ್ಲಿ ಗುರುತಿಸಲ್ಪಟ್ಟಿದ್ದಾರೆ. ಸ್ವಾತಂತ್ರ್ಯ ಪೂರ್ವಕಾಲದ ಲೇಖಕರಾದ ಟಿ.ಎಸ್.ಸುಬ್ಬರಾಯರು ಲಾವಣಿ ರಚಿಸಿ ಭಾಷಾಂತರ ಮತ್ತು ಶ್ಲೋಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

**ಆಧುನಿಕ ಸಾಹಿತ್ಯ**

ಕನ್ನಡ ನುಡಿಗುಡಿಯನ್ನು ಎತ್ತಿಹಿಡಿದವರು ಸಾಹಿತ್ಯ ರತ್ನ "ವ್ಯಾಕರಣ ರತ್ನ" ಹೊರಕೇರಿದೇವಪುರದ ಡಿ.ಟಿ.ರಂಗಸ್ವಾಮಿ ಅವರು.

ಟಿ.ಎಸ್.ಸಂಜೀವರಾಯರ ಮಕ್ಕಳ ಸಾಹಿತ್ಯದ "ಷೀಪ್" ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ.

**ಚಂದ್ರಶೇಖರ ತಾಳ್ಯ:** ಇವರು ಆರ್ಯಭಟ್ಟ ಪ್ರಶಸ್ತಿ (೨೦೦೯), ಶಿವಮೊಗ್ಗದ ಕರ್ನಾಟಕ ಸಂಘ ಕೊಡುಗೆ ಜಿ.ಎಸ್.ಎಸ್.ಕಾವ್ಯ ಪ್ರಶಸ್ತಿ (೨೦೦೫), ಡಾ.ನಲ್ಲೂರು ಪ್ರಸಾದ್ ಸಾಹಿತ್ಯ ಪ್ರಶಸ್ತಿ(೨೦೦೯) ಹಾಗೂ ಎಸ್.ಚನ್ನಬಸವಯ್ಯ ಶ್ರೇಷ್ಠ ಉಪನ್ಯಾಸಕ ಪ್ರಶಸ್ತಿಗಳ ವಿಜೇತರಾಗಿದ್ದಾರೆ.

"ನನ್ನ ಕಣ್ಣಗಲಕ್ಕೆ". "ಸಿಂಧೂನದಿಯ ದಂಡೆಯ ಮೇಲೆ", "ಎಲ್ಲಿ ನವಿಲು ಹೇಳಿರೆ", "ಸುಡುವ ಭೂಮಿ", "ಕಾವಳದ ಸಂಜೆಯಲ್ಲಿ" ಕಾವ್ಯ ಕೃತಿಗಳು, ಪ್ರಭು ಅಲ್ಲಮ (ಅಲ್ಲಮ ವ್ಯಕ್ತಿತ್ವ ಚಿತ್ರಣ) ರಾಮಕೃಷ್ಣ ಮತ್ತು ಅವರ ಕಾಲ (ಅನುವಾದಕೃತಿ) ಕೆ.ಕೆಂಚಪ್ಪ (ಪ್ರತಿಭಾವಂತ ಸಂಸದೀಯ ಪಟುಗಳು ಮಾಲಿಕೆಯಲ್ಲಿ ವಿಧಾನ ಸೌಧ

ಗ್ರಂಥಾಲಯ ಪ್ರಕಟಣೆ) "ನೆಲವಹುಡುಕಿ (ಲೇಖನಗಳ ಸಂಕಲನ) ಹೂ ಗೊಂಚಲು (ಭಾವಗೀತೆಗಳ ಸಿ.ಡಿ) ಮುಂತಾದವು ಅವರ ಕೃತಿಗಳಾಗಿವೆ. ಅವರು ಹೊಳಲ್ಕೆರೆ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮತ್ತು ೭೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಯ ಅಧ್ಯಕ್ಷರಾಗಿದ್ದರು.

**ಡಾ.ಜಿ.ಟಿ. ಗೋವಿಂದಪ್ಪ**: ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಹೊರಕೇರಿ ದೇವರಪುರ ಸಮೀಪದ ಕುಗ್ರಾಮವಾದ ಕಣಿವೆ ಜೋಗಿಹಳ್ಳಿ ತಿಮ್ಮಪ್ಪ ರಾಮಕ್ಕ ದಂಪತಿಯ ಮಗನಾಗಿ ಡಾ.ಜಿ.ಟಿ.ಗೋವಿಂದಪ್ಪನವರು ೦೨-೦೬-೧೯೫೫ ರಲ್ಲಿ ಜನಿಸಿದ್ದರು. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಯ ಶಿಕ್ಷಣವನ್ನು ಹೊರಕೇರಿ ದೇವರಪುರ ಮತ್ತು ಮರಡಿಯಲ್ಲಿ ಕಲಿತು, ಚಿತ್ರದುರ್ಗದ ಸರ್ಕಾರಿ ಕಾಲೇಜಿನಲ್ಲಿ ಬಿಕಾಂ ಪದವಿ ಪಡೆದರು. ಎಂ.ಕಾಂ. ಪದವಿಯಲ್ಲಿ ಬಂಗಾರ ಪದಕವನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಪಡೆದು, ಮೈಸೂರು, ಕುವೆಂಪು ಮತ್ತು ದಾವಣಗೆರೆಯ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಮತ್ತು ಡೀನ್‌ರಾಗಿ ಸೇವೆ ಸಲ್ಲಿಸಿದ್ದಾರೆ. ಏಳು ವಿದ್ಯಾರ್ಥಿಗಳಿಗೆ ಪಿಹೆಚ್‌ಡಿ ಮಾರ್ಗದರ್ಶಕರಾಗಿ, ಇಪ್ಪತ್ಮೂರು ವಿದ್ಯಾರ್ಥಿಗಳಿಗೆ ಎಂಫಿಲ್ ಪದವಿ ಶಿಕ್ಷಣ ನೀಡಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರದ ಸ್ಥಾಪಕ ಸಂಸ್ಥಾಪಕರಾಗಿ ಇವರ ಕ್ರಿಯಾಶೀಲ ಕೆಲಸದಿಂದ, ಚಿತ್ರದುರ್ಗದ ಕೇಂದ್ರ ಇಂದು ವಿಶ್ವವಿದ್ಯಾಲಯ ಮಟ್ಟಕ್ಕೆ ಬೆಳೆದಿದೆ. ''ಆದಾಯ ತೆರಿಗೆ ಕಾನೂನು ಆಚರಣೆ'' ಕನ್ನಡದಲ್ಲಿ ಪುಸ್ತಕವನ್ನು ಪ್ರಕಟಿಸಿದ್ದು ನಲವತ್ತು ಲೇಖನಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿದ್ದಾರೆ.

**ತಾಳ್ಯದ ವೇದಮೂರ್ತಿ**: ಹೊಳಲ್ಕೆರೆ ತಾಲ್ಲೂಕು ಗ್ಯಾಸೆಟಿಯರ್, "ಅಂತರಾಳ" ಕವನ ಸಂಕಲನ (೧೯೮೭), ಬುದ್ಧ ಸಾಮಾಜಿಕ ಚಿಂತನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ (ಅಪ್ರಕಟಿತ), ಹೊಳಲ್ಕೆರೆ ತಾಲ್ಲೂಕು ದರ್ಶನ (ಐ.ಬಿ.ಹೆಚ್. ಪ್ರಕಾಶನ) ತಾಳ್ಯ ಕ್ಷೇತ್ರ ಪರಿಚಯ, ೨೦೦೮ ರ ತರಳಬಾಳು ಹುಣ್ಣಿಮೆಯ ಸ್ಮರಣ ಸಂಚಿಕೆಯ ಸಂಪಾದಕರು, ೨೦೦೮ ರ ತರಳಬಾಳು ಹುಣ್ಣಿಮೆಯ ಸಾಹಿತ್ಯ ಸಿರಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹೊಳಲ್ಕೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಪ್ರಥಮ ಅಧ್ಯಕ್ಷರು, ತಾಲ್ಲೂಕು ಜಿಲ್ಲಾ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಾಮಕರಣ ಸದಸ್ಯರು ಹಾಗೂ ೧೯೯೫ ರಲ್ಲಿ ಕನ್ಯಾಕುಮಾರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪ್ರಥಮ ಸಮ್ಮೇಳನದಲ್ಲಿ ಸಾಹಿತ್ಯ ರಂಗದ ಸೇವೆಗಾಗಿ ಸನ್ಮಾನ ಪಡೆದಿದ್ದಾರೆ.

ನಂದನ ಹೊಸೂರು ಶಿವಮೂರ್ತಿಯವರು 'ಅಷ್ಟಾವಂಕ' "ಅಂಧಕಾರ" (ನಾಟಕ) ಅಭಿಜ್ಞಾನ, ಕಾವ್ಯಕನ್ನಿಕೆ, ಅಭಿನೇತ್ರಿ (ಕಾದಂಬರಿ) ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ದಿವಂಗತ ಡಾ॥ರಾಜಶೇಖರ ಹನುಮಲಿಯವರು 'ಮಹಾಬೆಳಕು' ನಾಟಕ, 'ವೀರಗಾಸೆ', ಪಿ.ಹೆಚ್.ಡಿ.ಮಹಾಪ್ರಬಂಧ ಕೃತಿಗಳನ್ನು ರಚಿಸಿದ್ದಾರೆ. ಕವಿ

ಡಾ॥ ಡಿ.ಸಿ.ರಾಜಪ್ಪ ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು. ಪಿ.ಹೆಚ್.ಡಿ. ಮಹಾಪ್ರಬಂಧ ಕೃತಿಗಳನ್ನು ರಚಿಸಿದ್ದಾರೆ. ಡಾ॥ ರಮಾನಂದರು ವೈದ್ಯರ ಶಿಖಾರಿ, "ದಿಟನಾಗರ ಕಂಡರೆ" ಕೃತಿಗಳನ್ನು ರಚಿಸಿದ್ದಾರೆ. ತಾ.ಶ್ರೀ ನಾಗರಾಜರಾಯರ 'ಕನ್ನಡ ಧ್ರುವತಾರೆ' ಪುಸ್ತಕಕ್ಕೆ ೧೯೮೨ ರ ರಾಜ್ಯ ಸರ್ಕಾರದ ಪುರಸ್ಕಾರ ದೊರೆತಿದೆ.

ಕವಿ ವಿಮರ್ಶಕ ಜಿ.ಕೆ.ರವೀಂದ್ರಕುಮಾರ್, ರಾಮಗಿರಿ ರವೀಂದ್ರಕುಮಾರ್, ಜಿ, ಕುಮಾರಪ್ಪ, ಸಂವಾದ ಪ್ರಕಾಶನದ ಶ್ರೀ ದಿ॥ಜಿ.ಎಲ್.ರಾಮಪ್ಪ, ದಿ॥ಗಿರಿಜಾ ಚೇಳಂಗಿಮಠ, ಬಿ.ಕುಸುಮ, ಉಷಾ, ಜಿ.ಎನ್. ಬಸವರಾಜಪ್ಪ, ಪ್ರೊ॥ ಹೆಚ್.ಶಿವಲಿಂಗಪ್ಪ, ಟಿ.ಎನ್.ಷಣ್ಮುಖ, ಬಸವರಾಜ್ ಶಿವಪುರ, ಮದನಕೇಸರಿ, ಈ. ಚಂದ್ರ ತಾಳಿಕಟ್ಟೆ, ಚಂದ್ರಶೇಖರ ರಂಗಾಪುರ, ರಾಮಗಿರಿ ಕರಿಸಿದ್ದಪ್ಪ, ರೇವಣ ಸಿದ್ದಪ್ಪ ಜಂಬಿಗಿ, ಗೀತಾ ಚಿಕ್ಕಜಾಜೂರು, ಗುಡ್ಡದಸಾಂತೇನಳ್ಳಿ ಪ್ರಕಾಶ, ಬಿ.ಎಸ್.ಮಂಜಪ್ಪ ಮುಂತಾದವರು ತಾಲ್ಲೂಕಿನ ಗಮನಾರ್ಹ ಲೇಖಕರಾಗಿದ್ದಾರೆ.

ರಾಷ್ಟ್ರ ಕವಿ ಜಿ.ಎಸ್.ಶಿವರುದ್ರಪ್ಪನವರು ಅವರ ಆತ್ಮಕಥೆ ಚತುರಂಗ (೧೯೮೬) ದಲ್ಲಿ ರಾಮಗಿರಿಯ ಬಾಲ್ಯ ಜೀವನದ ಚಿತ್ರಗಳನ್ನು ಬರೆದಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ರಾಘವೇಂದ್ರ ಪಾಟೀಲರು ಕಥೆ, ಕಾದಂಬರಿಗಳ ಮೂಲಕ ಹೆಸರಾಗಿದ್ದು, ಮಲ್ಲಾಡಿಹಳ್ಳಿಯಲ್ಲಿ ಕೆಲಸ ನಿರ್ವಹಿಸಿ ಇದೀಗ ಧಾರವಾಡದಲ್ಲಿ ವಾಸವಾಗಿದ್ದಾರೆ. ಎಂ.ಜಿ.ವೆಂಕಟೇಶ್, ಸುಭಾಶ್ ದೇವರಗುಡ್ಡ ಈ ನೆಲೆಯಲ್ಲೇ ಇದ್ದಾರೆ.

**ಜಾನಪದ**: ಹೊಳಲ್ಕೆರೆ ತಾಲ್ಲೂಕಿನಲ್ಲಿ ಸಂಪದ್ಭರಿತ ಜಾನಪದವನ್ನು ಗುರುತಿಸಬಹುದಾಗಿದೆ. ವಿಪುಲ ಜಾನಪದ ಸಾಮಗ್ರಿಯನ್ನೊದಗಿಸುವ ಗೊಲ್ಲರು, ಭೋವಿ, ಕುರುಬರು, ಹೆಳವರು ಹೀಗೆ ಅನೇಕ ಜನಾಂಗಗಳಿವೆ. ಜನಪದ ಧರ್ಮವನ್ನು ಅವಲಂಬಿಸಿಕೊಂಡು ಬಂದಿರುವ ಈ ಸುತ್ತಿನ ಜನರು ಜನಪದ ದೇವತೆಗಳ ಹಬ್ಬ, ಜಾತ್ರೆ, ಉತ್ಸವ, ಮದುವೆ, ಇತ್ಯಾದಿಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಜಾನಪದದ ಎಲ್ಲಾ ಪ್ರಕಾರಗಳನ್ನು ಈ ನೆಲದಲ್ಲಿ ಕಾಣಬಹುದಾಗಿದೆ.

**ತಮಟೆ ಕುಣಿತ**: ತಮಟೆ ಕುಣಿತ ಮತ್ತು ರಂಗ ಕುಣಿತಗಳು ಜನಪದರ ಬದುಕಿನ ಅವಿಭಾಜ್ಯ ಅಂಗಗಳಂತಿವೆ. ದಿನವಿಡಿ ಕಾಯಕದ ನಡುವೆ ಆಯಾಸ, ಬೇಸರಗಳನ್ನು ದೂರ ಮಾಡಿಕೊಳ್ಳಲು ಜನಪದರು ಬೆಳೆಸಿಕೊಂಡ ಕಲೆಗಳಲ್ಲಿ ಇವುಗಳು ವಿಶಿಷ್ಟವಾದವುಗಳಾಗಿವೆ.

**ರಂಗದ ಕುಣಿತ**: ಗ್ರಾಮೀಣರಲ್ಲಿ ಪರಸ್ಪರ ಸಾಮರಸ್ಯ ತುಂಬುತ್ತಿರುವ ರಂಗದ ಕುಣಿತದಲ್ಲಿ ಎಲ್ಲಾ ಬಗೆಯ ಜನರು ಒಟ್ಟಿಗೆ ಕೂಡಿ ಗಂಟೆಗಟ್ಟಲೆ ನಿರಂತರವಾಗಿ ಕುಣಿದು ತಣಿಯುತ್ತಾರೆ. ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ವಿಶೇಷವಾಗಿ ಕೆಲವು ಜನಾಂಗದವರು ಈ ಕುಣಿತದಲ್ಲಿ ತೊಡಗುತ್ತಾರೆ.

**ಜಾನಪದ ಕಥೆಗಳು**: ಕೆಲವು ಜನಾಂಗದವರು ಗ್ರಾಮೀಣ ಪ್ರದೇಶಗಳಲ್ಲಿ ವಿಶಿಷ್ಟ ರೀತಿಯಲ್ಲಿ ಸ್ಥಳೀಯ ಜನಪದ ಕಥೆಗಳ ದಂತ ಕಥೆಗಳನ್ನು ನಿರೂಪಿಸುತ್ತಾರೆ.

**ಕೋಲಾಟ**: ಜನಪದ ಕಲೆಗಳಲ್ಲಿ ಕೋಲಾಟ ಪ್ರಮುಖವಾದದ್ದು. ಹರಿಜನರು, ನಾಯಕರು, ಕೆಲವು ಯುವಕ ಸಂಘದ ಕಲಾವಿದರ ಕೋಲಾಟದ ಕಲಾತಂಡಗಳಿದ್ದು ಇತ್ತೀಚೆಗೆ ಅಪರೂಪವಾಗುತ್ತಿದೆ.

**ಭಜನೆ**: ಜನಪದ ಕಲೆಗಳಲ್ಲಿ ಭಜನೆಯು ಜನಪ್ರಿಯ ಪ್ರಕಾರವಾಗಿದೆ. ಈ ಕಲೆಯನ್ನು ಶಿವಪುರ, ಪಾಳ್ಯ, ಹುಲೆಮಳಲಿ, ಮಲ್ಲಾಡಿಹಳ್ಳಿ, ರಾಮಗಿರಿ, ಮೊದಲಾದ ಗ್ರಾಮೀಣರು ಕರಗತ ಮಾಡಿಕೊಂಡಿದ್ದಾರೆ.

**ಜನಪದ ಗೀತೆ**: ಜನಪದ ಪ್ರಕಾರಗಳಲ್ಲಿ ವಿಶೇಷ ಮನ್ನಣೆ ಪಡೆದಿರುವುದು ಜನಪದ ಗೀತೆಗಳು. ಜನಪದರ ಬದುಕಿನ ಏರಿಳಿತ, ದುಃಖ ದುಮ್ಮಾನ, ನೋವು ನಲಿವುಗಳು ಹಾಡುಗಳಾಗಿ ಹೊರಬಂದಿವೆ. ಗ್ರಾಮೀಣ ಯುವಕ ಯುವತಿ ಮಂಡಳಿಗಳ ಕಲಾವಿದರನ್ನು ಕಾಣಬಹುದಾಗಿದೆ. ಕಲ್ಲವ್ವ ನಾಗತಿಹಳ್ಳಿ ವಾದ್ಯವೃಂದದ ಶ್ರೀ ನೀಲಪ್ಪನವರು ವಿಶಿಷ್ಟ ಜಾನಪದ ಕಲಾವಿದರೆನಿಸಿದ್ದಾರೆ. ವೀರಗಾಸೆ, ಡೊಳ್ಳು, ಸನಾದಿ, ದುಮ್ಮಿ ಇವೆಲ್ಲಾ ಇಂದು ಕಡಿಮೆಯಾಗುತ್ತಿರುವುದು ಗಮನಾರ್ಹವಾಗಿದೆ.

**ಸೋಬಾನೆ ಪದ**: ಮದುವೆಯ ಶುಭ ಸಂದರ್ಭಗಳಲ್ಲಿ ಹೆಂಗಸರು ಒಟ್ಟಾಗಿ ಕುಳಿತು ಸೋಬಾನೆ ಪದಗಳನ್ನು ಹಾಡುವರು. ಜನಪದರು ತಮ್ಮ ಕೆಲಸಗಳ ನಡುವೆ ಸೋಬಾನೆ ಪದಗಳನ್ನು ಹಾಡುವುದುಂಟು. ಅಡಿಕೆ ಕತ್ತರಿಸುವಾಗ, ಹೆಣ್ಣುಮಕ್ಕಳು ಮೈನೆರೆದಾಗ, ಮಗುವನ್ನು ತೊಟ್ಟಿಲಿಗೆ ಹಾಕುವ ಸಂದರ್ಭಗಳಲ್ಲಿ ಸೋಬಾನೆ ಪದಗಳನ್ನು ಹಾಡಲಾಗುತ್ತದೆ. ಶಿವಪುರದ ಹನುಮಜ್ಜಿ ಜಾನಪದ ಸೋಬಾನೆಯನ್ನು ಗಂಟೆಗಟ್ಟಲೆ ಹಾಡುತ್ತಿದ್ದರು.

**ಆಸಾದಿ ಹಾಡುಗಳು**: ಜಾತ್ರೆ, ಉತ್ಸವ, ಹಬ್ಬಗಳಲ್ಲಿ ಈ ಪದಗಳನ್ನು ಎಲ್ಲಾ ಹಳ್ಳಿಗಳಲ್ಲೂ ಆಸಾದಿಗಳು ಹಾಡುವುದನ್ನು ಕಾಣಬಹುದಾಗಿದೆ.

**ಬಯಲಾಟ**: ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಬಯಲಾಟಗಳ ಕಲಾವಿದರನ್ನು ಕಾಣಬಹುದಾಗಿದೆ. ಅಗಸರ ತಿಮ್ಮಣ್ಣ, ಮುರಿಗಪ್ಪ, ಈಶ್ವರಯ್ಯ, ಹಾಲಸಿದ್ದಪ್ಪ ಮೊದಲಾದ ಹಲವು ಕಲಾವಿದರನ್ನು ಹೆಸರಿಸಬಹುದಾಗಿದೆ.

**ಸೋಮನ ಕುಣಿತ**: ಜನಪದ ನೃತ್ಯ ಪ್ರಕಾರಗಳಲ್ಲಿ ಒಂದಾದ ಸೋಮನ ಕುಣಿತವನ್ನು ಜಾತ್ರೆ, ಉತ್ಸವ, ಹಬ್ಬದಿನಗಳಂದು ಎಲ್ಲಾ ಹಳ್ಳಿಗಳಲ್ಲೂ ಕಾಣಬಹುದು.

**ಸಂಗೀತ ನೃತ್ಯ**: ಮಲ್ಲಾಡಿ ಹಳ್ಳಿಯಲ್ಲಿ ತಮ್ಮ ಬದುಕನ್ನು ಸವೆಸಿದ ಶ್ರೀ ಅಥಣಿಕರ್‌ರವರು ಪ್ರಸಿದ್ಧ ಸಂಗೀತ ವಿದ್ವಾಂಸರೆನಿಸಿದ್ದರು. ಸಂಗೀತ, ನೃತ್ಯ, ನಾಟಕ, ಗಮಕ ಇತ್ಯಾದಿ ಲಲಿತ ಕಲೆಗಳಲ್ಲಿ ಪ್ರಖ್ಯಾತರಾದ ಕಲಾವಿದರನ್ನು ಈ ತಾಲ್ಲೂಕಿನಲ್ಲಿ ಕಾಣಬಹುದು.

**ಗಮಕ**: ಸಂಗೀತ-ಸಾಹಿತ್ಯ ಎರಡರ ಸಮ್ಮಿಳತವೇ ಗಮಕ. ರಾಮಾಯಣ, ವ್ಯಾಸಭಾರತ, ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ, ಮುಂತಾದವನ್ನು ಜನಸಾಮಾನ್ಯರಿಗೆ ಪರಿಚಯಿಸುವ ಕಾವ್ಯವಾಚನವು ಪುರಾತನ ಕಲೆಯಾಗಿದೆ. ಹೊಳಲ್ಕೆರೆಯ ಕೋದಂಡರಾಮಪ್ಪ ಮೊದಲಾದವರು ಗಮಕ ಕಲಾವಿದರಾಗಿದ್ದಾರೆ.

**ವಾಸ್ತುಶಿಲ್ಪ**: ಈ ತಾಲ್ಲೂಕನ್ನು ಆಳಿದ ರಾಜರುಗಳು ತಾಲ್ಲೂಕಿನಾದ್ಯಂತ ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ. ದೇವಾಲಯಗಳ ಕಂಬ, ಗೋಡೆಗಳ ಮೇಲೆ ಸುಂದರ ಕೆತ್ತನೆಗಳಿವೆ. ಪ್ರತಿಯೊಂದು ಹಳ್ಳಿಗಳಲ್ಲಿ ಬಸವೇಶ್ವರ, ಸ್ಥಳೀಯ ದೇವತೆ, ಶಿವ, ಹನುಮಂತನ ದೇವಾಲಯಗಳು ಕಂಡುಬರುತ್ತವೆ.

**ಶಿಲ್ಪಕಲೆ**: ನಾರಾಯಣಗೊಂಡನಹಳ್ಳಿ ಶಿಲ್ಪಿ ಕಾಳಾಚಾರ್ ಅವರು ಶಿಲೆ, ಲೋಹ, ಮರ, ಚಿನ್ನ, ಬೆಳ್ಳಿ ಮತ್ತಿತರ ಲೋಹಗಳಿಂದ ಶಿಲ್ಪಗಳನ್ನು ರಚಿಸಿ ಹೆಸರು ಮಾಡಿದ್ದಾರೆ. ಇವರು ರಚಿಸಿದ ಶಿಲ್ಪಗಳು ರಾಜ್ಯವಲ್ಲದೆ ದೇಶದ ಇತರೆಡೆ ಹಾಗೂ ಹೊರದೇಶಗಳಲ್ಲೂ ಹೆಸರುವಾಸಿಯಾಗಿವೆ. ಇವರಿಗೆ ೧೯೯೫ ರಾಜ್ಯೋತ್ಸವ ಪ್ರಶಸ್ತಿ, ೧೯೯೭ ರಲ್ಲಿ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ಹಲವು ಬಿರುದು ಸನ್ಮಾನಗಳು ಲಭಿಸಿವೆ. ನುಲೇನುರಿನ ತಿಪ್ಪಾಚಾರ್ ಸಹ ಶಿಲ್ಪ ಕಲೆಯಲ್ಲಿ ಪ್ರಮುಖರಾಗಿದ್ದಾರೆ.

**ವೀರಗಾಸೆ**: ಕಡೂರು, ಹುಲೇಮಳಲಿ, ರಾಮಗಿರಿಯ ವೀರಗಾಸೆ ತಂಡಗಳು ತಾಲ್ಲೂಕಿನಲ್ಲಿ ಪ್ರಮುಖವಾಗಿವೆ.

**ಪತ್ರಿಕೋದ್ಯಮ**: ಟಿ ಎಸ್ ರಾಮದಾಸ್ ಸಿಂಗಾಪುರದಲ್ಲಿ ಪತ್ರಿಕೆಯೊಂದರ ಸಂಪಾದಕರಾಗಿದ್ದಾರೆ.

## ಚಲನಚಿತ್ರ ಮತ್ತು ಕಿರುತೆರೆ

ಹೊಳಲ್ಕೆರೆ ತಾಲ್ಲೂಕು ಚಿತ್ರರಂಗಕ್ಕೆ ಅನೇಕ ಪ್ರತಿಭೆಗಳನ್ನು ಕಾಣಿಕೆಯಾಗಿ ನೀಡಿದೆ. ಚಿಕ್ಕಜಾಜೂರು ಪಲ್ಲಕ್ಕಿ ರಾಧಾಕೃಷ್ಣ ರವರು ಚಲನಚಿತ್ರ ನಿರ್ದೆಶಕರಾಗಿರುತ್ತಾರೆ. ತಾಳ್ಯದ ಶಶಾಂಕ ರವರು ಮೊಗ್ಗಿನ ಮನಸ್ಸು, ಸಿಕ್ಸರ್, ಕೃಷ್ಣನ್ ಲವ್ ಸ್ಟೋರಿ ಮೊದಲಾದ ಚಲನಚಿತ್ರಗಳ ನಿರ್ದೇಶಕರಾಗಿರುತ್ತಾರೆ. ತಾಳ್ಯದ ಸುನೀಲ್ ಸಹನಿರ್ದೇಶಕರಾಗಿದ್ದಾರೆ. ಪಾಂಚಾಲಿ ಸಿ. ಕಿರುತೆರೆಯಲ್ಲಿ ನಿರೂಪಕಿಯಾಗಿದ್ದಾರೆ. ಬ್ಯಾಂಕ್ ಜನಾರ್ಧನ ಈ ಮೂಲದವರೇ ಆಗಿದ್ದು, ಅನೇಕ ಚಲನಚಿತ್ರ ಹಾಗೂ ಧಾರವಾಹಿಗಳಲ್ಲಿ ಕೆಲಸ ಮಾಡಿದ್ದಾರೆ.

# ಅಧ್ಯಾಯ-೧೧

# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ಹೊ**ಳಲ್ಕೆರೆ ತಾಲ್ಲೂಕಿನಲ್ಲಿ ೧೩ ಅಲೋಪತಿ ಆರೋಗ್ಯ ಸಂಸ್ಥೆಗಳು, ಎರಡು ಆಯುರ್ವೇದಿಕ್ ಆಸ್ಪತ್ರೆಗಳು, ನಾಲ್ಕು ಹೆರಿಗೆ ಆಸ್ಪತ್ರೆಗಳು ಕಾರ್ಯನಿರತವಾಗಿವೆ. ಹೊಳಲ್ಕೆರೆ ತಾಲ್ಲೂಕು ಆರೋಗ್ಯ ಕೇಂದ್ರ(ಸಾರ್ವಜನಿಕ ಆಸ್ಪತ್ರೆ)ವನ್ನು ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಗೆ ಸೇರ್ಪಡೆ ಮಾಡಿ ವಿಶ್ವ ಬ್ಯಾಂಕ್ ನೆರವು ಪಡೆದು ಆಸ್ಪತ್ರೆ ನವೀಕರಣ, ಔಷಧಿ ಸರಬರಾಜು, ಸಿಬ್ಬಂದಿ ನೇಮಕ, ವಸತಿ ಗೃಹಗಳ ನಿರ್ಮಾಣ ಇತ್ಯಾದಿ ಅನುಕೂಲಗಳನ್ನು ಒದಗಿಸಿ ಕೊಡಲಾಗಿದೆ. ಪ್ರತಿನಿತ್ಯ ೩೦೦ ಹೊರರೋಗಿಗಳು, ೫೦-೭೫ ಒಳರೋಗಿಗಳು ಈ ಸಂಸ್ಥೆಯಲ್ಲಿ ಶುಶ್ರೂಷೆ ಪಡೆಯುತ್ತಿದ್ದಾರೆ.

**ಜನನ-ಮರಣ**

ಜನನ-ಮರಣಗಳನ್ನು ಅಧಿಕೃತವಾಗಿ ನೋಂದಣಿಸುವ ಕ್ರಮ ೧೮೭೯ ರಲ್ಲಿ ಆರಂಭವಾಯಿತು. ಆರಂಭದಲ್ಲಿ ಪಟೇಲರು ಗ್ರಾಮಮಟ್ಟದಲ್ಲಿ ಇದನ್ನು ದಾಖಲಿಸುತ್ತಿದ್ದು, ಮಾಸಾಂತ್ಯಕ್ಕೆ ತಾಲ್ಲೂಕು ಕಛೇರಿಗೆ ರವಾನಿಸುತ್ತಿದ್ದರು. ನಗರಗಳಲ್ಲಿ ಮುನ್ಸಿಪಲ್ ಕಛೇರಿಗಳಲ್ಲಿ ಇದನ್ನು ದಾಖಲಿಸುತ್ತಿದ್ದರು. ಇಂದು ಗ್ರಾಮಲೆಕ್ಕಾಧಿಕಾರಿಗಳು ಗ್ರಾಮದ ಜನನ-ಮರಣ ದಾಖಲೆಗಳನ್ನು ನಿರ್ವಹಿಸಲಾಗುತ್ತದೆ. ಪಟ್ಟಣ ಪಂಚಾಯ್ತಿಯಲ್ಲಿ ಪಟ್ಟಣದ ಜನನ-ಮರಣ ದಾಖಲೆಯನ್ನು ನಿರ್ವಹಿಸುತ್ತವೆ. ಜನನ-ಮರಣ ಅಂಕಿ ಅಂಶಗಳು ಜನಸಂಖ್ಯೆ ಬೆಳವಣಿಗೆಯನ್ನು ಅರಿಯಲು ನೆರವಾಗಿರುತ್ತದೆ. ಅದರಂತೆ ೨೦೧೧ರಲ್ಲಿ ಜನನ ಮರಣ ಪ್ರಮಾಣವು ಪಟ್ಟಣ ಪ್ರದೇಶದಲ್ಲಿ ೧೮೮೮ ಮತ್ತು ೧೧೨೩ ಆಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ೨೩೪೦-೨೧೫೨ ಆಗಿತ್ತು. ಇತರೆಡೆಗಳಂತೆ

ತಾಲ್ಲೂಕಿನಲ್ಲಿ ಜನನ ಸಂಖ್ಯೆ ಹೆಚ್ಚುತ್ತಿದ್ದರೆ ಮರಣ ಸಂಖ್ಯೆ ಕಡಿಮೆ ಆಗುತ್ತಿದೆ. ಇದಕ್ಕೆ ವೈದ್ಯಕೀಯ ಸೇವೆಯಲ್ಲಿನ ಪ್ರಗತಿಯೇ ಕಾರಣವಾಗಿದೆ. ಚಿತ್ರದುರ್ಗ ಜಿಲ್ಲಾ ಅಂಕಿ–ಅಂಶಗಳ ನೋಟ ೨೦೧೫–೧೬ ರಂತೆ ತಾಲ್ಲೂಕಿನಾದ್ಯಂತ ಒಟ್ಟು ೧೦೦ ಹಾಸಿಗೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೧೩ ಪ್ರಾಥಮಿಕ ಆರೋಗ್ಯ ಘಟಕಗಳು ಮತ್ತು ೩೭ ಔಷಧಿ ಅಂಗಡಿಗಳು ಆಸ್ಪತ್ರೆಗಳ ಸಿಬ್ಬಂದಿಯ ಮೂಲಕ ಆರೋಗ್ಯ ಇಲಾಖೆಯು ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ೨೦೧೨ ರ ಮಾರ್ಚಿ ಅಂತ್ಯಕ್ಕೆ ಐದು ಹಿರಿಯ ಮಹಿಳಾ ಆರೋಗ್ಯ ಸಹಾಯಕರು, ៩೧ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು, ಮೂರು ಹಿರಿಯ ಪುರುಷ ಆರೋಗ್ಯ ಸಹಾಯಕರು, ೨೮ ಮಂದಿ ಕಿರಿಯ ಪುರುಷ ಆರೋಗ್ಯ ಸಹಾಯಕರು, ನಾಲ್ಕು ಮಂದಿ ಕಛೇರಿ ಸಿಬ್ಬಂದಿ, ೧೦ ಮಂದಿ ಶುಶ್ರೂಷಣಾ ದಾದಿಯರು ಮತ್ತು ಐದು ಫಾರ್ಮಸಿಸ್ಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ತಾಲ್ಲೂಕಿನಾದ್ಯಾಂತ ៩೧ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಉಪಕೇಂದ್ರಗಳನ್ನು ಮತ್ತು ೩೦ ಕಿರಿಯ ಪುರುಷ ಆರೋಗ್ಯ ಸಹಾಯಕರ ಉಪಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಆರೋಗ್ಯ ಕಾರ್ಯಕ್ರಮಗಳೊಂದಿಗೆ ಇತರೆ ಸೇವೆಗಳಂದ ಕುಟುಂಬ ಆರೋಗ್ಯ ಕಾರ್ಯಕ್ರಮ, ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಕ್ಷಯರೋಗ, ರಾಷ್ಟ್ರೀಯ ವಿಸ್ತೃತ ಲಸಿಕಾ ಕಾರ್ಯಕ್ರಮ, ಸಾಂಕ್ರಾಮಿಕ ರೋಗ ನಿಯಂತ್ರಣ ಆರೋಗ್ಯ ಶಿಕ್ಷಣ, ರಾಷ್ಟ್ರೀಯ ಏಡ್ಸ್ ರೋಗ ನಿಯಂತ್ರಣಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

೨೦೧೨ ರ ಮಾರ್ಚಿ ಅಂತ್ಯಕ್ಕೆ ತಾಲ್ಲೂಕಿನಲ್ಲಿ ೧೧೦ ಹಾಸಿಗೆ ಸಾಮರ್ಥ್ಯದ ಒಂದು ಅಲೋಪತಿ, ೨೦ ಹಾಸಿಗೆ ಸೌಕರ್ಯವಿರುವ ಖಾಸಗಿ ನರ್ಸಿಂಗ್ ಹೋಂ, ೧೫ ಪ್ರಾಥಮಿಕ ಆರೋಗ್ಯ ಕೇಂದ್ರಗಳು (೧೦೦ ಹಾಸಿಗೆ), ಒಂದು ಅಲೋಪತಿ ಚಿಕಿತ್ಸಾಲಯ, ೦೧ ಆಯುರ್ವೇದ ಚಿಕಿತ್ಸಾಲಯ, ೩೪ ಕುಟುಂಬ ಕಲ್ಯಾಣ ಉಪಕೇಂದ್ರ, ೧៩೦ ಪಲ್ಸ್‌ಪೋಲಿಯೋ ಕೇಂದ್ರಗಳು ಹಾಗೂ ೩៩ ಔಷಧಿ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ ೧೦ ಮಂದಿಗೆ ವ್ಯಾಸೆಕ್ಟಮಿ ಹಾಗೂ ೨೨೫೦ ಜನರಿಗೆ ಟ್ಯುಬೆಕ್ಟಮಿ  ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ. ಆದರೆ ಈ ತಾಲ್ಲೂಕಿನಲ್ಲಿ ಯಾವುದೇ ರಕ್ತನಿಧಿ ಕೇಂದ್ರಗಳಿಲ್ಲ.

ನೈಸರ್ಗಿಕ ವಿಕೋಪಗಳಾದ ಕ್ಷಾಮ, ಅತಿವೃಷ್ಟಿ, ಅಶುದ್ಧ ಆಹಾರ, ಕಲುಷಿತ ನೀರಿನ ಸೇವನೆ ಮುಂತಾದವು ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಕಾರಣವಾಗಿದ್ದು, ಕಾಲರಾ, ಪ್ಲೇಗ್‌ನಂತಹ ರೋಗಗಳು ಮಾರಣಾಂತಿಕವಾಗಿದ್ದವು. ಇವುಗಳ

ನಿಯಂತ್ರಣಕ್ಕೆ ವಿವಿಧ ಪಂಚವಾರ್ಷಿಕ ಯೋಜನೆಗಳಡಿ ಸರ್ಕಾರ ಸಮರ ಸಾರುವ ಮೂಲಕ ಯಶಸ್ಸು ಗಳಿಸಿದೆ. ಆದರೆ ಹಿಂದಿನ ವರ್ಷಗಳಲ್ಲಿ ಜಿಲ್ಲಾ ಬೋರ್ಡ್ ಹಾಗೂ ಮುನ್ಸಿಪಲ್ ಸಭೆಗಳ ಅಧ್ಯಕ್ಷರು ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಅಗತ್ಯ ಮುಂಜಾಗ್ರತಾ ಕ್ರಮವನ್ನು ಆರೋಗ್ಯ ನಿರ್ದೇಶಕರ ಸಲಹೆಯಂತೆ ಕೈಗೊಳ್ಳುವ ಗುರುತರವಾದ ಜವಾಬ್ದಾರಿಯನ್ನು ಹೊಂದಿದ್ದರು. ಕಾಲರಾ ನಿರೋಧಕ ಚುಚ್ಚು ಮದ್ದಿನ ವೆಚ್ಚವನ್ನು ಜಿಲ್ಲಾ ನಿಧಿಯಿಂದಲೂ, ಪ್ಲೇಗ್‌ಗೆ ಸಂಬಂಧಿಸಿದ ವೆಚ್ಚವನ್ನು ಆರೋಗ್ಯ ಇಲಾಖೆಯಿಂದಲೂ ಭರಿಸಲಾಗುತ್ತಿತ್ತು.

**ಪ್ಲೇಗು**

೧೮೯೮ರಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡ ಈ ರೋಗದಿಂದ ಸಾಕಷ್ಟು ಜನ ತಾಲ್ಲೂಕಿನಲ್ಲಿ ಗತಿಸಿದರು. ಆ ಪ್ರಕಾರ ಪ್ರತಿ ವರ್ಷ ಮಳೆಗಾಲದಲ್ಲಿ ಪ್ಲೇಗ್‌ಗೆ ಒಳಗಾದ ಗ್ರಾಮಗಳಲ್ಲಿ ಡಿಡಿಟಿ ಮತ್ತು ಮೆಲಾಥಿಯಾನ್ ಕ್ರಿಮಿನಾಶಗಳನ್ನು ಸಿಂಪಡಿಸುವುದರೊಂದಿಗೆ ನಿಯಂತ್ರಣದ ಜೊತೆಗೆ ಅಂತಹ ಗ್ರಾಮದವರನ್ನು ಊರಾಚೆಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಿ ಗುಡಿಸಲುಗಳಲ್ಲಿ ವಾಸಿಸಲು ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ೧೯೫೩ ರಲ್ಲಿ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಪ್ರತೀ ಗ್ರಾಮದಲ್ಲೂ ಡಿಡಿಟಿ ಸಿಂಪಡಣೆ ಹಾಗೂ ಸಾರ್ವತ್ರಿಕವಾಗಿ ಪ್ಲೇಗು ಚುಚ್ಚು ಮದ್ದು ನೀಡುವ ಮೂಲಕ ೧೯೫೮ ರಿಂದ ಪ್ಲೇಗ್ ಭೀತಿ ದೂರವಾಯಿತು.

**ಕಾಲರಾ**

ಬಹುದಿನದಿಂದಲೂ ಭಾರತೀಯರನ್ನು ಕಾಡುತ್ತಿರುವ ರೋಗಗಳಲ್ಲಿ ಒಂದಾದ ಇದು ೧೮೬೮ರಲ್ಲೇ ಕಾಣಿಸಿಕೊಂಡುದ್ದಕ್ಕೆ ದಾಖಲೆಗಳಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಇದು ಇಳಿಮುಖವಾಗಿದೆ. ಒಂದು ಸಾರ್ವತ್ರಿಕವಾಗಿ ಕಾಲರಾ ನಿರೋಧಕ ಚುಚ್ಚುಮದ್ದು ನೀಡುವ ಮೂಲಕ ಇದನ್ನು ನಿಯಂತ್ರಿಸಲಾಗಿದೆ.

**ಕುಷ್ಠರೋಗ**

ಹಿಂದೆ ಇದೂ ಕೂಡ ಒಂದು ಪ್ರಮುಖ ರೋಗವಾಗಿದ್ದು, ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮವನ್ನು ೧೯೫೫ರಲ್ಲಿ ಆರಂಭಿಸಲಾಯಿತು. ಈ ಸಂಬಂಧ ಕಾಲಕಾಲಕ್ಕೆ ಸಮೀಕ್ಷೆಯನ್ನು ನಡೆಸಿ, ರೋಗಿಗಳನ್ನು ಗುರುತಿಸಿ ಶುಶ್ರೂಷೆಯನ್ನು ನೀಡಲಾಗುತ್ತಿದೆ. ೨೦೧೧ರ ಸಾಲಿನಲ್ಲಿ ಈ ಕಾರ್ಯಕ್ರಮದಡಿ ೧೨ ಹೊಸ

ರೋಗಿಗಳನ್ನು ಪತ್ತೆ ಹಚ್ಚಲಾಗಿದ್ದು, ಐದು ರೋಗಿಗಳನ್ನು ಗುಣಪಡಿಸಲಾಗಿದ್ದು, ಏಳು ರೋಗಿಗಳಗೆ ಚಿಕಿತ್ಸೆ ನೀಡಲಾಗುತ್ತಿದೆ.

**ಕ್ಷಯರೋಗ**

ಇದು ಇನ್ನೊಂದು ಪ್ರಮುಖ ರೋಗವಾಗಿದ್ದು, ಅದನ್ನು ನಿಯಂತ್ರಿಸಲು ೧೯೫೨ ರಿಂದ ಬಿ.ಸಿ.ಜಿ ಚುಚ್ಚುಮದ್ದು ನೀಡುವ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಸ್ಪುಟಮ್(ಕಫ) ತಪಾಸಣಾ ಕಾರ್ಯವನ್ನು ೧೯೬೫-೬೭ರ ಸಾಲಿನಲ್ಲಿ ಹೊಳಲ್ಕೆರೆ ಸೇರಿದಂತೆ ಜಿಲ್ಲೆಯಾದ್ಯಂತ ಕೈಗೊಳ್ಳಲಾಯಿತು. ಕ್ಷಯ ರೋಗಿಗಳಗೆಂದೇ ಚಿತ್ರದುರ್ಗದಲ್ಲಿ ಆರಂಭಗೊಂಡಿದ್ದ ಕ್ಷಯ ರೋಗ ಚಿಕಿತ್ಸಾಲಯ ಜಿಲ್ಲಾ ಕ್ಷಯರೋಗ ಕೇಂದ್ರವನ್ನಾಗಿ ಪರಿವರ್ತಿಸಿ ಮೇಲ್ದರ್ಜೆಗೇರಿಸಲಾಯಿತು. ತಾಲ್ಲೂಕಿನ ಕ್ಷಯರೋಗಿಗಳು ಒಳರೋಗಿಗಳಾಗಿ ಶುಶ್ರೂಷೆ ಪಡೆಯಲು ಚಿತ್ರದುರ್ಗಕ್ಕೆ ಹೋಗುತ್ತಾರೆ. ತಾಲ್ಲೂಕಿನಲ್ಲಿ ೨೧೩ ಕ್ಷಯ ರೋಗಿಗಳನ್ನು ಹೊಸದಾಗಿ ಪತ್ತೆ ಹಚ್ಚಲಾಗಿದ್ದು, ೮೨ ರೋಗಿಗಳಗೆ ಚಿಕಿತ್ಸೆ ನೀಡಿ ಗುಣಪಡಿಸಲಾಗಿದ್ದು, ೦೮ ರೋಗಿಗಳು ಮೃತಪಟ್ಟಿರುವುದು ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬ ರಂತೆ ತಿಳದುಬರುತ್ತದೆ.

**ಸಿಡುಬು**

ಬಹು ಹಿಂದೆ ಸಿಡುಬು ಕೂಡ ಒಂದು ಪ್ರಮುಖ ಸಾಂಕ್ರಾಮಿಕ ರೋಗವಾಗಿದ್ದು, ನಿವಾರಣೆಗೆ ಚುಚ್ಚುಮದ್ದು ನೀಡುವ ಪದ್ಧತಿಯನ್ನು ೧೮೦೬ರಷ್ಟು ಹಿಂದೆಯೇ ಜರ್ಮನಿಯ ಪಾದ್ರಿ ಅಬ್ಬೆದುಬೆ ಮೈಸೂರು ಸಂಸ್ಥಾನದಲ್ಲಿ ಪರಿಚಯಿಸಿದ ಅಂಶ ಉಲ್ಲೇಖಾರ್ಹವೇ ಸರಿ. ಈ ಸಂದರ್ಭ ೧೯೬೧ ರಲ್ಲಿ ರಾಷ್ಟ್ರವ್ಯಾಪ್ತಿ ಆರಂಭಿಸಲಾದ ಸಿಡುಬು ನಿರ್ಮೂಲನಾ ಕಾರ್ಯಕ್ರಮದಂತೆ ಒಂದು ವರ್ಷದೊಳಗಿನ ಎಲ್ಲಾ ಮಕ್ಕಳಗೂ ಪ್ರಾಥಮಿಕ ದೇವಿ ಹಾಕುವುದರ ಜೊತೆಗೆ ಪ್ರತಿ ನಾಲ್ಕು ವರ್ಷಗಳಗೊಮ್ಮೆ ಮರುದೇವಿ ಹಾಕುವ ತೀವ್ರ ಲಸಿಕೆ ಕಾರ್ಯಕ್ರಮವನ್ನು ಅನುಸರಿಸಲಾಯಿತು. ತತ್ಪರಿಣಾಮ ೧೯೬೦-೭೦ರ ದಶಕದಲ್ಲಿ ನಿಯಂತ್ರಣಕ್ಕೆ ಬಂದ ಇದು ೧೯೭೮ರ ನಂತರ ಸಂಪೂರ್ಣ ನಿರ್ಮೂಲನೆಗೊಂಡಿದೆ. ಈ ರೋಗಗಳ ಜೊತೆಗೆ ಇತ್ತೀಚಿನ ದಿನಗಳಲ್ಲಿ ಕೈಗಾರೀಕರಣ, ನಗರೀಕರಣ, ವಲಸೆ ಮೂಂತಾದವು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ನೂತನ ರೋಗಗಳಗೆ ಎಡೆ ಮಾಡಿಕೊಟ್ಟಿದೆ. ಅರ್ಬುದ, ಹೃದಯ ರೋಗ, ಉಸಿರಾಟ ತೊಂದರೆ, ಅಂಧತ್ವ, ಪೋಲಿಯೋ, ಮೆದುಳು ಜ್ವರ, ಡೇಂಗಿ ಜ್ವರ, ಹಂದಿ ಜ್ವರ, ಏಡ್ಸ್, ಚಿಕೂನ್‌ಗುನ್ಯ ಮುಂತಾದ ರೋಗಗಳು ಇಂದು ಜನ ಸಾಮಾನ್ಯರನ್ನು ಕಾಡುತ್ತಿವೆ.

**ಡೆಂಗೀಜ್ವರ**

ಈಡೀಸ್ ಈಜಿಪ್ಟ್ ಎಂಬ ಜಾತಿಯ ಸೊಳ್ಳೆಗಳ ಮೂಲಕ ಹರಡುವ ಡೆಂಗಿ ಎಂಬ ವೈರಸ್‌ನಿಂದ ಬರುವ ಇದು ಮಕ್ಕಳಲ್ಲಿ ತೀವ್ರಗತಿಯಲ್ಲಿ ಹರಡುತ್ತದೆ. ಇದರಲ್ಲಿ ೧. ಸಾಮಾನ್ಯ ಡೆಂಗಿ, ೨.ಡೆಂಗಿ ರಕ್ತಸ್ರಾವ ಜ್ವರ, ೩. ಡೆಂಗಿಶಾಕ್ ಸಿಂಡ್ರೋಮ್ ಎಂಬ ಮೂರು ವಿಧಗಳಿದ್ದು, ವಿಪರೀತ ಜ್ವರ, ತಲೆನೋವು, ಕೀಲು ಮಾಂಸ ಖಂಡ ನೋವು ಹಾಗೂ ರಕ್ತ ಸ್ರಾವ ರೋಗದ ಲಕ್ಷಣಗಳಾಗಿವೆ. ಅದರಲ್ಲಿ ಕೆಲವೊಮ್ಮೆ ತೀವ್ರ ಒತ್ತಡ ಕುಸಿತದಿಂದಾಗಿ ಡೆಂಗಿ ರಕ್ತಸ್ರಾವ ಜ್ವರವು ರೋಗಿಗೆ ಪ್ರಾಣಾಂತಿಕವಾಗಿ ಪರಿಣಮಿಸಬಹುದು.

**ಮೆದುಳುಜ್ವರ**

ಪ್ರಾಣಿಗಳಲ್ಲಿ ವಿಶೇಷವಾಗಿ ಹಂದಿಗಳಲ್ಲಿ ಸೇರಿಕೊಂಡಿರುವ ವೈರಾಣುಗಳು ಈ ರೋಗವನ್ನು ಹರಡುತ್ತವೆ. ಇದರ ನಿಯಂತ್ರಣಕ್ಕೆ ಹಂದಿಗಳನ್ನು ಜನರು ವಾಸಿಸುವ ಸ್ಥಳದಿಂದ ಬೇರ್ಪಡಿಸುವಿಕೆ, ಕೀಟ ನಾಶಕಗಳ ಸಿಂಪಡಣೆ, ಶಂಕಿತ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಮುಂತಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

**ಏಡ್ಸ್**

ಎಚ್.ಐ.ವಿ ಎಂಬ ವೈರಾಣು ಸೋಂಕಿನಿಂದ ಏಡ್ಸ್ ಉಂಟಾಗುತ್ತಿದೆ. ರೋಗಪೀಡಿತ ವ್ಯಕ್ತಿಯು ರೋಗ ನಿರೋಧಕ ಶಕ್ತಿಯನ್ನು ಸಂಪೂರ್ಣ ಕಳೆದುಕೊಳ್ಳುತ್ತಾನೆ. ಎಲಿಸಾ ಎಂಬ ಪರೀಕ್ಷಾ ವಿಧಾನದಿಂದ ಎಚ್.ಐ.ವಿ ಸೋಂಕನ್ನು ಪತ್ತೆ ಮಾಡಬಹುದು. ಈ ಬಗ್ಗೆ ೧೯೮೭ ರಿಂದಲೇ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕ ಅರಿವು ಮೂಡಿಸಲು ಮುಂದಾಯಿತು. ಏಡ್ಸ್ ರೋಗಿಗಳ ಜೊತೆಗಿನ ಲೈಂಗಿಕ ಸಂಪರ್ಕ, ರಕ್ತದಾನ ಮುಂತಾದ ಸಂದರ್ಭಗಳಲ್ಲಿ ಮಾತ್ರ ಇದು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಏತನ್ಮಧ್ಯೆ ಏಡ್ಸ್ ಬಗ್ಗೆ ಅರಿವು ನೀಡಿ ಆತ್ಮಸ್ಥೈರ್ಯ ಮೂಡಿಸುವ ಕಾರ್ಯಕ್ರಮಗಳೂ ನಡೆಯುತ್ತಿದೆ.

**ಚಿಕೂನ್‌ಗುನ್ಯಾ**

ಇತ್ತೀಚಿನ ದಿನಗಳಲ್ಲಿ (೨೦೦೬) ಜನರನ್ನು ಅತಿಹೆಚ್ಚು ಕಾಡಿದ ರೋಗವೂ ಕೂಡ ಅಲ್ಫಾವೈರಸ್‌ನಿಂದ ಬರುತ್ತಿದ್ದು, ಡೇಂಗಿ ಜ್ವರವನ್ನು ಹರಡುವ ಹೆಣ್ಣು ಏಡಿಸ್ ಎಜಿಪ್ತಿ ಸೊಳ್ಳೆಗಳಿಂದಲೇ ಈ ಜ್ವರವೂ ಹರಡುತ್ತಿದೆ. ಕಿರು ತಲೆನೋವು, ಅಶಕ್ತತೆ,

ಹಸಿವಾಗದಿರುವಿಕೆ ಮತ್ತು ಮೈಮೇಲೆ ದಂದೆ ಏಳುವುದು ಈ ರೋಗದ ಪ್ರಮುಖ ಲಕ್ಷಣಗಳಾಗಿವೆ. ಆದ್ದರಿಂದ ಈ ಸೊಳ್ಳೆಗಳು ವೃದ್ಧಿಗೊಳ್ಳದಂತೆ ನೋಡಿಕೊಳ್ಳಬೇಕಾಗಿದ್ದು, ಇವು ಮನೆಯಲ್ಲೇ ಇಟ್ಟ ಮೊಟ್ಟೆಗಳು ಮರಿಯಾಗಿ ವೃದ್ಧಿಸುತ್ತವೆ. ನಿರುಪಯುಕ್ತ ಪ್ಲಾಸ್ಟಿಕ್ ಡಬ್ಬ, ಖಾಲಿಡಬ್ಬ, ಹಳೇಟೈರು, ಮಣ್ಣಿನ ಹೂಕುಂಡ, ನೀರಿನ ತೊಟ್ಟಿ, ತೆಂಗಿನ ಚಿಪ್ಪು, ಮುಂತಾದೆಡೆಗಳು ಇವುಗಳ ಆಶ್ರಯತಾಣಗಳು. ಈ ಸೊಳ್ಳೆಯ ಮೊಟ್ಟೆಗಳು ನೀರಿನಲ್ಲಿ ಬದುಕುಳಿಯ ಬಲ್ಲವಾಗಿದ್ದು, ದೀರ್ಘಾವಧಿಯ ನಂತರವೂ ಮರಿಯಾಗಬಲ್ಲದು. ಆದ್ದರಿಂದ ಇವುಗಳನ್ನು ನಿಯಂತ್ರಿಸಲು ಸ್ವಚ್ಛ ಪರಿಸರವನ್ನು ಕಾಯ್ದಿಟ್ಟುಕೊಳ್ಳುವುದೇ ಆಗಿದೆ. ಈ ಸಂಬಂಧ ಸಾರ್ವಜನಿಕ ಅರಿವನ್ನು ಮೂಡಿಸಲು ಆರೋಗ್ಯ ಇಲಾಖೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

### ಕುಟುಂಬ ಕಲ್ಯಾಣ ಕಾರ್ಯಕ್ರಮ

ತಾಲ್ಲೂಕಿನಲ್ಲಿ ೧೩ ಕುಟುಂಬ ಕಲ್ಯಾಣ ಕೇಂದ್ರಗಳು ಹಾಗೂ ೪೬ ಉಪ ಕೇಂದ್ರಗಳಿವೆ. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ ಶಸ್ತ್ರಚಿಕಿತ್ಸೆ, ವಂಕೀಧಾರಣೀ (ಕಾಪರ್‌ಟೀ), ನುಂಗುವ ಮಾತ್ರೆ ವಿತರಣೆ ಹಾಗೂ ನಿರೋಧ್ ಹಂಚಿಕೆ ಮಾಡಲಾಗಿದೆ. ಟುಬೆಕ್ಟಮಿ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಲಾಗಿದೆ.

### ತಾಯಿ ಮತ್ತು ಆರೋಗ್ಯ ಕಾರ್ಯಕ್ರಮ

ತಾಯಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ಗರ್ಭಿಣಿಯರ ಆರೈಕೆ, ಅಪಾಯದಲ್ಲಿರುವ ಗರ್ಭಿಣಿಯರ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ, ಸುರಕ್ಷಿತ ಹೆರಿಗೆ, ಕಾರ್ಯಕ್ರಮಗಳ ಅನುಷ್ಠಾನದ ಮೂಲಕ ಗರ್ಭಿಣಿ ಮತ್ತು ಮಕ್ಕಳ ಸಾವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ. ಗರ್ಭಿಣಿಯರ ನೋಂದಣಿ ಮತ್ತು ಚಿಕಿತ್ಸೆ, ಧನುರ್ವಾಯು, ಚುಚ್ಚು ಮದ್ದು, ರಕ್ತಹೀನತೆ ಇರುವ ಗರ್ಭಿಣಿಯರ ಪತ್ತೆ ಮತ್ತು ಚಿಕಿತ್ಸೆ, ಆರೋಗ್ಯ ಸಂಸ್ಥೆಗಳಲ್ಲಿ ಆರೋಗ್ಯ ಸಹಾಯಕರಿಂದ ಹಾಗೂ ತರಬೇತಿ ಹೊಂದಿದ ದಾದಿಗಳಿಂದ ಹೆರಿಗೆ ನಿರ್ವಹಣೆ ಇತ್ಯಾದಿ ಸೌಲಭ್ಯಗಳನ್ನು ಸುರಕ್ಷಿತ ಹೆರಿಗೆ ಕ್ರಮದಿಂದ ಗರ್ಭಿಣಿ ಮತ್ತು ಮಕ್ಕಳ ಸಾವನ್ನು ತಡೆಗಟ್ಟಲಾಗಿದೆ.

### ರಾಷ್ಟ್ರೀಯ ಮಲೇರಿಯ ನಿಯಂತ್ರಣ ಯೋಜನೆ

ರಾಷ್ಟ್ರೀಯ ಮಲೇರಿಯ ನಿಯಂತ್ರಣ ಯೋಜನೆಯನ್ನು ತಾಲ್ಲೂಕಿನಾದ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದೆ. ಮಲೇರಿಯಾ ಪ್ರಕರಣಗಳನ್ನು ಪ್ರಸಕ್ತ ವರ್ಷ ಕೇವಲ ೧೦ ಕ್ಕೆ ಇಳಿಸಲಾಗಿದೆ. ಪ್ರತಿ ಗ್ರಾಮಗಳಿಗೂ ಭೇಟಿ ನೀಡುವ ಆರೋಗ್ಯ

ಸಹಾಯಕರು ಎಲ್ಲಾ ಕುಟುಂಬಗಳನ್ನು ಭೇಟಿ ಮಾಡಿ, ಜ್ವರ ಪ್ರಕರಣಗಳನ್ನು ಪತ್ತೆಹಚ್ಚಿ ರಕ್ತ ಲೇಪನ ಪಡೆಯುತ್ತಾರೆ. ವರದಿಯಾದ ಎಲ್ಲಾ ಜ್ವರ ಪ್ರಕರಣಗಳಲ್ಲಿ ರಕ್ತಪರೀಕ್ಷೆ ನಡೆಸಿ ಮಲೇರಿಯಾ ಕಂಡು ಬಂದಲ್ಲಿ ತಕ್ಷಣ ತೀವ್ರ ಚಿಕಿತ್ಸೆಗೊಳಪಡಿಸುವ ಕಟ್ಟುನಿಟ್ಟಾದ ವ್ಯವಸ್ಥೆ ಮಾಡಲಾಗಿದೆ. ತಾಲ್ಲೂಕಿನಲ್ಲಿ ಮಾಸಿಕ ನಾಲ್ಕರಿಂದ ಐದು ಸಾವಿರ ಲೇಪನಗಳನ್ನು ಪರೀಕ್ಷಿಸಲಾಗುವುದು. ೨೦೧೨ ರ ಸಾಲಿನಲ್ಲಿ ಮಲೇರಿಯಾ ರೋಗವು ನಿಯಂತ್ರಣದಲ್ಲಿತ್ತು.

## ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಯೋಜನೆ

ರಾಷ್ಟ್ರೀಯ ಕ್ಷಯರೋಗ ಯೋಜನೆಯಡಿ ೧೫ ದಿನಕ್ಕೂ ಹೆಚ್ಚಿನ ಅವಧಿಗೆ ಕೆಮ್ಮು, ಪದೇಪದೇ ಬರುವ ಜ್ವರ, ಕಫದಲ್ಲಿ ರಕ್ತ ಇತ್ಯಾದಿ ಲಕ್ಷಣಗಳುಳ್ಳ ಪ್ರಕರಣ ಕಂಡುಬಂದಲ್ಲಿ ತಕ್ಷಣ ಕಫ ಪರೀಕ್ಷೆಗೊಳಪಡಿಸಲಾಗುತ್ತದೆ. ರೋಗಿಗಳನ್ನು ಎಕ್ಸರೆ ಮತ್ತು ಕಫ ಪರೀಕ್ಷೆಗೊಳಪಡಿಸಿ ರೋಗ ಪತ್ತೆ ಮಾಡುವ ವ್ಯವಸ್ಥೆ ಇರುತ್ತದೆ. ೨೦೧೧-೧೨ರಲ್ಲಿ ೯೧ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲಾಗಿದ್ದು, ೯೧ ಜನ ಗುಣಮುಖರಾಗಿದ್ದು, ಒಂಬತ್ತು ಜನ ಮರಣ ಹೊಂದಿದ್ದಾರೆ.

## ರಾಷ್ಟ್ರೀಯ ಕಾಲರಾ ನಿಯಂತ್ರಣ ಕಾರ್ಯಕ್ರಮ

ರಾಷ್ಟ್ರೀಯ ಕಾಲರಾ ನಿಯಂತ್ರಣ ಕಾರ್ಯಕ್ರಮದಡಿ ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಕಾಣಿಸಿಕೊಳ್ಳುವ ವಾಂತಿ, ಬೇಧಿ ಪ್ರಕರಣಗಳಲ್ಲಿ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ. ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬ್ಲೀಚಿಂಗ್ ಪೌಡರ್ ಬೆರೆಸುವ ಕಾರ್ಯವನ್ನು(ಗ್ರಾಮ ಪಂಚಾಯತಿ ವತಿಯಿಂದ) ಸಿಬ್ಬಂದಿ ನಿರ್ವಹಿಸುತ್ತಾರೆ. ಸ್ವಚ್ಛ ಕುಡಿಯುವ ನೀರಿನ ಬಳಕೆ ಹಾಗೂ ವಾಂತಿಬೇಧಿ ರೋಗವನ್ನು ತಡೆಗಟ್ಟಲು ಅನುಸರಿಸಬೇಕಾದ ಮುನ್ನೆಚ್ಚರಿಕೆಯ ಬಗ್ಗೆ ಆರೋಗ್ಯ ಶಿಕ್ಷಣ ನೀಡುತ್ತಾರೆ. ಕುಡಿಯುವ ನೀರಿನ ಮೂಲಕ ಹರಡಬಹುದಾದ ಕಾಲರಾ, ಕಾಮಾಲೆ, ಹೆಪಟೈಟೀಸ್ ಇತ್ಯಾದಿ ಕಾಯಿಲೆಗಳ ಪರಿಣಾಮಕಾರಿ ಹತೋಟಿಗೆ ಪ್ರತಿ ಗ್ರಾಮಗಳಲ್ಲೂ ಕೊಳವೆ ಬಾವಿ ತೋಡಿಸಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲಾಗಿದೆ.

## ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ

ಈ ಯೋಜನೆಯಲ್ಲಿ ತಾಲ್ಲೂಕಿನಾದ್ಯಂತ ಪ್ರಸಕ್ತ ವರ್ಷ ೧,೪೫೦ ರೋಗಿಗಳನ್ನು ನೊಂದಾಯಿಸಿಕೊಳ್ಳಲಾಗಿದೆ. ಪ್ರತಿ ತಿಂಗಳು ಬೆಂಗಳೂರಿನ ಮಿಂಟೋ ಮತ್ತು

ದಾವಣಗೆರೆಯ ಖಾಸಗಿ ಕಣ್ಣಿನ ಆಸ್ಪತ್ರೆಯವರ ಸಹಯೋಗದೊಂದಿಗೆ, ವರ್ಷಕ್ಕೆ ಎರಡು ಬಾರಿ ತಪಾಸಣಾ ಶಿಬಿರ ಆಯೋಜಿಸಿ ೫೦ ರಿಂದ ೬೦ ಪೂರೆ ಕಣ್ಣಿನ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗುತ್ತಿದೆ. ೨೦೧೧-೧೨ ರಲ್ಲಿ ೯೦೦ ರೋಗಿಗಳನ್ನು ಶಸ್ತ್ರಚಿಕಿತ್ಸೆಗೊಳಪಡಿಸಿದೆ. ತಾಲ್ಲೂಕಿನ ಅರ್ಹ ಮಕ್ಕಳನ್ನು ಪರೀಕ್ಷೆಗೊಳಪಡಿಸಿ ದೃಷ್ಟಿ ದೋಷವಿರುವ ಎಲ್ಲಾ ಮಕ್ಕಳಿಗೆ, ಇಲಾಖಾ ಮಕ್ಕಳಿಗೆ, ಇಲಾಖೆ ವತಿಯಿಂದ ಕನ್ನಡಕ ವಿತರಣೆ ಮಾಡಲಾಗಿದೆ. ಪ್ರತಿ ಗ್ರಾಮದಲ್ಲಿ ದೃಷ್ಟಿದೋಷ ಹೊಂದಿರುವವರನ್ನು ಪತ್ತೆಹಚ್ಚಿ ಚಿಕಿತ್ಸೆಗೊಳಪಡಿಸುವ ವ್ಯವಸ್ಥೆ ಮಾಡಲಾಗಿದೆ.

## ವಿಸ್ತೃತ ಲಸಿಕಾ ಕಾರ್ಯಕ್ರಮ

ಮಾರಣಾಂತಿಕ ರೋಗಗಳಾದ ಧನುರ್ವಾಯು, ನಾಯಿಕೆಮ್ಮು, ಗಂಟಲುಮಾರಿ, ಕ್ಷಯ, ದಡಾರ, ಪೋಲಿಯೋ, ಇವುಗಳ ನಿಯಂತ್ರಣಕ್ಕೆ ಶ್ರಮಿಸುತ್ತಿದೆ. ಈ ಖಾಯಿಲೆಗಳಿಗೆ ಬಹುತೇಕ ಮಕ್ಕಳೇ ತುತ್ತಾಗುವ ಸಾಧ್ಯತೆ ಇರುವುದರಿಂದ ಅವರಿಗೆ ಮೇಲ್ಕಂಡ ರೋಗದ ವಿರುದ್ಧ ಸುರಕ್ಷಿತ ಲಸಿಕೆ ನೀಡುವ ಕಾರ್ಯಕ್ರಮ ಬಹುಮುಖ್ಯವಾಗಿರುತ್ತದೆ. ಬಿ.ಸಿ.ಜಿ. ಲಸಿಕೆ (ಹುಟ್ಟಿದ ತಕ್ಷಣ), ಡಿ.ಪಿ.ಟಿ.ಪೋಲಿಯೋ ಲಸಿಕೆ (ಒಂದೂವರೆ ತಿಂಗಳ ನಂತರ ಪ್ರತಿ ತಿಂಗಳಿಗೊಮ್ಮೆ ಮೂರು ಬಾರಿ,) ದಡಾರ ನಿರೋಧಕ ಲಸಿಕೆ ಒಂಬತ್ತು ತಿಂಗಳು ತಲುಪಿದಾಗ, ಡಿ.ಪಿ.ಟಿ ಪೋಲಿಯೊ ಬಲವರ್ಧಕ (ಮಗುವಿಗೆ ಒಂದೂವರೆ ವರ್ಷದ ನಂತರ) ಐದು ವರ್ಷದ ಒಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೊ ಲಸಿಕೆ ನೀಡುವ ಕಾರ್ಯವನ್ನು ಅನುಷ್ಠಾನಗೊಳಿಸಲಾಗಿದ್ದು, ಪ್ರತಿ ವರ್ಷ ಶೇ ೧೦೦ರಷ್ಟು ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬ ರಂತೆ ೩,೪೫೩ ಜನರಿಗೆ ಡಿ.ಪಿ.ಟಿ ಮತ್ತು ಪೋಲಿಯೊ ೫,೬೧೬ ಜನರಿಗೆ, ಬಿ.ಸಿ.ಜಿ. ೪,೧೭೯ ಮಂದಿಗೆ, ದಡಾರ ೫,೫೮೮ ಜನರಿಗೆ, ೫,೭೯೬ ಟಿ.ಟಿ ಯನ್ನು ನೀಡಲಾಗಿತ್ತು.

## ಏಡ್ಸ್ ರೋಗ ನಿಯಂತ್ರಣ ಕಾರ್ಯಕ್ರಮ

ಇದರಡಿ (AIDS) ಅಕ್ವೈರ್ಡ್ ಇಮ್ಯುನೋ ಡಿಫಿಷಿಯನ್ಸಿ ಸಿಂಡ್ರೊಮ್ ಎಂದು ಕರೆಯುವ ಈ ಖಾಯಿಲೆಯ ಭಯಾನಕತೆ ಮತ್ತು ಇದರಿಂದ ಸಮಾಜದ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತು ಸಾರ್ವಜನಿಕರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗಿದೆ. ಏಡ್ಸ್ ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸುವ ಭಿತ್ತಿಪತ್ರಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲಾಗಿದೆ. ಲೈಂಗಿಕತೆ

ಮೂಲಕ ಹರಡುವ ಎಚ್. ಐ. ವಿ. ವೈರಾಣುವಿನ ಬಗ್ಗೆ ಸಾರ್ವಜನಿಕರಿಗೆ ವೀಡಿಯೋ ಪ್ರದರ್ಶಿಸಿ ಏರ್ಪಡಿಸಲಾಗುತ್ತದೆ. ಆಸ್ಪತ್ರೆಗಳು ಸುರಕ್ಷಿತ ಲೈಂಗಿಕತೆಗೆ ಅಗತ್ಯವಾದ ನಿರೋಧ್ ಲಭ್ಯವಾಗುವ ವ್ಯವಸ್ಥೆ ಮಾಡಿವೆ. ಅಲ್ಲದೆ, ಆರೋಗ್ಯ ಕಾರ್ಯಕರ್ತರು ಮನೆ ಬಾಗಿಲಿಗೆ ನಿರೋಧ್ ವಿತರಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಏಡ್ಸ್ ಮಾರಣಾಂತಿಕ ರೋಗವಾಗಿದ್ದು, ಈ ರೋಗಕ್ಕೆ ಚಿಕಿತ್ಸೆ ಇಲ್ಲ ಎಂಬ ವಿಚಾರವನ್ನು ಆರೋಗ್ಯ ಸಹಾಯಕರು ಆರೋಗ್ಯ ಶಿಕ್ಷಣದ ಮೂಲಕ ಪ್ರಚಾರ ಮಾಡುತ್ತಿದ್ದಾರೆ.

## ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮ

ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ಇಲಾಖೆಯು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ೨೭೧ ಪ್ರಾಥಮಿಕ ಶಾಲೆಗಳಿಗೆ, ೩೫ ಪ್ರೌಢಶಾಲೆಗಳಿಗೆ ಆರೋಗ್ಯ ಕಾರ್ಯಕರ್ತರು ನಿರಂತರ ಭೇಟಿ ನೀಡಿ, ಮಕ್ಕಳು,ಶಿಕ್ಷಕರಿಗೆ ಆರೋಗ್ಯ ಶಿಕ್ಷಣ ನೀಡುತ್ತಾರೆ. ವೈಯಕ್ತಿಕ ಸ್ವಚ್ಛತೆ, ಪರಿಸರ ರಕ್ಷಣೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ಲಸಿಕೆಗಳ ಬಗ್ಗೆ ತಿಳಿಸಲಾಗುತ್ತದೆ. ಪ್ರಾದೇಶಿಕ ಆಡಳಿತ ಕೇಂದ್ರ ಘಟಕದ ವೈದ್ಯಾಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪ್ರತಿ ವಿದ್ಯಾರ್ಥಿಯನ್ನು ಆರೋಗ್ಯ ತಪಾಸಣೆ ಮಾಡಿ ರೋಗ ಪೀಡಿತ ವಿದ್ಯಾರ್ಥಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಅಗತ್ಯವಿದ್ದಲ್ಲಿ ಹೆಚ್ಚಿನ ಚಿಕಿತ್ಸೆಗೆ ಸಲಹೆ ನೀಡುತ್ತಾರೆ. ಪ್ರತಿ ಮಗುವಿಗೆ ಆರೋಗ್ಯ ಸಂಬಂಧದ ವೈಯಕ್ತಿಕ ದಾಖಲೆ ಪುಸ್ತಕವು ನಿರ್ವಹಿಸಲ್ಪಡುತ್ತದೆ. ಶಾಲಾ ಆರೋಗ್ಯ ಕಾರ್ಯಕ್ರಮದಡಿ ಪ್ರತಿ ವರ್ಷಗಳ ಆಯ್ದ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತದೆ. ತಾಲ್ಲೂಕಿನಲ್ಲಿ ೨೫೫ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತದೆ. ಆರೋಗ್ಯ ಸಹಾಯಕರು ಮತ್ತು ವೈದ್ಯಾಧಿಕಾರಿಗಳು ಡೆಂಗ್ಯೂ ಜ್ವರ ಮತ್ತು ಮೆದುಳು ಜ್ವರಗಳ ನಿಯಂತ್ರಣಕ್ಕಾಗಿ ತೀವ್ರ ನಿಗಾವಹಿಸಿದ್ದಾರೆ. ಇದೂವರೆಗೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ಇಂತಹ ಯಾವುದೇ ಪ್ರಕರಣ ಹೆಚ್ಚಾಗಿ ವರದಿಯಾಗಿರುವುದಿಲ್ಲ.

## ರೇಬೀಸ್ ವಿರುದ್ಧ ಕಾರ್ಯಾಚರಣೆ

ತಾಲ್ಲೂಕಿನಲ್ಲಿ ಬೀದಿನಾಯಿಗಳ ಸಂಖ್ಯೆ ಬಹಳವಿದ್ದರೂ, ಹುಚ್ಚು ನಾಯಿ ಕಡಿತದ ಪ್ರಕರಣಗಳಲ್ಲಿ ೩ ಮಂದಿ ಮರಣ ಹೊಂದಿರುತ್ತಾರೆ. ಹೊಳಲ್ಕೆರೆ ಟೌನ್ ಹಾಗೂ ಇತರೆಡೆಗಳಲ್ಲಿ ಸುಮಾರು ೪೦ ಬೀದಿ ನಾಯಿಗಳನ್ನು ಕೊಲ್ಲಿಸಲಾಗಿದೆ. ಆ್ಯಂಟಿ ರೇಬೀಸ್ ಲಸಿಕೆಯನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ದಾಸ್ತಾನು ಮಾಡಲಾಗುತ್ತದೆ. ೨೦೦೬-೦೭ರಲ್ಲಿ ತಾಲ್ಲೂಕಿನ ೩೫ ಜನರಿಗೆ ರೇಬಿಸ್ ನಿರೋಧಕ ಚುಚ್ಚುಮದ್ದು ನೀಡಲಾಗಿದೆ.

## ಅಂಗನವಾಡಿಗಳು

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ೨೯೫ ಅಂಗನವಾಡಿ ಕೇಂದ್ರಗಳು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಆರೋಗ್ಯ ಕಾರ್ಯಕರ್ತರು ಪ್ರತಿವಾರ ಅಂಗನವಾಡಿಗಳಿಗೆ ಭೇಟಿ ನೀಡಿ ಮಕ್ಕಳ ವಿಚಾರಣೆ, ಮಕ್ಕಳು ಮತ್ತು ಗರ್ಭಿಣಿಯರಿಗೆ ಪೌಷ್ಠಿಕ ಆಹಾರದ ವಿತರಣೆ ಹಾಗೂ ಗರ್ಭಿಣಿ ಮತ್ತು ಮಕ್ಕಳಿಗೆ ರೋಗ ನಿರೋಧಕ ಲಸಿಕೆ ನೀಡುವುದು ಮುಂತಾದ ಕಾರ್ಯಗಳನ್ನು ಅಂಗನವಾಡಿ ಕಾರ್ಯಕರ್ತೆಯರ ಸಹಕಾರದೊಂದಿಗೆ ನಿರ್ವಹಿಸುತ್ತಾರೆ. ವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರದೇಶಗಳಿಗೆ ತ್ರೈಮಾಸಿಕ ಭೇಟಿ ನೀಡಿ ಪ್ರತಿ ಮಗುವಿನ ಆರೋಗ್ಯ ತಪಾಸಣೆ ಮಾಡುತ್ತಾರೆ. ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳ ಉಪಯುಕ್ತತೆಯ ಬಗ್ಗೆ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಇಲಾಖಾವತಿಯಿಂದ ಸಾರ್ವಜನಿಕರ ಸಹಕಾರದೊಂದಿಗೆ ಈ ಮುಂದಿನಂತೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ಜನವರಿ ೧ ರಿಂದ ೩೦ ರವರೆಗೆ ಕುಷ್ಠರೋಗ ನಿಯಂತ್ರಣ ಮಾಸಾಚರಣೆ, ಫೆಬ್ರವರಿ ೧೭ ಕ್ಷಯರೋಗ ನಿಯಂತ್ರಣಾ ದಿನಾಚರಣೆ, ಮಾರ್ಚ್ ೮ ವಿಶ್ವ ಮಹಿಳಾ ದಿನಾಚರಣೆ, ಮಾರ್ಚ್ ೧೫ ವಿಶ್ವ ಅಂಗವಿಕಲರ ಮತ್ತು ವಿಶ್ವಗ್ರಾಹಕರ ದಿನಾಚರಣೆ, ಏಪ್ರಿಲ್ ೧೫ ವಿಶ್ವ ಆರೋಗ್ಯ ದಿನಾಚರಣೆ, ಮೇ ೩೧ ತಂಬಾಕು ವಿರೋಧಿ ದಿನಾಚರಣೆ, ಜೂನ್ ೬ ವಿಶ್ವಪರಿಸರ ದಿನಾಚರಣೆ. ಜೂನ್ ೧ ರಿಂದ ೩೦ ರ ವರೆಗೆ ಮಲೇರಿಯಾ ಮಾಸಾಚರಣೆ, ಆಗಸ್ಟ್ ೧ ರಿಂದ ೮ ರವರೆಗೆ ತಾಯಿಯ ಎದೆಹಾಲಿನ ಬಗ್ಗೆ ಅರಿವು ಮೂಡಿಸುವ ಸಪ್ತಾಹ, ಸೆಪ್ಟೆಂಬರ್ ೧ ರಿಂದ ೯ ರವರೆಗೆ ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹ, ಅಕ್ಟೋಬರ್ ೧ ರಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಅಕ್ಟೋಬರ್ ೨೧ ರಿಂದ ಅಯೋಡಿನ್ ಕೊರತೆ ಬಗ್ಗೆ ಉಂಟಾಗುವ ನ್ಯೂನ್ಯತೆ ಕುರಿತು ಅರಿವು ಮೂಡಿಸುವ ದಿನಾಚರಣೆ, ನವೆಂಬರ್ ೧೧ ವಿಶ್ವ ಮಧುಮೇಹ ದಿನಾಚರಣೆ, ಡಿಸೆಂಬರ್ ೧ ವಿಶ್ವ ಏಡ್ಸ್ ದಿನಾಚರಣೆ.

## ಆರೋಗ್ಯ ಶಿಕ್ಷಣ ಯೋಜನೆ

ತಾಲ್ಲೂಕಿನಾದ್ಯಂತ ೨೯ ಮಹಿಳಾ ಆರೋಗ್ಯ ಸಂಘಗಳನ್ನು ವಿವಿಧೆಡೆ ಪ್ರಾರಂಭಿಸಿ ಆಯಾ ಗ್ರಾಮದ ಮಹಿಳಾ ಮುಖಂಡರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯು ಇದರ ಸದಸ್ಯ ಕಾರ್ಯದರ್ಶಿಯಾಗಿದ್ದು, ೧೫ ರಿಂದ ೨೦ ಜನ ಮಹಿಳೆಯರು ಸದಸ್ಯರಾಗಿರುತ್ತಾರೆ. ಪ್ರತಿ ತಿಂಗಳು ಸಭೆ ನಡೆಸಿ ಗ್ರಾಮದ ಆರೋಗ್ಯ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ, ಪರಿಹಾರ ಕಂಡುಕೊಳ್ಳಲಾಗುತ್ತದೆ. ಇಲಾಖೆಯ ಸವಲತ್ತುಗಳ ಬಗ್ಗೆ ಸಭೆಯಲ್ಲಿ ತಿಳಿ ಹೇಳಲಾಗುತ್ತದೆ. ಮಹಿಳಾ ಆರೋಗ್ಯ ಸಂಘದ ಸದಸ್ಯರ ಸಹಕಾರದೊಡನೆ ಸಂಘದಲ್ಲಿ ಶಿಶುಪ್ರದರ್ಶನ, ಮಹಿಳಾ

ವಿಚಾರ ವಿನಿಮಯ, ಅತ್ತೆ-ಸೊಸೆ ಸಮಾವೇಶ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ವರದಕ್ಷಿಣೆ ಹಾವಳಿ, ಮದ್ಯವ್ಯಸನ, ಧೂಮಪಾನಗಳ ದುಷ್ಪರಿಣಾಮದ ಬಗ್ಗೆ ತಿಳುವಳಿಕೆ ನೀಡಲಾಗುವುದು. ಆರೋಗ್ಯ ಶಿಕ್ಷಣ ಕಾರ್ಯಕ್ರಮದಡಿ ಪ್ರೌಢಶಾಲಾ ಮಕ್ಕಳಿಗೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆ, ಗ್ರಾಮಾಂತರ ಪ್ರದೇಶಗಳಲ್ಲಿ ಚಲನಚಿತ್ರ ಪ್ರದರ್ಶನ, ಬೀದಿನಾಟಕ, ಪಲ್ಸ್ ಪೋಲಿಯೋ ಸ್ತಬ್ಧಚಿತ್ರ ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಿಳಿವಳಿಕೆ ನೀಡಲಾಗುವುದು.

ಚಿತ್ರದುರ್ಗ ಜಿಲ್ಲಾ ಅಂಕಿಅಂಶಗಳ ನೋಟ ೨೦೧೫-೧೬ ರಂತೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ೦೧ ತಾಲ್ಲೂಕು ಕೇಂದ್ರದ ಆಸ್ಪತ್ರೆ ಹೊಂದಿದ್ದು, ಇದರಲ್ಲಿ ೧೦೦ ಹಾಸಿಗೆಗಳನ್ನು ಒಳಗೊಂಡಿದೆ. ಈ ತಾಲ್ಲೂಕಿನಲ್ಲಿ ೧೪ ಸರ್ಕಾರಿ ಆಸ್ಪತ್ರೆಗಳಿದ್ದು, ೧೯ ವೈದ್ಯರನ್ನು ಹೊಂದಿದ್ದು, ೧೭೮ ಹಾಸಿಗೆಗಳನ್ನು ಸಹ ಹೊಂದಿರುತ್ತದೆ. ಅಲ್ಲದೆ ೩೭ ಔಷಧಿ ಅಂಗಡಿಗಳನ್ನು ಹೊಂದಿರುತ್ತದೆ. ೧೪ ಅಲೋಪತಿ ಆಸ್ಪತ್ರೆಗಳು ಇದ್ದು ಇದರಲ್ಲಿ ೧೭೮ ಹಾಸಿಗೆಗಳು, ೧೩ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೭೮ ಹಾಸಿಗೆಗಳನ್ನು ಸಹ ಹೊಂದಿರುತ್ತದೆ.

ಹೊಳಲ್ಕೆರೆ ತಾಲ್ಲೂಕಿನಲ್ಲಿ ೨೦೧೫-೧೬ನೇ ಸಾಲಿನಲ್ಲಿ ೫೬೧೬ ಪೋಲಿಯೋ, ೪೧೭೯ ಬಿ.ಸಿ.ಜಿ., ೫೫೮೮ ದಡಾರ, ೫೭೯೬ ಟಿ.ಟಿ. ಲಸಿಕೆಗಳನ್ನು ಸಹ ಹಾಕಿಸಲಾಗಿರುತ್ತದೆ. ಕುಟುಂಬ ಯೋಜನೆಯ ಸಲುವಾಗಿ ೧ ವ್ಯಾಸೆಕ್ಟಮಿ ಪ್ರಕರಣ ಹಾಗೂ ೭೩೨ ಟ್ಯೂಬೆಕ್ಟಮಿ ಪ್ರಕರಣಗಳು ದಾಖಲಾಗಿದ್ದು, ೨೦೩೩ I.U.D. users, ೨೧೦೭ c.c. user, ೧೦೬೧ O. P.user- ಈ ರೀತಿ ಕುಟುಂಬ ಯೋಜನೆ ವಿಧಾನಗಳನ್ನು ಬಳಸಿಕೊಂಡಿರುತ್ತಾರೆ.

ಈ ತಾಲ್ಲೂಕಿನಲ್ಲಿ ಏಡ್ಸ್‌ರೋಗ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ೬ ಜನ ಗಂಡಸರು, ೩೮ ಜನ ಹೆಂಗಸರು, ಒಟ್ಟು ೪೪ ಜನರನ್ನು ಏಡ್ಸ್ ರೋಗಿಗಳೆಂದು ಗುರುತಿಸಲಾಗಿದೆ. ೧೮ ಜನ ಗಂಡಸರು, ೦೬ ಜನ ಹೆಂಗಸರು ಒಟ್ಟು ೨೪ ಜನ ಮರಣ ಹೊಂದಿರುತ್ತಾರೆಂದು ಗುರುತಿಸಲಾಗಿದೆ.

ಕುಷ್ಟರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೦೮ ಜನ ಗಂಡಸರು, ೦೨ ಜನ ಹೆಂಗಸರು ಒಟ್ಟು ೧೦ ಜನರನ್ನು ಕುಷ್ಟ ರೋಗಿಗಳೆಂದು ಗುರುತಿಸಿದ್ದು, ೦೭ ಜನ ಗಂಡಸರು, ೦೫ ಜನ ಹೆಂಗಸರು ಒಟ್ಟು ೧೨ ಜನರನ್ನು ಗುಣವಾದ ರೋಗಿಗಳೆಂದು ಗುರುತಿಸಲಾಗಿದೆ. ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೧೫೦ ಜನ ಗಂಡಸರು, ೬೩ ಜನ ಹೆಂಗಸರು ಒಟ್ಟು ೨೧೩ ಜನರನ್ನು ಗುರುತಿಸಲಾಗಿದೆ. ಇವರಲ್ಲಿ

೬೦ ಜನ ಗಂಡಸರು, ೨೨ ಜನ ಹೆಂಗಸರು, ಒಟ್ಟು ೮೨ ಜನ ಈ ರೋಗದಿಂದ ಗುಣಮುಖ ಹೊಂದಿರುತ್ತಾರೆ ಮತ್ತು ೫ ಮಂದಿ ಪುರುಷರು ಮತ್ತು ೩ ಮಂದಿ ಮಹಿಳೆಯರು ಮರಣ ಹೊಂದಿರುತ್ತಾರೆಂದು ತಿಳಿದು ಬಂದಿರುತ್ತದೆ.

ಈ ತಾಲ್ಲೂಕಿನಲ್ಲಿ ೧೦೮ ಅಂಬ್ಯುಲೆನ್ಸ್‌ಗಳ ಸಂಖ್ಯೆ ೩ ಹೊಂದಿದ್ದು, ಇದರ ಪ್ರಯೋಜನಗಳನ್ನು ೨೦೦೬ ರೋಗಿಗಳು ಪಡೆದಿದ್ದಾರೆ. ಪ್ರತಿದಿನ (೨೪/೭) ಕಾರ್ಯ ನಿರ್ವಹಿಸುವ ಆಸ್ಪತ್ರೆಗಳ ಸಂಖ್ಯೆ ೬ ಇದ್ದು, ಇಲ್ಲಾದ ಹೆರಿಗೆಗಳ ಸಂಖ್ಯೆ ೨೯೦. ಈ ತಾಲ್ಲೂಕಿನಲ್ಲಿ ಜನನಿ ಸುರಕ್ಷಾ ಯೋಜನೆ ಪಡೆದ ಫಲಾನುಭವಿಗಳ ಸಂಖ್ಯೆ ೧೪೭೫ ಹಾಗೂ ಮಡಿಲು ಕಿಟ್ ಪಡೆದ ಫಲಾನುಭವಿಗಳ ಸಂಖ್ಯೆ ೯೨೩ ಆಗಿದೆ.

## ಅಧ್ಯಾಯ-೧೨

# ಪ್ರೇಕ್ಷಣೀಯ ಸ್ಥಳಗಳು

**ಹೊ**ಳಲ್ಕೆರೆ ತಾಲ್ಲೂಕು ಅರೆಮಲೆನಾಡಿನ ಪ್ರದೇಶದಲ್ಲಿದ್ದು, ಈ ತಾಲ್ಲೂಕನ್ನು ಆಳಿದ ರಾಜ ಮನೆತನಗಳು ತಾಲ್ಲೂಕಿನಾದ್ಯಂತ ಅನೇಕ ದೇವಾಲಯ, ಕೆರೆ ಕಟ್ಟೆ, ಬಸದಿ, ಮಠ ಮುಂತಾದವನ್ನು ಸ್ಥಾಪಿಸುವ ಮೂಲಕ ತಾಲ್ಲೂಕಿನ ಸಾಂಸ್ಕೃತಿಕ ಬೆಳವಣಿಗೆಗೆ ಭದ್ರ ಬುನಾದಿಯನ್ನು ಒದಗಿಸಿದುದಲ್ಲದೆ ಜನರ ಧಾರ್ಮಿಕ ಮನೋಭಾವವನ್ನು ಸಮೃದ್ಧಗೊಳಿಸುವಲ್ಲಿ ಸಹಕಾರಿಯಾಗಿವೆ. ಇವು ಇಲ್ಲಿನ ಜನರ ಅಭಿರುಚಿ, ಸಾಮಾಜಿಕ ಸಂಪ್ರದಾಯ, ನಂಬಿಕೆ ಇತ್ಯಾದಿ ಸಮಕಾಲೀನ ವಿಷಯಗಳನ್ನು ತಿಳಿಸುವ ಚಾರಿತ್ರಿಕ ದಾಖಲೆಗಳಾಗಿವೆ. ಕಂಸದಲ್ಲಿ ಆಯಾ ಸ್ಥಳದ ೨೦೧೧ ರ ಜನಸಂಖ್ಯೆಯನ್ನು ಸೂಚಿಸಿದೆ.

**ಹೊಳಲ್ಕೆರೆ (೧೮೫೭೮)**

ಹೊಳಲ್ಕೆರೆಯಲ್ಲಿರುವ ಒಂಬತ್ತು ಅಡಿ ಎತ್ತರದ 'ಬಯಲು ಗಣಪತಿ' ಎಂದೇ ಖ್ಯಾತಿ ಪಡೆದ ದೇವಾಲಯವಿದೆ. ಚಿತ್ರದುರ್ಗದ ಪ್ರಸಿದ್ಧ ಪಾಳೆಯಗಾರ ಕಾಮಗೇತಿ ಮದಕರಿನಾಯಕನ ಮೈದುನ ಗುಲ್ಯಪ್ಪನಾಯಕನು ಪ್ರತಿಷ್ಠಾಪಿಸಿದನೆಂಬ ಅಭಿಪ್ರಾಯವಿದೆ. ಗಣಪತಿಯ ಹಿಂಭಾಗದಲ್ಲಿ ಸುಂದರವಾಗಿ ಹೆಣೆದ ನೀಳ ಹೆರಳು ಆಕರ್ಷಕವಾಗಿದೆ. ಭಕ್ತರಿಂದ ಸುಂದರವಾದ ಗೋಪುರ ನಿರ್ಮಾಣವಾಗಿದೆ. ಈ ದೇವಾಲಯದ ಕಲ್ಯಾಣ ಮಂಟಪ, ಉದ್ಯಾನವನವು ಆಕರ್ಷಿತವಾಗಿರುವುರಿಂದ ಇದೊಂದು ಪ್ರೇಕ್ಷಣೀಯ ಸ್ಥಳವಾಗಿದೆ. ಮತ ಬೇಧವಿಲ್ಲದೆ ಅನೇಕ ಭಕ್ತರು ಬಂದು ಬಯಲು ಗಣಪತಿ ದರ್ಶನ ಮಾಡುತ್ತಾರೆ.

**ಹೊಳಲ್ಕೆರೆ (ಶಾಸನ)**

ಕ್ರಿ.ಶ. ೧೫೫೧ರಲ್ಲಿ ಕೃಷ್ಣಪ್ಪನಾಯಕರ ಮಕ್ಕಳಾದ ವೆಂಕಟಪ್ಪನಾಯಕರು, ಗುಂಡೇರಿಯ ಚನ್ನಕೇಶವ ದೇವರಿಗೆ ಅರ್ಚನ ಕಾರ್ಯಕ್ಕಾಗಿ ಸದಾಶಿವರಾಯರು ಅಮರ ಮಾರ್ಗಣಿಯನ್ನಾಗಿ ಪಾಲಿಸಿದ ಬಾಗೂರು ಸೀಮೆಯ ಗುಂಡೇರಿ ಕಾವಲಿನ ನರಸಾಪುರವನ್ನು ವೆಂಕಟಪುರವೆಂದು ನಾಮಕರಣ ಮಾಡಿ ಸ್ವಾಮಿಗೆ ಅರ್ಪಿಸಿದರೆಂದು ತಿಳಿಯುತ್ತದೆ. ಕ್ರಿ.ಶ ೧೨೧೫ ರಲ್ಲಿ ಸೋಮೆಯ ದಂಡನಾಯಕ ಮತ್ತು ಹಿರಿಯ ಬಲ್ಲಾಳ ದಂಡ ನಾಯಕರು ಚಿಮ್ಮತ್ತೂರಿನಲ್ಲಿ (ಹಿಂದಿನ ಚಿತ್ರದುರ್ಗ) ಆಳುತ್ತಿದ್ದಾಗ ಅವರ ಸಾಮಂತ ನಾಯಕನೊಬ್ಬನು ಜೀರ್ಣವಾಗಿದ್ದ ಶಾಂತಿನಾಥ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿ ಭೂದಾನ ನೀಡಿದನು. ಇದು ಜೈನಬಸದಿ ಶಾಸನವಾಗಿದೆ. ಇಲ್ಲಿಯ ಕೆರೆಯ ಅಂಗಳದಲ್ಲಿ ಸಹ ಶಾಸನ ದೊರೆತಿವೆ. ಗುಂಡೇರಿ ಕದನ ಇತಿಹಾಸದಲ್ಲಿ ಪ್ರಖ್ಯಾತವಾಗಿದೆ. ಶಿವರಾತ್ರಿಯಲ್ಲಿ ಹದಿನೈದು ದಿನಗಳ ಕಾಲ ಹಾಲಸ್ವಾಮಿ ತೇರು ನಡೆಯುತ್ತದೆ ಹಾಗೂ ವೀರಭದ್ರ ದೇವರ ಕೆಂಡದ ಉತ್ಸವವನ್ನು ಶ್ರಾವಣದಲ್ಲಿ ಆಚರಿಸುತ್ತಾರೆ. ಹತ್ತಿರದಲ್ಲಿ ಗುಂಡೇರಿ ಕಾವಲು ಇದೆ.

ಇದೇ ಊರಿನ ಕೊನೆಯಲ್ಲಿ ಕೆರೆಕೋಡಿಯ ಬಳಿ ಶ್ರೀ ಕಲ್ಲೇಶ್ವರ ಸ್ವಾಮಿ ದೇವಾಲಯವಿದೆ. ಇದು ಪುರಾತನ ಕಾಲದ್ದಾಗಿದ್ದು, ಚೋಳರ ವಾಸ್ತು ಶಿಲ್ಪಶೈಲಿಯಲ್ಲಿದೆ. ಭುವನೇಶ್ವರಿ ದೇವಾಲಯ, ಕೊಟ್ರಬಸಪ್ಪನ ಗುಡಿ, ವೀರಭದ್ರ ದೇವಾಲಯ ಮೊದಲಾದ ದೇವಾಲಯಗಳಿವೆ. ಶಾಂತಿನಾಥ ಬಸದಿ ಮೊದಲಾದ ಮಂದಿರಗಳಿವೆ. ವೈಷ್ಣವ ದೇವಾಲಯವು ಹೊಯ್ಸಳ ವಾಸ್ತು ಶಿಲ್ಪದಿಂದ ಕೂಡಿದೆ ಹಾಗೂ ಅತ್ಯಂತ ಸುಂದರವಾಗಿದೆ.

**ಒಂಟಿಕಲ್ಲು ಮಠ(ನಿರ್ವಸತಿ)**

ಹೊಳಲ್ಕೆರೆಯಿಂದ ಒಂದು ಕಿ.ಮೀ. ದೂರದಲ್ಲಿದೆ. ಇದೊಂದು ಸಾಂಸ್ಕೃತಿಕ ಕೇಂದ್ರವಾಗಿದೆ. ಇಲ್ಲಿ ೧೯೬೪ ರಲ್ಲಿ ಲಿಂಗೈಕ್ಯರಾದ ಚಿತ್ರದುರ್ಗದ ಶ್ರೀ ಮುರುಘಾಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳ ಸಮಾಧಿ ಮಂದಿರವಿದೆ. ಪ್ರಾಚ್ಯ ಚಿತ್ರಕಲಾ ಸೌಂದರ್ಯ ಮತ್ತು ಸುಂದರವಾದ ಸಮಾಧಿ ಮಂದಿರವಿದೆ. ಶೈಕ್ಷಣಿಕ ಪ್ರವಾಸದ ಜೊತೆಗೆ ನಿರ್ಮಿಸಲಾಗಿರುವ ಉದ್ಯಾನವನದಿಂದಾಗಿ ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿರುವ ವಿಶಾಲವಾದ ಒಂದು ಪ್ರಾಂಗಣ, ಅದರ ಮಧ್ಯದಲ್ಲಿ ಇಡೀ ಛಾವಣಿಗೆ ಒಂದೇ ಒಂದು ದೊಡ್ಡಕಂಬವಿದ್ದು ಎಂಟು ದಿಕ್ಕುಗಳಿಂದ ಅದಕ್ಕೆ ಹೊಂದಿಸಿರುವ ದೊಡ್ಡಕಲ್ಲುಗಳ ತೊಲೆಗಳನ್ನು ಆ ಒಂದೇ ಕಂಭ ಹೊತ್ತು ನಿಂತಿರುವುರಿಂದ ಅದು ಆಶ್ಚರ್ಯವನ್ನುಂಟು ಮಾಡುತ್ತದೆ.

## ಪ್ರೇಕ್ಷಣೀಯ ಸ್ಥಳಗಳು

**ಕಣಿವೆ(ನಿರ್ವಸತಿ)**

ಹೊಳಲ್ಕೆರೆ-ಚಿತ್ರದುರ್ಗ ಪ್ರಾಂತೀಯ ರಸ್ತೆಯಲ್ಲಿದ್ದು, ಇಲ್ಲಿಂದ ಇಡೀ ಹೊಳಲ್ಕೆರೆ ಮತ್ತು ಸುತ್ತಮುತ್ತಲಿನ ಗ್ರಾಮಗಳ ದೃಶ್ಯ ಅತಿ ಸುಂದರವಾಗಿ ಗೋಚರಿಸುತ್ತಿದ್ದು, ಈ ಕಣಿವೆಯು ರಮ್ಯ ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿಗೆ ಸಮೀಪದ ಕುಡಿನೀರುಕಟ್ಟೆ ಕೆರೆ ತುಂಬಾ ಆಕರ್ಷಕವಾಗಿದ್ದು ವಿಹಾರಕ್ಕೆ ಸೂಕ್ತವಾಗಿದೆ.

**ಲೋಕದೊಳಲು (೬೬೭)**

ಹೊಳಲ್ಕೆರೆ-ಹೊಸದುರ್ಗ ಮಾರ್ಗದಲ್ಲಿದೆ. ಇಲ್ಲಿಗೆ ಐದು ಕಿ.ಮೀ. ದೂರದಲ್ಲಿರುವ ದೊಡ್ಡಹೊಟ್ಟೆರಂಗಪ್ಪನ ದೇವಾಲಯದ ೩,೭೫೦ ಅಡಿ ಎತ್ತರದ ಬೆಟ್ಟದ ಮೇಲಿದ್ದು, ತುಂಬಾ ಆಕರ್ಷಕವಾಗಿ ಕಾಣುತ್ತದೆ. ಇದು ಚಿತ್ರದುರ್ಗದ ಸುಮಾರು ಜೋಗಿಮಟ್ಟಿಯಷ್ಟೆ ಎತ್ತರದಲ್ಲಿರುವುದರಿಂದ ತಂಪಾದ ಸ್ಥಳವಾಗಿದೆ. ಇದು ಯಾತ್ರಾಸ್ಥಳವೂ ಆಗಿರುವುದರಿಂದ ವಿಶ್ರಾಂತಿಧಾಮ ನಿರ್ಮಾಣಗೊಂಡರೆ ಇದೊಂದು ಅರಣ್ಯ ಧಾಮದ ವಿಶ್ರಾಂತಿ ಧಾಮವಾಗುತ್ತದೆ.

ಈ ಬೆಟ್ಟದ ಎರಡೂ ಭಾಗದಲ್ಲೂ ಒಂದೊಂದು ಪ್ರಸಿದ್ಧ ದೇವಾಲಯಗಳಿವೆ. ಶ್ರೀದೊಡ್ಡಹೊಟ್ಟೆರಂಗಪ್ಪನ ದೇವಸ್ಥಾನ ಮತ್ತು ಶ್ರೀ ಕೋಟೆಕಲ್ಲು ರಂಗಸ್ವಾಮಿ ದೇವಸ್ಥಾನಗಳು. ಶ್ರಾವಣ ಮತ್ತು ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಗುಂಡೇರಿ (೨,೫೯೦) ಹೊಳಲ್ಕೆರೆಗೆ ಎಂಟು ಕಿ.ಮೀ. ದೂರದಲ್ಲಿದೆ. ಊರು ಸಮೀಪದಲ್ಲೇ ಒಂದು ಮಠ ಮತ್ತು ಈಶ್ವರ ದೇವಸ್ಥಾನ ಬೆಟ್ಟದ ಮೇಲೆ ಕಂಗೊಳಿಸುತ್ತಿದೆ. ಇದು ಶಾಸನಸ್ಥ ಮತ್ತು ಐತಿಹಾಸಿಕ ಹಿನ್ನೆಲೆಯುಳ್ಳ ಗ್ರಾಮವಾಗಿದೆ. ಇಲ್ಲಿಗೆ ಎರಡು ಕಿ.ಮೀ ದೂರದಲ್ಲಿರುವ ಇಡೇಹಳ್ಳಿ ಚರಮೂರ್ತಿಸ್ವಾಮಿಗಳು ಅದೇ ಗ್ರಾಮದವರು.

**ದುಮ್ಮಿ (೩,೬೩೦)**

ಹೊಳಲ್ಕೆರೆಯಿಂದ ೧೫ ಕಿ.ಮೀ. ದೂರದಲ್ಲಿರುವ ಹೊಳಲ್ಕೆರೆ-ಚನ್ನಗಿರಿ ರಸ್ತೆಯಲ್ಲಿ ಈಗಿನ ದುಮ್ಮಿ ಹಿಂದೆ ದುಮ್ಮೆ ಎಂದು ಕರೆಯಲಾಗುತ್ತಿತ್ತು. ತರೀಕೆರೆಯ ಪಾಳೆಯಗಾರ ಧೂಮರಾಜನು ವಿಜಯನಗರದಿಂದ ಬೇಟೆಗಾಗಿ ಹೊರಟು ಈಗಿನ ಚನ್ನಗಿರಿ ತಾಲ್ಲೂಕು ಬಸವಾಪಟ್ಟಣದ ಪ್ರಾಂತ್ಯಕ್ಕೆ ಬಂದು ಅಲ್ಲಿ ವಿವಾಹವಾಗಿ ಕೆಲವು ದಿವಸ ಇದ್ದು ನೆಲೆಸಿದ್ದರಿಂದ ದುಮ್ಮೆ, ದುಮ್ಮಿಯಾಗಿರಬೇಕೆಂದು ನಂಬಲಾಗಿದೆ. ಇಲ್ಲಿನ ಈಶ್ವರ ದೇವಸ್ಥಾನದಲ್ಲಿ ಅತಿದೊಡ್ಡದಾದ ಈಶ್ವರಲಿಂಗ ಇದೆ. ವಾಸ್ತುಶಿಲ್ಪದ ಸುಂದರ ಕಂಬಗಳಿವೆ. ಇಲ್ಲಿನ ವೀರಭದ್ರಸ್ವಾಮಿಗೆ ಕೆಂಡಾರ್ಚನೆ ನಡೆದು ಹೆಚ್ಚು ಜನ ಸೇರುತ್ತಾರೆ. ಬೆಟ್ಟದ ತುದಿಯಲ್ಲಿ ದುಮ್ಮಿಯ ಕೆಂಚಮ್ಮ ಮಾತಂಗಿಯರ ದೇಗುಲಗಳಿವೆ.

ಬೆಟ್ಟ ಹತ್ತುವಾಗ ಮಲ್ಲೇಶ್ವರ ಮಹೇಶ್ವರ ಬೀರೇಶ್ವರ ಮೊದಲಾದ ದೇವಾಲಯಗಳು ಸಿಗುತ್ತವೆ. ದುಮ್ಮಿಯ ಹೊಯ್ಸಳ ವಿಷ್ಣುವರ್ಧನನು ಉಚ್ಚಂಗಿಯ ಪಾಂಡ್ಯನನ್ನು ಸೋಲಿಸಿದ ಸ್ಥಳವಾಗಿದೆ.

**ರಾಮಗಿರಿ (೪,೪೧೨)**

ಹೊಳಲ್ಕೆರೆ–ಚನ್ನಗಿರಿ ರಸ್ತೆಯಿಂದ ಎಂಟು ಕಿ.ಮೀ ದೂರದಲ್ಲಿದೆ. ಹೊಳಲ್ಕೆರೆಯಿಂದ ೧೬ ಕಿ.ಮೀ. ದೂರದಲ್ಲಿದೆ. ಹೋಬಳಿ ಕೇಂದ್ರವಾಗಿದ್ದು ಬೆಟ್ಟದ ಮೇಲೆ ಶ್ರೀ ಕರಿಸಿದ್ದೇಶ್ವರ ದೇವಸ್ಥಾನ ತುಂಬಾ ಸುಂದರವಾಗಿದೆ. ಪ್ರಸಿದ್ಧವೂ, ಆಕರ್ಷವೂ ಆಗಿರುವ ದೇವಾಲಯವನ್ನು ಸೂಕ್ಷ್ಮವಾಗಿ ವೀಕ್ಷಿಸಿದರೆ ಎರಡು ಭಾಗಗಳಾಗಿ ಕಾಣಿಸುತ್ತದೆ. ತರೀಕೆರೆ ಮತ್ತು ಚಿತ್ರದುರ್ಗದ ಪಾಳೆಯಗಾರರಿಗೆ ಮನೆ ದೇವರಾಗಿದ್ದರಿಂದ ಇಬ್ಬರೂ ಸೇರಿ ಕಟ್ಟಿಸಿರಬಹುದೆಂದು ನಂಬಲಾಗಿದೆ.

ಈ ಊರಿನ ಬಳಿ ಇರುವ ದೊಡ್ಡ ಹೊಟ್ಟೆರಂಗಪ್ಪ ಸ್ವಾಮಿ ದೇವಾಲಯದಲ್ಲಿ ಹಚ್ಚಿದ ನಂದಾದೀಪವನ್ನು ರಾತ್ರಿ ವೇಳೆ ಬೆಟ್ಟದ ಮೇಲಿರುವ ಶ್ರೀ ಕರಿಸಿದ್ಧೇಶ್ವರ ದೇವಾಲಯದ ಕಿಂಡಿಯ ಮೂಲಕ ವೀಕ್ಷಿಸಬಹುದೆಂದು ಹೇಳುತ್ತಾರೆ. ದೇವಸ್ಥಾನದಲ್ಲಿರುವ ಗಂಗೆಯ ಬಾವಿ ನೀರಿನ ಮಟ್ಟವು ತಳದಲ್ಲಿದ್ದರೆ ಆ ವರ್ಷದ ಮಳೆಗಾಲ ಸಮೃದ್ಧಿಯಾಗುತ್ತದೆಂದೂ, ನೀರಿನ ಮಟ್ಟ ಏರಿದ್ದರೆ ಮಳೆಗಾಲ ತೃಪ್ತಿಕರವಾಗುವುದಿಲ್ಲವೆಂದು ಅಲ್ಲಿನ ಜನರ ನಂಬಿಕೆಯಾಗಿದೆ. ಪ್ರತಿವರ್ಷವೂ ಕಾರ್ತಿಕೋತ್ಸವವು ಕಾರ್ತಿಕ ಮಾಸದಲ್ಲಿ ಚೆನ್ನಾಗಿ ನಡೆಯುತ್ತದೆ. ಸಮೀಪದ ಆರ್. ನುಲೇನೂರಿನಲ್ಲಿ ೧೨ನೇ ಶತಮಾನದ ಬಸವೇಶ್ವರರ ಸಮಕಾಲೀನರಾದ ನುಲಿಯ ಚಂದಯ್ಯನ ಸಮಾಧಿ ಮತ್ತು ದತ್ತಾಶ್ರಮವು ಪ್ರಮುಖವಾಗಿದೆ.

**ಮಲ್ಲಾಡಿಹಳ್ಳಿ:(೩,೪೫೦)**

ಹೊಳಲ್ಕೆರೆ ಪಶ್ಚಿಮಕ್ಕೆ ೧೦ ಕಿ.ಮೀ. ದೂರದಲ್ಲಿದೆ. ತಿರುಕ ಎಂದೇ ಖ್ಯಾತರಾಗಿದ್ದ ದಿ|| ರಾಘವೇಂದ್ರ ಗುರೂಜಿ ಸ್ಥಾಪಿಸಿದ ಅನಾಥ ಸೇವಾಶ್ರಮ, ಯೋಗ ಮತ್ತು ಆರೋಗ್ಯ ಕೇಂದ್ರಕ್ಕೆ ನಾಡಿನ ನಾನಾ ಕಡೆಯಿಂದ ಜನರು ಬರುತ್ತಾರೆ. ಇಲ್ಲಿ ನರ್ಸರಿ, ಪ್ರೌಢಶಾಲೆ, ಕಾಲೇಜ್, ದೈಹಿಕ ಶಿಕ್ಷಣ, ಶಿಕ್ಷಕರ ತರಬೇತಿ ಕೇಂದ್ರಗಳಿರುವುದರಿಂದ ಜನಪ್ರಿಯವಾಗಿದೆ. ಶಿವರಾತ್ರಿಯಲ್ಲಿ ಬನಶಂಕರಿ ದೇವಿಯ ತೇರು ನಡೆಯುತ್ತದೆ. ಈ ತೇರನ್ನು ಶ್ರೀಗಂಧದಲ್ಲಿ ಮಾಡಲಾಗಿದೆ. ಇಲ್ಲಿಗೆ ಸಮೀಪದ ಬನಶಂಕರಿ ದೇವಸ್ಥಾನದಲ್ಲೂ ಜನವರಿ ತಿಂಗಳಲ್ಲಿ ವಿಶೇಷವಾಗಿ ಜಾತ್ರೆ ನಡೆಯುತ್ತದೆ.

**ಭರಮಣ್ಣನಾಯಕನ ದುರ್ಗ(೨೧೯೩)**

ಹೊಳಲ್ಕೆರೆಯಿಂದ ೧೬ ಕಿ.ಮೀ ದೂರದಲ್ಲಿದ್ದು, ಹೋಬಳಿ ಕೇಂದ್ರವಾಗಿದೆ. ಚಿತ್ರದುರ್ಗ ಪಾಳೆಯಗಾರರಿಗೆ ಸಂಬಂಧಪಟ್ಟ ಭರಮಣ್ಣನಾಯಕನ ಕೋಟೆ ಈಗಲೂ

ಭದ್ರವಾಗಿದೆ. ಇಲ್ಲಿ ಹೊಲಿಸಿ ಹಾಲುಕೆರೆ ಎಂಬ ಕೆರೆಯನ್ನು ಮದಕರಿನಾಯಕನ ಕಾಲದಲ್ಲಿ ೪೦೦ ಅಡಿಕಟ್ಟೆಯ ಕೆರೆ ಕಟ್ಟಿಸಿದ್ದೆಂದು ತಿಳಿದುಬರುತ್ತದೆ. ಪ್ರತಿ ವರ್ಷವೂ ಮುಸ್ಲಿಂ ಬಾಂಧವರು ಅಧಿಕವಾಗಿ ನೆರೆಯುವ ಉರುಸ್ ತುಂಬಾ ಪ್ರಸಿದ್ಧವಾಗಿದೆ. ತುಂಬಾ ದೂರದಿಂದಲೂ ಸುತ್ತಮುತ್ತಲಿನ ಮುಸ್ಲಿಂರು ವಿಶೇಷವಾಗಿ ಸೇರಿ ತಮ್ಮ ತಮ್ಮ ಹರಕೆಗಳನ್ನು ಸಲ್ಲಿಸುತ್ತಾರೆ.

**ತರಳಬಾಳು ನಗರ (ಮುತ್ತಗದೂರು)(೧೬೪೮)**

ಹೊಳಲ್ಕೆರೆ ನಗರದಿಂದ ೨೨ ಕಿ.ಮೀ ದೂರದಲ್ಲಿರುವ ತರಳಬಾಳು ವೃತ್ತ ಕೂಡುಸಂಗಮವಾಗಿದೆ. ಕಾಡನ್ನು ನಾಡನ್ನಾಗಿಸಿದ ಹಿರಿಮೆಯು ಸಿರಿಗೆರೆಯ ಶ್ರೀ ತರಳಬಾಳು ಹಿರಿಯ ಜಗದ್ಗುರು ಶಿವಕುಮಾರ ಶಿವಾಚಾರ್ಯಸ್ವಾಮಿಗಳಿಗೆ ಸಲ್ಲುತ್ತದೆ. ಎರಡು ಪಟ್ಟ ಕಂಡು ವಿಶ್ರಾಂತಿಯಲ್ಲಿದ್ದ ಶ್ರೀಗಳ ವಿಶ್ರಾಂತಿಧಾಮವೂ ಇಲ್ಲಿದೆ. ಈಗ ಇದೊಂದು ವಿಶಿಷ್ಟ ಪ್ರೇಕ್ಷಣೀಯ ಸ್ಥಳವಾಗಿದೆ.

**ಚಿಕ್ಕಜಾಜೂರು: (೫೯೮೬)**

ಹೊಳಲ್ಕೆರೆಯ ವಾಯವ್ಯಕ್ಕೆ ೧೧ ಕಿ.ಮೀ ದೂರದಲ್ಲಿರುವ ಚಿಕ್ಕಜಾಜೂರು ಪ್ರಮುಖ ರೈಲ್ವೆ ಜಂಕ್ಷನ್ ಆಗಿದೆ. ಚಿಕ್ಕಜಾಜೂರಿನಿಂದಲೇ ಚಿತ್ರದುರ್ಗ, ದಾವಣಗೆರೆ ರೈಲು ಮಾರ್ಗವಿದ್ದು, ದೂರ ಪ್ರಯಾಣಕ್ಕೆ ಎಕ್ಸ್‌ಪ್ರೆಸ್ ರೈಲುಗಳ ಸೌಲಭ್ಯವಿದೆ. ಎಲ್ಲಾ ಕಡೆಗೂ ಬಸ್ ಸೌಕರ್ಯವಿದೆ. ಇದು ಜವಳಿ ವ್ಯಾಪಾರ ಮತ್ತು ಕೈಮಗ್ಗ ಗ್ರಾಮೋದ್ಯೋಗಗಳಿಗೆ ವಾಣಿಜ್ಯ ಕೇಂದ್ರವಾಗಿದ್ದು, ಪ್ರಮುಖ ವ್ಯಾಪಾರ ಸ್ಥಳವಾಗಿದೆ. ಇಲ್ಲಿ ಕ್ರಿ.ಶ.೧೯೨೧ ಜನವರಿಯಲ್ಲಿ ರೈಲ್ವೆ ಪ್ರಾರಂಭವಾಗಿದ್ದು, ಇದೊಂದು ರೈಲ್ವೆ ಜಂಕ್ಷನ್ ಆಗಿದೆ. ಅಲ್ಲದೆ ಇದೊಂದು ಶಾಸನಸ್ಥ ಊರು ಆಗಿದೆ. ವಿಜಯನಗರದರಸರ ಕಾಲದಿಂದ ಪಾಳೆಯಗಾರರ ಕಾಲದವರೆಗೆ 'ಜಾಜೂರುಸೀಮೆ' ಎಂದು ಉಲ್ಲೇಖಿಸಲ್ಪಟ್ಟಿದೆ. ಇಲ್ಲಿಯ ದೇವಾಲಯದ ಶಾಸನಗಳು ತುಂಬಾ ಮಹತ್ವದ ಐತಿಹಾಸಿಕ ವಿಚಾರಗಳನ್ನು ತಿಳಿಸುತ್ತವೆ. ಸಿದ್ಧರಾಮೇಶ್ವರ ದೇವಾಲಯದ ಶಾಸನ ಹಾಗೂ ವೀರಗಲ್ಲುಗಳು ಮುಖ್ಯವಾಗಿವೆ.

ಕ್ರಿ.ಶ. ೧೪೬೨ ರಲ್ಲಿ ಮದುವೆ ಸುಂಕ ಮಾನ್ಯ ಮಾಡಿದ ವಿಚಾರವನ್ನು ಆಂಜನೇಯನ ದೇವಾಲಯದ ಪ್ರಾಕಾರದಲ್ಲಿರುವ ಶಾಸನದಿಂದ ತಿಳಿಯಬಹುದು ಹಾಗೂ ಪೆನುಗೊಂಡೆಯ ವೀರಪ್ಪನಾಯಕರ ನಿರೂಪದಿಂದಲೂ ಮದುವೆ ಸುಂಕವನ್ನು ಮಾನ್ಯ ಮಾಡಿದ ವಿಚಾರ ತಿಳಿಯುತ್ತದೆ. ತ್ಯಾಗದ ಹಳ್ಳಿಯ ಶಾಸನದಿಂದ ಕ್ರಿ.ಶ.೧೪೩೮ರಲ್ಲಿ ವಿಜಯನಗರದ ಶ್ರೀಕೃಷ್ಣದೇವರಾಯರು ಪಾಲಿಸಿದ ಪ್ರಧಾನ ಮಲ್ಲರಸರು ಜಾಜೂರು ಗವಿಯ ತಿರುಮಲ ದೇವರಿಗೆ ಜಾಜೂರು ಸೀಮೆಗೆ ಸಲ್ಲುವಂತ ತ್ಯಾಗದ ಹಳ್ಳಿಯನ್ನು

ದತ್ತಿ ಬಿಟ್ಟಿದ್ದಾರೆ. ಮೊದಲು 'ಸೀಮೆಯಾಗಿದ್ದ' ಜಾಜೂರು ಕ್ರಿ.ಶ.೧೬೬೪ ರ ನಂತರ ಸೀಮೆ ಎನ್ನುವ ವಿಸ್ತಾರ ಕಳೆದುಕೊಂಡು ಜಾಜೂರು ಸ್ಥಳವಾಗಿದೆ. ಕ್ರಿ.ಶ.೧೬೬೪ ರ ಶಾಸನದ ಪ್ರಕಾರ ಜಾಜೂರು ಹಾಗೂ ಕೋಟೆಹಾಳು ಗ್ರಾಮಗಳ ಗೌಡಿಕೆಯನ್ನು ಬಸವಣ್ಣ ದೇವರ ಪೂಜಾರಿ ಗುರುವಣ್ಣನವರಿಗೆ ಎರಡು ನೂರು ವರಹಗಳಿಗೆ ಕ್ರಯಪತ್ರ ಮಾಡಿಸಿ ಕೊಟ್ಟಿರುತ್ತಾರೆ. ಜಾಜೂರಿನ ಗೌಡರು ಇದಕ್ಕೆ ಸುಮಾರು ೫೦–೬೦ ಜನ ಸಾಕ್ಷಿ ಹಾಕಿದ್ದಾರೆ. ಈ ವಿಚಾರವನ್ನು (ಈಶ್ವರ) ಸಿದ್ಧರಾಮೇಶ್ವರ ದೇವಾಲಯದ ಶಾಸನದಿಂದ ತಿಳಿಯಬಹುದು. ಇಲ್ಲಿಯ ಕೆರೆಗೆ ಹೊಲತಿಹಾಳು ಕೆರೆ ಎನ್ನುತ್ತಾರೆ. ಈ ಊರಿನಲ್ಲಿ ಸಿದ್ಧರಾಮೇಶ್ವರ, ವೀರಭದ್ರ, ಆಂಜನೇಯ, ಮೈಲಾರ ಲಿಂಗೇಶ್ವರ ಮೊದಲಾದ ಸುಂದರ ದೇವಾಲಯಗಳಿವೆ.

**ಕಡೂರು(೧೨೭೭)**

ಹೊಳಲ್ಕೆರೆ–ದಾವಣಗೆರೆ ರಸ್ತೆಯಿಂದ ಐದು ಕಿ.ಮೀ ದೂರದಲ್ಲಿದೆ. ಈ ಕ್ಷೇತ್ರವು ಪುರಾತನ ಸಂಸ್ಕೃತಿಯನ್ನು ಹೊಂದಿದೆ. ಶ್ರೀ ವೀರಭದ್ರಸ್ವಾಮಿಯ ರಥೋತ್ಸವವು ಅಕ್ಟೋಬರ್ ತಿಂಗಳಲ್ಲಿ ನಡೆಯುತ್ತದೆ. ಇದು ಶಾಸನಸ್ಥ ಗ್ರಾಮವಾಗಿದೆ. ಪಾತಾಳಗಂಗೆ, ಕೆಂಚಮ್ಮನ ದೇವಾಲಯ, ಕಲ್ಯಾಣಿ ಇವೆ. ಪುರಾತನ ಕಾಲದ ಅವಶೇಷಗಳು ಕೋಟೆ ಕೊತ್ತಲಗಳು ಇಲ್ಲಿವೆ. ಇಲ್ಲಿ ಪ್ರತಿವರ್ಷವೂ ತುಂಬಾ ವಿಶೇಷವಾಗಿ ರಥೋತ್ಸವವನ್ನು ಆಚರಿಸಲಾಗುತ್ತದೆ. ಇಲ್ಲಿಗೆ ಸಮೀಪದ ಹಿರೇ ಎಮ್ಮಿಗನೂರು ಶಾಸನಸ್ಥ ಗ್ರಾಮ. ಇಲ್ಲಿನ ಪ್ರಸಿದ್ಧ ಕಲ್ಲೇಶ್ವರ ಸ್ವಾಮಿಯ ತೇರು ಕಾರ್ತಿಕ ಉತ್ಸವಗಳು, ವಿಶೇಷವಾಗಿ ನಡೆಯುತ್ತವೆ. ಇಲ್ಲಿಯ ಬಿಲ್ವ ಪತ್ರೆಯ ವನ ತುಂಬಾ ಪ್ರಸಿದ್ಧವಾಗಿದೆ.

ಚಿಕ್ಕಜಾಜೂರು ಹೋಬಳಿಗೆ ಸೇರಿದ ಶಾಸನಸ್ಥ ಗ್ರಾಮ. ಶಾಸನದಲ್ಲಿ ಈ ಗ್ರಾಮದ ಹೆಸರನ್ನು "ಕಡವೂರು" ಎಂದು ಉಲ್ಲೇಖಿಸಿದೆ. ಗ್ರಾಮದ ಉತ್ತರದಲ್ಲಿರುವ ಗುಡ್ಡದ ಬಳಿಯ ಶ್ರೀ ವೀರಭದ್ರ ದೇವಾಲಯದ ಹತ್ತಿರದಲ್ಲಿರುವ ಶಾಸನದಿಂದ ಕ್ರಿ.ಶ.೧೪೬೨ ರಲ್ಲಿ ಶ್ರೀ ವೀರಭದ್ರ ದೇವರ ಅಮೃತಪಡಿಗೆ ಈ ಕಡಲೂರು ಗ್ರಾಮವನ್ನು ದತ್ತಿಬಿಟ್ಟ ವಿಚಾರ ತಿಳಿಯುತ್ತದೆ. ಇದೀಗ ಚಿತ್ರದುರ್ಗದ ಶ್ರೀ ಮುರುಘ ಮಠದಿಂದ ರಚಿಸಿದ ಸಮಿತಿಯ ಉಸ್ತುವಾರಿಯಲ್ಲಿದೆ.

ಇಲ್ಲಿಯ ಹಳೆಯ ಕೆರೆಯ ಏರಿಯ ಮೇಲೆ ವಾಮರಸಯ್ಯ ಎನ್ನುವರು ಹಾಕಿಸಿದ ಶಾಸನದಿಂದ ಯಲುಮಲ ನಾಯಕರು ಕಡೂರು ಕೆರೆ ಕಟ್ಟಿಸಿ ಜೀರ್ಣೋದ್ಧಾರ ಮಾಡಿದ ಬಗ್ಗೆ ತಿಳಿಯುತ್ತದೆ. ಕ್ರಿ.ಶ.೧೫೧೭ ರ ಶಾಸನದಲ್ಲಿ ಜಾಜೂರು ಸೀಮೆಯ ಕಡೂರು ಎಂದಿದೆ. ಪ್ರತಿ ವರ್ಷ ವೀರಭದ್ರ ಸ್ವಾಮಿಯ ರಥೋತ್ಸವ ವಿಶೇಷವಾಗಿ ನಡೆಸುತ್ತಾರೆ.

**ತಾಳ್ಯ (೨,೬೨೮)**

ಚಿತ್ರದುರ್ಗ–ಹೊಳಲ್ಕೆರೆಗೆ ಹೋಗುವ ಮಾರ್ಗದಲ್ಲಿರುವ ಶಿವಗಂಗ–ಜಾನಕಲ್ ರಸ್ತೆಯ ಶಿವಗಂಗಾದಿಂದ ಎಂಟು ಕಿ.ಮೀ ದೂರದಲ್ಲಿದೆ. ತಾಳ್ಯ ಗ್ರಾಮವು ನಯನ ಮನೋಹರವಾದ ಕೆರೆ, ಅಡಿಕೆ ತೆಂಗುಗಳಿಂದ ಕಂಗೊಳಿಸುತ್ತಿದೆ. ಪ್ರಸ್ತುತ ತಾಳ್ಯವು ಹೋಬಳಿ ಕೇಂದ್ರವಾಗಿದೆ. ಇದು ಹಿಂದೆ ಶಿಲಾಯುಗದ ಮನುಷ್ಯರ ನೆಲೆಯಾಗಿತ್ತು. ಇಲ್ಲಿರುವ ಶ್ರೀ ಆಂಜನೇಯ ಸ್ವಾಮಿಯ ದೇವಾಲಯವು ಸುಮಾರು ೪೦೦ ವರ್ಷಗಳ ಹಿಂದೆ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಯಿತೆಂದು ತಿಳಿದುಬರುತ್ತದೆ. ಅತಿ ಪುರಾತನ ಶೈಲಿಯ ವಿಸ್ತಾರವಾದ ಕಲ್ಲಿನ ಕಟ್ಟಡದ ದೇವಾಲಯವಿದ್ದು, ಸ್ವಾಮಿಯ ವಿಗ್ರಹವು ಸುಮಾರು ೧೦ ಅಡಿ ಎತ್ತರವಿದೆ. ದಶಾವತಾರದ ಭಂಗಿಗಳು ಅಷ್ಟದಿಕ್ಪಾಲಕರು, ಆದಿಶಕ್ತಿ, ಗರುಡ ಮತ್ತು ಮಾರುತಿ ಕೆತ್ತನೆ ಇದೆ. ಬೃಹದಾಕಾರದ ಸ್ವಾಮಿಯು ತಾಳ್ಯ, ಮಲಸಿಂಗನಹಳ್ಳಿ, ಕಿಟ್ಟದಳ್ಳಿಯಲ್ಲಿರುವ ಮೂರ್ತಿಗಳು ಒಂದೇ ಬಂಡೆಯಲ್ಲಿ ಬಳಸಿದ್ದ ಸ್ಥಳವನ್ನು ಹಾಲುರಾಮೇಶ್ವರ ಮಟ್ಟಿ ಎನ್ನುತ್ತಾರೆ. ಇದು ತಾಳ್ಯ ಗ್ರಾಮದಿಂದ ಎರಡು ಕಿ.ಮೀ ದೂರದಲ್ಲಿದೆ. ಕಿಟ್ಟದಹಳ್ಳಿಯ ಮೂರ್ತಿ ಶಿಶುವಿನಂತೆ ಮಲಸಿಂಗನಹಳ್ಳಿಯ ಮೂರ್ತಿ ನರನಂತೆ ತಾಳ್ಯದಲ್ಲಿ ವೀರನಂತೆ ಕಾಣುತ್ತಾನೆ. ಮಹಾದ್ವಾರದ ಬಳಿಯ ಕೊಠಡಿಯಲ್ಲಿರುವ ರಾಮಬಾಣಗಳು ಭೂತಪ್ರೇತ ಪಿಶಾಚಿಗಳು ಹಾಗೂ ರೋಗಗಳನ್ನು ವಾಸಿ ಮಾಡುವ ಪ್ರತೀತಿ ಇದೆ.

ಪ್ರತಿ ಚೈತ್ರಮಾಸದಲ್ಲಿ ಬೆಂಗಳೂರು ಕರಗದ ದಿನವೇ ಜರುಗುವ ಶ್ರೀ ಆಂಜನೇಯ ರಥೋತ್ಸವಕ್ಕೆ ಹೆಚ್ಚಿನ ಭಕ್ತರು ಸೇರುತ್ತಾರೆ. ಶ್ರೀ ಸ್ವಾಮಿಗೆ ನಿತ್ಯವೂ ಪೂಜೆ, ಅರಿಸಿನ, ಕುಂಕುಮ ಪೂಜೆ, ಬೆಳ್ಳಿ ಅಂಗಿ ಪೂಜೆಗಳಿಂದ ಅಲಂಕರಿಸಲ್ಪಟ್ಟಿರುತ್ತದೆ. ಪ್ರತಿ ಶನಿವಾರ ವಿಶೇಷ ಪೂಜೆ ಇದ್ದು ಭಕ್ತಾದಿಗಳು ಹೆಚ್ಚಾಗಿರುತ್ತಾರೆ.

ರಥೋತ್ಸವ ಕಾಲದಲ್ಲಿ ಸೀಗೆ, ಮುಳ್ಳಾವಿಗೆಯ ಪವಾಡ ಪ್ರಸಿದ್ಧವಾಗಿದೆ. ಸುಮಾರು ನಾಲ್ಕು ಇಂಚು ಮೊಳೆಗಳಿಂದ ಮಾಡಲ್ಪಟ್ಟ ಮುಳ್ಳಿನ ಆವಿಗೆಯಲ್ಲಿ ವ್ಯಕ್ತಿಯೊಬ್ಬರು ನಡೆಯುವ ಸನ್ನಿವೇಶಕ್ಕೆ ಎಲ್ಲಾ ಭಕ್ತಾದಿಗಳು ವಿಸ್ಮಿತರಾಗಿರುತ್ತಾರೆ. ಇದೊಂದು ಸೋಜಿಗದ, ವಿಸ್ಮಯದ ಘಳಿಗೆಯಾಗಿರುತ್ತದೆ. ಸಮೀಪದ ಹೊರಕೆರೆದೇವಪುರದಲ್ಲಿ ದಾಸಯ್ಯನ ಎದೆಯ ಮೇಲೆ ಕಲ್ಲಿನ ಗುಂಡನ್ನು ಇಟ್ಟು ಹೊಡೆಯುವ ಗುಂಡಿನ ಸೇವೆ ವಿಶೇಷವಾಗಿದೆ. ಪಕ್ಕದ ಮಲಸಿಂಗನಹಳ್ಳಿಯಲ್ಲಿ ದಾಸಯ್ಯನ ಕತ್ತೆ ಮೆರವಣಿಗೆ ರಂಜನೀಯವಾಗಿರುತ್ತದೆ. ಈ ಗ್ರಾಮದ ಜನ ಸಮೃದ್ಧಿಯಾಗಿದ್ದಾಗ ನೂರೊಂದೊಡೋತ್ಸವ ಆಚರಿಸುತ್ತಾರೆ. ಭಕ್ತಾದಿಗಳು ಬಂದು ಹೋಗಲು ವಸತಿ, ಕಲ್ಯಾಣ ಮಂಟಪದ ಸೌಲಭ್ಯ ಶ್ರೀ ಬಸವೇಶ್ವರ, ಶ್ರೀ ವೀರಭದ್ರೇಶ್ವರ, ಕಾಳಮ್ಮ, ಬಂಡೆಮ್ಮ, ಕರಿಯಮ್ಮ, ಮೊದಲಾದ ದೇವಾಲಯಗಳಿವೆ. ಇಲ್ಲಿಗೆ ಬಂದವರು ಹೊಸದುರ್ಗಕ್ಕೆ ೧೨ ಕಿ.ಮೀ ಇರುವಾಗ ಸಿಗುವ ಹಾಲುರಾಮೇಶ್ವರ ರಾಜ್ಯದ ಹೆಸರಾಂತ

ಯಾತ್ರಾಸ್ಥಳವನ್ನು ಸಂದರ್ಶಿಸುತ್ತಾರೆ. ಇಲ್ಲಿನ ಗಂಗಾಂಬಿಕೆ ಗುಡಿಯಲ್ಲಿ ಆಸ್ತಿಕರು ಪೂಜೆ ಮಾಡಿ ಹರಕೆ ಹೊತ್ತು ನೀರಿನಲ್ಲಿ ಕೈ ಇಟ್ಟು ಪ್ರಸಾದಕ್ಕೆ ಕುಳಿತುಕೊಳ್ಳುತ್ತಾರೆ.

**ಚಿತ್ರಹಳ್ಳಿ: (೨೫೯೫)**

ಚಿತ್ರದುರ್ಗ–ಹೊಳಲ್ಕೆರೆಯ ಹೆದ್ದಾರಿಯಿಂದ ಚಿತ್ರಹಳ್ಳಿಯು ಎರಡು ಕಿ.ಮೀ ದೂರದಲ್ಲಿದೆ. ಇದು ಪುರಾತನ ಕೋಟೆಯ ಅವಶೇಷವನ್ನು ಹೊಂದಿದೆ. ಚಿತ್ರದುರ್ಗ ಪಾಳೆಯಗಾರರ ಮನೆದೇವರಾದ ಚಿತ್ರದೇವರು ಇಲ್ಲಿದೆ. ಪ್ರಾಚೀನಕಾಲದ ಆಂಜನೇಯ ದೇವಾಲಯವಿದೆ. ಪ್ರತಿ ಶ್ರಾವಣಮಾಸದಲ್ಲಿ ಮತ್ತು ವಿಜಯದಶಮಿಯಂದು ನಡೆಯುವ ಜಾತ್ರೆಗೆ ಭಕ್ತಾದಿಗಳು ಎತ್ತಿನ ಗಾಡಿಗಳಲ್ಲಿ, ವಾಹನಗಳಲ್ಲಿ ಗುಂಪು ಗುಂಪಾಗಿ ಬರುತ್ತಾರೆ.

ಚಿತ್ರಹಳ್ಳಿಯು ಇಲ್ಲಿಯ ಶಾಸನಗಳ ಆಧಾರದಿಂದ ಹಿಂದೆ ಐತಿಹಾಸಿಕ ಮಹತ್ವವನ್ನು ಪಡೆದ ಸ್ಥಳವಾಗಿದ್ದುದು ತಿಳಿದುಬರುತ್ತದೆ. ಚಿತ್ರಹಳ್ಳಿ ಗೇಟ್‌ನಿಂದ ಊರೊಳಗೆ ಪ್ರವೇಶಿಸುತ್ತಿದ್ದಂತೆ ಒಡ್ಡರಹಟ್ಟಿ, ಗೊಲ್ಲರಹಟ್ಟಿ ಗ್ರಾಮಗಳಿವೆ. ಒಡ್ಡರ ಹಟ್ಟಿಯಲ್ಲಿ ಒಂದು ಚಿಕ್ಕ ಗುಡಿ ಇದೆ. ಗೊಲ್ಲರ ಹಟ್ಟಿಯಲ್ಲಿ ರಂಗನಾಥಸ್ವಾಮಿ ಹಾಗೂ ಚಿತ್ರಲಿಂಗೇಶ್ವರ ಗುಡಿ ಹಾಗೂ ಒಂದು ಶಾಸನವಿದೆ. ಚಿತ್ರಹಳ್ಳಿಯೊಳಗೊಂದು ಪ್ರಾಚೀನ ಚಿತ್ರಲಿಂಗೇಶ್ವರ ಗುಡಿ ಇದೆ. ಇದೇ ಮೂಲ ದೇವರು. ಚಿಕ್ಕದಿದ್ದ ಗುಡಿಯನ್ನು ಈಗ ದೊಡ್ಡದಾಗಿ ಕಟ್ಟಿಸಿದ್ದಾರೆ. ಯಾವುದೇ ಅಲಂಕಾರವಿಲ್ಲದೇ ಗುಡಿ ತೀರಾ ಸಾಮಾನ್ಯವಾಗಿದೆ. ಗುಡಿಯೊಳಗೆ ಈಶ್ವರ ಮತ್ತು ಬಸವನ ಮೂರ್ತಿಗಳಿವೆ.

ಗರ್ಭಗುಡಿಯೊಳಗೆ ಸ್ತ್ರೀಯರಿಗೆ ಪ್ರವೇಶವಿಲ್ಲ, ಚಿತ್ರಲಿಂಗ ದೇವರು ಪಾಳೆಯಗಾರರ ಮನೆದೇವರಾಗಿದ್ದು, ವಿಜಯದಶಮಿಯಂದು ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಈ ದೇವರಿಗೆ ಹರಕೆ ಮಾಡಿಕೊಂಡರೆ ಹಾವು ಚೇಳು ಕಾಟ ಪರಿಹಾರವಾಗುತ್ತದೆ ಎನ್ನುವ ನಂಬಿಕೆಯಿದೆ.

ಊರೊಳಗೆ ಆಂಜನೇಯನ ಪ್ರಾಚೀನ ದೇವಾಲಯವಿದೆ. ಈ ದೇವಾಲಯ ಸುಂದರ ಕೆತ್ತನೆಯ ಶಿಲ್ಪದಿಂದ ಕೂಡಿದೆ. ಹದಿನಾರು ಕಂಬಗಳ ಕಲ್ಲು ಮಂಟಪವಿದೆ. ಈ ಸ್ಥಳಕ್ಕೆ ಚಿತ್ರಹಳ್ಳಿ ಮಠದ ಸ್ಥಳ ಎನ್ನುತ್ತಾರೆ. ಈ ಮಠ ಶ್ರೀ ಶೈಲಮಠದ ಶಾಖೆಯಾಗಿರುವಂತೆ, ಇಮ್ಮಡಿ ಮುರುಗಿ ಸ್ವಾಮಿಗಳ ಕಾಲದಲ್ಲಿ ಈ ಮಠ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಈಗ ಕೇವಲ ಹಾಳು ಮಂಟಪವಾಗಿ ಉಳಿದಿದೆ.

**ಚಿತ್ರಹಳ್ಳಿ ಮತ್ತು ಶಾಸನಗಳು**

ಕ್ರಿ.ಶ. ೧೪೫೮ ರ ಕಾಲದ ಶಾಸನವು ಕೋಟೆ ಬಸವಣ್ಣನ ಗುಡಿಯಲ್ಲಿದ್ದು, ಹಡಪದ ವಿಠಲಪ್ಪ ನಾಯಕರ ಕಾರ್ಯಕರ್ತರಾದ ತಿಮ್ಮಪ್ಪನಾಯಕರು ಚಿತ್ರಹಳ್ಳಿ ನಾಡೊಳಗಿನ ಕುರುಬಗೌಡರಿಗೆ ದತ್ತಿಬಿಟ್ಟ ವಿಚಾರ ತಿಳಿಯುತ್ತದೆ. ಕ್ರಿ.ಶ.೧೪೮೯

ರಲ್ಲಿ ಮತ್ತಿ ತಿಮ್ಮಣ್ಣ ನಾಯಕರಿಗೆ ಹೊಳಲ್ಕೆರೆ ಸೀಮೆ ಸೇರಿದ್ದು, ಇಲ್ಲಿ ಸುಗಮವಾದ ಆಡಳಿತ ನಡೆಸಲಿಕ್ಕಾಗಿ ಗೌಡ, ಶಾನುಭೋಗರಿಗೆ ಬರೆಸಿಕೊಟ್ಟ ತಾಮ್ರ ಶಾಸನವಿದೆ. ಈ ಚಿತ್ರಹಳ್ಳಿ ಸೀಮೆಗೆ ಸೇರಿದ ಗುಂಟನೂರು ಮಾಗಣಿಯನ್ನು ಕ್ರಿ.ಶ.೧೬೫೩ ರಲ್ಲಿ ಅಗ್ರಹಾರವನ್ನಾಗಿಸಿ ಚೆನ್ನನಾಯಕ ಎನ್ನುವನು ಪುಟ್ಟಣ್ಣನ ಮಗನಿಗೆ ದಾನ ನೀಡಿದ್ದಾನೆ. ಇದೇ ಕ್ರಿ.ಶ. ೧೬೫೩ರಲ್ಲಿ ಚಿತ್ರಹಳ್ಳಿಯನ್ನು ಕ್ಯಾಸಾಪುರ ಶಾಸನದಲ್ಲಿ "ಚಿತ್ರ ಹಳ್ಳಿನಾಡು" ಎಂದು ಉಲ್ಲೇಖಿಸಿದ್ದಾರೆ. ಚಿತ್ರದುರ್ಗ ತಾಲ್ಲೂಕಿನ ಕಡಲೆಗುದ್ದು ಗ್ರಾಮಶಾಸನದಲ್ಲಿ "ಚಿತ್ರಹಳ್ಳಿಸೀಮೆ"ಎಂದು ಉಲ್ಲೇಖಿಸಲಾಗಿದೆ. ಪಾಳೆಯಗಾರರ ಕಾಲದಲ್ಲಿ ಹಿರೆಗುಂಟನೂರು ಮಾಗಣಿಯಾಗಿ ಕಡಲೆಗುದ್ದು ಗ್ರಾಮಕ್ಕೆ ಸೇರಿತ್ತು. ಇಲ್ಲಿಯ ಈಶ್ವರ ಗುಡಿ, ಮಠದ ಬಳಿ ಶಾಸನಗಳು ದೊರೆತಿವೆ. ಕಸ್ತೂರಿಸಾನಿ ಎನ್ನುವಾಕೆಯ ಹೊಲದಲ್ಲಿ ದೊರೆತ ಶಾಸನದಿಂದ ಚಿತ್ರಹಳ್ಳಿಯ ಕೆಂಚಗೌಡನ ಮಗ ನಾಗಣ್ಣ ಎನ್ನುವನು ಬೀರೆದೇವರಿಗೆ ಗದ್ದೆ ಭೂಮಿಯನ್ನು ಮಾನ್ಯ ಕೊಟ್ಟ ವಿಚಾರ ತಿಳಿಯುತ್ತದೆ.

ಹಿಂದೆ ಚಿತ್ರದುರ್ಗದ ಅರಸರ ಮೂಲ ಪುರುಷರು ಇತ್ತ ವಲಸೆ ಬಂದಾಗ ತಮ್ಮ ಮನೆ ದೇವರಾದ ಅಹೋಬಲ ನರಸಿಂಹ, ಕಂಪಳದೇವರು ಹಾಗೂ ಚಿತ್ರದೇವರನ್ನು ತಂದು ಇಲ್ಲಿ ಸ್ಥಾಪಿಸಿದ್ದರಿಂದ "ಚಿತ್ರಹಳ್ಳಿ" ಎಂದು ಹೆಸರಾಯಿತೆಂದು, ಆಗ ಈ ಗ್ರಾಮದ ಗೌಡರನ್ನಾಗಿ ಶಾವಂತಲೋರಲಿಂಗಣ್ಣನನ್ನು, ಶ್ಯಾನುಭೋಗರನ್ನಾಗಿ ಪುಟ್ಟರಸಯ್ಯನನ್ನು ಊರ ತಳವಾರಿಕೆಗೆ ಲಕ್ಕಮನೋವರ ಮರಿಲಕ್ಕಯ್ಯನನ್ನು ನೇಮಿಸಲಾಯಿತೆಂದು ಚಿತ್ರದೇವರ ಪೂಜಾರಿಕೆಗಾಗಿ ಸಿದ್ದಲಿಂಗಯ್ಯನನ್ನು ನೇಮಿಸಲಾಯಿತೆಂದು ತಿಳಿದುಬರುತ್ತದೆ. ಇನ್ನೊಂದು ಪ್ರತೀತಿಯಂತೆ ಕರಡಿ ಬುಳ್ಳನಾಯಕ ಮತ್ತು ಚಿತ್ರನಾಯಕರು ಬಂದು ಇಲ್ಲಿ ಹಟ್ಟಿಕಟ್ಟಿ ಗ್ರಾಮ ಕಟ್ಟಿದ್ದರಿಂದ "ಚಿತ್ರಹಳ್ಳಿ" ಎಂದು ಹೆಸರಾಯಿತೆಂದು ಹಾಗೂ ಇಲ್ಲಿ ಆಳ್ವಿಕೆ ನಡೆಸಿದ್ದರಿಂದ ಈ ಊರಿಗೆ ಚಿತ್ರಹಳ್ಳಿ ಎಂದು ಹೆಸರಾಯಿತೆಂದು ತಿಳಿದುಬರುತ್ತದೆ.

ಶ್ಯಾನುಭೋಗ ವೆಂಕಟರಮಣಪ್ಪ ಎಂಬುವರು ದಿಲ್ಲಿಯನ್ನು ಬಿಟ್ಟು ಬಂದು ಆನೆಗೊಂದಿ ರಾಯರಿಂದ ಇಲ್ಲಿಯ ಹೊಲಗದ್ದೆ, ಮನೆ, ಮಾನ್ಯ ಪಡೆದು, ಸುಮಾರು ೬೦ ವರ್ಷ ಅನುಭವಿಸಿದನೆಂದು ತಿಳಿದುಬರುತ್ತದೆ. ಆ ಕಾಲದಲ್ಲಿ ಚಿತ್ರಹಳ್ಳಿ ಊರು ಕಟ್ಟಲಾಯಿತೆಂದು ವೆಂಕಟರಮಣಪ್ಪನು ಇಲ್ಲಿ ಬಂದಾಗ ಈ ಸ್ಥಳದಲ್ಲಿದ್ದ ಗೊಲ್ಲ, ಕುರುಬ, ಸಾದ, ನಾಯಕರುಗಳಲ್ಲಿ ಅಪ್ಪಣೆ ಪಡೆದು ಇಲ್ಲಿ ನಿಂತನೆಂದು ಆನೆಗೊಂದಿ ಅಚ್ಚುತರಾಯರ ಕಾಲದಲ್ಲಿ ಇಲ್ಲೊಂದು ಕೋಟೆ ಕಟ್ಟಲಾಯಿತೆಂದು ಹಾಗೂ ವೀರಭದ್ರ ಹಾಗೂ ಬಸವೇಶ್ವರನ ದೇವಾಲಯಗಳನ್ನು ಕಟ್ಟಲಾಯಿತೆಂದು ತಿಳಿದುಬರುತ್ತದೆ. ಮುಂದೆ ಅಚ್ಚುತರಾಯನ ಅಪ್ಪಣೆ ಪಡೆದು 'ಚಿತ್ರಪುರಿ' ಎಂಬ ಹೆಸರಿಟ್ಟು, ಗೌಡರು–ಶ್ಯಾನಭೋಗರು ಹಾಗೂ ಹನ್ನೆರಡು ಕೈವಾರದವರು ಇಲ್ಲಿ ನೆಲೆಸಿದ್ದರೆಂದು ನಂತರ ಈ ಪ್ರದೇಶ ಕೆಲವು ಕಾಲ ತರಿಕೆರೆ ಸಂಸ್ಥಾನಕ್ಕೆ ಸೇರಿದ್ದಾಗ ಗೊಲ್ಲನಾಯಕರ ಬಳಿ

ಇದ್ದ ಚಿತ್ರದೇವರಿಂದ "ಚಿತ್ರಹಳ್ಳಿ" ಎಂದು ಹೆಸರಾಯಿತೆಂದು ತಿಳಿದುಬರುತ್ತದೆ. ಕ್ರಿ.ಶ.೧೪೪೦ ರಲ್ಲಿ ಇಲ್ಲಿ ಚಿತ್ರದೇವರನ್ನು ಸ್ಥಾಪಿಸಿ ದತ್ತಿ ನೀಡಲಾಗಿದೆ.

ನಂದನಹೊಸೂರು:- ಹೊರಕೆರೆ ದೇವಪುರದ ಆಂಜನೇಯ ದೇವಸ್ಥಾನದ ಶಾಸನದಿಂದ ಕ್ರಿ.ಶ.೧೫೫೭ ರಲ್ಲಿ ಕಾಮಗೇತಿ ಕಸ್ತೂರಿ ರಂಗಪ್ಪನಾಯಕರ ಮಗ ಚನ್ನಯ್ಯನು ತಮ್ಮ ಹಿರಿಯರಿಗೆ ಪುಣ್ಯವಾಗಲೆಂದು ಹನುಮಂತ ದೇವರ ಗುಡಿ ಕಟ್ಟಿಸಿದನೆಂದು ತಿಳಿಸುತ್ತದೆ.

**ಹೊರಕೆರೆ ದೇವರಪುರ (೨,೯೨೬)**

ಚಿತ್ರದುರ್ಗ - ಹೊಳಲ್ಕೆರೆಯ ಮಾರ್ಗದಲ್ಲಿ ಚಿತ್ರಹಳ್ಳಿಗೇಟಿನಿಂದ ೧೨ ಕಿ.ಮೀ ದೂರದಲ್ಲಿರುವ ಹೊರಕೆರೆದೇವಪುರದಲ್ಲಿ ವಿಶಾಲವಾದ ಶ್ರೀ ರಂಗನಾಥಸ್ವಾಮಿ ದೇವಾಲಯವಿದೆ. ಇತ್ತೀಚೆಗೆ ಪ್ರತಿ ಶನಿವಾರ ಅನ್ನದಾಸೋಹ ವ್ಯವಸ್ಥೆ ಇದ್ದು, ಬಸ್ ಸೌಕರ್ಯವಿದೆ. ಇಲ್ಲಿ ಕಲ್ಯಾಣ ಮಂಟಪದ ಸೌಲಭ್ಯವಿರುವುದರಿಂದ ಭಕ್ತಾದಿಗಳಿಗೆ ತುಂಬಾ ಅನುಕೂಲವಾಗಿದೆ. ಇದು ಪ್ರಸಿದ್ಧ ವೈಷ್ಣವ ಕ್ಷೇತ್ರ ಪ್ರಾಚೀನವೂ, ಶಾಸನ ಸ್ಥಳವೂ ಆಗಿದೆ. ಈ ಗ್ರಾಮವು ಸುತ್ತಲೂ ಬೆಟ್ಟಗಳನ್ನು ಹೊಂದಿ ರಮ್ಯವಾಗಿದೆ. ಇಡೀ ಜಿಲ್ಲೆಯಲ್ಲಿ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾಗಿದೆ. ಹನ್ನೆರಡು ವರ್ಷಗಳಿಗೊಮ್ಮೆ ಗುಂಡಿನ ಸೇವೆ, ಅನ್ನದ ಕೋಟೆ ವಿಶೇಷವಾಗಿ ನಡೆಯುತ್ತದೆ. ಪಾಲ್ಗುಣ ಮಾಸದ ಶುದ್ಧದಲ್ಲಿ ಬರುವ ಪುಬ್ಬ ನಕ್ಷತ್ರದ ದಿನ ಇಲ್ಲಿ ವಿಶೇಷ ವೈಭವದ ರಥೋತ್ಸವ ನಡೆಯುತ್ತದೆ. ಈಚೆಗೆ ತಂಡ ತಂಡಗಳಲ್ಲಿ ಜನರು ಈ ಸ್ಥಳಗಳಿಗೆ ಭೇಟಿ ಕೊಡುತ್ತಿದ್ದಾರೆ. ಪ್ರಕೃತಿ ಸೌಂದರ್ಯದಿಂದ ಕೂಡಿದ ಈ ಸ್ಥಳಗಳು ಹಲವು ಗಂಟೆಗಳ ಕಾಲ ವಿಹಾರ ಮಾಡಲು ಯೋಗ್ಯವಾಗಿದೆ.

**ಕೊಳಾಳು (೨೧೯೭)**

ಬೆಟ್ಟಗುಡ್ಡ ಕೊಳಗಳ ಮಧ್ಯೆ ಇರುವ ಮತ್ತೊಂದು ಆಧ್ಯಾತ್ಮಿಕ ನೆಲೆ ಕೊಳಾಳು ಕೆಂಚಾವದೂತರದು. ಇಲ್ಲಿಗೆ ಪ್ರವಾಸ ಮಾಡುವುದೇ ಒಂದು ವಿಶಿಷ್ಟ ಅನುಭವ. ಪ್ರವಾಸಿ ಕೇಂದ್ರ ಬಿಂದುವಾದ ಈ ಸ್ಥಳದಲ್ಲಿ ಜನಸಾಮಾನ್ಯರಿಗಾಗಿ ವ್ಯವಸ್ಥಿತ ಮಾಹಿತಿ ಕೇಂದ್ರದ ಸ್ಥಾಪನೆಯಾಗಬೇಕಿದೆ.

ಪ್ರವಾಸೋದ್ಯಮದ ಹೊಸ ಸಾಧ್ಯತೆಗಳಿಂದ ಈ ತಾಲ್ಲೂಕಿನ ಜನರ ಸಾಂಸ್ಕೃತಿಕ ಬದುಕಿನಲ್ಲಿ ನವೋತ್ಸಾಹ ಮೂಡಬಹುದು. ಲೋಕದೊಳಲು ಬಳಿಯಲ್ಲಿರುವ ಶ್ರೀದೊಡ್ಡ ಹೊಟ್ಟೆರಂಗಪ್ಪ ಸ್ವಾಮಿ ದೇವಸ್ಥಾನವು ಚಿತ್ರದುರ್ಗ ಜೋಗಿಮಟ್ಟಿ ಸುಮಾರು ಎತ್ತರದಲ್ಲಿರುವುದರಿಂದ ತಂಪಾದ ಸ್ಥಳವಾಗಿದೆ. ಲೋಕದೊಳಲು ಯಾತ್ರಾಸ್ಥಳವೂ ಆಗಿರುವುದರಿಂದ ಒಂದು ವಿಶ್ರಾಂತಿ ಧಾಮದ ಅಗತ್ಯವಿದೆ.

# ಅನುಬಂಧ

## ಹೊಳಲ್ಕೆರೆ ತಾಲೂಕಿನ ೨೦೧೫-೧೬ ರ ಅಂಕಿ-ಅಂಶಗಳು

| ಕ್ರ.ಸಂ. | ವಿವರ | ಘಟಕ | ಹೊಳಲ್ಕೆರೆ ತಾಲೂಕು | ಚಿತ್ರದುರ್ಗ ಜಿಲ್ಲೆ |
|---|---|---|---|---|
| ೧ | ತಾಲೂಕು | ಸಂಖ್ಯೆ | ೧ | ೬ |
| ೨ | ಹೋಬಳಿಗಳು | ಸಂಖ್ಯೆ | ೪ | ೨೨ |
| ೩ | ಗ್ರಾಮ ಪಂಚಾಯತಿಗಳು | ಸಂಖ್ಯೆ | ೨೯ | ೧೯೦ |
| ೪ | **೨೦೧೧ ರ ಜನಗಣತಿ ಪ್ರಕಾರ ಗ್ರಾಮಗಳು** | | | |
| | ಜನವಸತಿ ಗ್ರಾಮಗಳು | ಸಂಖ್ಯೆ | ೧೬೪ | ೯೪೮ |
| | ಜನವಸತಿ ಇಲ್ಲದ | ಸಂಖ್ಯೆ | ೩೮ | ೧೧೨ |
| | ಪುರಸಭೆಗಳು / ನಗರ ಪಾಲಿಕೆಗಳು | ಸಂಖ್ಯೆ | ೧ | ೭ |
| ೫ | **ವಿದ್ಯುಚ್ಛಕ್ತಿ ಒದಗಿಸಿದ** | | | |
| | ಉಪಗ್ರಾಮಗಳು | ಸಂಖ್ಯೆ | ೬೧ | ೫೬೬ |
| | ಐ.ಪಿ.ಸೆಟ್ಟುಗಳು | ಸಂಖ್ಯೆ | ೧೫೭೭೮ | ೧೦೬೯೧೮ |
| ೬ | **ವಿದ್ಯುತ್ ಬಳಕೆದಾರರು(ಸಂಖ್ಯೆಯಲ್ಲಿ)** | | | |
| | ಗೃಹ ಬಳಕೆ | ಸಂಖ್ಯೆ | ೪೮೭೦೩ | ೩೮೭೧೪೪ |
| | ಕೈಗಾರಿಕಾ ಬಳಕೆ | ಸಂಖ್ಯೆ | ೧೧೭೧ | ೮೮೪೮ |
| | ವಾಣಿಜ್ಯ ಬಳಕೆ | ಸಂಖ್ಯೆ | ೨೪೬೯ | ೩೨೬೧೯ |
| | ನೀರಾವರಿ(ಐ.ಪಿ.ಸೆಟ್) | ಸಂಖ್ಯೆ | ೧೫೭೭೮ | ೧೦೬೯೧೮ |
| | ಇತರೆ ದೀಪಗಳು | ಸಂಖ್ಯೆ | ೧೮೯೧೩ | ೧೨೭೦೯೮ |
| ೭ | **ವಿದ್ಯುಚ್ಛಕ್ತಿ ಬಳಕೆ** | | | |
| | ಗೃಹ ಬಳಕೆ | ದಶಲಕ್ಷ ಯೂನಿಟ್‌ಗಳಲ್ಲಿ | ೧೨.೩೮ | ೧೩೪.೧೭ |
| | ಕೈಗಾರಿಕಾ ಬಳಕೆ | ದಶಲಕ್ಷ ಯೂನಿಟ್‌ಗಳಲ್ಲಿ | ೧.೦೯ | ೬೨.೨೮ |
| | ವಾಣಿಜ್ಯ ಬಳಕೆ | ದಶಲಕ್ಷ ಯೂನಿಟ್‌ಗಳಲ್ಲಿ | ೨.೯೫ | ೪೦.೪೩ |
| | ನೀರಾವರಿ(ಐ.ಪಿ.ಸೆಟ್) | ದಶಲಕ್ಷ ಯೂನಿಟ್‌ಗಳಲ್ಲಿ | ೧೨೧.೧೯ | ೭೪೨.೩೯ |
| | ಇತರೆ | ದಶಲಕ್ಷ ಯೂನಿಟ್‌ಗಳಲ್ಲಿ | ೮.೫೭ | ೩೬.೬೯ |
| | ದಾರಿ ದೀಪ | ದಶಲಕ್ಷ ಯೂನಿಟ್‌ಗಳಲ್ಲಿ | ೧.೩೪ | ೧೭.೦೧ |

| | | | | |
|---|---|---|---|---|
| | ಒಟ್ಟು | ಲಕ್ಷರೂ. ಗಳಲ್ಲಿ | ೧೪೭.೫೨ | ೧೦೩೨.೯೬ |
| | ವಿದ್ಯುಚ್ಛಕ್ತಿ ಬಳಕೆಯಿಂದ ಆದಾಯ | ಲಕ್ಷ ರೂ. ಗಳಲ್ಲಿ | ೫೩೭೭.೦೫ | ೩೯೪೨೧.೪೬ |
| ೮ | **ನ್ಯಾಯಬೆಲೆ ಅಂಗಡಿಗಳು ೩೧-೦೩-೨೦೧೬** | | | |
| | ನ್ಯಾಯಬೆಲೆ ಅಂಗಡಿಗಳು | ಸಂಖ್ಯೆ | ೯೫ | ೫೮೩ |
| | ಎಎವೈ(ಬಿಪಿಎಲ್) | ಸಂಖ್ಯೆ | ೩೮೪೯ | ೨೮೪೯೦ |
| | ಅಕ್ಷಯ ಸಿಲಿಂಡರ್ ಸಹಿತ(ಬಿಪಿಎಲ್) | ಸಂಖ್ಯೆ | ೯೩೪೫ | ೫೫೫೦೩ |
| | ಅಕ್ಷಯ ಸಿಲಿಂಡರ್ ರಹಿತ(ಬಿಪಿಎಲ್) | ಸಂಖ್ಯೆ | ೩೧೩೮೫ | ೨೮೧೭೦೭ |
| | ಅಕ್ಷಯ ಸಿಲಿಂಡರ್ ಸಹಿತ(ಎಪಿಎಲ್) | ಸಂಖ್ಯೆ | ೧೦೮ | ೮೦೧ |
| | ಅಕ್ಷಯ ಸಿಲಿಂಡರ್ ರಹಿತ(ಎಪಿಎಲ್) | ಸಂಖ್ಯೆ | ೪೫೫೪ | ೨೭೯೭೧ |
| | ಭಾವಚಿತ್ರವಿರುವ ಪಡಿತರ ಚೀಟಿದಾರರು | ಸಂಖ್ಯೆ | ೪೯೨೪೧ | ೩೯೪೪೭೨ |
| | ಒಟ್ಟು ಪಡಿತರ ಚೀಟಿದಾರರು | ಸಂಖ್ಯೆ | ೪೯೨೪೧ | ೩೯೪೪೭೨ |
| ೯ | **ಚಿತ್ರಮಂದಿರಗಳು** | | | |
| | ಶಾಶ್ವತ | ಸಂಖ್ಯೆ | ೧ | ೧೭ |
| | ತಾತ್ಕಾಲಿಕ | ಸಂಖ್ಯೆ | ೦ | ೩ |
| ೧೦ | ಪೋಲೀಸ್ ಠಾಣೆಗಳು | ಸಂಖ್ಯೆ | ೨ | ೨೩ |
| ೧೧ | ಕಾರಾಗೃಹಗಳು | ಸಂಖ್ಯೆ | ೦ | ೧ |
| ೧೨ | **ಖೈದಿಗಳು** | | | |
| | ಗಂಡಸರು | ಸಂಖ್ಯೆ | ೦ | ೧೦೨ |
| | ಹೆಂಗಸರು | ಸಂಖ್ಯೆ | ೦ | ೧೨ |
| | ಅಗ್ನಿಶಾಮಕ ಕೇಂದ್ರಗಳು | ಸಂಖ್ಯೆ | ೧ | ೬ |
| | ಕಾರ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಜಲವಾಹನಗಳು | ಸಂಖ್ಯೆ | ೦ | ೧೬ |
| | ತುರ್ತು ಅಗ್ನಿಶಾಮಕ ಕರೆಗಳು | ಸಂಖ್ಯೆ | ೦ | ೬೯೧ |
| | ಸಂರಕ್ಷಿಸಲಾದ ಆಸ್ತಿಯ ಮೌಲ್ಯ | ಕೋಟಿ ರೂಗಳಲ್ಲಿ | ೦ | ೧೦,೪೯,೧೨,೫೭೭ |

# ಅನುಬಂಧ

| | | | | |
|---|---|---|---|---|
| ೧೩ | **ವಿಸ್ತೀರ್ಣ ಮತ್ತು ಜನಸಂಖ್ಯೆ (೨೦೧೧ ರ ಜನಗಣತಿಯಂತೆ)** | | | |
| | ಭೌಗೋಳಿಕ ವಿಸ್ತೀರ್ಣ | ಚ.ಕಿ.ಮೀ.ಗಳಲ್ಲಿ | ೧೦೯೯ | ೮೪೩೬ |
| ೧೪ | **ಜನಸಂಖ್ಯೆ(೨೦೧೧ ರ ಜನಗಣತಿ)** | | | |
| | ಗಂಡಸರು | ಸಂಖ್ಯೆ | ೧೦೪೯೯೨ | ೮೪೦೮೪೩ |
| | ಹೆಂಗಸರು | ಸಂಖ್ಯೆ | ೧೦೨೨೬೮ | ೮೧೮೬೧೩ |
| | ಗ್ರಾಮೀಣ | ಸಂಖ್ಯೆ | ೧೮೫೨೪೧ | ೧೩೨೯೯೨೩ |
| | ನಗರ | ಸಂಖ್ಯೆ | ೨೨೦೧೯ | ೩೨೯೫೩೩ |
| | ಲಿಂಗಾನುಪಾತ | ಸಂಖ್ಯೆ | ೯೭೪ | ೯೭೪ |
| ೧೫ | **ಪರಿಶಿಷ್ಟ ಜಾತಿ (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ | | | |
| | ಗಂಡು | ಸಂಖ್ಯೆ | ೨೬೭೪೮ | ೧೬೯೧೬೦ |
| | ಹೆಣ್ಣು | ಸಂಖ್ಯೆ | ೨೫೯೩೩ | ೧೬೪೪೧೧ |
| | ಒಟ್ಟು | ಸಂಖ್ಯೆ | ೫೨೬೮೧ | ೩೩೩೫೭೧ |
| | ಪಟ್ಟಣ | | | |
| | ಗಂಡು | ಸಂಖ್ಯೆ | ೧೯೮೨ | ೨೭೬೫೯ |
| | ಹೆಣ್ಣು | ಸಂಖ್ಯೆ | ೨೦೭೦ | ೨೭೮೮೭ |
| | ಒಟ್ಟು | ಸಂಖ್ಯೆ | ೪೦೫೨ | ೫೫೫೪೬ |
| ೧೬ | **ಪರಿಶಿಷ್ಟ ಪಂಗಡ (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ | | | |
| | ಗಂಡು | ಸಂಖ್ಯೆ | ೧೧೭೬೯ | ೧೩೫೨೦೯ |
| | ಹೆಣ್ಣು | ಸಂಖ್ಯೆ | ೧೧೭೨೯ | ೧೩೧೩೧೭ |
| | ಒಟ್ಟು | ಸಂಖ್ಯೆ | ೨೩೪೯೮ | ೨೬೬೫೨೬ |
| | ಪಟ್ಟಣ | | | |
| | ಗಂಡು | ಸಂಖ್ಯೆ | ೯೨೫ | ೧೭೭೩೦ |
| | ಹೆಣ್ಣು | ಸಂಖ್ಯೆ | ೯೭೨ | ೧೮೨೯೮ |
| | ಒಟ್ಟು | ಸಂಖ್ಯೆ | ೧೮೯೭ | ೩೬೦೨೮ |
| ೧೭ | **ಅಕ್ಷರಸ್ಥರು (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ | | | |
| | ಗಂಡು | ಸಂಖ್ಯೆ | ೬೯೨೯೯ | ೪೭೪೨೮೫ |
| | ಹೆಣ್ಣು | ಸಂಖ್ಯೆ | ೫೪೩೦೪ | ೩೬೦೧೩೪ |
| | ಒಟ್ಟು | ಸಂಖ್ಯೆ | ೧೨೩೬೦೩ | ೮೩೪೪೧೯ |

| | | | | |
|---|---|---|---|---|
| | ಪಟ್ಟಣ | | | |
| | ಗಂಡು | ಸಂಖ್ಯೆ | ೯೦೯೬ | ೧೩೨೯೦೩ |
| | ಹೆಣ್ಣು | ಸಂಖ್ಯೆ | ೮೩೦೫ | ೧೨೦೦೭೦ |
| | ಒಟ್ಟು | ಸಂಖ್ಯೆ | ೧೭೪೦೧ | ೨೫೨೯೭೩ |
| | ಗಂಡು | ಸಂಖ್ಯೆ | ೭೮೩೯೫ | ೬೦೭೧೮೮ |
| | ಹೆಣ್ಣು | ಸಂಖ್ಯೆ | ೬೨೬೦೯ | ೪೮೦೨೦೪ |
| | ಒಟ್ಟು | ಸಂಖ್ಯೆ | ೧೪೧೦೦೪ | ೧೦೮೭೩೯೨ |
| ೧೮ | **ಒಟ್ಟು ಜನಸಂಖ್ಯೆಯಲ್ಲಿ ೦–೬ ವರ್ಷದೊಳಗಿನ ಮಕ್ಕಳು ೨೦೧೧ ರ ಜನಗಣತಿಯಂತೆ** | | | |
| | ಗ್ರಾಮೀಣ | ಸಂಖ್ಯೆ | ೧೮೯೫೨ | ೧೪೯೨೯೪ |
| | ಪಟ್ಟಣ | ಸಂಖ್ಯೆ | ೨೨೪೩ | ೩೪೯೮೬ |
| | ಒಟ್ಟು | ಸಂಖ್ಯೆ | ೨೧೧೯೫ | ೧೮೪೨೮೦ |
| ೧೯ | **ಕೆಲಸಗಾರರ ವರ್ಗೀಕರಣ (೨೦೧೧ ರ ಜನಗಣತಿಯಂತೆ)** | | | |
| | ಒಟ್ಟು ಕೆಲಸಗಾರರು | ಸಂಖ್ಯೆ | ೧೧೫೨೭೭ | ೮೫೬೫೮೭ |
| | ಮುಖ್ಯ ಕೆಲಸಗಾರರು | ಸಂಖ್ಯೆ | ೮೦೩೩೯ | ೬೬೭೪೭೯ |
| | ವ್ಯವಸಾಯಗಾರರು | ಸಂಖ್ಯೆ | ೪೧೦೫೪ | ೨೫೭೦೭೬ |
| | ಕೃಷಿ ಕಾರ್ಮಿಕರು | ಸಂಖ್ಯೆ | ೨೩೨೫೬ | ೧೯೨೭೬೯ |
| | ಗೃಹ ಕೈಗಾರಿಕೆಗಳು | ಸಂಖ್ಯೆ | ೧೬೮೯ | ೧೬೭೧೮ |
| | ಇತರೆ ಕೆಲಸಗಾರರು | ಸಂಖ್ಯೆ | ೧೪೩೪೦ | ೨೦೦೧೯೬ |
| | ಸೀಮಾಂತ ಕೆಲಸಗಾರರು | ಸಂಖ್ಯೆ | ೩೪೯೩೮ | ೧೮೯೧೦೮ |
| | ವ್ಯವಸಾಯಗಾರರು | ಸಂಖ್ಯೆ | ೯೩೧೬ | ೨೯೧೬೯ |
| | ಕೃಷಿ ಕಾರ್ಮಿಕರು | ಸಂಖ್ಯೆ | ೧೮೨೦೦ | ೧೦೧೫೬೮ |
| | ಗೃಹ ಕೈಗಾರಿಕೆಗಳು | ಸಂಖ್ಯೆ | ೧೫೯೩ | ೯೫೧೭ |
| | ಇತರೆ ಕೆಲಸಗಾರರು | ಸಂಖ್ಯೆ | ೫೮೨೯ | ೪೮೮೫೪ |
| | ಕೆಲಸಗಾರರಲ್ಲದವರು | ಸಂಖ್ಯೆ | ೯೧೯೮೩ | ೮೦೨೮೬೯ |
| ೨೦ | **ಸಾಕ್ಷರತಾ ಪ್ರಮಾಣ (೨೦೧೧ ರ ಜನಗಣತಿಯಂತೆ)** | | | |
| | ಗ್ರಾಮೀಣ ಪ್ರದೇಶ | | | |
| | ಗಂಡು | ಶೇಕಡಾ | ೮೭.೨೫ | ೭೯.೧೯ |
| | ಹೆಣ್ಣು | ಶೇಕಡಾ | ೬೬.೨ | ೬೧.೯೧ |
| | ಒಟ್ಟು | ಶೇಕಡಾ | ೭೪.೩೩ | ೭೦.೬೮ |
| | ಪಟ್ಟಣ ಪ್ರದೇಶ | | | |
| | ಗಂಡು | ಶೇಕಡಾ | ೯೨.೨ | ೯೦.೨೨ |

## ಅನುಬಂಧ

| | | | | |
|---|---|---|---|---|
| | ಹೆಣ್ಣು | ಶೇಕಡಾ | ೮೩.೮ | ೮೧.೫೫ |
| | ಒಟ್ಟು | ಶೇಕಡಾ | ೮೭.೯೯ | ೮೫.೮೯ |
| | ತಾಲ್ಲೂಕಿನ ಒಟ್ಟು | | | |
| | ಗಂಡು | ಶೇಕಡಾ | ೮೩.೨೯ | ೮೧.೩೭ |
| | ಹೆಣ್ಣು | ಶೇಕಡಾ | ೬೮.೧ | ೬೫.೮೮ |
| | ಒಟ್ಟು | ಶೇಕಡಾ | ೭೫.೭೮ | ೭೩.೭೧ |
| ೨೧ | **ಮಳೆ** | | | |
| | **ಮಳೆಮಾಪನ ಕೇಂದ್ರಗಳು ೨೦೧೧ ರಲ್ಲಿದ್ದಂತೆ** | | | |
| | ಕಾರ್ಯನಿರ್ವಹಿಸುತ್ತಿರುವ | ಸಂಖ್ಯೆ | ೬ | ೩೪ |
| | ಸ್ಥಗಿತಗೊಂಡ | ಸಂಖ್ಯೆ | ೦ | ೩ |
| | ವಾರ್ಷಿಕ ವಾಡಿಕೆ ಮಳೆ (೧೯೪೧-೧೯೬೦) | | | |
| | ಮಳೆ ದಿನಗಳು | ಸಂಖ್ಯೆ | ೪೧ | ೪೦ |
| | ವಾಡಿಕೆ ಮಳೆ | ಮಿ.ಮೀ.ಗಳಲ್ಲಿ | ೭೧೮ | ೫೮೨ |
| ೨೨ | **ಭೂಮಿಯ ಬಳಕೆ** | | | |
| | ಭೌಗೋಳಿಕ ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೩೫೮೬೮ | ೭೭೦೭೦೨ |
| | ಅರಣ್ಯ ಪ್ರದೇಶ | ಹೆಕ್ಟೇರುಗಳಲ್ಲಿ | ೮೮೭೮ | ೭೩೭೧೯ |
| ೨೩ | ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ | | | |
| | ವ್ಯವಸಾಯೇತರ | ಹೆಕ್ಟೇರುಗಳಲ್ಲಿ | ೬೧೦೦ | ೫೫೪೫೦ |
| | ಬಂಜರು | ಹೆಕ್ಟೇರುಗಳಲ್ಲಿ | ೫೮೬೮ | ೨೫೪೦೩ |
| | ಒಟ್ಟು | ಹೆಕ್ಟೇರುಗಳಲ್ಲಿ | ೧೧೯೬೮ | ೮೦೮೫೩ |
| ೨೪ | **ಸಾಗುವಳಿ ಮಾಡದಿರುವ ಇತರ ಭೂಮಿ** | | | |
| | ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ | ಹೆಕ್ಟೇರುಗಳಲ್ಲಿ | ೬೧೭ | ೨೧೬೧೨ |
| | ಖಾಯಂ ಗೋಮಾಳ | ಹೆಕ್ಟೇರುಗಳಲ್ಲಿ | ೨೧೦೦೦ | ೮೮೭೪೦ |
| | ವೃಕ್ಷ ಮತ್ತು ತೋಪುಗಳು | ಹೆಕ್ಟೇರುಗಳಲ್ಲಿ | ೬೨೫ | ೧೧೩೧೭ |
| | ಒಟ್ಟು | ಹೆಕ್ಟೇರುಗಳಲ್ಲಿ | ೨೨೨೪೨ | ೧೨೧೬೯ |
| ೨೫ | **ಬೀಳು ಭೂಮಿ** | | | |
| | ಚಾಲ್ತಿ | ಹೆಕ್ಟೇರುಗಳಲ್ಲಿ | ೨೦೪೫೦ | ೮೭೩೫೦ |
| | ಇತರೆ | ಹೆಕ್ಟೇರುಗಳಲ್ಲಿ | ೪೭೩೦ | ೨೨೩೩೫ |
| | ಒಟ್ಟು | ಹೆಕ್ಟೇರುಗಳಲ್ಲಿ | ೨೫೧೮೦ | ೧೦೯೬೮೫ |

| | | | | |
|---|---|---|---|---|
| ೨೬ | ಬಿತ್ತನೆಯಾಗಿರುವ ಪ್ರದೇಶ | | | |
| | ನಿವ್ವಳ | ಹೆಕ್ಟೇರುಗಳಲ್ಲಿ | ೬೭೬೦೦ | ೩೮೪೭೭೬ |
| | ಒಂದಕ್ಕಿಂತ ಹೆಚ್ಚು ಬಾರಿ | ಹೆಕ್ಟೇರುಗಳಲ್ಲಿ | ೧೨೩೭೧ | ೮೧೧೩೪ |
| | ಒಟ್ಟು | ಹೆಕ್ಟೇರುಗಳಲ್ಲಿ | ೭೯೯೭೧ | ೪೬೫೯೧೦ |
| ೨೭ | **ಭೂಹಿಡುವಳಿಗಳು ಮತ್ತು ವಿಸ್ತೀರ್ಣ (ಕೃಷಿ ಗಣತಿ ೨೦೧೦-೧೧ ರಂತೆ)** | | | |
| | ಅತಿ ಸಣ್ಣ(೦-೧ ಹೆ) | | | |
| | ಸಂಖ್ಯೆ | ಸಂಖ್ಯೆ | ೧೯೮೫೨ | ೧೦೯೧೭೭ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೧೨೯೦.೨೮ | ೫೯೧೩೮.೩೭ |
| | ಸಣ್ಣ(೧-೨ ಹೆ) | | | |
| | ಸಂಖ್ಯೆ | ಸಂಖ್ಯೆ | ೧೪೨೫೮ | ೯೦೩೭೦ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೯೭೧೦.೭ | ೧೨೭೫೮೬.೯೨ |
| | ಅರೆ ಮಧ್ಯಮ(೨-೪ ಹೆ) | | | |
| | ಸಂಖ್ಯೆ | ಸಂಖ್ಯೆ | ೭೨೯೯ | ೬೦೦೬೩ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೯೪೧೪ | ೧೫೮೭೭೬.೫೮ |
| | ಮಧ್ಯಮ(೪-೧೦ ಹೆ) | | | |
| | ಸಂಖ್ಯೆ | ಸಂಖ್ಯೆ | ೨೪೧೨ | ೨೬೭೯೫ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೧೩೨೧೭.೦೯ | ೧೫೨೮೩೩.೮೫ |
| | ದೊಡ್ಡ(೧೦ ಹೆ.ಗಿಂತ ಹೆಚ್ಚು) | | | |
| | ಸಂಖ್ಯೆ | ಸಂಖ್ಯೆ | ೧೭೮ | ೪೧೭೨ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೩೩೯೯.೮೧ | ೬೨೪೪೧.೩ |
| | ಒಟ್ಟು | | | |
| | ಸಂಖ್ಯೆ | ಸಂಖ್ಯೆ | ೪೩೯೯೯ | ೨೯೦೫೭೭ |
| | ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೬೭೦೩೨.೦೩ | ೫೬೦೭೭೭.೦೨ |
| ೨೮ | **ಏಕದಳ ಧಾನ್ಯಗಳು (ವಿಸ್ತೀರ್ಣ)** | | | |
| | ಬತ್ತ | ಹೆಕ್ಟೇರುಗಳಲ್ಲಿ | ೫ | ೧೨೯೭ |
| | ರಾಗಿ | ಹೆಕ್ಟೇರುಗಳಲ್ಲಿ | ೭೮೦೦ | ೪೪೦೮೨ |
| | ಜೋಳ | ಹೆಕ್ಟೇರುಗಳಲ್ಲಿ | ೬೩೩ | ೧೨೬೬೭ |
| | ಮುಸುಕಿನ ಜೋಳ | ಹೆಕ್ಟೇರುಗಳಲ್ಲಿ | ೩೬೬೨೪ | ೯೨೧೯೩ |
| | ಸಜ್ಜೆ | ಹೆಕ್ಟೇರುಗಳಲ್ಲಿ | ೦ | ೧೭೯೮ |
| | ಗೋಧಿ | ಹೆಕ್ಟೇರುಗಳಲ್ಲಿ | ೦ | ೩೭೨ |
| | ಇತರೆ ತೃಣ ಧಾನ್ಯಗಳು | ಹೆಕ್ಟೇರುಗಳಲ್ಲಿ | ೧೧೨ | ೬೪೪೯ |

# ಅನುಬಂಧ

| | | | | |
|---|---|---|---|---|
| | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು | ಹೆಕ್ಟೇರುಗಳಲ್ಲಿ | ೪೫೧೭೪ | ೧೫೮೯೧೦ |
| ೨೯ | **ದ್ವಿದಳ ಧಾನ್ಯಗಳು (ವಿಸ್ತೀರ್ಣ)** | | | |
| | ಕಡಲೆ | ಹೆಕ್ಟೇರುಗಳಲ್ಲಿ | ೨೨೧೭ | ೬೯೮೫೭ |
| | ತೊಗರಿ | ಹೆಕ್ಟೇರುಗಳಲ್ಲಿ | ೭೬೮ | ೯೫೮೭ |
| | ಹುರುಳಿ | ಹೆಕ್ಟೇರುಗಳಲ್ಲಿ | ೨೫೦ | ೪೬೮೭ |
| | ಉದ್ದು | ಹೆಕ್ಟೇರುಗಳಲ್ಲಿ | ೦ | ೦ |
| | ಹೆಸರು | ಹೆಕ್ಟೇರುಗಳಲ್ಲಿ | ೪೧೭ | ೫೪೧೦ |
| | ಅವರೆ | ಹೆಕ್ಟೇರುಗಳಲ್ಲಿ | ೫೮೦ | ೧೮೯೫ |
| | ಅಲಸಂದಿ | ಹೆಕ್ಟೇರುಗಳಲ್ಲಿ | ೧೮೨ | ೭೨೯ |
| | ಒಟ್ಟು ದ್ವಿದಳ ಧಾನ್ಯಗಳು | ಹೆಕ್ಟೇರುಗಳಲ್ಲಿ | ೪೪೧೪ | ೬೨೧೬೩ |
| | ಒಟ್ಟು ಆಹಾರ ಧಾನ್ಯಗಳು | ಹೆಕ್ಟೇರುಗಳಲ್ಲಿ | ೪೯೫೮೮ | ೨೨೧೦೭೩ |
| ೩೦ | **ರಾಸಾಯನಿಕ ಗೊಬ್ಬರಗಳ ವಿತರಣೆ** | | | |
| | ಸಾರಜನಕ(ಓ) | ಟನ್ನುಗಳಲ್ಲಿ | ೬೫೧೫ | ೨೪೫೧೮ |
| | ರಂಜಕ(ಕ) | ಟನ್ನುಗಳಲ್ಲಿ | ೩೧೦೫ | ೧೫೨೬೭ |
| | ಪೊಟ್ಯಾಷ್(ಏ) | ಟನ್ನುಗಳಲ್ಲಿ | ೧೯೪೫ | ೫೨೫೫ |
| | ಒಟ್ಟು | ಟನ್ನುಗಳಲ್ಲಿ | ೧೧೫೬೫ | ೪೫೦೪೦ |
| ೩೧ | ರೇಷ್ಮೆ | | | |
| | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೫೫.೪ | ೧೫೨೮.೬ |
| | ರೇಷ್ಮೆಗೂಡು ಉತ್ಪಾದನೆ | ಟನ್ನುಗಳಲ್ಲಿ | ೮.೦೬೫ | ೮೦೪.೩೯೯ |
| | ರೇಷ್ಮೆ ಉತ್ಪಾದಿಸಿದ ರೇಷ್ಮೆಯ ಮೌಲ್ಯ | ಲಕ್ಷ ರೂ.ಗಳಲ್ಲಿ | ೨೪.೪೬ | ೨೪೪೦.೧೨ |
| ೩೨ | **ಪಶುಪಾಲನೆ (ಜಾನುವಾರು ಗಣತಿ ೨೦೧೨ ರಂತೆ)** | | | |
| ೩೩ | ದನಕರುಗಳು | | | |
| | ಸ್ಥಳೀಯ | ಸಂಖ್ಯೆ | ೩೮೩೦೩ | ೨೪೧೦೯೫ |
| | ವಿದೇಶಿ ತಳಿ | ಸಂಖ್ಯೆ | ೦ | ೦ |
| | ಮಿಶ್ರ ತಳಿ | ಸಂಖ್ಯೆ | ೫೮೮೨ | ೩೪೭೯೪ |
| | ಒಟ್ಟು | ಸಂಖ್ಯೆ | ೪೪೧೮೫ | ೨೭೫೮೮೯ |
| | ಎಮ್ಮೆಗಳು | ಸಂಖ್ಯೆ | ೩೫೬೪೯ | ೧೫೨೮೫೨ |
| ೩೪ | ಕುರಿಗಳು | | | |
| | ಸ್ಥಳೀಯ | ಸಂಖ್ಯೆ | ೫೫೬೦೦ | ೯೩೯೫೯೧ |
| | ವಿದೇಶಿ ತಳಿ | ಸಂಖ್ಯೆ | ೦ | ೦ |

| | | | | |
|---|---|---|---|---|
| | ಮಿಶ್ರ ತಳಿ | ಸಂಖ್ಯೆ | ೨೪ | ೪೪೭ |
| | ಒಟ್ಟು | ಸಂಖ್ಯೆ | ೫೫೬೨೪ | ೬೪೦೦೪೩ |
| | ಮೇಕೆಗಳು | ಸಂಖ್ಯೆ | ೧೯೨೩೦ | ೨೩೧೨೯ |
| ೩೫ | **ಹಂದಿಗಳು** | | | |
| | ಸ್ಥಳೀಯ | ಸಂಖ್ಯೆ | ೨೮ | ೩೦೯ |
| | ವಿದೇಶಿ ತಳಿ | ಸಂಖ್ಯೆ | ೦ | ೦ |
| | ಮಿಶ್ರ ತಳಿ | ಸಂಖ್ಯೆ | ೦ | ೧೫೧ |
| | ಒಟ್ಟು | ಸಂಖ್ಯೆ | ೨೮ | ೩೧೬೦ |
| | ಮೊಲಗಳು | ಸಂಖ್ಯೆ | ೧೭ | ೧೪೯೧ |
| | ನಾಯಿಗಳು | ಸಂಖ್ಯೆ | ೩೧೧೬ | ೩೭೨೫೬ |
| | ಇತರೆ | ಸಂಖ್ಯೆ | ೫೮೦ | ೫೧೩೧ |
| | ಒಟ್ಟು ಜಾನುವಾರು | ಸಂಖ್ಯೆ | ೧೫೮೪೨೯ | ೧೬೪೭೦೯೬ |
| | ಕೋಳಿಗಳು | ಸಂಖ್ಯೆ | ೮೨೩೮೬ | ೨೪೧೧೭೮೦ |
| ೩೬ | **ಮೀನುಗಾರಿಕೆ** | | | |
| | ಹಿಡಿದ ಮೀನುಗಳು | ಮೆ.ಟನ್ನು | ೨೦೦ | ೪೮೮೮ |
| ೩೭ | **ಪಶುವೈದ್ಯ ಶಾಲೆಗಳು** | | | |
| | ಆಸ್ಪತ್ರೆಗಳು | ಸಂಖ್ಯೆ | ೩ | ೧೯ |
| | ಚಿಕಿತ್ಸಾಲಯಗಳು | ಸಂಖ್ಯೆ | ೮ | ೫೫ |
| | ಪ್ರಾಥಮಿಕ ಪಶುವೈದ್ಯ ಕೇಂದ್ರಗಳು | ಸಂಖ್ಯೆ | ೭ | ೭೫ |
| | ಸಂಚಾರಿ ಚಿಕಿತ್ಸಾಲಯಗಳು | ಸಂಖ್ಯೆ | ೧ | ೬ |
| | ಕೃತಕ ಗರ್ಭಧಾರಣ ಕೇಂದ್ರಗಳು | ಸಂಖ್ಯೆ | ೦ | ೧೦ |
| | ಇತರೆ | ಸಂಖ್ಯೆ | ೦ | ೭ |
| | ಒಟ್ಟು | ಸಂಖ್ಯೆ | ೧೯ | ೧೭೨ |
| ೩೮ | **ಕೈಗಾರಿಕೆಗಳು** | | | |
| | ಬಟ್ಟೆ ಕಾರ್ಖಾನೆಗಳು | ಸಂಖ್ಯೆ | ೦ | ೧ |
| | ಬಟ್ಟೆ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೦ | ೧೩ |
| | ರಾಸಾಯನಿಕ ಕಾರ್ಖಾನೆಗಳು | ಸಂಖ್ಯೆ | ೦ | ೦ |

| | | | | |
|---|---|---|---|---|
| | ರಾಸಾಯನಿಕ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೦ | ೦ |
| | ಇಂಜಿನಿಯರಿಂಗ್ ಕಾರ್ಖಾನೆಗಳು | ಸಂಖ್ಯೆ | ೮ | ೧೦೮ |
| | ಇಂಜಿನಿಯರಿಂಗ್ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೭೧೦ | ೭೪೮೧ |
| | ಇತರೆ ಕಾರ್ಖಾನೆಗಳು | ಸಂಖ್ಯೆ | ೮ | ೧೮೦ |
| | ಇತರೆ ಕಾರ್ಖಾನೆಗಳ ಉದ್ಯೋಗಿಗಳು | ಸಂಖ್ಯೆ | ೭೧೦ | ೭೪೮೧ |
| ೩೯ | **ಸಣ್ಣ ಪ್ರಮಾಣದ ಕೈಗಾರಿಕೆಗಳು** | | | |
| | ಆಟೋಮೊಬೈಲ್ | | | |
| | ಸಂಖ್ಯೆ | ಸಂಖ್ಯೆ | ೧ | ೨೧ |
| | ಕೆಲಸಗಾರರು | ಸಂಖ್ಯೆ | ೧೦ | ೧೪೩ |
| | ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ | | | |
| | ಸಂಖ್ಯೆ | ಸಂಖ್ಯೆ | ೧ | ೨೫ |
| | ಕೆಲಸಗಾರರು | ಸಂಖ್ಯೆ | ೫ | ೧೭೫ |
| | ಕೆಮಿಕಲ್ಸ್ | | | |
| | ಸಂಖ್ಯೆ | ಸಂಖ್ಯೆ | ೪ | ೧೭ |
| | ಕೆಲಸಗಾರರು | ಸಂಖ್ಯೆ | ೧೬ | ೧೧೧ |
| | **ಆಹಾರ ಮತ್ತು ಮಾದಕ ವಸ್ತುಗಳು** | | | |
| | ಸಂಖ್ಯೆ | ಸಂಖ್ಯೆ | ೩ | ೫೦ |
| | ಕೆಲಸಗಾರರು | ಸಂಖ್ಯೆ | ೨೦ | ೩೫೬ |
| | ಚರ್ಮ | | | |
| | ಸಂಖ್ಯೆ | ಸಂಖ್ಯೆ | ೬ | ೩೫ |
| | ಕೆಲಸಗಾರರು | ಸಂಖ್ಯೆ | ೪೬ | ೨೧೧ |
| | ಕಾಗದ ಮತ್ತು ಮುದ್ರಣ | | | |
| | ಸಂಖ್ಯೆ | ಸಂಖ್ಯೆ | ೦ | ೧೦ |
| | ಕೆಲಸಗಾರರು | ಸಂಖ್ಯೆ | ೦ | ೬೬ |
| | ರಬ್ಬರ್ ಮತ್ತು ಪ್ಲಾಸ್ಟಿಕ್ | | | |
| | ಸಂಖ್ಯೆ | ಸಂಖ್ಯೆ | ೨ | ೧೭ |
| | ಕೆಲಸಗಾರರು | ಸಂಖ್ಯೆ | ೧೫ | ೧೦೮ |

| | | | | |
|---|---|---|---|---|
| | ಟೆಕ್ಸ್‌ಟೈಲ್ಸ್ | | | |
| | ಸಂಖ್ಯೆ | ಸಂಖ್ಯೆ | ೧೩ | ೧೦೭ |
| | ಕೆಲಸಗಾರರು | ಸಂಖ್ಯೆ | ೭೦ | ೬೩೩ |
| | ಮರ | | | |
| | ಸಂಖ್ಯೆ | ಸಂಖ್ಯೆ | ೮ | ೮೧ |
| | ಕೆಲಸಗಾರರು | ಸಂಖ್ಯೆ | ೫೫ | ೫೪೧ |
| | ಇತರೆ | | | |
| | ಸಂಖ್ಯೆ | ಸಂಖ್ಯೆ | ೫ | ೧೯ |
| | ಕೆಲಸಗಾರರು | ಸಂಖ್ಯೆ | ೨೫ | ೯೩ |
| ೪೦ | **ಪತ್ತಿನ ಸಹಕಾರ ಸಂಘಗಳು** | | | |
| | ವ್ಯವಸಾಯ | | | |
| | ಸಂಖ್ಯೆ | ಸಂಖ್ಯೆ | ೨೬ | ೧೫೭ |
| | ಸದಸ್ಯರು | ಸಂಖ್ಯೆ | ೪೪೧೦೦ | ೨೯೨೦೦೦ |
| | ವ್ಯವಸಾಯೇತರ | | | |
| | ಸಂಖ್ಯೆ | ಸಂಖ್ಯೆ | ೫ | ೭೧ |
| | ಸದಸ್ಯರು | ಸಂಖ್ಯೆ | ೩೧೨೦ | ೪೩೬೭೫ |
| | ಒಟ್ಟು | | | |
| | ಸಂಖ್ಯೆ | ಸಂಖ್ಯೆ | ೩೧ | ೨೨೮ |
| | ಸದಸ್ಯರು | ಸಂಖ್ಯೆ | ೪೭೨೨೦ | ೩೩೫೬೭೫ |
| ೪೧ | **ಪತ್ತೇತರ ಸಹಕಾರ ಸಂಘಗಳು** | | | |
| | ಮಾರುಕಟ್ಟೆ | | | |
| | ಸಂಖ್ಯೆ | ಸಂಖ್ಯೆ | ೧ | ೬ |
| | ಸದಸ್ಯರು | ಸಂಖ್ಯೆ | ೪೫೭ | ೭೮೯೩ |
| | ಗೃಹ ನಿರ್ಮಾಣ | | | |
| | ಸಂಖ್ಯೆ | ಸಂಖ್ಯೆ | ೨ | ೧೯ |
| | ಸದಸ್ಯರು | ಸಂಖ್ಯೆ | ೭೦೦ | ೧೦೭೮೯ |
| | ಹಾಲು ಉತ್ಪಾದನೆ | | | |
| | ಸಂಖ್ಯೆ | ಸಂಖ್ಯೆ | ೪೩ | ೩೩೦ |
| | ಸದಸ್ಯರು | ಸಂಖ್ಯೆ | ೮೪೦೦ | ೪೦೧೨೦ |
| | ಇತರೆ | | | |
| | ಸಂಖ್ಯೆ | ಸಂಖ್ಯೆ | ೨೨ | ೩೪೭ |

# ಅನುಬಂಧ

| | | | | |
|---|---|---|---|---|
| | ಸದಸ್ಯರು | ಸಂಖ್ಯೆ | ೧೧೭೮೧ | ೧೬೩೯೩೪ |
| | ಒಟ್ಟು | | | |
| | ಸಂಖ್ಯೆ | ಸಂಖ್ಯೆ | ೬೮ | ೭೦೨ |
| | ಸದಸ್ಯರು | ಸಂಖ್ಯೆ | ೨೧೩೩೮ | ೨೨೨೩೩೬ |
| ೪೨ | **ರಸ್ತೆ ಉದ್ದಳತೆ** | | | |
| | ರಾಷ್ಟ್ರೀಯ ಹೆದ್ದಾರಿ | ಕಿ.ಮೀ.ಗಳಲ್ಲಿ | ೨೭ | ೨೮೬.೭ |
| | ರಾಜ್ಯ ಹೆದ್ದಾರಿ | ಕಿ.ಮೀ.ಗಳಲ್ಲಿ | ೭೬.೦೬ | ೪೩೯.೬೬ |
| | ಮುಖ್ಯ ಜಿಲ್ಲಾ ರಸ್ತೆಗಳು | ಕಿ.ಮೀ.ಗಳಲ್ಲಿ | ೩೬೨ | ೨೦೯೫.೯೨ |
| | ಪಂಚಾಯತ್ ರಸ್ತೆಗಳು | ಕಿ.ಮೀ.ಗಳಲ್ಲಿ | ೪೪೦.೭೯ | ೬೬೭೩.೯೪ |
| | ಭಾರಿ ಸೇತುವೆಗಳು | ಸಂಖ್ಯೆ | ೦ | ೧೬ |
| | ಅಂಚೆ ಕಛೇರಿಗಳು | ಸಂಖ್ಯೆ | ೪೯ | ೩೧೭ |
| | ದೂರವಾಣಿ ವಿನಿಮಯ ಕೇಂದ್ರಗಳು | ಸಂಖ್ಯೆ | ೧೨ | ೮೦ |
| | ದೂರವಾಣಿಗಳು | ಸಂಖ್ಯೆ | ೮೨೧ | ೧೧೦೯೭ |
| | ಅಂತರ್ ಜಾಲ ಸಂಪರ್ಕ | ಸಂಖ್ಯೆ | ೧೧೧ | ೧೧೫೧ |
| ೪೩ | **ಶಿಕ್ಷಣ** | | | |
| | ಕಿರಿಯ ಪ್ರಾಥಮಿಕ ಶಾಲೆಗಳು | | | |
| | ಶಾಲೆಗಳು | ಸಂಖ್ಯೆ | ೧೨೫ | ೯೦೫ |
| | ಹುಡುಗರು | ಸಂಖ್ಯೆ | ೭೩೭೦ | ೬೭೫೭೪ |
| | ಹುಡುಗಿಯರು | ಸಂಖ್ಯೆ | ೭೧೦೬ | ೬೩೮೯೮ |
| | ಹಿರಿಯ ಪ್ರಾಥಮಿಕ ಶಾಲೆಗಳು | | | |
| | ಶಾಲೆಗಳು | ಸಂಖ್ಯೆ | ೪೧೫೭ | ೩೮೯೪೪ |
| | ಹುಡುಗರು | ಸಂಖ್ಯೆ | ೪೨೩೪ | ೩೬೮೧೮ |
| | ಹುಡುಗಿಯರು | ಸಂಖ್ಯೆ | ೮೩೯೧ | ೭೫೭೬೨ |
| | ಪ್ರೌಢಶಾಲೆಗಳು | | | |
| | ಶಾಲೆಗಳು | ಸಂಖ್ಯೆ | ೪೯ | ೪೨೯ |
| | ಹುಡುಗರು | ಸಂಖ್ಯೆ | ೨೮೦೩ | ೨೫೩೫೬ |
| | ಹುಡುಗಿಯರು | ಸಂಖ್ಯೆ | ೨೬೮೭ | ೨೩೬೧೩ |
| | ಪದವಿ ಪೂರ್ವ ಕಾಲೇಜುಗಳು | | | |
| | ಕಾಲೇಜುಗಳು | ಸಂಖ್ಯೆ | ೧೬ | ೧೩೪ |

| | | | | |
|---|---|---|---|---|
| | ಹುಡುಗರು | ಸಂಖ್ಯೆ | ೧೩೭೯ | ೧೨೯೯೮ |
| | ಹುಡುಗಿಯರು | ಸಂಖ್ಯೆ | ೧೭೦೩ | ೧೪೭೧೫ |
| | ಪದವಿ ಕಾಲೇಜುಗಳು | | | |
| | ಕಾಲೇಜುಗಳು | ಸಂಖ್ಯೆ | ೨ | ೧೪ |
| | ಹುಡುಗರು | ಸಂಖ್ಯೆ | ೨೩೪ | ೬೨೦೪ |
| | ಹುಡುಗಿಯರು | ಸಂಖ್ಯೆ | ೩೨೭ | ೫೯೩೧ |
| ೪೪ | **ಮೆಡಿಕಲ್ ಕಾಲೇಜುಗಳು-ಅಲೋಪತಿ, ಹೋಮಿಯೋಪತಿ, ನ್ಯಾಚುರೋಪತಿ** | | | |
| | ಕಾಲೇಜುಗಳು | ಸಂಖ್ಯೆ | ೦ | ೦ |
| | ಹುಡುಗರು | ಸಂಖ್ಯೆ | ೦ | ೦ |
| | ಹುಡುಗಿಯರು | ಸಂಖ್ಯೆ | ೦ | ೦ |
| | ಪಾಲಿಟೆಕ್ನಿಕ್ | | | |
| | ಕಾಲೇಜುಗಳು | ಸಂಖ್ಯೆ | ೦ | ೩ |
| | ಹುಡುಗರು | ಸಂಖ್ಯೆ | ೦ | ೪೬೭ |
| | ಹುಡುಗಿಯರು | ಸಂಖ್ಯೆ | ೦ | ೧೯೦ |
| | ಇಂಜಿನಿಯರಿಂಗ್ | | | |
| | ಕಾಲೇಜುಗಳು | ಸಂಖ್ಯೆ | ೦ | ೦ |
| | ಹುಡುಗರು | ಸಂಖ್ಯೆ | ೦ | ೦ |
| | ಹುಡುಗಿಯರು | ಸಂಖ್ಯೆ | ೦ | ೦ |
| | ದಂತವೈದ್ಯ ಕಾಲೇಜುಗಳು | | | |
| | ಕಾಲೇಜುಗಳು | ಸಂಖ್ಯೆ | ೦ | ೧ |
| | ಹುಡುಗರು | ಸಂಖ್ಯೆ | ೦ | ೬೦ |
| | ಹುಡುಗಿಯರು | ಸಂಖ್ಯೆ | ೦ | ೧೮೯ |
| ೪೫ | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ** | | | |
| | ಅಲೋಪತಿ ಕೇಂದ್ರದ ಆಸ್ಪತ್ರೆಗಳು | | | |
| | ಸಂಖ್ಯೆ | ಸಂಖ್ಯೆ | ೧೪ | ೯೮ |
| | ಹಾಸಿಗೆಗಳು | ಸಂಖ್ಯೆ | ೧೭೮ | ೧೭೫೪ |
| | ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು | | | |
| | ಸಂಖ್ಯೆ | ಸಂಖ್ಯೆ | ೦ | ೫ |
| | ಹಾಸಿಗೆಗಳು | ಸಂಖ್ಯೆ | ೦ | ೪೨ |
| | ಖಾಸಗಿ ಆಸ್ಪತ್ರೆಗಳು(ನರ್ಸಿಂಗ್ ಹೋಂಗಳು ಸೇರಿ) | | | |

# ಅನುಬಂಧ

| | | | | |
|---|---|---|---|---|
| | ಸಂಖ್ಯೆ | ಸಂಖ್ಯೆ | ೧ | ೩೬ |
| | ಪ್ರಾಥಮಿಕ ಆರೋಗ್ಯ ಕೇಂದ್ರಗಳು | | | |
| | ಸಂಖ್ಯೆ | ಸಂಖ್ಯೆ | ೧೩ | ೮೧ |
| | ಹಾಸಿಗೆಗಳು | ಸಂಖ್ಯೆ | ೭೮ | ೪೭೪ |
| | ಸಮುದಾಯ ಆರೋಗ್ಯ ಕೇಂದ್ರಗಳು | | | |
| | ಸಂಖ್ಯೆ | ಸಂಖ್ಯೆ | ೦ | ೧೧ |
| | ಹಾಸಿಗೆಗಳು | ಸಂಖ್ಯೆ | ೦ | ೩೩೦ |
| | ಸಂತಾನಹರಣ ಶಸ್ತ್ರಚಿಕಿತ್ಸೆ | | | |
| | ವ್ಯಾಸೆಕ್ಟಮಿ | ಸಂಖ್ಯೆ | ೧ | ೮೮ |
| | ಟ್ಯುಬೆಕ್ಟಮಿ | ಸಂಖ್ಯೆ | ೭೩೨ | ೧೧೮೮೪ |
| | ಔಷಧಿ ಅಂಗಡಿಗಳು | ಸಂಖ್ಯೆ | ೩೭ | ೪೭೪ |
| | ರಕ್ತನಿಧಿಗಳು | ಸಂಖ್ಯೆ | ೦ | ೩ |
| | ಲಸಿಕೆ | | | |
| | ಡಿಪಿಟಿ | ಸಂಖ್ಯೆ | ೩೪೫೩ | ೩೦೦೫೭ |
| | ಪೋಲಿಯೋ | ಸಂಖ್ಯೆ | ೫೬೧೬ | ೩೮೮೫೨ |
| | ಬಿಸಿಜಿ | ಸಂಖ್ಯೆ | ೪೧೭೯ | ೪೮೨೬೪ |
| | ದಡಾರ | ಸಂಖ್ಯೆ | ೫೫೮೮ | ೩೯೩೫೫ |
| | ಟಿ.ಟಿ | ಸಂಖ್ಯೆ | ೫೭೯೬ | ೩೯೨೧೯ |
| | ಹೆಪಟೈಟಿಸ್ 'ಬಿ' | ಸಂಖ್ಯೆ | ೪೧೩೬ | ೩೧೩೧೮ |
| ೪೬ | **ಸ್ತ್ರೀಶಕ್ತಿ ಸಂಘಗಳ ವಿವರಗಳು** | | | |
| | ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು | ಸಂಖ್ಯೆ | ೭೩೦ | ೫೦೭೨ |
| | ಪರಿಶಿಷ್ಟ ಜಾತಿ ಮಹಿಳೆಯರು | ಸಂಖ್ಯೆ | ೨೫೮೨ | ೧೨೪೭೦ |
| | ಪರಿಶಿಷ್ಟ ಪಂಗಡದ ಮಹಿಳೆಯರು | ಸಂಖ್ಯೆ | ೧೫೬೮ | ೧೦೩೮೭ |
| | ಇತರೆ ಮಹಿಳೆಯರು | ಸಂಖ್ಯೆ | ೬೫೬೨ | ೩೪೬೪೫ |
| | ಒಟ್ಟು ಮಹಿಳಾ ಸದಸ್ಯರು | ಸಂಖ್ಯೆ | ೧೦೭೧೨ | ೫೭೫೦೨ |
| ೪೭ | **ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳು** | | | |
| | ಸರ್ಕಾರಿ | | | |
| | ಮೆಟ್ರಿಕ್‌ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೬ | ೫೨ |

| | | | | |
|---|---|---|---|---|
| | ಒಟ್ಟು ವಿದ್ಯಾರ್ಥಿಗಳು | ಸಂಖ್ಯೆ | ೫೦೫ | ೩೮೯೧ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೨ | ೩೨ |
| | ಒಟ್ಟು ವಿದ್ಯಾರ್ಥಿಗಳು | ಸಂಖ್ಯೆ | ೩೧೮ | ೪೬೧೯ |
| | ಅನುದಾನಿತ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೧೪ |
| | ಒಟ್ಟು ವಿದ್ಯಾರ್ಥಿಗಳು | ಸಂಖ್ಯೆ | ೦ | ೮೪೯ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೫ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೭೦೦ |
| ೪೮ | **ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳು** | | | |
| | ಸರ್ಕಾರಿ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೧ | ೭ |
| | ವಿದ್ಯಾರ್ಥಿಗಳು | ಸಂಖ್ಯೆ | ೫೦ | ೫೨೫ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೧ | ೪ |
| | ವಿದ್ಯಾರ್ಥಿಗಳು | ಸಂಖ್ಯೆ | ೧೦೦ | ೪೧೩ |
| | ಅನುದಾನಿತ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೧೩ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೭೯೨ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೦ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೦ |
| ೪೯ | **ಹಿಂದುಳಿದ ವರ್ಗದವರ ವಿದ್ಯಾರ್ಥಿ ನಿಲಯಗಳು** | | | |
| | ಸರ್ಕಾರಿ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೭ | ೫೧ |
| | ವಿದ್ಯಾರ್ಥಿಗಳು | ಸಂಖ್ಯೆ | ೩೩೫ | ೨೫೫೦ |

# ಅನುಬಂಧ

| | | | | |
|---|---|---|---|---|
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೪ | ೪೩ |
| | ವಿದ್ಯಾರ್ಥಿಗಳು | ಸಂಖ್ಯೆ | ೪೪೦ | ೪೩೬೫ |
| | ಅನುದಾನಿತ | | | |
| | ಮೆಟ್ರಿಕ್ ಪೂರ್ವ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೬ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೩೧೦ |
| | ಮೆಟ್ರಿಕ್ ನಂತರ | | | |
| | ವಿದ್ಯಾರ್ಥಿ ನಿಲಯಗಳು | ಸಂಖ್ಯೆ | ೦ | ೩ |
| | ವಿದ್ಯಾರ್ಥಿಗಳು | ಸಂಖ್ಯೆ | ೦ | ೧೭೫ |
| ೫೦ | **ಜನನ ಮತ್ತು ಮರಣ ನೋಂದಣಿ** | | | |
| | **ನೋಂದಣಿಯಾದ ಘಟನೆಗಳು(ವರ್ಷ ೨೦೧೩)** | | | |
| | ನೋಂದಣಿ ಘಟಕಗಳು | ಸಂಖ್ಯೆ | ೨೧೮ | ೧೧೬೬ |
| | ಜನನ | | | |
| | ಗಂಡು | ಸಂಖ್ಯೆ | ೫೭೫ | ೧೩೧೦೩ |
| | ಹೆಣ್ಣು | ಸಂಖ್ಯೆ | ೫೨೯ | ೧೧೮೯೯ |
| | ಒಟ್ಟು | ಸಂಖ್ಯೆ | ೧೧೦೪ | ೨೫೦೦೨ |
| | ಮರಣ | | | |
| | ಗಂಡು | ಸಂಖ್ಯೆ | ೭೯೪ | ೬೧೩೯ |
| | ಹೆಣ್ಣು | ಸಂಖ್ಯೆ | ೪೬೪ | ೪೦೪೫ |
| | ಒಟ್ಟು | ಸಂಖ್ಯೆ | ೧೨೫೮ | ೧೦೧೮೪ |
| | ವಿಳಂಬ ನೋಂದಣಿಯಾದ ಘಟನೆಗಳು(ವರ್ಷ ೨೦೧೪-೧೫) | | | |
| | ಜನನ | | | |
| | ಗಂಡು | ಸಂಖ್ಯೆ | ೬೧ | ೯೦೨ |
| | ಹೆಣ್ಣು | ಸಂಖ್ಯೆ | ೫೩ | ೫೬೮ |
| | ಒಟ್ಟು | ಸಂಖ್ಯೆ | ೧೧೪ | ೧೪೭೦ |
| | ಮರಣ | | | |
| | ಗಂಡು | ಸಂಖ್ಯೆ | ೨೯ | ೫೯೫ |
| | ಹೆಣ್ಣು | ಸಂಖ್ಯೆ | ೨೨ | ೩೬೯ |
| | ಒಟ್ಟು | ಸಂಖ್ಯೆ | ೫೧ | ೯೬೪ |

## ೨೦೧೧ ರಜನಗಣತಿಯಂತೆ ಹೊಳಲ್ಕೆರೆ ತಾಲೂಕಿನ ಗ್ರಾಮಗಳ ಪಟ್ಟಿ

| SI.No | Name of Village | ಗ್ರಾಮಗಳ ಹೆಸರು |
|---|---|---|
| 1 | Abradasikatte | ಅಬ್ರದಾಸಿಕಟ್ಟೆ |
| 2 | Adanur | ಆಡನೂರು |
| 3 | Agrahara | ಅಗ್ರಹಾರ |
| 4 | Agrahara | ಅಗ್ರಾಹಾರ |
| 5 | Ajjikyatanahalli | ಅಜ್ಜಿಕ್ಯಾತನಹಳ್ಳಿ |
| 6 | Amalapura | ಅಮಲಾಪುರ |
| 7 | Amanahal | ಆಮನಾಳ್ |
| 8 | Amblihalli | ಅಂಬ್ಲಿಹಳ್ಳಿ |
| 9 | Amruthapura | ಅಮೃತಾಪುರ |
| 10 | Andanur | ಅಂದನೂರು |
| 11 | Anthapura | ಅಂತಾಪುರ |
| 12 | Apparasanahalli | ಅಪ್ಪರಸನಹಳ್ಳಿ |
| 13 | Arabagatta | ಅರಭಗಟ್ಟ |
| 14 | Aralikere | ಅರಳೀಕೆರೆ |
| 15 | Arasanaghatta | ಅರಸನಗಟ್ಟ |
| 16 | Arehalli | ಅರೇಹಳ್ಳಿ |
| 17 | ArehalliKaval | ಅರೇಹಳ್ಳಿ ಕಾವಲ್ |
| 18 | B.Durga | ಬಿ.ದುರ್ಗ |
| 19 | Banagere | ಬಾಣಗೆರೆ |
| 20 | BandeBommenahalli | ಬಂಡೇಬೋಮ್ಮೇನಹಳ್ಳಿ |
| 21 | Banjagondanahalli | ಬಂಜಿಗೊಂಡನಹಳ್ಳಿ |

| | | |
|---|---|---|
| 22 | Baragenahalli | ಬರಗೇರನಹಳ್ಳಿ |
| 23 | Basapura | ಬಸಾಪುರ |
| 24 | Basavapura | ಬಸವಾಪುರ |
| 25 | Bidarakere | ಬಿದರಕೆರೆ |
| 26 | Bommanakatte | ಬೊಮ್ಮನಕಟ್ಟೆ |
| 27 | Bommenahalli | ಬೊಮ್ಮನಹಳ್ಳಿ |
| 28 | Borenahalli | ಬೋರೇನಹಳ್ಳಿ |
| 29 | Brahmapura | ಬ್ರಹ್ಮಪುರ |
| 30 | Budipura | ಬೂದಿಪುರ |
| 31 | Channapatna | ಚನ್ನಪಟ್ಟಣ |
| 32 | Channasamudra | ಚನ್ನಸಮುದ್ರ |
| 33 | Chatnahalli | ಚಟ್ನಹಳ್ಳಿ |
| 34 | Cheeranahalli | ಚೀರನಹಳ್ಳಿ |
| 35 | ChikkajajurKaval | ಚಿಕ್ಕಜಾಜೂರುಕಾವಲ್ |
| 36 | Chikkanakatti | ಚಿಕ್ಕನಕಟ್ಟೆ |
| 37 | Chikkandavadi | ಚಿಕ್ಕಂದವಾಡಿ |
| 38 | Chikkayemmiganur | ಚಿಕ್ಕಎಮ್ಮಿಗನೂರು |
| 39 | ChikkayemmiganurKaval | ಚಿಕ್ಕಎಮ್ಮಿಗನೂರುಕಾವಲ್ |
| 40 | Chitrahalli | ಚಿತ್ರಹಳ್ಳಿ |
| 41 | Chowdagondanahalli | ಚೌಡಗೊಂಡ'ನಹಳ್ಳಿ |
| 42 | Chowdenahalli | ಚೌಡೇನಹಳ್ಳಿ |
| 43 | Dandigenahalli | ದಂಡಿಗೇನಹಳ್ಳಿ |
| 44 | Dasarahalli | ದಾಸರಹಳ್ಳಿ |

| | | |
|---|---|---|
| 45 | DasarahalliInam | ದಾಸರಹಳ್ಳಿ ಇನಾಮ್ |
| 46 | Dasikatte | ದಾಸಿಕಟ್ಟೆ |
| 47 | Davanahalli | ಡವನಹಳ್ಳಿ |
| 48 | Devarahosahalli | ದೇವರಹೊಸಹಳ್ಳಿ |
| 49 | Dodderikatti | ದೊಡ್ಡೇರಿಕಟ್ಟೆ |
| 50 | Dogganal | ದೊಗ್ಗನಾಳು |
| 51 | Dummi | ದುಮ್ಮಿ |
| 52 | Echaghatta | ಈಚಘಟ್ಟ |
| 53 | Edehalli | ಇಡೇಹಳ್ಳಿ |
| 54 | G.Vaderahalli | ಜಿ.ವಡೇರಹಳ್ಳಿ |
| 55 | Gandumalenahalli | ಗುಂಡುಮಳೇನಹಳ್ಳಿ |
| 56 | Gangasamudra | ಗಂಗಸಮುದ್ರ |
| 57 | Ganjigatte | ಗಂಜೀಗಟ್ಟೆ |
| 58 | Garaga | ಗರಗ |
| 59 | Garaga Forest | ಗರಗಫಾರೆಸ್ಟ್ |
| 60 | Ghattihosahalli | ಘಟ್ಟಿಹೊಸಹಳ್ಳಿ |
| 61 | Giddanahalli | ಗಿಡ್ಡಣ್ಣನಹಳ್ಳಿ |
| 62 | Gilkenahalli | ಗಿಲಕೇನಹಳ್ಳಿ |
| 63 | Gollarahalli | ಗೊಲ್ಲರಹಳ್ಳಿ |
| 64 | Gollarahalli | ಗೊಲ್ಲರಹಳ್ಳಿ |
| 65 | Gondihalli | ಗೊಂದಿಹಳ್ಳಿ |
| 66 | Goppenahalli | ಗೊಪ್ಪೇನಹಳ್ಳಿ |
| 67 | Gowdihalli | ಗೌಡಿಹಳ್ಳಿ |

| | | |
|---|---|---|
| 68 | Gowripura | ಗೌರೀಪುರ |
| 69 | Gulihosahalli | ಗೂಳಹೊಸಹಳ್ಳಿ |
| 70 | Gundasamudra | ಗುಂಡಸಮುದ್ರ |
| 71 | Gunderi | ಗುಂಡೇರಿ |
| 72 | GunderiKaval | ಗುಂಡೇರಿ ಕಾವಲು |
| 73 | Gundikere | ಗುಂಡಿಕೆರೆ |
| 74 | Gundimadu | ಗುಂಡೀಮಡು |
| 75 | Gunjiganur | ಗುಂಜಿಗನೂರು |
| 76 | Gyarehalli | ಗ್ಯಾರೇಹಳ್ಳಿ |
| 77 | Halehalli | ಹಳೇಹಳ್ಳಿ |
| 78 | Halenahalli | ಹಾಲೇನಹಳ್ಳಿ |
| 79 | Hanumali | ಹನುಮಲಿ |
| 80 | HanumanahalliKaval | ಹನುಮನಹಳ್ಳಿ ಕಾವಲು |
| 81 | Hanumanakatte | ಹನುಮನಕಟ್ಟೆ |
| 82 | Harenahalli | ಹರೇನಹಳ್ಳಿ |
| 83 | HaroguttiKaval | ಹಾರೋಗುತ್ತಿಕಾವಲು |
| 84 | Hirekandavadi | ಹಿರೇಕಂದವಾಡಿ |
| 85 | Hireyemmiganur | ಹಿರೇಎಮ್ಮಿಗನೂರು |
| 86 | Hiriyur | ಹಿರಿಯೂರು |
| 87 | Holalkere (Rural) | ಹೊಳಲ್ಕೆರೆ |
| 88 | Honnakaluve | ಹೊನ್ನಕಾಲ್ವೆ |
| 89 | Horakeredevarapura | ಹೊರಕೇರಿದೇವರಪುರ |
| 90 | Hosahalli | ಹೊಸಹಳ್ಳಿ |

| | | |
|---|---|---|
| 91 | Hosuru | ಹೊಸೂರು |
| 92 | Hulemalali | ಹುಲೇಮಳಲಿ |
| 93 | Hulikere | ಹುಲಿಕೆರೆ |
| 94 | Hunasepanche | ಹುಣಸೆಪಂಚೆ |
| 95 | Ingaladahalli | ಇಂಗಳದಹಳ್ಳಿ |
| 96 | Iyyanahalli | ಐಯ್ಯನಹಳ್ಳಿ |
| 97 | IyyanahalliKaval | ಐಯ್ಯನಹಳ್ಳಿ ಕಾವಲು |
| 98 | Jakkanahalli | ಜಕ್ಕನಹಳ್ಳಿ |
| 99 | JogeraHanumanahalli | ಜೋಗೇರಹನುಮನಹಳ್ಳಿ |
| 100 | Kadur | ಕಡೂರು |
| 101 | KadurKaval | ಕಡೂರು ಕಾವಲು |
| 102 | Kagalagere | ಕಾಗಳಗೆರೆ |
| 103 | Kalagatta | ಕಾಳಗಟ್ಟ |
| 104 | Kalkere | ಕಾಲ್ಕೆರೆ |
| 105 | Kallavvanagathihalli | ಕಲ್ಲವ್ವನಾಗ್ತಿಹಳ್ಳಿ |
| 106 | Kamanahalli | ಕಾಮನಹಳ್ಳಿ |
| 107 | Kamasamudra | ಕಾಮಸಮುದ್ರ |
| 108 | Kanivehalli | ಕಣಿವೆಹಳ್ಳಿ |
| 109 | Kanivehalli | ಕಣಿವೆಹಳ್ಳಿ |
| 110 | Kanivejogihalli | ಕಣಿವೆ ಜೋಗಿಹಳ್ಳಿ |
| 111 | Kannenahalli | ಕನ್ನೇನಹಳ್ಳಿ |
| 112 | Kantamaranahalli | ಕಂಠಮಾರನಹಳ್ಳಿ |
| 113 | Kasavanahalli | ಕಸವನಹಳ್ಳಿ |

| | | |
|---|---|---|
| 114 | Kashipura | ಕಾಶೀಪುರ |
| 115 | Kenchapura | ಕೆಂಚಾಪುರ |
| 116 | Kengunte | ಕೆಂಗುಂಟೆ |
| 117 | Kereyagalahalli | ಕೆರೆಯಾಗಳಹಳ್ಳಿ |
| 118 | Keshavapura | ಕೇಶವಾಪುರ |
| 119 | Kodagavalli | ಕೊಡಗವ್ವ್ಳ್ಳಿ |
| 120 | Kolalu | ಕೊಳಾಳು |
| 121 | Kondapura | ಕೊಂಡಾಪುರ |
| 122 | Kotehal | ಕೋಟೆಹಾಳ್ |
| 123 | Kudineerakatti | ಕುಡಿನೀರಕಟ್ಟೆ |
| 124 | Kumaranahalli | ಕೊಮಾರನಹಳ್ಳಿ |
| 125 | Kumminagatta | ಕುಮ್ಮಿನಘಟ್ಟ |
| 126 | Kunugali | ಕುಣಗಲ |
| 127 | Kutvihalli | ಕೂಟವೀಹಳ್ಳಿ |
| 128 | Lingadahalli | ಲಿಂಗದಹಳ್ಳಿ |
| 129 | Lingadevarahalli | ಲಿಂಗದೇವರಹಳ್ಳಿ |
| 130 | Lokadolalu | ಲೋಕದೊಳಲು |
| 131 | Madderu | ಮದ್ದೇರು |
| 132 | Mahadevapura | ಮಹದೇವಪುರ |
| 133 | Makunte | ಮಾಕುಂಟೆ |
| 134 | Malasingenahalli | ಮಲಸಿಂಗನಹಳ್ಳಿ |
| 135 | Malenahalli | ಮಾಳೇನಹಳ್ಳಿ |
| 136 | MalenahalliKaval | ಮಾಳೇನಹಳ್ಳಿ ಕಾವಲು |

| | | |
|---|---|---|
| 137 | Malkapura | ಮಲ್ಕಾಪುರ |
| 138 | Malladihalli | ಮಲ್ಲಾಡಿಹಳ್ಳಿ |
| 139 | Mallenahalli | ಮಲ್ಲೇನಹಳ್ಳಿ |
| 140 | Mallenahalli | ಮಲ್ಲೇನಹಳ್ಳಿ |
| 141 | Marapura | ಮಾರಾಪುರ |
| 142 | Mathigatta | ಮತಿಘಟ್ಟ |
| 143 | Muddapura | ಮುದ್ದಾಪುರ |
| 144 | Muligeranahalli | ಮಾಳಗೇರನಹಳ್ಳಿ |
| 145 | Muthugaduru | ಮುತ್ತುಗದೂರು |
| 146 | N.Mallapura | ಎನ್. ಮಲ್ಲಾಪುರ |
| 147 | Nagaraghatta | ನಗರಘಟ್ಟ |
| 148 | Nandanahosur | ನಂದನಹೊಸೂರು |
| 149 | Nandihalli | ನಂದಿಹಳ್ಳಿ |
| 150 | Nandihalli | ನಂದಿಹಳ್ಳಿ |
| 151 | Narayanagondanahalli | ನಾರಾಯಣಗೊಂಡನಹಳ್ಳಿ |
| 152 | Nellikatte | ನೆಲ್ಲಿಕಟ್ಟೆ |
| 153 | Neralakatte | ನೇರಲಕಟ್ಟೆ |
| 154 | Padigatte | ಪಾಡಿಗಟ್ಟಿ |
| 155 | Pampapura | ಪಂಪಾಪುರ |
| 156 | Papenahalli | ಪಾಪೇನಹಳ್ಳಿ |
| 157 | Punajur | ಪುಣಜೂರು |
| 158 | R.Mallapura | ಆರ್. ಮಲ್ಲಾಪುರ |
| 159 | R.Nulenur | ಆರ್. ನುಲೇನೂರು |

| | | |
|---|---|---|
| 160 | Ramagatta | ರಾಮಘಟ್ಟ |
| 161 | Ramagiri | ರಾಮಗಿರಿ |
| 162 | RamagiriKaval | ರಾಮಗಿರಿಕಾವಲ್ |
| 163 | Ramenahalli | ರಾಮೇನಹಳ್ಳಿ |
| 164 | RangaiahnadurgaKaval | ರಂಗಯ್ಯನದುರ್ಗದಕಾವಲು |
| 165 | Rangapura | ರಂಗಾಪುರ |
| 166 | Rangasamudra | ರಂಗಸಮುದ್ರ |
| 167 | Rangavvanahalli | ರಂಗವ್ವನಹಳ್ಳಿ |
| 168 | Sadarahalli | ಸಾದರಹಳ್ಳಿ |
| 169 | Sangenahalli | ಸಂಗೇನಹಳ್ಳಿ |
| 170 | Santhenahalli | ಸಾಂತೇನಹಳ್ಳಿ |
| 171 | Sasalu | ಸಾಸಲು |
| 172 | Shankaranahalli | ಶಂಕರನಹಳ್ಳಿ |
| 173 | Shanubhoganahalli | ಶ್ಯಾನುಬೋಗನಹಳ್ಳಿ |
| 174 | Shivaganga | ಶಿವಗಂಗ |
| 175 | Shivapura | ಶಿವಪುರ |
| 176 | Singenahalli | ಸಿಂಗೇನಹಳ್ಳಿ |
| 177 | Sirappanahalli | ಶಿರಾಪನಹಳ್ಳಿ |
| 178 | Sringeri-Hanumanahalli | ಶೃಂಗೇರಿಹನುಮನಹಳ್ಳಿ |
| 179 | T. Nulenur | ಟಿ. ನುಲೆನೂರು |
| 180 | T.Vaderahalli | ಟಿ. ವಡೇರಹಳ್ಳಿ |
| 181 | T.Yemmiganur | ಟಿ. ಎಮ್ಮಿಗನೂರು |
| 182 | Talagatta | ತಾಳಕಟ್ಟೆ |

| | | |
|---|---|---|
| 183 | TalikatteKaval | ತಾಳಿಕಟ್ಟೆಕಾವಲು |
| 184 | Talikatti | ತಾಳಿಕಟ್ಟೆ |
| 185 | Talya | ತಾಳ್ಯ |
| 186 | Tanigehalli | ತಣಿಗೆಹಳ್ಳಿ |
| 187 | Tekalavatti | ತೇಕಲವಟ್ಟಿ |
| 188 | Thirumalapura | ತಿರುಮಲಾಪುರ |
| 189 | Thirumalapura | ತಿರುಮಲಾಪುರ |
| 190 | Thodranal | ತೊಡರನಾಳ್ |
| 191 | Thuppadahalli | ತುಪ್ಪದಹಳ್ಳಿ |
| 192 | Tyagadahalli | ತ್ಯಾಗದಹಳ್ಳಿ |
| 193 | Udogere | ಉಡೋಗೆರೆ |
| 194 | Uganekatte | ಉಗಣೆಕಟ್ಟೆ |
| 195 | Upparigenahalli | ಉಪ್ಪರಿಗೇನಹಳ್ಳಿ |
| 196 | Vaderahalli | ವಡೇರಹಳ್ಳಿ |
| 197 | Vamalapura | ವಾಮಲಾಪುರ |
| 198 | VanakemaradiKaval | ವನಕೆಮರಡಿಕಾವಲು |
| 199 | Veerapura | ವೀರಾಪುರ |
| 200 | Vishvanathanahalli | ವಿಶ್ವಾನಾಥನಹಳ್ಳಿ |
| 201 | Viswanathanahalli | ವಿಶ್ವನಾಥನಹಳ್ಳಿ |

# ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ
# ಆಯ್ದ ಆಕರ ಗ್ರಂಥಗಳು


**ಕನ್ನಡ ಗ್ರಂಥಗಳು**

**ಕನ್ನಡ ವಿಶ್ವಕೋಶ ಸಂಪುಟಗಳು,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ (೧ ರಿಂದ ೧೪ ಸಂಪುಟಗಳು) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳು** : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಕರ್ನಾಟಕ ಪರಂಪರೆ** : ದಿವಾಕರ ಆರ್.ಆರ್.

**ಕರ್ನಾಟಕ ಸಂಕ್ಷಿಪ್ತ ಚರಿತ್ರೆ** : ರಂಗಸ್ವಾಮಯ್ಯ ಜಿ.ಆರ್.

**ವಿವಿಧ ಲೇಖನಗಳ ಸಂಗ್ರಹ** : ಡಾ॥ ಬಿ. ರಾಜಶೇಖರಪ್ಪ, ಚಿತ್ರದುರ್ಗ

**ಹೊಳಲ್ಕೆರೆ ತಾಲ್ಲೂಕು ದರ್ಶನ** : ತಾಳ್ಯದ ವೇದಮೂರ್ತಿ.
ಹೊಳಲ್ಕೆರೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ೨೦೦೫, ಹೊಳಲ್ಕೆರೆ.
ಹೊಳಲ್ಕೆರೆ ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ (೨೦೦೬)

ನಾಯಕ್. ಹಾ.ಮ (ಸಂ), **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ,** ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೩.

ಕಾಮತ್ ಸೂರ್ಯನಾಥ ಯು. **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ ೧ ರಿಂದ ೩, ಮೈಸೂರು ೧೯೭೭, ೧೯೮೦.

**ಕಾಮತ್ ಸೂರ್ಯನಾಥ್.** ಯು. **ಕರ್ನಾಟಕ ರಾಜ್ಯ ಗ್ಯಾಸೆಟಿಯರ್,** ಸಂಪುಟ ೧,೨,೩, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ೧೯೮೪

**ಸಿದ್ಧಲಿಂಗಯ್ಯ ಜಿ.ಎಸ್. ಮತ್ತು ಕೃಷ್ಣಯ್ಯಎಂ.ಎಚ್.** (ಸಂ) **ಸಾಲು ದೀಪಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

**ಆಂಗ್ಲ ಗ್ರಂಥಗಳು**


**Sri Sathyan B.N (Ed)** Chitradurga District Gazetteer, 1967.

**Krishna Rao P.** History of Mysore from the origin of the house of Mysore Princes upto the death of Tippoo Sultan 1868.

**Buchanan Francis** A Journey From madras through the countries of Mysore, Canara and Malabar, vol. 1&2, Madras 1870.

**Rice B.L.** Mysore Gazetteer, Vol. 1 & 2, Westminster, 1897.

**Hayavadana Rao. C. (Ed),** Mysore Gazetteer vol. 1 to 5 1927-30.

**Shama Rao M.,** Modern Mysore Vol. 1 and 2 Bangalore, 1936.

**Diwakar R.R. (Ed)** Karnataka Through the Ages, Bangalore, 1968.


**ವಿವಿಧ ದಿನಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ವಿವಿಧ ಇಲಾಖೆಗಳ ವರದಿಗಳು**


ಜಾನುವಾರು ಗಣತಿ ವರದಿಗಳು.

ಜಿಲ್ಲಾ ಮಟ್ಟದ /ತಾಲ್ಲೂಕು ಮಟ್ಟದ ಕಛೇರಿಗಳಿಂದ ಬಂದ ಟಿಪ್ಪಣಿಗಳು

ಕೃಷಿ ಗಣತಿ ವರದಿಗಳು.

ಜನಗಣತಿ ವರದಿಗಳು – ೧೯೦೧ ರಿಂದ ೨೦೧೧ ರ ವರೆಗೆ

ಜಿಲ್ಲಾ ಅಂಕಿ ಅಂಶಗಳ ನೋಟ/ ೨೦೦೫–೦೬ ರಿಂದ ೨೦೧೫–೧೬, ಚಿತ್ರದುರ್ಗ.

ವಾರ್ಷಿಕ ಆಡಳಿತ ವರದಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಜಿಲ್ಲೆ.

| HOLALKERE TALUKA | | | |
|---|---|---|---|
| 2011 Cens us Location Code Number | Name of Village | 2011 Cens us Location Code Number | Name of Village |
| 619 | Hiriyur | 660 | ChikkayemmiganurKaval |
| 620 | Andanur | 661 | Vamalapura |
| 621 | Ingaladahalli | 662 | Hireyemmiganur |
| 622 | BandeBommenahalli | 663 | Ajjikyatanahalli |
| 623 | Gyarehalli | 664 | Kamanahalli |
| 624 | JogeraHanumanahalli | 665 | Vaderahalli |
| 625 | Ganjigatte | 666 | Chikkanakatti |
| 626 | Udogere | 667 | Chikkayemmiganur |
| 627 | Kagalagere | 668 | Hosahalli |
| 628 | Chowdenahalli | 669 | Banagere |
| 629 | Tanigehalli | 670 | VanakemaradiKaval |
| 630 | Tyagadahalli | 671 | Ramagatta |
| 631 | Muthugaduru | 672 | Abradasikatte |
| 632 | Kutvihalli | 673 | Kengunte |
| 633 | Mallenahalli | 674 | Malladihalli |
| 634 | Vishvanathanahalli | 675 | Basapura |
| 635 | Dandigenahalli | 676 | R.Nulenur |
| 636 | Marapura | 677 | N.Mallapura |
| 637 | Kalagatta | 678 | Dogganal |
| 638 | Sasalu | 679 | Dummi |
| 639 | B.Durga | 680 | Hosuru |
| 640 | Kallavvanagathihalli | 681 | Kalkere |
| 641 | Shanubhoganahalli | 682 | Hanumali |
| 642 | Hirekandavadi | 683 | Rangapura |
| 643 | Davanahalli | 684 | HaroguttiKaval |
| 644 | ChikkajajurKaval | 685 | R.Mallapura |
| 645 | Gunjiganur | 686 | Dasikatte |
| 646 | Rangavvanahalli | 687 | TalikatteKaval |
| 647 | Honnakaluve | 688 | Talikatti |
| 648 | Sringeri-Hanumanahalli | 689 | T.Vaderahalli |
| 649 | IyyanahalliKaval | 690 | Amblihalli |
| 650 | Iyyanahalli | 691 | Ramagiri |
| 651 | KadurKaval | 692 | RamagiriKaval |
| 652 | Dasarahalli | 693 | Gollarahalli |
| 653 | Nandihalli | 694 | Narayanagondanahalli |
| 654 | Anthapura | 695 | Uganekatte |
| 655 | Agrahara | 696 | Gowdihalli |
| 656 | Kadur | 697 | Gangasamudra |
| 657 | Kotehal | 698 | Talagatta |
| 658 | Kodagavalli | 699 | RangaiahnadurgaKaval |

| | | | |
|---|---|---|---|
| 659 | Gandumalenahalli | 700 | Kenchapura |
| 701 | Devarahosahalli | 745 | Malenahalli |
| 702 | Thuppadahalli | 746 | MalenahalliKaval |
| 703 | Singenahalli | 747 | GunderiKaval |
| 704 | Kanivehalli | 748 | Bommanakatte |
| 705 | Muddapura | 749 | Lokadolalu |
| 706 | Bidarakere | 750 | Thirumalapura |
| 707 | Mallenahalli | 751 | HanumanahalliKaval |
| 708 | Arabagatta | 752 | Gunderi |
| 709 | G.Vaderahalli | 753 | Edehalli |
| 710 | Gundasamudra | 754 | Viswanathanahalli |
| 711 | Jakkanahalli | 755 | Dodderikatti |
| 712 | Channasamudra | 756 | Santhenahalli |
| 713 | Bommenahalli | 757 | Basavapura |
| 714 | Chikkandavadi | 758 | Thirumalapura |
| 715 | Sadarahalli | 759 | Lingadahalli |
| 716 | Keshavapura | 760 | Thodranal |
| 717 | Hanumanakatte | 761 | Amruthapura |
| 718 | Arasanaghatta | 762 | Kashipura |
| 719 | Makunte | 763 | Kannenahalli |
| 720 | Channapatna | 764 | Gowripura |
| 721 | Apparasanahalli | 765 | Kondapura |
| 722 | DasarahalliInam | 766 | Aralikere |
| 723 | Harenahalli | 767 | Amalapura |
| 724 | Garaga | 768 | Chitrahalli |
| 725 | Gilkenahalli | 769 | T. Nulenur |
| 726 | Garaga Forest | 770 | Banjagondanahalli |
| 727 | Chatnahalli | 771 | Brahmapura |
| 728 | Adanur | 772 | Echaghatta |
| 729 | Padigatte | 773 | Veerapura |
| 730 | Agrahara | 774 | Mahadevapura |
| 731 | Hulemalali | 775 | Shivaganga |
| 732 | Shivapura | 776 | Nagaraghatta |
| 733 | Kunugali | 777 | Pampapura |
| 734 | Gundimadu | 778 | Borenahalli |
| 735 | Punajur | 779 | Ramenahalli |
| 736 | Malkapura | 780 | Nellikatte |
| 737 | Cheeranahalli | 781 | Madderu |
| 738 | Halehalli | 782 | T.Yemmiganur |
| 739 | Kudineerakatti | 783 | Sirappanahalli |
| 740 | Holalkere (Rural) | 784 | Hunasepanche |
| 741 | Amanahal | 785 | Malasingenahalli |
| 742 | Arehalli | 786 | Talya |
| 743 | ArehalliKaval | 787 | Mathigatta |
| 744 | Kamasamudra | 788 | Horakeredevarapura |
| 789 | Nandihalli | 805 | Ghattihosahalli |

| | | | |
|---|---|---|---|
| 790 | Goppenahalli | 806 | Baragenahalli |
| 791 | Kanivejogihalli | 807 | Papenahalli |
| 792 | Kasavanahalli | 808 | Hulikere |
| 793 | Gondihalli | 809 | Giddanahalli |
| 794 | Kanivehalli | 810 | Kumminagatta |
| 795 | Sangenahalli | 811 | Gundikere |
| 796 | Tekalavatti | 812 | Budipura |
| 797 | Kolalu | 813 | Halenahalli |
| 798 | Kumaranahalli | 814 | Upparigenahalli |
| 799 | Kantamaranahalli | 815 | Rangasamudra |
| 800 | Kereyagalahalli | 816 | Muligeranahalli |
| 801 | Gollarahalli | 817 | Gulihosahalli |
| 802 | Chowdagondanahalli | 818 | Shankaranahalli |
| 803 | Nandanahosur | 819 | Lingadevarahalli |
| 804 | Neralakatte | | |